ಸಂವಾದ

ಜೂನ್ ೨೦೦೮ ರೂ.೨೦

ಬೆಲೆ ಏರಿಕೆಯ ಉರುಳಿನಲ್ಲಿ...

ಕೆ. ವಿ. ನಾರಾಯಣ

ಕನ್ನಡದ ಚಾಮ್‌ಸ್ಕಿ

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೮
ಜೂನ್ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
✆ ೨೩೪೮೦೨೭೮/೯೪೪೮೦ ೪೮೩೦೬
ಇ–ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23480278, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಅಂತರಂಗ ೦೫
❑ ಅಮೆರಿಕಾದವರ ಕಾರಿನ ಪೆಟ್ರೋಲ್... ೦೬
○ ಡಾ॥ ವಾಸು
❑ ಕನ್ನಡ ಭಾಷೆಗೇಕೆ ಇಂಥ ಅನ್ಯಯ ೦೮
○ ಸುನಿಲ್ ಮಲ್ಲೇನಹಳ್ಳಿ
❑ ಮನುಷ್ಯನ ನಡವಳಿಕೆಯಲ್ಲಿ ನೈತಿಕತೆ ೦೯
○ ಎಂ.ಎಂ. ಮೇತ್ರಿ
❑ ನೇಪಾಳ– ಹೊಸ ದಿಗಂತದೆಡೆಗೆ ೧೦
○ ನಾಡಿ. ಬಂಗಾರಪೇಟೆ
❑ ಬೆಲೆ ಏರಿಕೆಯ ಸುಳಿಯಲ್ಲಿ ೧೪
○ ನಾ. ದಿವಾಕರ





❑ ಜಾತಿ ಮತ್ತು ಸಾಮಾಜಿಕ ತಾರತಮ್ಯ ೧೬
○ ಡಾ॥ ಡೊಮಿನಿಕ್ ಡಿ.
❑ 'ಜನಪರವಾಗಲಿ ಕೆನೆಪದರ' ೨೦
○ ಡಾ॥ ಮ.ಪು. ಪೂರ್ಣಾನಂದ
❑ ಕೆ.ವಿ.ಎನ್. ಕನ್ನಡದ ನೋಮ್ ಚಾಮ್‌ಸ್ಕಿ ೨೨
○ ಡಾ॥ ಅಶೋಕ ಕುಮಾರ ರಂಜೇರೆ
❑ ಅಂಬೇಡ್ಕರ್ ಮನುಸ್ಮೃತಿ... ೨೮
○ ಡಾ॥ ಎಸ್. ನರೇದ್ರಕುಮಾರ್
❑ ಜಾತ್ಯತೀತತೆ ಮತ್ತು ಮೂಲಭೂತ ಹಕ್ಕುಗಳು ೩೨
○ ಸತ್ಯಪ್ರಕಾಶ ಎಂ.ಆರ್.

❑ ಮಾತು ಅರ್ಥಪೂರ್ಣ; ಸಾಹಿತ್ಯ ಜೀವಂತ ೩೬
○ ರಹಮತ್ ತರೀಕೆರೆ
❑ ನಮ್ಮ ರಾಜಕೀಯ ಸಂಸ್ಕೃತಿ ಮತ್ತು ಮಹಿಳೆಯರು ೪೨
○ ರಹಮತ್ ತರೀಕೆರೆ
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್





ಕವನಗಳು : ❑ ನೆಲ ಮತ್ತು ಮರ ೧೧

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

‘ಎಲೆಕ್ಷನ್ ಎಂಬ ಮಾಯೆಯಲ್ಲಿ ಜಗಮಳ್ಳರ ಅಲೆದಾಟ’!



ಪ್ರಿಯ ಸಂಪಾದಕರೇ,

ಈಗಾಗಲೇ ‘ಜಗಮಳ್ಳ’ರಿಗೆ ‘ದತ್ತ’ವಾಗಿರುವ ‘ರಾಜಕೀಯ ಅಧಿಕಾರ’ದಿಂದಾಗಿ ಅವರು ‘ಭಾರತ’ವನ್ನು ಎಂತಹ ‘ಹೀನಾಯ’ ಹಾಗೂ ‘ಅತಂತ್ರ’ ಸ್ಥಿತಿಗೆ ‘ಅನ್ಯಾಯ-ಭ್ರಷ್ಟಾಚಾರ’ದ ‘ಕಹಳೆ’ಯನ್ನು ಮೊಳಗಿಸುವುದರ ಮೂಲಕ ತಲುಪು ವಂತೆ ಮಾಡಿದ್ದಾರೆ ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಇನ್ನು ‘ಕರ್ನಾಟಕ’ದ ಸ್ಥಿತಿಯಂತೂ ‘ಆಳು ನೋಡಿದರೆ ಅಲಂಕಾರ, ಬಾಳು ನೋಡಿದರೆ ಬಾಯಿ ಬಡಿದಿಕೋ’ ಎಂಬಂತಾಗಿದೆ. ಇಷ್ಟಕ್ಕೂ ‘ಮಕ್ಕಳು ನ್ಯಾಯವಾಗಿದ್ದಿದ್ದರೆ ಯಾಕೆ ಅಪ್ಪನಿಗೆ ಇಬ್ಬರು ಹೆಂಡತಿಯರು ಇರುತ್ತಿದ್ದರು’? ಅಂತೂ-ಇಂತೂ ಹೇಗೋ ಇಬ್ಬರು ಹೆಂಡತಿಯರು ಬಂದಿದ್ದಾಯಿತು. ಇನ್ನು ಅವರ ಗುಣಾನೋ ‘ಒಬ್ಬಳದ್ದು ಎತ್ತಾದರೆ ಮತ್ತೊಬ್ಬಳದ್ದು ಕೋಣ.’ ಒಟ್ಟಾರೆ, ‘ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯುತಾಯಿತ್ತು’ ಎನ್ನುವಂತಾಗಿ, ಅತ್ತ ಏರಿಗೂ ಸಾಗದೆ, ಇತ್ತ ನೀರನ್ನೂ ತಲುಪದೆ ಸತ್ತು ಸುಣ್ಣವಾಗಿ ಹೋದಾಗ, ಅನ್ಯ ಮಾರ್ಗವಿಲ್ಲದೆ ಒಡೆಯನಾದವನು ಬೇರೊಂದು ನಿರ್ಧಾರವನ್ನು ಕೈಗೊಳ್ಳಲೇಬೇಕಾಯಿತು. ಆ ಅನ್ಯಮಾರ್ಗವೆ, ಅನಿವಾರ್ಯ ನಿರ್ಧಾರವೇ ‘ಕರ್ನಾಟಕದಲ್ಲಿ ರಾಷ್ಟ್ರಪತಿ ಆಳ್ವಿಕೆ’ ಹಾಗಾದರೆ ಇಷ್ಟು ಹೊತ್ತು ಹೇಳುತ್ತಿದ್ದುದು ಏನೆಂದು ಯೋಚಿಸುತ್ತಿರುವಿರಾ? ಮತ್ತೇನೂ ಅಲ್ಲ, ಅದು ನಮ್ಮ ‘ಸಮ್ಮಿಶ್ರ ಸರ್ಕಾರದ ಪೂರ್ವಪೀಠಿಕೆ’ ಅಷ್ಟೆ!

ಇದರ ಜೊತೆಗೆ ಮತ್ತೊಂದು ಮುಖ್ಯವಾದ ವಿಚಾರವೇ ನೆಂದರೆ, ಸದ್ಯದಲ್ಲೇ ‘ಎಲೆಕ್ಷನ್’ ಅಲಿಯಾಸ್ ಓಟ್ ಕಲೆಕ್ಷನ್’ ಎಂಬ ಮಾಯೆ ಕರ್ನಾಟಕವನ್ನು ಸಮೀಪಿಸುತ್ತಿದೆ. ಹಾಗಾಗಿ, ಇನ್ನು ಮುಂದೆ ‘ಜಗಮಳ್ಳ’ರ ಅರ್ಥಾತ್ ‘ಜಗತ್ ಕಿಲಾಡಿ’ಗಳ ರಾಜಕಾರಣಿಗಳ ‘ಓಟು ಬೇಡುವ ಕಾಯಕ’ ಶುರುವಾಗಲಿದೆ. ಒಂದು ರೀತಿಯಲ್ಲಿ ಇದನ್ನು ಅವರ ಪಾಲಿನ ‘ಅಲೆದಾಟ’ ವೆಂದೇ ಕರೆಯಬೇಕಾಗುತ್ತದೆ. ಏಕೆಂದರೆ, ಇದೂವರೆವಿಗೂ Ford Icon, Benz, Scorpio, Innova ದಂತಹ ಸರ್ಕಾರಿ ಹಾಗೂ ಖಾಸಗೀ ಸುಖಾಸೀನ ಕಾರುಗಳಲ್ಲಿ ಓಡಾಡುತ್ತಾ, ಭವ್ಯ ಬಂಗಲೆಗಳ ‘ಸುಖದ ಸುಪ್ಪತ್ತಿಗೆ’ಯಲ್ಲಿ ಕಾಲಾಹರಣ ಮಾಡುತ್ತಾ, ವಿವಿಧ ವಿವಾದಗಳಲ್ಲಿ ಮುಳುಗಿ, ಹಗರಣಗಳಲ್ಲಿ ತೇಲಾಡಿ, ಭ್ರಷ್ಟಚಾರದಲ್ಲಿ ಏಳುತ್ತಿದ್ದಂತಹವರು ‘ಐದು ವರ್ಷ’ಗಳ ಬಳಿಕ ‘ಡಾಂಬರು -ಕಾಣದ ರಸ್ತೆಗಳಲ್ಲಿ ‘ಹಳ್ಳ-ಕೊಳ್ಳ’ಗಳಿಂದ ಕೂಡಿದ ಬೀದಿ-ಬೀದಿಗಳಲ್ಲಿ ನಡೆದು, ‘ಬಡವರ ಜೋಪಡಿ’ಗಳಿಗೆ ಭೇಟಿ ಕೊಟ್ಟು, ಅವರನ್ನು ಪುಸಲಾಯಿಸಿ ಮತಯಾಚಿಸಬೇಕಾಗಿದೆ. ಅಯ್ಯೋ ಪಾಪ! ಸ್ಲಮ್ ಅಂದರೆ ಏನು ಎಂಬುದರ ಅರಿವಾಗುವುದೇ ಈಗ ಎನ್ನಿಸುತ್ತದೆ. ಏನು ಮಾಡುವುದು, ಎಷ್ಟೇ ಗಲೀಜಿನ ಗಂಧವಿದ್ದರೂ ಸಹಿಸಿ ತಮ್ಮ ‘ಅಲೆದಾಟದ ಕಾಯಕವನ್ನು ಮುಂದುವರಿ ಸಲೇಬೇಕಾದ ಅನಿವಾರ್ಯತೆ ಇದೆಯಲ್ಲ! ಇದರ ಜೊತೆಗೆ ‘ಕ್ಷಣಕ್ಕೊಂದು ಬಣ್ಣ, ದಿನಕ್ಕೊಂದು ವೇಷ ತೊಟ್ಟು’ ವರ್ಣರಂಜಿತ ಮಾತುಗಳನ್ನಾಡುತ್ತ, ಭರವಸೆಗಳ ಮಹಾಪೂರವನ್ನೇ ಹರಿಸುತ್ತಾ, ಸೀರೆ-ಪಂಚೆ-ಅಂಗಿಗಳನ್ನು ಧಾನಮಾಡುವುದರೊಂದಿಗೆ, ಸಾರಾಯಿಯ ಹೊಳೆಯನ್ನೇ ಹರಿಸಬೇಕಾದ ಪ್ರಮೇಯ ಬೇರೆ! ಎಷ್ಟೇ ಆಗಲಿ, ‘ಕರೆಂಟೇ ಇಲ್ಲದಿದ್ದರೂ ಕಲರ್ ಟಿ.ವಿ. ಹಂಚುವ ಜಾಯಮಾನದವ ರಲ್ಲವೆ? ಮಿನಿಸ್ಟರ್‌ಗಿರಿ ಬೇಕು ಅಂದಮೇಲೆ ಇಷ್ಟನ್ನೂ ಮಾಡದೇ ಇರೋದಿಕ್ಕಾಗುತ್ತಾ? ‘ಕಾರ್ಯವಾಸಿ ಕತ್ತೆಕಾಲು ಹಿಡಿ’ ಎಂಬಂತೆ!

ಅದೇನೇ ಇರಲಿ, ‘ರಾಜಕಾರಣ’ ಎಂಬುದು ‘ಸಂಪೂರ್ಣ ಹೊಲಸಲ್ಲ’ ಮತ್ತು ‘ರಾಜಕಾರಣಿ’ಗಳೆಲ್ಲರೂ ‘ಭ್ರಷ್ಟ’ರಲ್ಲ. ಬೆರಳೆಣಿಕೆಯಷ್ಟಾದರೂ ‘ಕಲಾಂ’ರಂತಹ ‘ಉತ್ತಮ ಪ್ರಜಾಸೇವಕ’ ಹಾಗು ‘ಪಾಲಕರು’ ಸಿಕ್ಕೇ ಸಿಕ್ಕುತ್ತಾರೆ. ಅಂತಹವ ರನ್ನು ಗುರುತಿಸಿ, ಆಯ್ಕೆ ಮಾಡಬೇಕಾದ ಹೊಣೆ ೧೮ ವರ್ಷ ತುಂಬಿದ ಪ್ರತಿಯೊಬ್ಬ ಪ್ರಜೆಯದ್ದೂ ಆಗಿದೆ. ಹಾಗಾಗದಿದ್ದಲ್ಲಿ, ‘ರಾಜಕಾರಣ’ವೆಂಬುದು ‘ರಾಜಕಾರಣ’ವಾಗಿ ಉಳಿಯದೆ ‘ಸೂತ್ರಹರಿದ ಗಾಳಿಪಟ’ದಂತಾಗಿ ಮುಂದೊಂದು ದಿನ ‘ರೌಡಿಯಿಸಂ ರಾಜಕಾರಣ’ವೆಂತಲೋ, ‘ಭ್ರಷ್ಟರಾಜ ಕಾರಣ’ವೆಂತಲೋ ಕರೆಯಿಸಿಕೊಳ್ಳಲ್ಪಡುತ್ತದೆ.

‘ಅಡಿಪಾಯವೇ ಸರಿಯಲ್ಲಿದಿದ್ದರೆ ಭವ್ಯ ಬಂಗಲೆಯನ್ನು ಕಟ್ಟಿದರೂ ಅದು ಪ್ರಯೋಜನಕ್ಕೆ ಬಾರದ್ದೆನಿಸಿಕೊಳ್ಳುತ್ತದೆ! ಹಾಗಾಗಿ, ರಾಜಕಾರಣಕ್ಕ ಭದ್ರ ಅಡಿಪಾಯ ಹಾಕುವ ಅರ್ಥಾತ್ ಮತದಾನದ ಮೂಲಕ ‘ದಕ್ಷ’ ಹಾಗೂ ‘ಪ್ರಾಮಾಣಿಕ’ರನ್ನು ಅಧಿಕಾರಕ್ಕೆ ತರುವ ಕಾರ್ಯವನ್ನು ಪ್ರತೀ ಪ್ರಜೆಯೂ ಮಾಡಿದ್ದೇಯಾದಲ್ಲಿ ನಾವು ಕಟ್ಟಬೇಕೆಂದಿರುವ ‘ಭವ್ಯ ಭಾರತ’ದ ‘ಸುವರ್ಣ ಕರ್ನಾಟಕ’ಕ್ಕೆ ‘ಆಧಾರ ಸ್ತಂಭ’ವಾಗಿ ನೆಲೆನಿಲ್ಲುತ್ತಾರೆ. ಎನ್ನಬಹುದಾಗಿದೆ. ಇಲ್ಲವಾದಲ್ಲಿ, ರಾಜಕಾರಣವೆಂಬುದು ಇಟ್ಟಹೆಜ್ಜೆ, ತೊಟ್ಟ ರೂಪ ಸದಾ ಒಂದೇ ತೆರನಾಗಿದ್ದು, ನಮ್ಮನ್ನು ಅಂಧಕಾರದ ಕೂಪಕ್ಕೆ ತಳ್ಳಿಬಿಡಬಹುದು!

ಒಟ್ಟಾರೆಯಾಗಿ ಹೇಳುವುದಾದರೆ, ಈ ಎಲೆಕ್ಷನ್ ಎಂಬ ಮಾಯೆಯಲ್ಲಿ ಯಾರು ಎಷ್ಟೇ ಅಲೆದಾಡಿದರು. ಎಷ್ಟೇ ಆಸೆ-ಆಮಿಷಗಳನ್ನೊಡ್ಡಿದರೂ, ಬಣ್ಣಬಣ್ಣದ ಮಾತುಗಳನ್ನಾಡಿ ಒಲಿಸಿಕೊಳ್ಳಲೆತ್ನಿಸಿದರೂ, ಯಾವುದೊಂದಕ್ಕೂ ಸೊಪ್ಪು ಹಾಕದೆ ಅಧಿಕಾರವೆಂಬುದು ‘ಜಗಮಳ್ಳ’ರಿಗೆ ‘ಮುಟ್ಠಾಳ’ರಿಗೆ ‘ಅದ್ಷಕ್ಷ’ ಹಾಗೂ ‘ಭ್ರಷ್ಟ’ರಿಗೆ ‘ದತ್ತ’ವಾಗದಂತೆ ಎಚ್ಚರ ವಹಿಸುವುದು ಪ್ರತಿಯೊಬ್ಬ ಮತದಾರನ ಆದ್ಯಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಜವಾ ಬ್ದಾರಿಯುತವಾಗಿ ನಿರ್ವಹಿಸಿ ದ್ದೇಯಾದರೆ ‘ನಮ್ಮನ್ನು ನಾವು ರಕ್ಷಿಸಿಕೊಂಡಂತೆ!’ ಇಷ್ಟಕ್ಕೂ ಇಷ್ಟೆಲ್ಲಾ ಕಷ್ಟಪಡುತ್ತಿರುವುದು ‘ನಮ್ಮೆಲ್ಲರ ಒಳಿತಿಗಾಗಿಯೇ ಹೊರತು ಬೇರೊಬ್ಬನ ಸ್ವಾರ್ಥಪರ ಜೀವನಕ್ಕೆಲ್ಲ’ ಎಂಬುದನ್ನು ಯಾವುದೇ ಕಾರಣಕ್ಕೂ ಮರೆಯಕೂಡದು. ಏಕೆಂದರೆ, ಇದು ‘ನಾವೆಲ್ಲರೂ ಒಟ್ಟಿಗೇ ಸೇರಿ ನಿರ್ಮಿಸಿಕೊಂಡ ಸೌಧ; ಆ ಸೌಧದಲ್ಲಿ ನಮ್ಮನ್ನು ಪಾಲಿಸಿ-ಪೋಷಿಸುವ ಸೂಕ್ತ ವ್ಯಕಿಯ ಅವಶ್ಯಕತೆಯಿದ್ದುದರಿಂದ ‘ಪ್ರಜಾಪ್ರತಿನಿಧಿ’ ಎಂಬ ಹೆಸರಿನಲ್ಲಿ ಆತನನ್ನು ನೇಮಿಸಿದರೆ ಕಾಲಗತಿಯಲ್ಲಿ ಆತ ನಮ್ಮನ್ನೇ ಹೊರದಬ್ಬಿ ತನ್ನಿಷ್ಟದ ಪ್ರಕಾರ ಆಳ್ವಿಕೆ ನಡೆಸಿದರೆ ಅದರಲ್ಲಿ ಯಾವ ಅರ್ಥವೂ ಇಲ್ಲದಂತಾಗುತ್ತದೆ. ಆಗ ನಮ್ಮನ್ನು ನಾವು ‘ಹೇಡಿ’ಗಳೆಂದೇ ಕರೆದುಕೊಳ್ಳಬೇಕಾಗುತ್ತದೆ. ಹಾಗಾಗಿ, ಮೀನಾಮೇಷ ಎಣಿಸದೆ ನಮ್ಮ ಎಚ್ಚರದಲ್ಲಿ ನಾವಿ ರುವುದು ಒಳಿತಲ್ಲವೇ?!

ಅರುಣ ಎಸ್.ಎನ್
ವಿಜಯನಗರ, ಬೆಂಗಳೂರು

> ಅಧಿಕಾರವೆಂಬುದು ‘ಜಗಮಳ್ಳ’ರಿಗೆ ‘ದತ್ತ’ವಾಗ ದಂತೆ ಎಚ್ಚರ ವಹಿಸುವುದು ಪ್ರತಿಯೊಬ್ಬ ಮತದಾರನ ಆದ್ಯ ಕರ್ತವ್ಯವಾಗಿದೆ.

ಪತ್ರಾಗಾರ

ಶ್ರೇಷ್ಠ ಚಿಂತನೆಗಳಿಗೆ ಪ್ರತೀಕ

ಮಾನ್ಯ ಸಂಪಾದಕರು
‘ಸಂವಾದ’ ಬೆಂಗಳೂರು, ಸಪ್ರೇಮ ನಮಸ್ಕಾರಗಳು
ಆತ್ಮೀಯರೆ,

‘ಸಂವಾದ’ ಇದು ಕಾದಿಟ್ಟು ಓದುವ ಪತ್ರಿಕೆ, ನಾಡಿನ ಶ್ರೇಷ್ಠ ಚಿಂತನೆಗಳಿಗೆ ಪ್ರತೀಕವಾಗಿದೆ. ಮೊನ್ನೆ ‘ಕಾನ್ಸಿರಾಮ್’ ಅವರ ಕುರಿತು ಮಾತನಾಡಬೇಕಾದ ಸಂದರ್ಭ ಬಂತು ಸಂವಾದ ತುಂಬ ಸಹಾಯವಾಯಿತು. ನನಗೆ ಪರರಾಜ್ಯ-ಪರಭಾಷೆಗಳ ಬಗ್ಗೆ ಪ್ರೀತಿ ಬೆಳೆಯು ಇನ್ನೂ ಹೆಚ್ಚಾದಲ್ಲಿ ಕನ್ನಡದ ಸಮೃದ್ಧಿ ಇಮ್ಮಡಿಗೊಳ್ಳುವುದರಲ್ಲಿ ಎರಡು ಮಾತಿಲ್ಲ. ‘ಸಂವಾದ’ದ ಬಗ್ಗೆ ನನ್ನ ಬಾಯಿಯಿಂದ ತುಂಬ ಅಭಿಮಾನದ ಮಾತುಗಳು ಸಮಾರಂಭದಲ್ಲಿ ತನ್ನಿಂದ ತಾನೇ ಹೊಮ್ಮಿದವು.

ಧನ್ಯವಾದಗಳು

ಅರ್ಜುನ ಕೋರಟಕರ, ಜಮಖಂಡಿ

ಚಂದಾ ವಿವರ
ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೪೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಜಾಗತೀಕರಣದ ಚೈತ್ರಯಾತ್ರೆ ಭಯೋತ್ಪಾದನೆ!

ಮಾನ್ಯರೆ,

'ಸಂವಾದ'ದಲ್ಲಿ ಪ್ರಕಟವಾದ ಭಯೋತ್ಪಾದನೆ ಕುರಿತ ಲೇಖನಗಳನ್ನು ಭಯೋತ್ಪಾದನಾ ಮಿಮಾಂಸೆ ಎನ್ನಬಹು ದೇನೊ!

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚೆಗಿನವರೆಗೂ ಅರೆಅಲೆಮಾರಿಗಳಾಗಿದ್ದ ಆದಿವಾಸಿಗಳೆಂದು ಕರೆಯಲ್ಪಡುವ ಕೊರಗರು (ಈಗಲೂ ಕೆಲವೆಡೆ ನೆಲೆಯಿಲ್ಲದವರು) ಮೇಲ್ವರ್ಗದವರು ಉಟ್ಟು ಎಸೆದ ಹಳೆ ಬಟ್ಟೆಗಳನ್ನು ತೊಟ್ಟುಕೊಳ್ಳಲು ಭಯ ಪಡುತ್ತಿದ್ದರೆನ್ನುವುದು ನಂಬಲಾರದ ಸತ್ಯ! ಇಲ್ಲಿ ಮೇಲ್ವರ್ಗದವರು ಎಂದರೆ 'ನಾಗರಿಕರು' ಎಂದು ಅರ್ಥೈಸಿಕೊಳ್ಳ ಬಹುದೇನೊ!

ಭೌಗೋಳಿಕವಾಗಿ ಭರತಖಂಡವೆಂದು ತಿಳಿದು ಬರುವ ಹಿಮಾಲಯದಿಂದ ಕನ್ಯಾಕುಮಾರಿ ಹಾಗೂ ಅರಬೀ ಸಮುದ್ರ ತಟದಿಂದ ಅಸ್ಸಾಂವರೆಗಿನ-ಭೂಕ್ಷೇತ್ರದಲ್ಲಿ ಮನುಶಾಸ್ತ್ರ ಪ್ರಣಿತ ಚಾತುರ್ವರ್ಣ್ಯ ಪ್ರಭೇದವು. ಇಲ್ಲಿಯ ಆದಿವಾಸಿಗಳನ್ನು-ಅವರು ರೂಢಿಸಿಕೊಂಡಿದ್ದಿರಬಹುದಾಗಿದ್ದ ಕೃಷಿಭೂಮಿಯಿಂದ-ಬೆದರಿಸಿ ಓಡಿಸಿದ ಮೇಲೆ ಆ ಆದಿವಾಸಿಗಳಿಗೆ ದಟ್ಟಾರಣ್ಯವೇ ಸುರಕ್ಷಿತ ತಾಣವಾಗಿದ್ದರಬೇಕು. ಆಗಿತ್ತು ಕೂಡಾ ಎನ್ನುತ್ತದೆ ಸಮಾಜಶಾಸ್ತ್ರ ಸಿದ್ಧಾಂತ. ಗೊಂಡಾರಣ್ಯಗಳಲ್ಲಿ ಬೇರೆ ಬೇರೆ ಗುಂಪುಗಳು ತಂತಮ್ಮವೇ ಆಗಿರುವ ಆತ್ಮರಕ್ಷಣಾ ವಿಧಾನ, ಭಾಷೆ, ಕುಶಲತೆಗಳನ್ನು ರೂಪಿಸಿಕೊಂಡಿರುವುದನ್ನು 'ಪಾಶ್ಚಾತ್ಯ ವಸಾಹತುಶಾಹಿಗಳು ತಮ್ಮ ಯಜಮಾನಿಕೆಯ ಸ್ಥಾಪನೆಗಾಗಿ ದಾಖಲಿಸಿಕೊಂಡಿರುವರು ಎನ್ನುವುದಕ್ಕೆ ಬಿಟಿಷ್ ಇಂಡಿಯಾದ ಇತಿಹಾಸ ಸಾಕ್ಷಿಯಾಗಿದೆ. ಕಾಲಗತಿಯಂತೆ ಮಾನವಮತಿ ಕ್ಷಿತಿಗಳಷ್ಟೇ ಅದು ಕಾರಣವಾಗಿ ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವ ಇತ್ಯಾದಿ ಇತ್ಯಾದಿ ಹಿನ್ನೆಲೆಯಾಗಿರಲಿ.

ಮೊನ್ನೆ ಮೊನ್ನೆ ಘಟಿಸಿದ "ಅಸ್ಸಾಮ್ ಆದಿವಾಸಿಗಳ ಸಂಘರ್ಷ"ವನ್ನು "ಆದಿವಾಸಿಗಳ ಹಕ್ಕು ಪ್ರತಿಪಾದನೆ"ಯನ್ನುವುದು ನ್ಯಾಯೋಚಿತವೆನಿಸುತ್ತದೆ. ಈ ಚಿತ್ರಣವು ವಾಸ್ತವಿಕತೆಯನ್ನು ಕೊಡುತ್ತದೆ. ಜಗತ್ತಿನ ನಾಗರಿಕರೆನ್ನುವ ಭಯೋತ್ಪಾದಕರು ತಂತಮ್ಮ ಜಾತಿ, ಮತ, ಧರ್ಮಗಳೆನ್ನುವ ಅಫೀಮಿನ ಅಮಲಿನಿಂದ ಹೊರ ಬಂದು ನೋಡ ಬೇಕು; ನಿಂತು ಯಥಾರ್ಥತೆಯನ್ನು ಗ್ರಹಿಸಬೇಕು.

ಸಂಪತ್ತು ಅಧಿಕಾರಿಗಳ ಯಜಮಾನಿಕೆಯನ್ನು ಹೊಂದಿರುವವರಿಗೆ ಬಂದೂಕನ್ನೇ ಕಳಕೊಂಡಿರುವವರ ಪ್ರತಿರೋಧದ ಭೀತಿಯಿದೆ. ಸ್ವರಕ್ಷಣೆಗಾಗಿ ಅಮಾಯಕರನ್ನು ಕತ್ತಲೆಯಲ್ಲಿಟ್ಟು-ಉದಾರೀಕರಣ ಖಾಸಗೀಕರಣ, ಜಾಗತೀಕರಣಗಳೆನ್ನುವ ಕರಣತ್ರಯಗಳ ತ್ರಿಶೂಲದಿಂದ ತಿವಿದು ಅವರ ದೈಹಿಕ ಮಾನಸಿಕ, ಸಾಂಸ್ಕೃತಿಕ ಚೈತನ್ಯಗಳನ್ನು ಮರೆಗುಳಿಗೆ ಇಳಿಸಿ ನಾಶಗೊಳಿಸುತ್ತಿರುವುದು ಭಯೋತ್ಪಾದಕತೆಯಲ್ಲವೆ?

ಇದಕ್ಕೆ ಹೆಗಲೆಣೆಯಾಗಿ ಮತ್ತೊಂದು ಬಕಾಸುರ ಬಳಗವಿದೆ. ಅಸ್ಪೃಶ್ಯತೆ, ಅಸಮಾನತೆ, ಅನಕ್ಷರತೆಗಳನ್ನು ಅವಗಣಿಸಿ, ಲೋಕ ಕಲ್ಯಾಣವೆಂದು ಯಾಗ ಯಜ್ಞಾದಿಗಳ ಉದ್ಘೋಷಣೆಗೈದು ಧರ್ಮಾಂಧತೆಯ ಬಂಧನದಿಂದ ಶಾಶ್ವತ ಬುದ್ಧಿಮಾಂದ್ಯಕ್ಕೊಳಪಡಿಸುವುದು ಭಯೋತ್ಪಾದನೆಯಲ್ಲವೆ?

ಎಲ್ಲವನ್ನು ಕಳಕೊಂಡವನಿಗೆ ಪ್ರಾಣ ಭಯವಿಲ್ಲ. ಸಹಜತೆಗೆ ಸಾವಿಲ್ಲ. ಬೌದ್ಧಿಕ ಚೈತನ್ಯವು ಭೌತಿಕ ಒತ್ತಡದಿಂದ ದ್ವಿಗುಣಗೊಳ್ಳುತ್ತದೆ! ಅದು ನಿತ್ಯ ಸತ್ಯ.

ವಂದನೆಗೊಂದಿಗೆ

ಪಿ. ಗೋಕುಲ್‌ದಾಸ್, ಮಂಗಳೂರು

'ಮಠಗಳು, ಚುನಾವಣೆ...' ಒಂದು ಆಕ್ಷೇಪ

ಮಾನ್ಯ ಸಂಪಾದಕರೇ,

'ಸಂವಾದ'ದಲ್ಲಿ ನಾನು ಮೊದಲಿಗೆ ಓದುವುದು ನನ್ನ ಮೆಚ್ಚಿನ ಲೇಖಕರಾದ ಡಾ॥ ರಹಮತ್ ತರೀಕೆರೆ ಅವರ 'ಮಾತಿನ ಹಂಗು' ಅಂಕಣನ್ನು. ಮೇ ತಿಂಗಳ ಅವರ ಲೇಖನ, 'ಮಠಗಳು, ಚುನಾವಣೆ ಮತ್ತು ಡೆಮಾಕ್ರಸಿ', ನನಗೆ ಬಹಳ ಸೂಪರ್‌ಪಿಶಿಯಲ್ ಎಂದು ಅನಿಸಿತು. ಇದರಲ್ಲಿ ಅವರು ಈಚಿನ ಕೆಲವು ಘಟನೆಗಳನ್ನು ಉಲ್ಲೇಖಿಸಿ ನಮ್ಮ ರಾಜ್ಯದಲ್ಲಿ ಮಠಾಧೀಶರು ಜನರಿಂದ ಚುನಾಯಿತವಾದ ಸರ್ಕಾರಗಳ ಆಡಳಿತದ ಮೇಲೆ ನಿಯಂತ್ರಣ ಸಾಧಿಸಿದ್ದಾರೆ, ಆದ್ದರಿಂದ ನಮ್ಮ ಡೆಮಾಕ್ರಸಿ ಪಕ್ಕದ ಪಾಕಿಸ್ತಾನ ಮತ್ತು ನೇಪಾಳದ ಡೆಮಾಕ್ರಸಿಗಿಂತ ಕೀಳಾಗಿದೆ ಎಂದು ಹೇಳಿದ್ದಾರೆ.

ಡಾ॥ ತರೀಕೆರೆ ಅವರು ಈ ಮಠಾಧೀಶರುಗಳಿಗೆ ಅಧಿಕಾರಸ್ತ ರಾಜಕಾರಣಿಗಳು ಹೆದರುವಂತಹ ಪರಿಸ್ಥಿತಿ ಯಾಕೆ ಸೃಷ್ಟಿಯಾಗಿದೆ ಎಂಬುದನ್ನು ಶೋಧಿಸಲು ಪ್ರಯತ್ನಿಸಿಲ್ಲ. ಅವರ ಲೇಖನದಲ್ಲಿ ಮಠಗಳ ಪ್ರಾಬಲ್ಯಕ್ಕೆ ಅವು ನಡೆಸುತ್ತಿರುವ ಕ್ಯಾಪಿಟೇಶನ್ ಕಾಲೇಜುಗಳಿಂದ ಗಳಿಸುತ್ತಿರುವ ಹಣವೇ ಕಾರಣ ಎಂಬ ಇಂಗಿತ ಇದೆ. ಆದರೆ ಇಂದಿಗೆ ನಲ್ವತ್ತಾರು ವರ್ಷಗಳ ಹಿಂದೆ, ಕ್ಯಾಪಿಟೇಶನ್ ಕಾಲೇಜುಗಳಿಲ್ಲದಿದ್ದ ಕಾಲದಲ್ಲೂ, ಈ ಮಠಗಳು ರಾಜಕೀಯದಲ್ಲಿ ಪ್ರಭಾವ ಬೀರುತ್ತಿದ್ದವು. ಅಂದು ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಚುನಾವಣೆಯಲ್ಲಿ ಸೋತಿದ್ದು ಈ ಪ್ರಭಾವದಿಂದಲೇ ಎಂದು ಹೇಳಲಾಗಿತ್ತು. (ನಂತರ ನಿಜಲಿಂಗಪ್ಪನವರ ಅಭಿಮಾನಿಗಳು ಅವರನ್ನು 'ಅವಿರೋಧ 'ವಾಗಿ' ಚುನಾಯಿಸುವ ತಂತ್ರಯೂಡಿದರು).

ನಿಜವಾದ ಮಾತೆಂದರೆ ಭಾರತೀಯ ಪ್ರಜಾಪ್ರಭುತ್ವ ದೌರ್ಬಲ್ಯಗಳಿಗೆ ಒಂದು ಮುಖ್ಯ ಕಾರಣ ಅದು ಯೂರೋಪು ಅಮೆರಿಕಾಗಳಲ್ಲಿನಂತರ ಕೈಗಾರಿಕಾ ಕ್ರಾಂತಿಯ ಫಲವಾಗಿ ಮಾಡಿದ್ದಲ್ಲ. ಬದಲಿಗೆ ಅದು ರೂಪುಗೊಂಡಿರುವುದು ಅರೆಫ್ಯೂಡಲ್ ಸಮಾಜದಲ್ಲಿ. ಇಲ್ಲಿ ಸ್ವತಂತ್ರ ವ್ಯಕ್ತಿಗಳಿಗಿಂತ ಅವರು ಗುರುತಿಸಿಕೊಳ್ಳುವ ಜಾತಿ ಮತಳಗಳೇ ಮುಖ್ಯವಾಗಿವೆ. ಮಠಗಳು ಇಂತಹ ಜಾತಿ ಮತಗಳ ಪ್ರತಿನಿಧಿಗಳಾಗಿರುವುದರಿಂದಲೇ ಅವುಗಳಿಗೆ ರಾಜಕೀಯ ಬಲ ಬಂದಿದೆ. ತಮ್ಮ ಸಂಶೋಧನಾ ಕೌರ್ಯದಲ್ಲಿ ವ್ಯಾಪಕವಾಗಿ ಕ್ಷೇತ್ರ ಕೌರ್ಯದಲ್ಲಿ ತೊಡಗಿರುವ ಡಾ॥ ತರೀಕೆರೆ ಅವರಿಗೆ ಮಠಗಳು ಸಮಾಜದ ಮೇಲೆ ಹೇಗೆ ಹಿಡಿತ ಸಾಧಿಸಿವೆ ಎಂಬುದು ತಿಳಿದಿರಲೇ ಬೇಕು.

ಭಾರತೀಯ ಪ್ರಜಾತಂತ್ರ ವ್ಯವಸ್ಥೆ ಬರೀ ಚುನಾವಣೆಯನ್ನಷ್ಟೆ ಅವಲಂಬಿಸಿಲ್ಲ. ಇಲ್ಲಿ ಪತ್ರಿಕಾ ಸ್ವಾತಂತ್ರ್ಯವೂ ಇದೆ, ಸ್ವತಂತ್ರ ನ್ಯಾಯಾಂಗವೂ ಇದೆ. ಡಾ॥ ತರೀಕೆರೆಯವರು ಉಲ್ಲೇಖಿಸಿರುವ ಪೇಜಾವರ ಮಠಧೀಶರ ಪ್ರಕರಣದಲ್ಲಿ ಈ ಮಠಾಧೀಶರಿಂದ ಪ್ರಾಣಭಯ ಎದುರಿಸಿದ ವ್ಯಕ್ತಿ ಅವರ ವಿರುದ್ಧ ಕೋರ್ಟ್‌ಗೆ ಹೋಗಿ ಒಂದು ಮುಖ್ಯ ಗೆಲುವನ್ನು ಸಾಧಿಸಿ ತಮ್ಮ ಹಕ್ಕಿಗಾಗಿ ಕೇಸನ್ನು ಮುಂದುವರಿಸುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಡಾ॥ ತರೀಕೆರೆ ತಾವು 'ಫ್ಯಾಸಿಸ್ಟ್' ಎಂದು ಹಣೆಪಟ್ಟಿ ಹಚ್ಚಿದ ಪಕ್ಷ ಹಾಗೂ ವ್ಯಕ್ತಿಯನ್ನು ಗುಜರಾತಿನ ಜನರು ಚುನಾವಣೆಯಲ್ಲಿ ಗೆಲ್ಲಿಸಿದ್ದರಿಂದ ನಮ್ಮ ಡೆಮಾಕ್ರಸಿ ನಿಜವಾದ ಡೆಮಾಕ್ರಸಿಯಲ್ಲ ಎಂದು ಹೇಳುವುದು ಪ್ರಗತಿಪರರ ಫ್ಯಾಸಿಸಂ ಎನಿಸುವುದಿಲ್ಲವೆ? ಇದೇ ಭಾರತದಲ್ಲಿ ತಮಿಳುನಾಡಿನಲ್ಲಿ ಕಳೆದ ನಲ್ವತ್ತು ವರ್ಷಗಳಿಂದ ಪೆರಿಯಾರ್ ಅವರ ಅನುಯಾಯಿಗಳು ಚುನಾವಣೆಗಳಿಲ್ಲಿ ಗೆಲ್ಲುತ್ತಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಪಶ್ಚಿಮ ಬಂಗಾಳದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟರು ಆಗುತ್ತಿದ್ದಾರೆ. ಕಳೆದ ವರ್ಷ ತಾನೆ ದಲಿತರ ಪಕ್ಷವಾದ ಬಿ.ಎಸ್.ಪಿ. ಉತ್ತರ ಪ್ರದೇಶದಲ್ಲಿ ಗೆದ್ದಿದೆ. ಇದನ್ನೂ ಗಮನಿಸಬೇಕು.

ಗಿರೀಶ್ ವಿ. ವಾಘ್,
ಕೆಂಗೇರಿ ಉಪನಗರ,
ಬೆಂಗಳೂರು

ಸಂಪಾದಕೀಯ



ಇಂಥ ಸ್ಥಿತಿಗೆ ನಾವೆಲ್ಲ ಸಿದ್ಧರಿದ್ದೇವೆಯೆ?

ಬಹುಷಃ ಇದನ್ನು ಓದುವ ವೇಳೆಗೆ ರಾಜ್ಯದಲ್ಲಿ ಇನ್ನೊಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿರುತ್ತದೆ. ಅಥವಾ ಸಂಖ್ಯಾ ಬಲದ ಸೆಣಸಾಟದಲ್ಲಿ ಹಗ್ಗ ಜಗ್ಗಾಟ ಮುಂದುವರೆದಿರುತ್ತದೆ. ಪರಸ್ಪರ ಬದ್ಧ ವೈರಿಗಳಂತೆ ಕಾದಾಡಿದ ರಾಜಕಾರಣಿಗಳು ಪರಸ್ಪರ ಅಪ್ಪಿ ಮುದ್ದಾಡುವ–ಹೊಂದಾಣಿಕೆ ಮಾಡಿಕೊಳ್ಳುವ ಕಸರತ್ತು ನಡೆದಿರುತ್ತದೆ. ಪಕ್ಷ, ಪ್ರಣಾಳಿಕೆ, ತತ್ವ, ಸಿದ್ಧಾಂತಗಳನ್ನೆಲ್ಲ ಕಸದ ಬುಟ್ಟಿಗೆ ಎಸೆದು ಅಧಿಕಾರದ ಗದ್ದುಗೆ ಏರಲು ಯಾವ ಹೊಂದಾಣಿಕೆಗಾದರೂ ರಾಜಕಾರಣಿಗಳು ಸಿದ್ಧರಾಗುತ್ತಿರುತ್ತಾರೆ. ಅನುಕೂಲ ರಾಜಕಾರಣದ ಹೊಸ ವ್ಯಾಖ್ಯಾನಗಳೂ ಆರಂಭವಾಗಿರುತ್ತವೆ.

ಹಾಗೆ ನೋಡಿದರೆ ಈ ಅನುಕೂಲ ರಾಜಕಾರಣ ಇಂದು ನಿನ್ನೆಯದೇನಲ್ಲ. ಪ್ರತಿ ಚುನಾವಣೆಯಲ್ಲೂ ಅದು ತನ್ನ ಪ್ರಾಬಲ್ಯವನ್ನೇ ಮೆರೆಯುತ್ತಿದೆ. ೧೯೭೭ರಲ್ಲಿ ಇಂದಿರಾಗಾಂಧಿ ಅವರನ್ನು ಹಿಮ್ಮೆಟ್ಟಿಸುವ ಒಂದು ಅಂಶದ ಕಾರ್ಯಕ್ರಮವಾಗಿ ಆರಂಭವಾದ ಈ ಅನುಕೂಲ ರಾಜಕಾರಣ ಇಂದು ತನ್ನೆಲ್ಲ ಕರಾಳ ರೂಪದೊಂದಿಗೆ ಕಾಣಿಸಿಕೊಳ್ಳುತ್ತಿದೆ. ಕಳೆದ ಒಂದೆರಡು ದಶಕಗಳಿಂದ ಕರ್ನಾಟಕದಲ್ಲಂತೂ ಅನುಕೂಲ ರಾಜಕಾರಣವೇ ದೊಡ್ಡ ಸಿದ್ಧಾಂತವಾಗಿದೆ. ಕಳೆದ ಸಾರ್ವತ್ರಿಕ ಚುನಾವಣೆಯ ನಂತರ ಅದೇ ರಾಜಕಾರಣದ ಸರ್ವಸ್ವವೂ ಆಗಿದೆ.

ನಿರ್ದಿಷ್ಟ ಪಕ್ಷಕ್ಕೆ ಬಹುಮತ ಬರದಿದ್ದಾಗ ಈ ಅನುಕೂಲ ರಾಜಕಾರಣ ಅನಿವಾರ್ಯವಾಗಬಹುದಾದರೂ, ಆ ಹೊಂದಾಣಿಕೆ ಒಂದು ಜವಾಬ್ದಾರಿಯ ನಿರ್ವಹಣೆಗೆ ಮಾಡಿಕೊಂಡ ಒಪ್ಪಂದವಾಗಿರಬೇಕು. ಅದಕ್ಕೆ ಕನಿಷ್ಠ ತತ್ವ ಸಿದ್ಧಾಂತ ಹಾಗೂ ಕಾರ್ಯಕ್ರಮಗಳ ತಳಹದಿ ಇರಬೇಕು. ಆದರೆ ಕಳೆದ ಬಾರಿ ಬಿಜೆಪಿ–ಜೆಡಿಎಸ್ ಮಾಡಿಕೊಂಡ ಹೊಂದಾಣಿಕೆ ಈ ಎಲ್ಲವನ್ನು ಬಿಟ್ಟ ಲಜ್ಜಾಸ್ಪದ ಹಾಗೂ ಅನೈತಿಕ ಅನುಕೂಲ ರಾಜಕಾರಣದ ಪರಾಕಾಷ್ಠೆಯಾಗಿತ್ತು.

ಬಹಳ ಮುಖ್ಯವೆಂದರೆ; ರಾಜ್ಯದ ಬಹುತೇಕ ರಾಜಕೀಯ ಪಕ್ಷಗಳಿಗೆ ತಮ್ಮದೇ ಆದ ರಾಜಕೀಯ ಸಿದ್ಧಾಂತಗಳಿಲ್ಲದಿರುವುದು. ಹಾಗೂ ಬಹುತೇಕ ರಾಜಕಾರಣಿಗಳಿಗೆ ಸಹ ರಾಜಕೀಯ ಸಿದ್ಧಾಂತ ಹಾಗೂ ಬದ್ಧತೆಗಳಿಲ್ಲದಿರುವುದು. ಇಂದು ಜಾತ್ಯಾತೀತ ಎಂದು ಹೇಳಿಕೊಳ್ಳುವ ಪಕ್ಷದ ವ್ಯಕ್ತಿಯೊಬ್ಬ ನಾಳೆಯೇ ಕೋಮುವಾದಿ ಪಕ್ಷದ ಅಭ್ಯರ್ಥಿ! ಅಲ್ಲಿ ಅಧಿಕಾರ ಸಿಗದಿದ್ದರೆ ಮುಂದಿನ ಚುನಾವಣೆಯಲ್ಲಿ ಮತ್ತೆ ಇನ್ನೊಂದು ಪಕ್ಷದ ಅಭ್ಯರ್ಥಿ! ಅಧಿಕಾರ ಹಿಡಿಯುವುದಷ್ಟೇ ರಾಜಕೀಯ ಸಿದ್ಧಾಂತವಾದರೆ ಅದಕ್ಕೆ ಬೇರೆ ಬೇರೆ ಪಕ್ಷಗಳೇಕೆ ಬೇಕು? ನಿಜ ಹೇಳಬೇಕೆಂದರೆ ಇಲ್ಲಿ ರಾಜಕೀಯ ಪಕ್ಷಗಳೇ ಇಲ್ಲ. ಎಲ್ಲ ಸ್ವಾರ್ಥಿಗಳ ಗುಂಪು!

ಮೊನ್ನೆ ನಡೆದ ಚುನಾವಣೆಯಲ್ಲಿ ನನ್ನನ್ನು ಘಾಸಿಗೊಳಿಸಿದ ಮತ್ತೊಂದು ಅಂಶ ಮತದಾರನಿಗೂ ಬದ್ಧತೆ ಇಲ್ಲದಿರುವುದು. ಒಂದು ಚುನಾವಣಾ ಕ್ಷೇತ್ರದಲ್ಲಿ ಪ್ರಚಾರಕ್ಕಾಗಿ ಹೋಗಿದ್ದ ಅಭ್ಯರ್ಥಿಯೊಬ್ಬನನ್ನು ಮತದಾರರು ಹಿಗ್ಗಾ ಮುಗ್ಗ ನಿಂದಿಸುತ್ತಿದ್ದರು. ಆತ ಕೈಮುಗಿದು ದಮ್ಮಯ್ಯ ಹಾಕಿ ಹೇಗೋ ತಪ್ಪಿಸಿಕೊಂಡು ಹೋದ. ಇದನ್ನು ಕಂಡ ನಾನು ಮತ್ತು ನನ್ನ ಗೆಳೆಯ ಆ ಮತದಾರರನ್ನು ಕಂಡು ಯಾಕೆ ಅಷ್ಟೊಂದು ಸಿಟ್ಟಾಗಿದ್ದರೆಂದು ಪ್ರಶ್ನಿಸಿದೆವು.

ಮತದಾರರ ಗುಂಪಿನ ಮುಖಂಡನಂತಿದ್ದ ವ್ಯಕ್ತಿಯೊಬ್ಬ ಕೂಡಲೇ ನಮ್ಮತ್ತ ತಿರುಗಿ 'ಬೈಯದಿದ್ದರೆ ಈ ನನ್ನ ಮಕ್ಕಳು ದುಡ್ಡು ಬಿಚ್ಚೋದಿಲ್ಲ ಸ್ವಾಮಿ' ಅಂತ ತನ್ನ ಬೈಗುಳದ ಉದ್ದೇಶ ವಿವರಿಸಿದ. ನಾನು ದಂಗಾಗಿ ಹೋದೆ. 'ಅಲ್ಲ ರೀ ದುಡ್ಡಿಗಾಗಿ ನಿಮ್ಮ ಓಟನ್ನು ಮಾರಿಕೊಳ್ಳುತ್ತೀರಲ್ಲ ಇದು ಸರಿಯೆ?' ಎಂದು ಪ್ರಶ್ನಿಸಿದೆ. ಆತ ಅಷ್ಟೇ ನಿರ್ಲಿಪ್ತವಾಗಿ ಹೇಳಿದ 'ನೋಡಿ ಸ್ವಾಮಿ ಸರಿ ತಪ್ಪು ನಮಗೆ ಗೊತ್ತಿಲ್ಲ. ಯಾವ ಬೋಳೀ ಮಕ್ಕಳಿಗೆ ಓಟು ಹಾಕಿದ್ರೂ ಅಷ್ಟೇ. ಎಲೆಕ್ಷನ್ ಬಂದಾಗ ಒಂದಷ್ಟು ಗುಂಜಿಕೊಳ್ಳದಿದ್ದರೆ ಈ ನನ್ನ ಮಕ್ಕಳು ಮತ್ಯಾವಾಗ ನಮಗೆ ಸಿಕ್ತಾರೆ ಹೇಳಿ?'

ಮೇಲಿನ ಘಟನೆಯನ್ನು ಯಾಕೆ ಹೇಳುತ್ತಿದ್ದೇನೆಂದರೆ ರಾಜಕಾರಣಿಯಷ್ಟೇ ಮತದಾರ ಕೂಡ ಅದ್ವಾನವಾಗಿ ಹೋಗಿದ್ದಾನೆ. ಆದರೆ ರಾಜಕಾರಣಿ ಸೇವೆಯ ನಾಟಕವಾಡಿ ಮತದಾರನನ್ನು ವಂಚಿಸುತ್ತಿದ್ದರೆ, ಮತದಾರ ಕ್ಷಣಿಕ ಲಾಭಕ್ಕಾಗಿ ತನ್ನ ಭವಿಷ್ಯವನ್ನೇ ವಂಚಿಸಿಕೊಳ್ಳುತ್ತಿದ್ದಾನೆ. ಈ ವಂಚನೆಯ ಕೆಲಸ ಇಡೀ ದೇಶದಾದ್ಯಂತ ಅವ್ಯಾಹತವಾಗಿ ನಡೆಯುತ್ತಿದೆ. ವಿವಿಧ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಟಿಕೆಟ್ ಪಡೆದು ಕೆಲವರು ವ್ಯಾಪಾರಕ್ಕಿಳಿದರೆ, ಮತ್ತೆ ಕೆಲವರು 'ಓಟು ಕೊಡಿಸುವ' ವ್ಯಾಪಾರ ಮಾಡಿ ದುಡ್ಡು ಮಾಡಿಕೊಳ್ಳುತ್ತಾರೆ.

ತುಂಬ ನಾಚಿಕೆಯ ವಿಚಾರವೆಂದರೆ ನಮ್ಮ ಮಾಧ್ಯಮಗಳು ನಡೆಸುವ ಸಮೀಕ್ಷೆಗಳು ಮತ್ತು ಪ್ರಕಟಿಸುವ ವರದಿಗಳು. ಒಂದೇ ಕ್ಷೇತ್ರದ ಮೂರು ನಾಲ್ಕು ಪ್ರಬಲ ಅಭ್ಯರ್ಥಿಗಳ ಬಗ್ಗೆ 'ಗೆದ್ದೇ ಗೆಲ್ಲುತ್ತಾರೆ' 'ಮೂಂಚೂಣಿಯಲ್ಲಿದ್ದಾರೆ' 'ಗೆಲ್ಲುವ ಕುದುರೆ' 'ವಿಜಯ ದತ್ತ ದಾಪುಗಾಲು' ಮುಂತಾದ ವಿಶೇಷಣಗಳ ಮೂಲಕ ವರದಿಗಳು ಬರುತ್ತವೆ. ಅದು ಹೇಗೆ ಒಂದೇ ಕ್ಷೇತ್ರದ ನಾಲ್ಕೂ ಅಭ್ಯರ್ಥಿಗಳು ವಿಜಯದತ್ತ ದಾಪುಗಾಲು ಹಾಕಲು ಸಾಧ್ಯ? ಕನಿಷ್ಠ ನಾಚಿಕೆಯೂ ಇಲ್ಲದೆ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಇಂಥ ವರದಿಗಳನ್ನು ಪ್ರಕಟಿಸಲು ಬಿತ್ತರಿಸಲು ಸಾಧ್ಯವಾದದ್ದಾರೂ ಹೇಗೆ?

ಅಂದರೆ ಚುನಾವಣೆ ಎಲ್ಲ ಜನವರ್ಗವನ್ನು ಸಣ್ಣವರನ್ನಾಗಿ ಮಾಡುತ್ತಿದೆ! ವರ್ಷವಿಡಿ ಅದು ಸರಿ ಇಲ್ಲ ಇದು ಸರಿ ಇಲ್ಲ ಎಂದು ಬೊಂಬಡಾ ಹೊಡೆಯುವ ಸಾಹಿತಿ– ಬುದ್ಧಿಜೀವಿ ವರ್ಗವೂ ಚುನಾವಣೆ ಸಂದರ್ಭದಲ್ಲಿ ಗಪ್‌ಚುಪ್! ಯಾಕೆಂದರೆ ಮುಂದೆ ಗೆಲ್ಲುವವರೊಂದಿಗೆ 'ವ್ಯವಹಾರ' ಚೆನ್ನಾಗಿ ನಡೆಯಬೇಕಲ್ಲವೆ? ಹಾಗಾಗದಿದ್ದರೆ ಪಾಪ ಅಕಾಡೆಮಿ, ಬೋರ್ಡ್, ಕಾರ್ಪೊರೇಷನ್‌ಗಳ ಪಾಡೇನು?

ಚುನಾವಣಾ ಪ್ರಕ್ರಿಯೆಲ್ಲಿ ಯಾರು ಭ್ರಷ್ಟರಲ್ಲ ಅಂತ ಹುಡುಕುವುದೇ ಕಷ್ಟವಾಗಿದೆ. ಅಂದರೆ ಮಾತು ಬಲ್ಲ ಬಹು ಸಂಖ್ಯಾತರೆಲ್ಲ ವ್ಯವಹಾರಕ್ಕಿಳಿದಿದ್ದಾರೆ. ಮಾತಿಲ್ಲದವರು ಅಥವಾ ಮಾತು ಬಲ್ಲ ಅಲ್ಪ ಸಂಖ್ಯಾತರು ತಮ್ಮ ಮಾತನ್ನು 'ಗಗನಕ್ಕೆ ಮುಟ್ಟಿಸಲಾಗದೆ' ಪರಿತಪಿಸುತ್ತಿದ್ದಾರೆ. ಚುನಾವಣೆ ಎಂದರೆ ಹಣ. ಹಣವಿಲ್ಲದವನು ಸ್ಮಶಾನದ ಹೆಣ ಎನ್ನುವಂಥ ಸ್ಥಿತಿ ನಿರ್ಮಾಣವಾಗಿದೆ. ಬಹುಷಃ ದೇವರಾಜ ಅರಸು ಕಾಲದಿಂದ ಇಂದಿನವರೆಗಿನ ಎಲ್ಲ ಚುನಾವಣೆಗಳನ್ನು ಹತ್ತಿರದಿಂದ ಬಲ್ಲ ನನಗೆ ಈ ಚುನಾವಣೆಯಲ್ಲಿ ಹಣ ಬೀರಿದಷ್ಟು ಪ್ರಭಾವವನ್ನು ಹಿಂದಿನ ಯಾವ ಚುನಾವಣೆಯಲ್ಲೂ ಬೀರಿದ್ದನ್ನು ಕಂಡಿರಲಿಲ್ಲ.

ಹಣವೇ ಸರ್ವಸ್ವವಾಗಿ ಹೋದರೆ ಅಂಥ ಸಮಾಜದಲ್ಲಿ ಮನುಷ್ಯತ್ವಕ್ಕೆಲ್ಲಿ ಜಾಗ! ಜನರಿಗಾಗಿ, ಜನರಿಂದ ಜನರೇ ಆರಿಸಲ್ಪಡುವ ಜನರೆಲ್ಲಿ ಸಿಗುತ್ತಾರೆ? ಅಲ್ಲಿ ಕೇವಲ ಅರಾಜಕತೆ ಇರುತ್ತದೆ! ಕಿತ್ತು ತಿನ್ನುವ ಮನುಷ್ಯ ರೂಪದ ಪ್ರಾಣಿಗಳಿರುತ್ತವೆ!

ಇಂಥ ಸ್ಥಿತಿಗೆ ನಾವೆಲ್ಲ ಸಿದ್ಧರಿದ್ದೇವೆಯೆ? ಇಡೀ ಸಮಾಜವನ್ನೇ ಅವನತಿಗೆ ತಳ್ಳುವ, ರಾಜಕೀಯವೆಂದರೆ ಕಳ್ಳ, – ಕಾಕರ, ದರೋಡೆಕೋರರ ಕೂಟ ಎನ್ನುವ ಸ್ಥಿತಿಯಿಂದ ಹೊರಬರಲು ಸಾಧ್ಯವೇ ಇಲ್ಲವೆ? ನಾಡಿನ ಸಜ್ಜನಿಕೆ, ಭಂಡತನದ ಎದುರು ಮಂಡಿಯೂರಿ ಕುಳಿತುಕೊಳ್ಳಬೇಕೆ? ಮನುಷ್ಯರಾದವರು ಯೋಚಿಸಬೇಕು!

○ ಇಂದೂಧರ ಹೊನ್ನಾಪುರ



ಜೈವಿಕ ಇಂಧನಗಳ ಬಳಕೆ ಹೆಚ್ಚಾಗುತ್ತಿದೆ. ಅದರಲ್ಲಿ ಎಥೆನಾಲ್ ಕೂಡ ಒಂದು. ಎಥೆನಾಲ್‌ಅನ್ನು ಕಬ್ಬಿನಿಂದ ಮಾತ್ರ ಅಲ್ಲದೆ ಜೋಳ ಇತ್ಯಾದಿ ಆಹಾರ ಧಾನ್ಯಗಳಿಂದಲೂ ತಯಾರಿಸಲಾಗುತ್ತದೆ. ಆದರೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಕಂಡೋಲಿಸ್ಸಾರೈಸ್ ಮತ್ತು ಬುಷ್ ಇಬ್ಬರೂ ಇದನ್ನು ಅಲ್ಲಗಳೆಯುತ್ತಾರೆ. ಎಥೆನಾಲ್‌ಗಾಗಿ ಆಹಾರ ಧಾನ್ಯಗಳನ್ನು ಸುರಿಯುತ್ತಿರುವುದು ನಿಜವಾದರೂ, ಅದೊಂದೇ ಕಾರಣವಲ್ಲ, ಎಂದು ಹೇಳುತ್ತಾರೆ. ಅವರ ಪ್ರಕಾರ ಭಾರತ ಮತ್ತು ಚೈನಾಗಳಲ್ಲಿ ಹೊಸದೊಂದು ಮಧ್ಯಮ ವರ್ಗ ಹುಟ್ಟಿಕೊಂಡಿದೆ, ಅವರು ಹೊಸದಾಗಿ ಪಡೆದುಕೊಂಡಿರುವ ಆರ್ಥಿಕ ಚೈತನ್ಯದ ಕಾರಣದಿಂದಾಗಿ ಹೆಚ್ಚೆಚ್ಚು ತಿನ್ನುತ್ತಿದ್ದಾರೆ. ಈ ಮಧ್ಯಮ ವರ್ಗವು ಬಹಳ ದೊಡ್ಡದಿರುವುದರಿಂದ ಅವರ ಈ ತಿನ್ನುವಿಕೆ ಇಡೀ ಜಗತ್ತಿನ ಆಹಾರ ದಾಸ್ತಾನಿನ ಮೇಲೆ ಪರಿಣಾಮ ಬೀರುತ್ತಿದೆ ಎಂಬುದು ಅವರ ವಾದ.

ಡಾ॥ ವಾಸು

ಕಳೆದ ತಿಂಗಳಲ್ಲಿ ನಮ್ಮ ಕೇಂದ್ರ ಕೃಷಿ ಮಂತ್ರಿ ಶರದ್‌ಪವಾರ್ 'ದಕ್ಷಿಣ ಭಾರತೀಯರು ಮತ್ತು ಈಶಾನ್ಯ

ಭಾರತದವರು ಹೆಚ್ಚು ಚಪಾತಿ ತಿನ್ನಲು ಪ್ರಾರಂಭ ಮಾಡಿದ್ದರಿಂದ ಗೋಧಿಯ ಬೆಲೆ ಹೆಚ್ಚಾಗಿದೆ' ಎಂದು ಹೇಳಿದರು.

ಅಂತಹುದೇ ಒಂದು ಮಾತನ್ನು ಅವ 'ರಿಕದ ಅಧ್ಯಕ್ಷ ಜಾರ್ಜ್ ಬುಷ್ ಸಹ ಹೇಳಿದ್ದಾರೆ 'ಭಾರತ ಮತ್ತು ಚೈನಾ ದೇಶಗಳಲ್ಲಿ ಅಲ್ಲಿನ ಜನರು ಹೆಚ್ಚು ಆಹಾರ ಧಾನ್ಯಗಳನ್ನು ತಿನ್ನುತ್ತಿರುವುದರಿಂದ ಜಾಗತಿಕ ಆಹಾರ ಬಿಕ್ಕಟ್ಟು ಉಂಟಾಗಿದೆ' ಎಂಬುದು ಬುಷ್ ಮಾತು. ಎರಡೂ ಸಹ ಮೂರ್ಖ ಹೇಳಿಕೆಗಳಂತೆ ಕಾಣುತ್ತವೆಯೆಂದು ನಾವು ಸುಮ್ಮನಾಗಬಹುದು. ಆದರೆ ಇಂದು ಆಹಾರ ಧಾನ್ಯಗಳ ಬೆಲೆಗಳು ಮೇಲೇ ರುತ್ತಿರುವುದರ ಬಗ್ಗೆ ಮತ್ತು ಆ ಕಾರಣದಿಂದ ಈ ದೇಶದ ಜನಸಾಮಾನ್ಯರು

ಸಂಕಷ್ಟದಲ್ಲಿರುವುದರಿಂದ ನಾವು ಇದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಿದೆ.

ಜಾಗತಿಕವಾಗಿ ಕಳೆದ ೩ ವರ್ಷಗಳಲ್ಲಿ ಆಹಾರ ಪದಾರ್ಥಗಳ ಬೆಲೆಯಲ್ಲಿ ಶೇ .೮೩ರಷ್ಟು ಏರಿಕೆಯಾಗಿದೆ. ಈ ವರ್ಷ ಬೆಲೆಯೇರಿಕೆಯ ಕಾರಣದಿಂದ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ದಂಗೆಗಳುಂಟಾಗಿವೆ. ಹೈಟಿ, ಈಜಿಪ್ಟ್, ಕ್ಯಾಮರೂನ್,

ಐವೋರಿಕೋಸ್ಟ್, ಮಾರಿಟಾನಿಯಾ, ಇಥಿಯೋ ಪಿಯಾ, ಉಜ್ಬೆಕಿಸ್ತಾನ್, ಯೆಮನ್, ಫಿಲಿಪ್ಪೀನ್ಸ್, ಥಾಯ್‌ಲ್ಯಾಂಡ್, ಇಂಡೋನೇಷಿಯಾ, ಇಟಲಿ ಮುಂತಾದ ದೇಶಗಳಲ್ಲಿ ಈ ಆಹಾರ ದಂಗೆಗಳು ನಡೆದಿವೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ, ಈ ಸಾರಿ ಇರುವ ಆಹಾರ ಧಾನ್ಯಗಳ ದಾಸ್ತಾನು ಕಳೆದ ೨೫ ವರ್ಷಗಳಲ್ಲೇ ಅತ್ಯಂತ ಕಡಿಮೆ ಪ್ರಮಾಣದ್ದಾಗಿದೆ ಮತ್ತು ಬೆಲೆಗಳು ಇನ್ನೂ ಹಲವು ವರ್ಷಗಳ ಕಾಲ ಇದೇ ರೀತಿ ಏರಿಕೆಯಲ್ಲೇ ಇರುತ್ತವೆ.

ಇಷ್ಟು ಗಂಭೀರ ಪ್ರಮಾಣದ ಬಿಕ್ಕಟ್ಟು ಉಂಟಾಗಲು ಕಾರಣವೇನು? ಬಹುಪಾಲು ತಜ್ಞರು ಅಮೆರಿಕದತ್ತ ಬೆರಳು ಮಾಡಿ ತೋರಿಸಿದರೆ, ಅಮೆರಿಕವು ಭಾರತ ಮತ್ತು ಚೈನಾಗಳೇ ಇದಕ್ಕೆ ಕಾರಣ ಎನ್ನುತ್ತಿದೆ. ಅಮೆರಿಕಾ ದೇಶದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಪ್ರದೇಶದ ಶೇ .೩೦ರಷ್ಟು ಈಗ ಎಥೆನಾಲ್ ಇಂಧನದ ತಯಾರಿಕೆಗಾಗಿ ದುಡಿಯುತ್ತಿರುವುದೂ ಸೇರಿದಂತೆ ಇನ್ನೂ ಹಲವಾರು ಅಂಶಗಳನ್ನು ತಜ್ಞರು ಪಟ್ಟಿ ಮಾಡುತ್ತಾರೆ. (ಪೆಟ್ರೋಲ್ ಬೆಲೆ ಏರುತ್ತಿರುವುದರಿಂದ ಹಾಗೂ ಪೆಟ್ರೋಲ್‌ನಿಂದ ಉಂಟಾಗುವ ಮಾಲಿನ್ಯದ ಕಾರಣದಿಂದಾಗಿ ಬದಲಿ ಇಂಧನ ಮೂಲಗಳಿಗಾಗಿ ಹುಡುಕಾಟ ನಡೆದು, ಈಗ ಜೈವಿಕ ಇಂಧನಗಳ ಬಳಕೆ ಹೆಚ್ಚಾಗುತ್ತಿದೆ. ಅದರಲ್ಲಿ ಎಥೆನಾಲ್ ಕೂಡ ಒಂದು. ಎಥೆನಾಲ್‌ಅನ್ನು ಕಬ್ಬಿನಿಂದ ಮಾತ್ರ ಅಲ್ಲದೆ ಜೋಳ ಇತ್ಯಾದಿ ಆಹಾರ ಧಾನ್ಯಗಳಿಂದಲೂ ತಯಾರಿಸಲಾಗುತ್ತದೆ) ಆದರೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಕಂಡೋಲಿಸ್ಸಾರೈಸ್ ಮತ್ತು ಬುಷ್ ಇಬ್ಬರೂ ಇದನ್ನು ಅಲ್ಲಗಳೆಯುತ್ತಾರೆ. ಎಥೆನಾಲ್‌ಗಾಗಿ ಆಹಾರ ಧಾನ್ಯಗಳನ್ನು ಸುರಿಯುತ್ತಿರುವುದು ನಿಜವಾದರೂ, ಅದೊಂದೇ ಕಾರಣವಲ್ಲ, ಎಂದು ಹೇಳುತ್ತಾರೆ. ಅವರ ಪ್ರಕಾರ ಭಾರತ ಮತ್ತು ಚೈನಾಗಳಲ್ಲಿ ಹೊಸದೊಂದು ಮಧ್ಯಮವರ್ಗ ಹುಟ್ಟಿಕೊಂಡಿದೆ, ಅವರು ಹೊಸದಾಗಿ ಪಡೆದುಕೊಂಡಿರುವ ಆರ್ಥಿಕ ಚೈತನ್ಯದ ಕಾರಣದಿಂದಾಗಿ ಹೆಚ್ಚೆಚ್ಚು ತಿನ್ನುತ್ತಿದ್ದಾರೆ. (ಈ ರೀತಿ ಅವರ ಕೊಳ್ಳುವ ಶಕ್ತಿ ಹೆಚ್ಚಾಗಿರುವುದು ಒಳ್ಳೆಯದು ಎಂದೂ ಅವರು ಸೇರಿಸುತ್ತಾರೆ) ಈ ಮಧ್ಯಮವರ್ಗವು ಬಹಳ ದೊಡ್ಡದಿರುವುದರಿಂದ ಅವರ ಈ ತಿನ್ನುವಿಕೆ ಇಡೀ ಜಗತ್ತಿನ ಆಹಾರ ದಾಸ್ತಾನಿನ ಮೇಲೆ ಪರಿಣಾಮ ಬೀರುತ್ತಿದೆ ಎಂಬುದು ಅವರವಾದ.

ಅವರ ಈ ಹೇಳಿಕೆಯನ್ನು ಗಮನಿಸಿದರೆ, ಇದರ ಮೂಲಕ ಅವರು ಇನ್ನೊಂದು ಅಂಶವನ್ನೂ ಹೇಳುತ್ತಿರುವುದುಕಾಣುತ್ತದೆ. ಅದೆಂದರೆ, ಜಾಗತೀಕರಣ ನೀತಿಗಳ ಫಲಾನುಭವಿಗಳಾಗಿ ಭಾರತದಲ್ಲಿ ಹುಟ್ಟಿಕೊಂಡಿರುವ ಮೇಲ್ಮಧ್ಯಮ ವರ್ಗದಕೊಳ್ಳುವ ಶಕ್ತಿ ಎಷ್ಟು ಹೆಚ್ಚಾಗಿದೆಯೆಂದರೆ ಅದನ್ನು ಪೂರೈಸಲು ಜಾಗತಿಕ ಆಹಾರ ಮಾರುಕಟ್ಟೆಗೆ ಸಾಧ್ಯವಾಗುತ್ತಿಲ್ಲ ಎಂದು. ಒಂದು ರೀತಿಯಲ್ಲಿ ಇದು 'ಭಾರತ ಪ್ರಕಾಶಿಸುತ್ತಿದೆ'ಗೆ ಹತ್ತಿರವಾಗಿದೆಯೆಂದು ನಮಗನ್ನಿಸಬಹುದು. ಆದರೆ ಇದು ನಿಜವೇ? ಭಾರತದಲ್ಲಿ ಕಾರು, ಬೈಕುಗಳನ್ನು ಕೊಳ್ಳುತ್ತಿರುವ,



ಅಮೆರಿಕಾದವರ ಕಾರಿನ ಪೆಟ್ರೋಲ್ ವರ್ಸಸ್ ಬಡ ಭಾರತೀಯರ ಅನ್ನ

ಮಹಾನ ಗರಗಳಲ್ಲಿ ಮನೆ-ನಿವೇಶನ ಕೊಳ್ಳುತ್ತಿರುವ ಒಂದು ಹೊಸ ಮೇಲ್ಮಧ್ಯಮ ವರ್ಗ ಸೃಷ್ಟಿ ಯಾಗಿರುವುದು ನಿಜವಾದರೂ ಅದು ಈ ದೇಶದ ಬಡತ ನದ ಚಿತ್ರಣ ವನ್ನೇ ಬದಲಾಯಿಸುವಷ್ಟು ದೊಡ್ಡದಾಗಿಯೂ ಇಲ್ಲ, ಆಹಾರ ಬಿಕ್ಕಟ್ಟಿಗಂತೂ ಕಾರಣ ಅಲ್ಲವೇ ಅಲ್ಲ. ಜಾಗತೀ ಕರಣದ ಫಲಾಫಲಗಳು ಹಾಗೂ ಅದರಿಂದ ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿದೆ ಎಂಬುದಕ್ಕೆ ಹೋಗದೆ, ಈ ಆಹಾರ ಬಿಕ್ಕಟ್ಟಿನಲ್ಲಿ ಯಾರ ಪಾತ್ರ ಎಷ್ಟೆಷ್ಟು? ಇದು ಹೇಗೆ ಸೃಷ್ಟಿಯಾಗಿದೆ ಎಂಬುದನ್ನು ಮಾತ್ರ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯ ವರದಿಯ ಪ್ರಕಾರ, ಭಾರತೀಯರು ೨೦೦೬-೦೭ರ ಸಾಲಿನಲ್ಲಿ ತಿಂದ ಆಹಾರ ಧಾನ್ಯದ ಪ್ರಮಾಣ ೧೯೩.೧ ಮಿಲಿಯ ನ್‌ಟನ್ನುಗಳು. ೨೦೦೭-೦೮ರಲ್ಲಿ ಅದು ೧೯೭.೩ ಮಿಲಿ ಯನ್‌ಟನ್ನುಗಳು. ಆದರೂ ಒಟ್ಟಾರೆ ಜಗತ್ತಿನ ಆಹಾರ ಧಾನ್ಯಗಳ ಬಳಕೆಯಲ್ಲಿ ಭಾರತದ ಶೇ ಕಡಾವಾರು ಏರಿಕೆ ೯.೩೬ರಿಂದ ೯.೩೭ ಅಷ್ಟೆ . ಅದೇ ಸಂದರ್ಭದಲ್ಲಿ ಅಮೆ ರಿಕದ ಬಳಕೆ ೨೭೭.೬ ಮಿಲಿಯನ್‌ಟನ್ನುಗಳಿಂದ ೩೧೦.೪ ಮಿಲಿಯನ್‌ಟನ್ನುಗಳಿಗೆ ಏರಿದೆ. ಅಂದರೆ ಜಗ ತ್ತಿನ ಆಹಾರ ಬಳಕೆಯಲ್ಲಿ ೧೩.೪೬ರಿಂದ ೧೪.೭೪ಕ್ಕೆ ಏರಿದೆ. ಇದೇ ಸಂದರ್ಭದಲ್ಲಿ ಚೈನಾದ ಆಹಾರ ಬಳಕೆಯ ಶೇಕಡಾವಾರು ಪ್ರಮಾಣ ಇಳಿದಿದೆ.

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಜಗ ತ್ತಿನ ಒಟ್ಟು ಜನಸಂಖ್ಯೆಯ ಶೇ .೧೬ರಷ್ಟನ್ನು ಹೊಂದಿ ರುವ ಭಾರತವು ಜಗತ್ತಿನ ಆಹಾರದ ಶೇ .೯.೩೭ರಷ್ಟನ್ನು ಮಾತ್ರ ಬಳಸುತ್ತಿದೆ. ಶೇ .೬ರಷ್ಟನ್ನು ಹೊಂದಿರುವ ಅಮೆರಿ ಕವು ಶೇ .೧೪.೭೪ರಷ್ಟನ್ನು ಬಳಸುತ್ತದೆ. ಅಷ್ಟು ಮಾತ್ರ ವಲ್ಲ, ಅವರು ಕಳೆದ ವರ್ಷಕ್ಕಿಂತ ಈ ವರ್ಷ ಇನ್ನೂ ಹೆಚ್ಚು ತಿನ್ನುತ್ತಿದ್ದಾರೆ.

ಹೀಗಿದ್ದೂ ಬುಷಪ್ಪ ನಮ್ಮ ಮೇಲೇ ಗೂಬೆ ಕೂರಿ ಸುತ್ತಾನೆ. ಅಮೆರಿಕಾದ ಜನರು ತಮ್ಮ ಮುದ್ದಿನ ಸಾಕು ಪ್ರಾಣಿಗಳ ಆಹಾರಕ್ಕೆ ೧೬.೯ ಮಿಲಿಯನ್ ಡಾಲರ್‌ಗಳನ್ನು ವ್ಯಯ ಮಾಡುತ್ತಾರೆ. ಮೂರನೇ ವಿಶ್ವ ರಾಷ್ಟ್ರಕ್ಕೆ 'ನೆರವು' ಎಂದು ಅಮೆರಿಕಾ ನೀಡುವುದು ೭೭೦ ಮಿಲಿಯನ್ ಡಾಲರ್‌ಗಳಷ್ಟು. ಇದು ಅವರ ಮುದ್ದಿನ ಸಾಕು ನಾಯಿಗಳ ಆಹಾರಕ್ಕೆ ವ್ಯಯಿಸುವ ಹಣದ ೪.೬% ಅಷ್ಟೆ. ಆ ದೇಶವು ಇರಾಕ್‌ನಲ್ಲಿ ತನ್ನ ಸೈನ್ಯವನ್ನಿರಿಸಿಕೊಂಡು ಯುದ್ಧವನ್ನು ಮುಂದುವರೆಸುತ್ತಿರುವುದರಿಂದ ಅದಕ್ಕಾಗಿ ಪ್ರತಿ ೪೨ ಗಂಟೆಗಳಲ್ಲಿ ವ್ಯಯಿಸುವುದೂ ಸಹ ೭೭೦ ಮಿಲಿಯನ್ ಡಾಲರ್‌ಗಳೇ ಆಗಿದೆ.

ಅಮೆರಿಕಾದಲ್ಲಿ ರೈತರು ಕೃಷಿ ಕ್ಷೇತ್ರದಲ್ಲಿ ಪಡೆಯುವ ಸಬ್ಸಿಡಿ ೩೦೦ ಬಿಲಿಯನ್ ಡಾಲರ್‌ಗಳು. ಕಳೆದ ಕೆಲವು ವರ್ಷಗಳಲ್ಲಿ ಎಥೆನಾಲ್ ಉತ್ಪಾದನೆಗಾಗಿ ಅಲ್ಲಿನ ಸರ್ಕಾ ರವು ಹೆಚ್ಚಿನ ಸಬ್ಸಿಡಿಯನ್ನು ನೀಡಲಾರಂಭಿಸಿದೆ. ಇದರಿಂದ ಅಲ್ಲಿನ ಆಹಾರ ಧಾನ್ಯ ಬೆಳೆಯುವ ಜಾಗದ ಶೇ. ೨೦ ರಿಂದ ೨೫ರಷ್ಟು ಎಥೆಸಾಲ್‌ಗೆ ತಿರುಗಿದೆ. ಹಾಲಿ ೪೦ ಬಿಲಿಯನ್ ಡಾಲರ್ ಮೌಲ್ಯದ ಎಥೆನಾಲ್ ಮಾರುಕಟ್ಟೆ ಅಲ್ಲಿ ಸೃಷ್ಟಿಯಾಗಿದೆ. ಯು ಎನ್ ಎಫ್ ಎ ಓ ಪ್ರಕಾರ ಈ 'ಎಥೆನಾಲ್ ಕೃಷಿ' ಶೇ .೧೦ರಿಂದ ೧೫ರಷ್ಟು ಬೆಲೆ ಏರಿ ಕೆಗೆ ಕಾರಣವಾಗಿದೆ. ವಾಷಿಂಗ್ಟನ್‌ನ ಆಹಾರ ನೀತಿ ಸಂಶೋಧನಾ ಸಂಸ್ಥೆಯೊಂದರ ಪ್ರಕಾರ ಅದು ೨೫ರಿಂದ ೩೩ ಶೇ ಕಡಾದಷ್ಟು ಕಾರಣವಾಗಿದೆ. ಇದರಿಂದ ಸಹಜ ವಾಗಿಯೇ ಆಹಾರ ಧಾನ್ಯಗಳ ಕೊರತೆಯುಂಟಾಗಿ ಬೆಲೆ ಯೇರುತ್ತಿದೆ. ಇದರ ಜೊತೆಗೆ ಅಂತರರಾಷ್ಟ್ರೀಯ ಮಾರು ಕಟ್ಟೆಯಲ್ಲಿ ತೈಲದ ಬೆಲೆ (ಪೆಟ್ರೋಲಿಯಂ ಉತ್ಪನ್ನಗಳು) ಹೆಚ್ಚಾಗಿರುವುದರಿಂದ ಆಹಾರ ಸಾಗಣೆ ವೆಚ್ಚವೂ ಹೆಚ್ಚಾಗಿ ಅದರಿಂದಲೂ ಬೆಲೆಯೇರಿಕೆ ಉಂಟಾಗಿದೆ. ಜೊತೆಗೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆಯೇ ಆಧಾರಪಟ್ಟಿರುವ ರಸಗೊಬ್ಬರದ ಬೆಲೆಯೂ ಹೆಚ್ಚಾಗಿರುವುದರಿಂದ ಕೃಷಿ.

ಪದಾರ್ಥಗಳ ಬೆಲೆಯಲ್ಲೂ ಹೆಚ್ಚಳವುಂಟಾಗಿದೆ. ಈ ತೈಲ ಬೆಲೆಯೇರಿಕೆಗೆ ತೈಲ ಬಳಕೆಯ ವಿಪರೀತ ಹೆಚ್ಚಳ ಒಂದು ಕಾರಣವಾದರೆ, ಇರಾಕ್ ಮೇಲಿನ ಯುದ್ಧ ಇನ್ನೊಂದು ಪ್ರಮುಖ ಕಾರಣವಾಗಿದೆ.

ಇವುಗಳ ಜೊತೆಗೆ ಆಸ್ಟ್ರೇಲಿಯಾದಲ್ಲಿ ಉಂಟಾಗಿ ರುವ ಬರವು ತನ್ನದೇ ಆದ ಕೊಡುಗೆಯನ್ನು ನೀಡಿದೆ. ವಿಶ್ವದ ಗೋಧಿ ರಫ್ತಿನಲ್ಲಿ ಎರಡನೇ ಸ್ಥಾನವನ್ನು ಹೊಂದಿ ರುವ ಈ ದೇಶವು ಈಗ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಬರದ ಕಾರಣದಿಂದಾಗಿಯೇ ಅದರ ಅಕ್ಕಿಯ ರಫ್ತಿನಲ್ಲೂ ಶೇ .೯೮ರಷ್ಟು ಕಡಿತವುಂಟಾಗಿದೆ. ಇನ್ನೂ ಒಂದು ಕಾರ ಣವೆಂದರೆ ಮೂರನೇ ವಿಶ್ವ ರಾಷ್ಟ್ರಗಳು ಈ ಹಿಂದೆ ಸ್ವಾವ ಲಂಬಿಗಳಾಗಿ ಆಹಾರ ಭದ್ರತೆಯನ್ನು ಹೊಂದಿದ್ದವು. ಆದರೆ ಮುಕ್ತ ಮಾರುಕಟ್ಟೆ ನೀತಿಗಳಿಂದ, ಅದನ್ನು ಕಳೆದು ಕೊಂಡು ಆಮದು ಮಾಡಿಕೊಳ್ಳಲು ಆರಂಭಿಸಿವೆ. ಉದಾ. ಹೈಟಿಯು ಅಕ್ಕಿಯ ಭದ್ರತೆಯನ್ನು ಕಳೆದುಕೊಂಡು ಈಗ ಆಮದುದಾರನಾಗಿದೆ. ಇದೂ ಸಹ ಬೆಲೆಯೇರಿಕೆಗೆ ಕಾರ ಣವಾಗಿದೆ.

ಇದಲ್ಲದೆ ದೊಡ್ಡ ದೊಡ್ಡ ಬಂಡವಾಳಶಾಹಿಗಳು ಆಹಾರ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಿರುವುದ ರಿಂದ ಷೇರು ಮಾರುಕಟ್ಟೆಯಲ್ಲಿ ಉಂಟಾಗುವ ವ್ಯತ್ಯಯ ಗಳು ಆಹಾರದ ಬೆಲೆಯ ಮೇಲೂ ಸಹ ಪರಿಣಾಮ ಬೀರುತ್ತವೆ.

ವಿಶ್ವಬ್ಯಾಂಕಿನ ಅಧ್ಯಕ್ಷ ರಾಬರ್ಟ್ ಜೋಲಿಕ್ ಅವರ ಪ್ರಕಾರವೇ, 'ಷೇರುಮಾರುಕಟ್ಟೆಯು ಕುಸಿದಂತೆ ಆಹಾರ ಗಳ ಬೆಲೆಗಳು ಏರುತ್ತಿವೆ'.

ಈ ಎಲ್ಲದರ ಹಿಂದೆ ಆಡಿಸುವ ಕೈ ಆಗಿರುವ ಅಮೆ ರಿಕಾವು ತನ್ನ ಪಾತ್ರವನ್ನು ಮುಚ್ಚಿಕೊಳ್ಳಲು ಭಾರತೀಯರು

ಹೆಚ್ಚು ತಿನ್ನುತ್ತಿದ್ದಾರೆ ಎಂಬ ಹಾಸ್ಯಾಸ್ಪದ ಹೇಳಿಕೆ ಯನ್ನು ನೀಡುತ್ತಿದೆ. ತೈಲ ಬೆಲೆಯು ಬ್ಯಾರೆಲ್‌ಗೆ ೧೧೫ ಡಾಲರ್‌ನಷ್ಟು ಹೆಚ್ಚಾದಂತೆ ಅಮೆರಿಕಾವು ತನ್ನ ೩೦ ಮಿಲಿ ಯನ್ ಟನ್‌ಗಳಷ್ಟು ಧಾನ್ಯವನ್ನು ಜೈವಿಕ ಇಂಧನ ತಯಾ ರಿಸಲು ತಿರುಗಿಸಿದೆ.

ಜೋಳದಿಂದ ಎಥೆನಾಲ್ ತಯಾರಿಸುವುದರಲ್ಲಿ ಅಮೆರಿಕಾ ದೇಶವು ೨೦೦೦ ಮತ್ತ ೨೦೦೬ರ ನಡುವೆ ಎರಡೂವರೆ ಪಟ್ಟು ಹೆಚ್ಚಳವನ್ನು ಮಾಡಿದೆ.

ಇದನ್ನೇ ವಾಷಿಂಗ್ಟನ್‌ನ ವರ್ಲ್ಡ್‌ವಾಚ್ ಥಿಂಕ್ ಟ್ಯಾಂಕ್ ಸಂಸ್ಥೆಯ ಸ್ಥಾಪಕ ಲೆಸ್ಟರ್ ಬ್ರೌನ್ ಹೀಗೆ ಹೇಳು ತ್ತಾರೆ

"ಜಗತ್ತಿನಲ್ಲಿ ತಮ್ಮ ನಿತ್ಯದ ಬದುಕನ್ನು ಉಳಿಸಿ ಕೊಳ್ಳಲು ಹೋರಾಡುತ್ತಿರುವ ೨೦೦ ಕೋಟಿ ಬಡಜನತೆ ಮತ್ತು ಮೋಟಾರು ವಾಹನಗಳನ್ನು ಹೊಂದಿರುವ ೮೦ಕೋಟಿ ಶ್ರೀಮಂತರ ನಡುವೆ ಆಹಾರ ಧಾನ್ಯಕ್ಕಾಗಿ ಪೈಪೋಟಿ ನಡೆಯುತ್ತಿದೆ" □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗು ತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆ ಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಕನ್ನಡ ಭಾಷೆಗೇಕೆ ಇಂಥ ಅನ್ಯಾಯ

ಸಂಪಾದಕರೊಡನೆ ಸಂವಾದ

ಕಳೆದ ಏಪ್ರಿಲ್ ೧೩ರಂದು ಹೋರಾಟದ ಒಂದು ಪುಟ್ಟ ಹೆಜ್ಜೆಯನ್ನು ಇರಿಸಲು ಕಾರ್ಯಕ್ರಮ ವೊಂದನ್ನು ಹಮ್ಮಿ ಕೊಂಡಿತ್ತು. "ಭಾಷೆ ಯನ್ನು ಬೆಳೆಸುವು ದರಲ್ಲಿ ಗ್ರಾಹಕರ ಮಹತ್ವ" ಎಂಬ ವಿಷಯ ವನ್ನು ಆಯ್ದುಕೊಂಡು ದಿನನಿತ್ಯದ ವ್ಯವಹಾರ ಗಳಲ್ಲಿ ಅಂದರೆ ನಾವು ಕೊಳ್ಳುವ ಆಹಾರ ಪದಾ ರ್ಥಗಳ ಪ್ಯಾಕಿನ ಮೇಲೆ ಆಗಲಿ, ಔಷಧಿ-ಮಾತ್ರೆ ಗಳ ಪ್ಯಾಕಿನ ಮೇಲೆ ಆಗಲಿ, ಎಲೆಕ್ಟ್ರಾನಿಕ್ಸ್ ವಸ್ತುಗಳ ಮೇಲೆ ಆಗಲಿ ಕನ್ನಡವನ್ನು ಏಕೆ ಬಳಸು ತ್ತಿಲ್ಲ? ಅದರಿಂದ ಕನ್ನಡ ಭಾಷೆಗೆ ಹಾಗೂ ಕನ್ನಡಿ ಗರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಚರ್ಚಿ ಸಲಾಯಿತು. ಐದುಕೋಟಿ ಗ್ರಾಹಕರಿರುವ ತಾಣವಿದು ಕನ್ನಡನಾಡು. ಇಲ್ಲಿ ಏನಿ ದ್ದರೂ ಎಲ್ಲಾ ಕನ್ನಡದಲ್ಲೇ ಆಗಬೇಕು. ಬದಲಾವಣೆ ಜಾರಿಗೆ ತರುವುದು ಕಷ್ಟ ವೇನಿಲ್ಲ. ಆದರೆ ನಾವೆ ಲ್ಲರೂ ಸೇರಿ ಒಂದು ಪ್ರಯತ್ನ ಮಾಡಬೇಕಿದೆ ಅಷ್ಟೇ.

ಸುನಿಲ್ ಮಲ್ಲೇನಹಳ್ಳಿ

ಪ್ರಿಯ ಸಂಪಾದಕರೇ,

ಕೆಲವು ದಿನಗಳ ಕೆಳಗೆ ನಮ್ಮೂರಿಗೆ ಹೋದಾಗ ನಡೆದ ಘಟನೆ; ನಮ್ಮ ಪಕ್ಕದ ಮನೆಯ ನಂಜುಂಡಪ್ಪನವರು ಹುಷಾರಿಲ್ಲದ ಅವರ ಮೊಮ್ಮಗನಿಗೆ ೫mlನಷ್ಟು ಪ್ಯಾರಾಸಿಟಮಾಲ್ ಸಿರಪ್ ಕುಡಿಸಿ, ಆ ಮಗುವನ್ನು ಮಲಗಿಸಿ, ನನ್ನೊಂದಿಗೆ ಮಾತಿಗೆ ಅಣಿಯಾದರು. ಪಕ್ಕದಲ್ಲೇ ಕುಳಿತಿದ್ದ ನಾನು ಸಿರಪ್(syrup) ಬಾಟಲನ್ನು ಕೈಗೆತ್ತಿಕೊಂಡು ವಿವರವಾಗಿ ಓದಿದಾಗ ಅದರ Expire Date ಮುಗಿದು ೮ ತಿಂಗಳಾಗಿ ಹೋಗಿತ್ತು! ಈ ಸಂಗತಿಯನ್ನು ಕೇಳಿ ತಮ್ಮ ಮೊಮ್ಮಗನಿಗೆ ಏನಾಗುತ್ತೋ? ಎಂದು ಅವರು ಹೆದರಿ ತಕ್ಷಣವೇ ಡಾಕ್ಟರ್‌ಗೆ ಕರೆಮಾಡಿ ಆದ ವಿಚಾರವನ್ನು ತಿಳಿಸಿದರು. ಡಾಕ್ಟರ್‌ರವರ ಹೇಳಿದ ಭರವಸೆಯ ಮಾತಿಗೆ ನಂಜುಂಡಪ್ಪನವರು ಸ್ವಲ್ಪ ಸಮಾಧಾನದ ನಿಟ್ಟುಸಿರು ಬಿಟ್ಟರು. ಪಾಪ! ಕನ್ನಡಪದಗಳನ್ನು ಮಾತ್ರ ಸ್ಪಷ್ಟವಾಗಿ ಓದುವುದನ್ನು ಕಲಿತಿರುವ ನಂಜುಂಡಪ್ಪನವರಿಗೆ ತಮಗೆ ಬಾರದ ಇಂಗ್ಲಿಷ್ ಭಾಷೆಯಲ್ಲಿ ಮುದ್ರಿಸಿರುವುದನ್ನು ಹೇಗೆ ತಾನೆ ಓದಲು ಸಾಧ್ಯವಾದೀತು? ಆ ಸಿರಪ್‌ನ ಹೆಸರೇನು?, ಕೆಮ್ಮಿಗೋ, ನೆಗಡಿಗೋ, ಜ್ವರಕ್ಕೋ ಯಾವುದಕ್ಕೆ ಕೊಡಬೇಕು? ಅದನ್ನು ತಯಾರಿಸಿದ ದಿನಾಂಕ.. ಉಪಯೋಗಿಸುವುದಕ್ಕೆ ಯೋಗ್ಯತೆಯನ್ನು ಅದು ಕಳೆದುಕೊಳ್ಳುವ ದಿನಾಂಕ.. ಹೀಗೆ ವಿವಾರವಾಗಿ ಕನ್ನಡದಲ್ಲಿ ಮುದ್ರಿತವಾಗಿದ್ದರೆ ಈ ರೀತಿಯ ಪರಿಸ್ಥಿತಿ ಅವರಿಗೆ ಎದುರಾಗುತ್ತಿತ್ತೆ?

ಅದೇ ರೀತಿ ನಮ್ಮ ಮನೆಯಲ್ಲಿ ತಂದಿಟ್ಟಿದ್ದ ಬ್ರಾಂಡೆಡ್ ಕಂಪನಿಯ ಶಾಂಪಿನ ಪ್ಯಾಕೆಟ್‌ನ್ನು ಸ್ನಾನಕ್ಕೆಂದು ತೆಗೆದುಕೊಳ್ಳುವಾಗ ಒಂದಂಶವನ್ನು ನಾ ಗಮನಿಸಿದೆ, ಆ ಪ್ಯಾಕೆಟಿನ ಮೇಲೆ ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಭಾಷೆಗಳನ್ನು ಉಪಯೋಗಿಸಿಕೊಂಡು ಆ ಶಾಂಪೂವಿನ ಹೆಸರನ್ನು ಮುದ್ರಿಸಿದ್ದರು. ಅಲ್ಲಿ ಕನ್ನಡ ಪದಗಳನ್ನು ಬಳಸೇ ಇರಲಿಲ್ಲ! ಇದು ಎಂಥಾ ಅನ್ಯಾಯ ನೋಡಿ? ಆ ಶಾಂಪೂ ಮಾರಾಟವಾಗುತ್ತಿರುವುದು ಕರ್ನಾಟಕದಲ್ಲಿ, ಉಪಯೋಗಿಸುತ್ತಿರುವವರು ಕನ್ನಡಿಗರು, ಆದರೆ ಅಲ್ಲಿ ಮುಖ್ಯವಾಗಿರಬೇಕಾದ ಕನ್ನಡಪದಗಳನ್ನು ಬಿಟ್ಟು ಇನ್ನೆಲ್ಲಾ ಭಾಷೆಯ ಪದಗಳಿವೆ. ನಾ ಹೇಳಿದ ಇವು ಒಂದೆರಡು ಉದಾಹರಣೆಗಳಷ್ಟೇ ಇಂತಹ ಸಾವಿರಾರು ನಿದರ್ಶನಗಳಿಗೆ ನಾವುಗಳು ಮೂಕ ಸಾಕ್ಷಿಯಾಗಿದ್ದೇವೆ ಅಲ್ಲವೇ?

ಸ್ನೇಹಿತರೇ, ನಮ್ಮ ಕಣ್ಣೆದುರಿಗೆ ಕನ್ನಡಕ್ಕೆ ಆಗುತ್ತಿರುವ ಅನ್ಯಾಯವನ್ನು ನೋಡಿಯೂ ಸುಮ್ಮನೆ ಇರುತ್ತವೆಯಲ್ಲ ಅದೇ ನಾವುಗಳು ಮಾಡುತ್ತಿರುವ, ಮಾಡಿರುವ ದೊಡ್ಡ ತಪ್ಪು. **ನಮಗೆ ತಯಾರಕರು (Manufacturer) ಸಿಗದೆ ಇರಬಹುದು, ಆದರೆ ವಿತರಕರು (dealer) ಹಾಗೂ ವ್ಯಾಪಾರ (seller) ಮಾಡುವವರು ನಮ್ಮ ಕೈಗೆ ಎಟುಕದಷ್ಟು ದೂರವೇನು ಇರುವುದಿಲ್ಲ.** ಅಂಗಡಿಯವರನ್ನು, ಮಳಿಗೆಯವರನ್ನು, ವಿತರಕರನ್ನು ನೀತಿ ನಿಯಮಾವಳಿಯ ಚೌಕಟ್ಟಿನಲ್ಲಿ ತರಾಟೆಗೆ ತೆಗೆದುಕೊಳ್ಳುವ ಅಭ್ಯಾಸವನ್ನು ನಾವು ರೂಢಿಸಿಕೊಂಡಿದ್ದರೆ ಇದಕ್ಕೆಲ್ಲಾ ಅವಕಾಶವಾಗುತ್ತಿತ್ತೇ? ಅಂಧಾಭಿಮಾನ ಹಾಗೂ ಪ್ರಾದೇಶಿಕತೆಯನ್ನು ಎತ್ತಿ ತೋರಿಸುವ ಮನೋಭಿಪ್ರಾಯವಿದೆಂದು ತಿಳಿಯದಿರಿ. ಕನ್ನಡ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಲು ಕಲಿತರೇನೇ ನಮಗೆ ಭಾರತಮಾತೆಯ ದರ್ಶನ ಭಾಗ್ಯದೊರೆಯುವುದು. ಇದಕ್ಕೆ ತಪ್ಪಿದರೆ ಕನ್ನಡಿಗರೆಂಬ ಹಣೆಪಟ್ಟಿಯನ್ನು ಹೊಂದಿರುವ ನಾವುಗಳು ದಿನ ಕಳೆದಂತೆ ನೆರೆಹೊರೆಯ ಭಾಷೆಗಳನ್ನು ಬಲವಂತವಾಗಿ ಕಲಿಯುವ ಸಂದರ್ಭ ಬಂದರೂ ಬರಬಹುದು. ನಿಮ್ಮ ತನವನ್ನು ಗಟ್ಟಿಯಾಗಿ ಭದ್ರಪಡಿಸಿಕೊಳ್ಳಿ, ಭಾರತವೆಂದರೆ ಕರ್ನಾಟಕ, ಕನ್ನಡವೆಂಬ ಹೆಸರು ಜ್ಞಾನಪಕ್ಕೆ ಬರುವಂತೆ ಮಾಡಿ.. ಅದನ್ನ ಬಿಟ್ಟು ಸೌತ್ ಇಂಡಿಯಾ ಅಂದರೆ ತಮಿಳು..ನಾರ್ತ್ ಇಂಡಿಯಾ ಅಂದರೆ ಹಿಂದಿಯೆಂಬ ತಪ್ಪು ಕಲ್ಪನೆ ವಿದೇಶಿಯವರಿಗೆ ಬಾರದ ಹಾಗೆ ನೋಡಿಕೊಳ್ಳಿ. ನಾವುಗಳು ಜರ್ಮನಿ, ಫ್ರಾನ್ಸ್ ದೇಶಗಳ ಜನರ ರಾಷ್ಟ್ರಾಭಿಮಾನದ ಬಗ್ಗೆ ಇತಿಹಾಸದ ಪುಟಗಳಲ್ಲಿ ಓದಿದ್ದೇವೆ, ಕಣ್ಣಾರೆ ಕಂಡಿದ್ದೇವೆ. ಇಡಿ ಜಗತ್ತಿನ ಎಲ್ಲಾ ಭಾಗದ ಜನರು ಪ್ರವಾಸದ ಸಲುವಾಗಿ, ತಮ್ಮ ತಮ್ಮ ವ್ಯಾಪಾರ, ವ್ಯವಹಾರ, ಕೆಲಸದ ಸಲುವಾಗಿ ಈ ರಾಷ್ಟ್ರಗಳಿಗೆ ಮತ್ತೆ ಮತ್ತೆ ಭೇಟಿಕೊಡುತ್ತಿರುತ್ತಾರೆ. ಹಾಗಂತ ಜರ್ಮನಿ, ಫ್ರಾನ್ಸ್‌ನ ಜನರ‍್ಯಾರೂ ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲಿಷೇ ತಮ್ಮ ಮಾತೃಭಾಷೆಗಿಂತ ಮುಖ್ಯವಾದುದು ಎಂದು ಯಾವತ್ತೂ ಯೋಚಿಸೇ ಇಲ್ಲ! ಅಲ್ಲಿ ನಿಮಗೆ ಸಿಗುವ ಯಾವುದೇ ವಸ್ತುಗಳ ಪ್ಯಾಕಿನ ಮೇಲೆ ಇಂಗ್ಲಿಷ್ Optional ಭಾಷೆಯಾಗಿರುತ್ತೇ ವಿನಃ ಪ್ರಧಾನ ಭಾಷೆಯಾಗಿ ಮುದ್ರಿತವಾಗಿರುವುದಿಲ್ಲ. ಅಲ್ಲಿನ ಸರಕಾರದ ದೈನಂದಿನ ಎಲ್ಲಾ ಕಾರ್ಯಕಲಾಪಗಳು, ಚಟುವಟಿಕೆಗಳು ಜರುಗುವುದು ಅವರ ಭಾಷೆಯಲ್ಲೇ ಹೊರತು ಇಂಗ್ಲಿಷ್ ಭಾಷೆಯಲ್ಲಿ ಅಲ್ಲ. ಅಲ್ಲಿನ ಜನರ ಭಾಷಾಭಿಮಾನ, ರಾಷ್ಟ್ರಪ್ರೇಮ ನಿಜಕ್ಕೂ ಕನ್ನಡಿಗರಿಗೆ ನಿತ್ಯಸತ್ಯ ಮಾರ್ಗದರ್ಶನ.

ಈ ನಿಟ್ಟಿನಲ್ಲಿ ಎಚ್ಚೆತ್ತುಕೊಳ್ಳುವ ಸಲುವಾಗಿ ಐಟಿ ಹುಡುಗರ ಬನವಾಸಿಬಳಗವು ಕಳೆದ ಏಪ್ರಿಲ್ ೧೩ರಂದು ಹೋರಾಟದ ಒಂದು ಪುಟ್ಟ ಹೆಜ್ಜೆಯನ್ನು ಇರಿಸಲು ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. **"ಭಾಷೆಯನ್ನು ಬೆಳೆಸುವುದರಲ್ಲಿ ಗ್ರಾಹಕರ ಮಹತ್ವ"** ಎಂಬ ವಿಷಯವನ್ನು ಆಯ್ದುಕೊಂಡು ದಿನನಿತ್ಯದ ವ್ಯವಹಾರಗಳಲ್ಲಿ ಅಂದರೆ ನಾವು

ಮನುಷ್ಯನ ನಡವಳಿಕೆಯಲ್ಲಿ ನೈತಿಕತೆ

ಪ್ರಿಯ ಸಂಪಾದಕರೇ,

ಮಹಾನ್ ವ್ಯಕ್ತಿಗಳನ್ನು ಗೌರವಿಸುವುದು, ಸ್ಮರಿಸುವುದು ಸುಸಂಸ್ಕೃತ ಮನುಷ್ಯನ ಲಕ್ಷಣವಾಗಿದೆ. ಮಹಾನ ವ್ಯಕ್ತಿಗಳ ಸಾಧನೆ ಮತ್ತು ಅವರ ವಿಚಾರಗಳನ್ನು ಅವಲೋಕನ ಮಾಡಿಕೊಳ್ಳುವುದರಿಂದ ಎಡವಿ ಬೀಳುವುದು ತಪ್ಪುತ್ತದೆ. ಬದುಕಿಗೆ ಪೂರಕವಾದ ಚಿಂತನೆ, ಮಂಥನ ಮಾಡುವುದರಿಂದ ತನು-ಮನ ಶುದ್ಧಿಯಾಗಿಸಿ ಲೋಕದಲ್ಲಿ ಕೊಂಡ್ಯೊಯುವುದು.

ಇಂದು ಮನುಷ್ಯ ಸಹಾಯ ಅಥವಾ ಸಹಕಾರ ಮಾಡುವುದು ಒಂದು ಕಡೆ ಇರಲಿ ಇನ್ನೊಬ್ಬರನ್ನು ಕಷ್ಟದಲ್ಲಿ ಸಿಲುಕಿಸುವ, ಉಪಕಾರ ಮಾಡಿದವರಿಗೆ ಅಪಕಾರ ಬಯಸುವ ದುಷ್ಟ ಬುದ್ಧಿಯ ಜನರೇ ಹೆಚ್ಚು. ಒಬ್ಬ ಕುರುಡ ವ್ಯಕ್ತಿ ದಾರಿ ಮೇಲೆ ಹೋಗುತ್ತಿರುವಾಗ ಅವನಿಗೆ ಸಹಾಯ ಮಾಡದೆ ದಾರಿ ತಪ್ಪಿಸುವ ಕೀಳು ಕೆಲಸ ಮಾಡುವರು. ಈ ನಿಟ್ಟಿನಲ್ಲಿ ಗೌತಮ ಬುದ್ಧರು ಪರರ ಕಷ್ಟಗಳನ್ನು ತಮ್ಮ ಕಷ್ಟಗಳೆಂದು ತಿಳಿದು ಪರಿಹಾರ ಹುಡುಕುವ ಕೆಲಸ ಇಡೀ ತಮ್ಮ ಜೀವನವನ್ನೇ ತ್ಯಾಗ ಮಾಡಿದರು. ಇದರಿಂದ ಅವರನ್ನು ಮಹಾಪುರುಷರು ಎಂದು ಜಗತ್ತಿನಾದ್ಯಾಂತ ಗೌರವ ಭಾವನೆಯಿಂದ ಕಾಣುವರು. ಮೇರು ವ್ಯಕ್ತಿಗಳ ಉನ್ನತ ಚಿಂತನೆ, ನಡೆ-ನುಡಿಗೆ ಪ್ರಜ್ಞಾವಂತರು ಮಾರು ಹೋಗಿರುವರು. ಕವಿ ದ.ರಾ. ಬೇಂದ್ರ "ಸಖಿಗೀತ"ದಲ್ಲಿ

ಪಟ್ಟ ಪಾಡೆಲ್ಲವು ಹುಟು ಹಾಡಾಗುತ್ತ
....
ಎನ್ನಪಾಡೆನಗಿರಲಿ ಅದರ ಹಾಡನ್ನಷ್ಟೇ
ನೀಡುವೆನು...

ಮಹಾನುಭಾವರ ಕಷ್ಟಗಳು, ಪಟ್ಟ ಪಾಡುಗಳು ಹಾಡಾಗಿ ತೆಗೆದುಕೋ ಎನ್ನುವ ಹಾಗೆ ಮಹಾನ ವ್ಯಕ್ತಿಗಳ ಬದುಕು ಆಗಿರುತ್ತದೆ. ಶಾಕ್ಯ ಹಾಗೂ ಕೋಲಿ ರಾಜ್ಯಗಳ ನಡುವೆ ಉದ್ಭವಿಸಿದ ರೋಹಿಣಿ ನದಿ ನೀರಿನ ಹಂಚಿಕೆಯಲ್ಲಿ ಬುದ್ಧ ನಿಸರ್ಗದ ಸಂಪತ್ತು ಸಕಲ ಜೀವಿಗಳು ಸಮಾನವಾಗಿ ಪಡೆಯಬೇಕು. ಯುದ್ಧವಿಲ್ಲದೆ ಅಹಿಂಸೆಯ ಮೂಲಕ ನದಿ ನೀರನ್ನು ತೆಗೆದುಕೊಳ್ಳಲು ಹೇಳ ಶಾಕ್ಯ ರಾಜ್ಯದಿಂದ ಬಹಿಷ್ಕಾರಕ್ಕೆ ಒಳಗಾಗಿ ತನ್ನ ಅರಮನೆ ತ್ಯಜಿಸಿ ಮನುಕುಲ ಕಲ್ಯಾಣಕ್ಕಾಗಿ, ಮಾನವೀಯ ಸಮಾನತೆಗಾಗಿ ಶ್ರಮಿಸಿದ, ಇಂದು ಮನುಷ್ಯ-ಮನುಷ್ಯರಲ್ಲಿ ಬೇಧಭಾವ, ಒಬ್ಬರ ಏಳ್ಗೆ ಕಂಡು ಇನ್ನೊಬ್ಬರು ಸಹಿಸಿಕೊಂಡು ಇರಲಿಕ್ಕೆ ಆಗುತ್ತಿಲ್ಲ. ಸ್ವಾರ್ಥ, ಅಸೂಯೆ, ಮತ್ಸರ ತುಂಬಿ ತುಳುಕಾಡುತ್ತಿದೆ. ಮಾನವ-ಮಾನವನಾಗಬೇಕಾಗಿದೆ. ಎರಡು ಕೈ-ಕಾಲು ಇದ್ದ ಮಾತ್ರಕ್ಕೆ ಮಾನವ ಆಗಲಾರ. ಈ ಹಿನ್ನೆಲೆಯಲ್ಲಿ ಕವಿ ಸಿದ್ಧಯ್ಯ ಪುರಾಣಿಕ "ಏನಾದರೂ ಆಗು ಮೊದಲು ಮಾನವನಾಗು" ಎಂದು ಹೇಳಿರುವುದು.

ಬುದ್ಧ ನಿಸರ್ಗದ ಸಂಪತ್ತು ಸಕಲ ಜೀವಿಗಳು ಸಮಾನವಾಗಿ ಪಡೆಯಬೇಕು. ಯುದ್ಧವಿಲ್ಲದೆ ಅಹಿಂಸೆಯ ಮೂಲಕ ನದಿ ನೀರನ್ನು ತೆಗೆದುಕೊಳ್ಳಲು ಹೇಳ ಶಾಕ್ಯ ರಾಜ್ಯದಿಂದ ಬಹಿಷ್ಕಾರಕ್ಕೆ ಒಳಗಾಗಿ ತನ್ನ ಅರಮನೆ ತ್ಯಜಿಸಿ ಮನುಕುಲ ಕಲ್ಯಾಣಕ್ಕಾಗಿ, ಮಾನವೀಯ ಸಮಾನತೆಗಾಗಿ ಶ್ರಮಿಸಿದ, ಇಂದು ಮನುಷ್ಯ-ಮನುಷ್ಯರಲ್ಲಿ ಬೇಧಭಾವ, ಒಬ್ಬರ ಏಳ್ಗೆ ಕಂಡು ಇನ್ನೊಬ್ಬರು ಸಹಿಸಿಕೊಂಡು ಇರಲಿಕ್ಕೆ ಆಗುತ್ತಿಲ್ಲ. ಸ್ವಾರ್ಥ, ಅಸೂಯೆ, ಮತ್ಸರ ತುಂಬಿ ತುಳು ಕಾಡುತ್ತಿದೆ. ಮಾನವ-ಮಾನವನಾಗಬೇಕಾಗಿದೆ. ಎರಡು ಕೈ-ಕಾಲು ಇದ್ದ ಮಾತ್ರಕ್ಕೆ ಮಾನವ ಆಗಲಾರ. ಈ ಹಿನ್ನೆಲೆಯಲ್ಲಿ ಕವಿ ಸಿದ್ಧಯ್ಯ ಪುರಾಣಿಕ "ಏನಾದರೂ ಆಗು ಮೊದಲು ಮಾನವನಾಗು" ಎಂದು ಹೇಳಿರುವುದು. ಪರಿಶ್ರಮವಿಲ್ಲದ ಪ್ರತಿಫಲ, ಬೇಗ ಶ್ರೀಮಂತನಾಗ ಬೇಕು, ಸುಖದ ಸುಪ್ಪತ್ತಿಗೆಯಲ್ಲಿರಬೇಕು ಎಂಬ ವಿಚಾರದಲ್ಲಿ ಇನ್ನೊಬ್ಬರು ಏನಾದರೇನು ಎಂಬ ದುರಾಸೆ, ದುಷ್ಟ ಬುದ್ಧಿ, ಕಾಣಬಹುದು.

ಪರಿಶ್ರಮವಿಲ್ಲದ ಪ್ರತಿಫಲ, ಬೇಗ ಶ್ರೀಮಂತನಾಗಬೇಕು, ಸುಖದ ಸುಪ್ಪತ್ತಿಗೆಯಲ್ಲಿರಬೇಕು ಎಂಬ ವಿಚಾರದಲ್ಲಿ ಇನ್ನೊಬ್ಬರು ಏನಾದರೇನು ಎಂಬ ದುರಾಸೆ, ದುಷ್ಟ ಬುದ್ಧಿ, ಕಾಣಬಹುದು. ಅದಕ್ಕಾಗಿದೇ ಮಹಾಮಾನವತಾವಾದಿ ಗೌತಮ ಬುದ್ಧ "ಆಸೆಯೇ ದುಃಖಕ್ಕೆ ಮೂಲ" ಎಂದು ಹೇಳಿರುವರು. ಈ ರೀತಿಯಾಗಿ ದುರಾಸೆಯಿಂದ ದುಃಖದಲ್ಲಿ ತನ್ನನ್ನು ತಾನು ಮನುಷ್ಯ ಜೇಡರ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡು ಪಶ್ಚಾತಾಪ ಪಡುತ್ತಿರುವನು.

ಮನುಷ್ಯ-ಮನುಷ್ಯರ ಮಧ್ಯೆ ಸಾಮರಸ್ಯ ಕಳೆದುಕೊಂಡು ವಿರಸ, ದ್ವೇಷ ಉಂಟಾಗಿ ಕದನ, ಕೊಲೆ ನಡೆದು ಮತ್ತಷ್ಟು ವೈಷಮ್ಯಕ್ಕೆ ಎಡೆ ಮಾಡಿಕೊಡುತ್ತಿದೆ. ಬುದ್ಧರ 'ವೈರವು ವೈದಿಂದ ಶಮನವಾಗುವುದಿಲ್ಲ ಅದು ಪ್ರೀತಿಯಿಂದ ನಾಶವಾಗಬಲ್ಲದು' ಎಂದು ಹೇಳಿರುವರು. ಈ ಹಿನ್ನೆಲೆಯಲ್ಲಿಯೇ ರಾಕ್ಷಸನಂತೆ ವರ್ತನೆಯಲ್ಲಿದ್ದ ಅಂಗುಲಿಮಾಲನನ್ನು ಪ್ರೀತಿಯಿಂದ ಮನಪರಿವರ್ತಿಸಿ, ಬಿಕ್ಕುವನ್ನಾಗಿಸುವುದರ ಮಟ್ಟಿಗೆ ಬುದ್ಧರು ತಂದು ಬಿಡುವರು.

ಆಧುನಿಕ ಕಾಲದಲ್ಲಿ ದೇವರು, ಧರ್ಮದ ಹೆಸರಿನಲ್ಲಿ ಮುಗ್ಧ ಜೀವಿಗಳನ್ನು ಬಲಿ ಕೊಡುತ್ತಿರುವುದು ವಿಪರ್ಯಾಸದ ಸಂಗತಿ. ಒಂದು ಸಲ ಬುದ್ಧರ ಜೀವನದಲ್ಲಿ ಹರಕೆ ಹೊತ್ತ ವ್ಯಕ್ತಿ ಒಂದು ಕುರಿ ಮರಿ ಬಗಲಲ್ಲಿ ಇನ್ನೊಂದು ಕುರಿಯನ್ನು ನಡೆಸಿಕೊಂಡು ಬರುತ್ತಿರುವಾಗ ಬುದ್ಧ ಆತನನ್ನು ಮಾತನಾಡಿಸಿ "ನಿನ್ನ ಆಸೆ, ಆಕಾಂಕ್ಷೆಗಳಿಗಾಗಿ ಈ ಮುಗ್ಧ ಜೀವಿಗಳನ್ನು ಬಲಿ ಕೊಡುವುದು ಬಿಟ್ಟು ನನ್ನನ್ನೇ ಬಲಿ ಕೊಡು" ಎಂದು ನುಡಿದಾಗ ಮರು ಮಾತಿಲ್ಲದೆ ಆ ವ್ಯಕ್ತಿ ಶರಣಾಗುವನು. ಮುಗ್ಧ ಪ್ರಾಣಿಗಳನ್ನು, ಜನರನ್ನು ಹಿಂಸಿಸುವ, ಮನಸ್ಸನ್ನು ನೋಯಿಸುವುದನ್ನು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ.

ಈ ರೀತಿಯಾಗಿ ಮನುಷ್ಯನ ಸ್ವಾರ್ಥ, ಲಾಲಸೆ, ಸಣ್ಣತನ ಹೋಗಿ ನಿಸ್ವಾರ್ಥ ಮನೋಭಾವ, ಉತ್ತಮ ಗುಣ ಬೆಳಸಿಕೊಂಡು ಬರಬೇಕಾಗಿದೆ. ಬೆಕ್ಕು, ನಾಯಿ ಇತ್ಯಾದಿ ಪ್ರಾಣಿಗಿಂತ ಮನುಷ್ಯರು-ಮನುಷ್ಯರಿಗೆ ಕೀಳಾಗಿ ಕಾಣುವ ನೀಚ ಸ್ವಭಾವ ಹೋಗಬೇಕಾಗಿದೆ. ದೇವರು, ಧರ್ಮದ ಹೆಸರಿನಲ್ಲಿ ಮೂರ್ತಿಗಳ ನಾಶ, ಮುಗ್ಧ ಜನರ ಶೋಷಣೆ, ಬಲಿ ತೆಗೆದುಕೊಳ್ಳುವ ದುಷ್ಟ ಬುದ್ಧಿ ನಿಲ್ಲಬೇಕಾಗಿದೆ. ಅದಕ್ಕಾಗಿ ಮೇರು ವ್ಯಕ್ತಿಗಳ ಚಿಂತನೆ ನಿಜ ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿ, ಇನ್ನೊಬ್ಬರನ್ನು ಬದುಕಲು ಬಿಟ್ಟು ನಡೆದಾಗ ಮಾತ್ರ ಮನುಷ್ಯ ಮನುಷ್ಯನಾಗುವನು. ಬದುಕು ಸಾರ್ಥಕತೆ ಪಡೆದುಕೊಳ್ಳುವುದು.

ಎಂ.ಎಂ. ಮೇತ್ರಿ

ಕೊಳ್ಳುವ ಆಹಾರ ಪದಾರ್ಥಗಳ ಪ್ಯಾಕಿನ ಮೇಲೆ ಆಗಲಿ, ಔಷಧಿ-ಮಾತ್ರೆಗಳ ಪ್ಯಾಕಿನ ಮೇಲೆ ಆಗಲಿ, ಎಲೆಕ್ಟ್ರಾನಿಕ್ಸ್ ವಸ್ತುಗಳ ಮೇಲೆ ಆಗಲಿ ಕನ್ನಡವನ್ನು ಏಕೆ ಬಳಸುತ್ತಿಲ್ಲ? ಅದರಿಂದ ಕನ್ನಡ ಭಾಷೆಗೆ ಹಾಗೂ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಚರ್ಚಿಸಲಾಯಿತು. ಐದುಕೋಟಿ ಗ್ರಾಹಕರಿರುವ ತಾಣವಿದು ಕನ್ನಡನಾಡು. ಇಲ್ಲಿ ಏನಿದ್ದರೂ ಎಲ್ಲಾ ಕನ್ನಡದಲ್ಲೇ ಆಗಬೇಕು. ಬದಲಾವಣೆ ಜಾರಿಗೆ ತರುವುದು ಕಷ್ಟವೇನಿಲ್ಲ. ಆದರೆ ನಾವೆಲ್ಲರೂ ಸೇರಿ ಒಂದು ಪ್ರಯತ್ನ ಮಾಡಬೇಕಿದೆ ಅಷ್ಟೇ. ನೆನಪಿರಲಿ, ನಿಮ್ಮ ಒಂದು ಸಾಮಾನ್ಯ ಹೆಜ್ಜೆ.. ಒಂದು ಸಾಮಾನ್ಯ ನಿರ್ಧಾರ.. ಮುಂದೊಂದು ದಿನ ಬಹುದೊಡ್ಡದಾದ ಕನ್ನಡದ ಅಲೆಗೆ ಅಡಿಗಲ್ಲಾಗಬಹುದು.

ಕನ್ನಡ ಭಾಷೆಗೆ ಮಕ್ಕಳು ನಾವೇ, ಅಭಿಮಾನಿಗಳು ನಾವೇ, ಆರಾಧಕರು ನಾವೇ, ಪೋಷಕರು ನಾವೇ ಕಾಣುವ ಕನಸು..ಆಡುವ ಮಾತು..ವಿಮರ್ಶೆ ಮಾಡುವ ಹೃದಯ ಎಲ್ಲವೂ ಕನ್ನಡವಾಗಿರಲಿ. ಇಲ್ಲದೇ ಹೋದ್ರೆ ಮುಂಬರುವ ದಿನಗಳಲ್ಲಿ ಕನ್ನಡ ಭಾಷೆಯು ಕಂದಮ್ಮಗಳು, ಅಭಿಮಾನಿಗಳು, ಪೋಷಕರು ಇಲ್ಲದ ತಬ್ಬಲಿಭಾಷೆಯಾಗಿ ಇತಿಹಾಸದ ಪುಟಗಳ ಅಂಚಿನಲ್ಲಿ ಮರೆಯಾಗಿ ಹೋಗುವುದು. ಹಾಗೆ ಆಗುವುದು ಬೇಡ ಅಲ್ಲವೆ? ಪ್ರತಿಯೊಬ್ಬ ಕನ್ನಡಿಗನು, ಕನ್ನಡ ಭಾಷೆಯ ಏಳಿಗೆಗೆ ಶ್ರಮಿಸುವ ಪ್ರಾಮಾಣಿಕ ಪ್ರತಿನಿಧಿಗಳಾಗೋಣ (Honest Representative). ನಮ್ಮೆದುರಿಗೆ ಇರುವ ಕನ್ನಡತನವಿಲ್ಲದ ಸಮಾಜವ ಬದಲಾಯಿಸೋಣ.. ಹೊಸ ಶೈಲಿಯಲ್ಲಿ ಕನ್ನಡ ಭಾಷೆಯನ್ನು ಬೆಳೆಸೋಣ..ಕರುನಾಡಿನ ಹಿರಿಮೆಯನ್ನು ಮೆರೆಸೋಣ.

ಕನ್ನಡ ಭಾಷೆ ಉಳಿಯಲಿ.. ಉಳಿದು ಬೆಳೆಯಲಿ. □

ನೇಪಾಳದಲ್ಲಿ ನೆಲೆ ಗೊಂಡಿದ್ದ ರಾಜರಾಳ್ವಿಕೆ ಯನ್ನೇ ಅಲ್ಲಿನ ಸಮಾಜೋ-ಆರ್ಥಿಕ ಸುಸ್ಥಿರತೆಗೆ ಕಾರಣವೆಂದು ಬಿಂಬಿಸುತ್ತಿದ್ದ ಭಾರತ ಸರ್ಕಾರಕ್ಕೂ ಸಹ ಮಾವೋವಾದಿಗಳ ಗೆಲುವು ಕಣ್ತೆರೆಸಿದೆ ಎಂದು ಹೇಳಬಹುದು. ಬುಲೆಟ್‌ಗಳನ್ನು ಬದಿಗಿಟ್ಟು ಬ್ಯಾಲೆಟ್‌ಗಳ ಮೂಲಕ ಅಧಿಕಾರ ಗ್ರಹಣ ಮಾಡುತ್ತಿರುವ ಗೆರಿಲ್ಲಾ ಹೋರಾಟಗಾರರು ಮುಂಬರುವ ದಿನಗಳಲ್ಲಿ ನೇಪಾಳದ ವಿದೇಶಿ ನೀತಿಯನ್ನೇ ಬದಲಿಸಿ ಭಾರತ-ನೇಪಾಳ-ಚೀನಾ ನಡುವಿನ ರಾಜತಾಂತ್ರಿಕ ಸಂಬಂಧಗಳ ವಿಷಯದಲ್ಲಿ ಹೊಸ ಸ್ವತಂತ್ರ ನೀತಿಯನ್ನು ಅನುಸರಿಸುವ ಸಾಧ್ಯತೆಗಳೇ ಹೆಚ್ಚಾಗಿವೆ. ಈ ನಿಟ್ಟಿನಲ್ಲಿ ಚೀನಾದ ಪ್ರಗತಿಯನ್ನು ಮತ್ತು ಪ್ರಾಬಲ್ಯವನ್ನು ತಡೆಗಟ್ಟಲು, ಭಾರತದೊಡಗಿನ ರಾಜತಾಂತ್ರಿಕ ಸಂಬಂಧಗಳ ಮೂಲಕ ನೇಪಾಳವನ್ನು ಸಾಧನವನ್ನಾಗಿ ಉಪಯೋಗಿಸಿಕೊಳ್ಳುವ ಅಮೆರಿಕದ ಹುನ್ನಾರಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ.

ನಾಡಿ ಬಂಗಾರಪೇಟೆ

ವಿಶ್ವದ ಏಕೈಕ ಹಿಂದೂ ರಾಷ್ಟ್ರ ಎಂದು ಕರೆಯಲ್ಪಡುತ್ತಿದ್ದ ನೇಪಾಳದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳು ಒಂದು ಹೊಸ ರಾಜಕೀಯ-ಸಾಂಸ್ಕೃತಿಕ ಶಕೆಯನ್ನು ಪ್ರಾರಂಭಿಸಿದೆ. ಏಪ್ರಿಲ್ ೧೧ರಂದು ಹೊರಬಿದ್ದ ಚುನಾವಣಾ ಫಲಿತಾಂಶಗಳು ಅಚ್ಚರಿ ಮೂಡಿಸಿದ್ದರೂ, ಜಾಗತಿಕ ರಾಜಕೀಯದಲ್ಲಿ ಸಂಚಲನವನ್ನಂತೂ ಮೂಡಿಸಿದೆ. ೨೪೦ ವರ್ಷಗಳ ರಾಜ ಪ್ರಭುತ್ವವನ್ನು ಕೊನೆಗೊಳಿಸಿ ಪ್ರಜಾತಾಂತ್ರಿಕ ವ್ಯವಸ್ಥೆಯೆಡೆಗೆ ಹೆಜ್ಜೆ ಇಟ್ಟಿರುವ ನೇಪಾಳದಲ್ಲಿ ಕಳೆದ ಹತ್ತು ವರ್ಷಗಳಿಂದ ಸಶಸ್ತ್ರ ಹೋರಾಟದ ಮೂಲಕ ರಾಜ ಪ್ರಭುತ್ವವನ್ನು ಎದುರಿಸಿ ಹೋರಾಡುತ್ತಿದ್ದ ಕಮ್ಯುನಿಸ್ಟ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಚಿಂತೆಗೀಡು ಮಾಡಿದೆ. ಪ್ರಜಾತಂತ್ರ ವ್ಯವಸ್ಥೆಯ ರಕ್ಷಣೆಯ ಹೆಸರಿನಲ್ಲೇ ನಿರಂಕುಶ ಪ್ರಭುತ್ವ, ರಾಜಪ್ರಭುತ್ವಗಳ ಸರ್ವಾಧಿಕಾರವನ್ನು ಪೋಷಿಸುತ್ತಾ, ಕಮ್ಯುನಿಸ್ಟ್ ಪಕ್ಷಗಳ ವಿರುದ್ಧ ಯುದ್ಧ ಸಾರಿದ್ದ ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳಿಗೆ ನೇಪಾಳದ ಚುನಾವಣಾ ಫಲಿತಾಂಶಗಳು ಆಘಾತಕಾರಿಯಾಗಿ ಕಂಡರೂ ಅಚ್ಚರಿಯೇನಿಲ್ಲ. ೨೪೦ ಸದಸ್ಯರ ಸಂಸತ್ತಿನ ಪ್ರಥಮ ಆದ್ಯತಾ ಮತದಾನ ವ್ಯವಸ್ಥೆಯಲ್ಲಿ ಅರ್ಧಕ್ಕೂ ಹೆಚ್ಚು ಸ್ಥಾನ ಗಳಿಸಿರುವ ಮಾವೋವಾದಿ ಪಕ್ಷವು ದಾಮಾಷಾ ಪ್ರಾತಿನಿಧ್ಯವಿರುವ ಸಂಸದೀಯ ಮಂಡಲಿಯಲ್ಲಿ ೩೩೫ ಸ್ಥಾನಗಳ ಪೈಕಿ ೧೧೦ ಸ್ಥಾನಗಳನ್ನು ಗಳಿಸಿದೆ. ಬಹುಮತ ಗಳಿಸದಿದ್ದರೂ ಅಧಿಕಾರಾರೂಢ ಸರ್ಕಾರದಲ್ಲಿ ಪ್ರಚಂಡರವರ ನೇತೃತ್ವದ ಮಾವೋವಾದಿ ಪಕ್ಷ ಪ್ರಮುಖ ಪಾತ್ರ ವಹಿಸಲಿದೆ.

ನೇಪಾಳದ ರಾಜಪ್ರಭುತ್ವದ ಭವಿಷ್ಯ ಚುನಾವಣೆಗೆ ಮುನ್ನವೇ ಬಹಿರಂಗವಾಗಿದ್ದು, ನೇಪಾಳದ ಕಾಂಗ್ರೆಸ್ ಪಕ್ಷವೂ ಸೇರಿದಂತೆ ಇತರ ಪಕ್ಷಗಳು ಪ್ರಥಮ ಸಂವಿಧಾನ ರಚನಾ ಮಂಡಲಿಯಲ್ಲಿಯೇ ನೇಪಾಳವನ್ನು ಗಣರಾಜ್ಯವೆಂದು ಘೋಷಿಸುವ ಒಪ್ಪಂದಕ್ಕೆ ಬಂದಿದ್ದವು. ಇತ್ತೀಚಿನವರೆಗೂ ಅಮೆರಿಕಾ ಮತ್ತು ಮಿತ್ರ ರಾಷ್ಟ್ರಗಳ ದೃಷ್ಟಿಯಲ್ಲಿ ಭಯೋತ್ಪಾದಕರೆನಿಸಿದ್ದ ನೇಪಾಳದ ಮಾವೋವಾದಿಗಳು ಮುಂಬರುವ ದಿನಗಳಲ್ಲಿ ಅಧಿಕಾರ ಗ್ರಹಣ ಮಾಡುತ್ತಿರುವುದು ಈ ಸಾಮ್ರಾಜ್ಯಶಾಹಿ ರಾಷ್ಟ್ರಗಳನ್ನು ಕಂಗೆಡಿಸಿದೆ. ೧೯೯೦ರಿಂದಲೂ ಅಧಿಕಾರದಲ್ಲಿದ್ದ ನೇಪಾಲಿ ಕಾಂಗ್ರೆಸ್ ಮತ್ತು ನೇಪಾಳ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್) ಮಾವೋವಾದಿ ಪಕ್ಷದೊಡನೆ ಹೊಂದಾಣಿಕೆ ಮಾಡಿಕೊಂಡು ಸರ್ಕಾರವನ್ನು ನಡೆಸುವುದು ಅನಿವಾರ್ಯವಾಗಿದ್ದು, ಪ್ರಥಮ ಬಾರಿಗೆ ದೇಶದ ಅಧಿಕಾರ ವಹಿಸಿಕೊಂಡಿರುವ ಮಾವೋವಾದಿ ಪಕ್ಷಕ್ಕೆ ಮಾದೇಶಿ ಜನಾಧಿಕಾರ ವೇದಿಕೆ ಎಂಬ ಜನಸಂಘಟನೆಯನ್ನು ಎದುರಿಸಬೇಕಾಗಿದೆ.

ಊಳಿಗಮಾನ್ಯ ವ್ಯವಸ್ಥೆ ಮತ್ತು ರಾಜಪ್ರಭುತ್ವದ ಆಳ್ವಿಕೆಯಲ್ಲಿ ಎರಡು ಶತಮಾನಗಳನ್ನು ಕಳೆದಿದ್ದ ನೇಪಾಳದಲ್ಲಿ ಮಾವೋವಾದಿಗಳ ಉಗಮ ಮತ್ತು ಮಾವೋವಾದದ ಬೆಳವಣಿಗೆ ವಿಶಿಷ್ಟವಾದುದು. ೧೯೯೦ರಲ್ಲಿ ಪ್ರಜಾಪ್ರಭುತ್ವದ ಉಳಿವಿಗಾಗಿ ಪ್ರಾರಂಭಗೊಂಡ ಹೋರಾಟದಲ್ಲಿ ಮಾವೋವಾದಿಗಳು ನೇಪಾಳದ ಕಮ್ಯುನಿಸ್ಟ್ ಚಳವಳಿಯಲ್ಲಿ ಒಂದು ವಿಭಿನ್ನ ವಾಹಿನಿಯಾಗಿ ಮಾತ್ರ ಕಂಡುಬಂದಿದ್ದರು. ಆ ದಿನಗಳಲ್ಲಿ ನೇಪಾಳ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್) ಪ್ರಮುಖ ಕಮ್ಯುನಿಸ್ಟ್ ಚಳುವಳಿಯ ಮುಂಚೂಣಿಯಲ್ಲಿತ್ತು. ೧೯೯೦ರ ಪ್ರಜಾತಾಂತ್ರಿಕ ಚಳುವಳಿಯ ನಂತರದಲ್ಲಿ, ರಾಜಪ್ರಭುತ್ವದ ಚೌಕಟ್ಟಿನಲ್ಲೇ ಸಂವಿಧಾನಿಕ ಪ್ರಜಾಸತ್ತೆಯನ್ನು ನಡೆಸುವ ವ್ಯವಸ್ಥೆ ಅನೇಕ ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತು. ಈ ಹಂತದಲ್ಲಿ ಮುಖ್ಯವಾಹಿನಿಯ ಕಮ್ಯುನಿಸ್ಟ್ ಚಳುವಳಿಯಿಂದ ಬೇರ್ಪಟ್ಟ ಮಾವೋವಾದಿಗಳು ನೇಪಾಳವನ್ನು ಸಂಪೂರ್ಣ ಗಣರಾಜ್ಯವನ್ನಾಗಿ ಮಾಡುವ ಧ್ಯೇಯದಿಂದ ಸಶಸ್ತ್ರ ಗೆರಿಲ್ಲಾ ಹೋರಾಟಗಳನ್ನು ಪ್ರಾರಂಭಿಸಿತ್ತು. ಇದೇ ಅವಧಿಯಲ್ಲಿ ಅರಮನೆಯಲ್ಲಿ ನಡೆದ ಹತ್ಯಾಕಾಂಡದಿಂದ ರಾಜಮನೆತನವೂ ತನ್ನ ಗೌರವ ಘನತೆಗಳನ್ನು ಕಳೆದುಕೊಂಡಿತ್ತು. ನೇಪಾಳದ ಸಾಮಾನ್ಯ ಜನತೆಗೆ ಪ್ರಜಾತಂತ್ರ ಮತ್ತು ಗಣರಾಜ್ಯ ವ್ಯವಸ್ಥೆಗಳ ಮಹತ್ವ ಅರಿವಾಗತೊಡಗಿತ್ತು. ಗಣರಾಜ್ಯ ವ್ಯವಸ್ಥೆಯನ್ನೇ ತಮ್ಮ ಪ್ರಮುಖ ಧ್ಯೇಯವನ್ನಾಗಿರಿಸಿಕೊಂಡು ಹೋರಾಡಿದ ಮಾವೋವಾದಿಗಳ ಗೆಲುವಿಗೆ ಈ ಬೆಳವಣಿಗೆಯೇ ಪ್ರಮುಖ ಕಾರಣವೆಂದು ಹೇಳಬಹುದು.

ಮಾವೋವಾದಿಗಳು ಗಣತಂತ್ರಕ್ಕಾಗಿ ನಡೆಸಿದ ಹೋರಾಟವನ್ನು ಭಯೋತ್ಪಾದನೆ ಎಂದು ಬಿಂಬಿಸಿ ರಾಜಪ್ರಭುತ್ವವನ್ನು ರಕ್ಷಿಸುವುದರಲ್ಲಿ ತೊಡಗಿದ್ದ ಅಮೆರಿಕಾಗೆ, ಮಾವೋವಾದಿಗಳ ವಿಜಯದಿಂದ ಮುಖಭಂಗವಾಗಿದೆ. ನೇಪಾಳದಲ್ಲಿ ನೆಲೆಗೊಂಡಿದ್ದ ರಾಜರಾಳ್ವಿಕೆಯನ್ನೇ ಅಲ್ಲಿನ ಸಮಾಜೋ-ಆರ್ಥಿಕ ಸುಸ್ಥಿರತೆಗೆ ಕಾರಣ ವೆಂದು ಬಿಂಬಿಸುತ್ತಿದ್ದ ಭಾರತ ಸರ್ಕಾರಕ್ಕೂ ಸಹ ಮಾವೋವಾದಿಗಳ ಗೆಲುವು ಕಣ್ತೆರೆಸಿದೆ ಎಂದು ಹೇಳಬ ಹುದು. ಬುಲೆಟ್‌ಗಳನ್ನು ಬದಿಗಿಟ್ಟು ಬ್ಯಾಲೆಟ್‌ಗಳ ಮೂಲಕ ಅಧಿಕಾರ ಗ್ರಹಣ ಮಾಡುತ್ತಿರುವ ಗೆರಿಲ್ಲಾ ಹೋರಾಟಗಾರರು ಮುಂಬರುವ ದಿನಗಳಲ್ಲಿ ನೇಪಾಳದ ವಿದೇಶಿ ನೀತಿಯನ್ನೇ ಬದಲಿಸಿ ಭಾರತ-ನೇಪಾಳ-ಚೀನಾ ನಡುವಿನ

ನೇಪಾಳ: ಹೊಸ ದಿಗಂತದೆಡೆಗೆ

ರಾಜತಾಂತ್ರಿಕ ಸಂಬಂಧಗಳ ವಿಷಯದಲ್ಲಿ ಹೊಸ ಸ್ವತಂತ್ರ ನೀತಿಯನ್ನು ಅನುಸರಿಸುವ ಸಾಧ್ಯತೆಗಳೇ ಹೆಚ್ಚಾಗಿವೆ. ಈ ನಿಟ್ಟಿನಲ್ಲಿ ಚೀನಾದ ಪ್ರಗತಿಯನ್ನು ಮತ್ತು ಪ್ರಾಬಲ್ಯವನ್ನು ತಡೆಗಟ್ಟಲು, ಭಾರತದೊಡಗಿನ ರಾಜ ತಾಂತ್ರಿಕ ಸಂಬಂಧಗಳ ಮೂಲಕ ನೇಪಾಳವನ್ನು ಸಾಧನ ವನ್ನಾಗಿ ಉಪಯೋಗಿಸಿಕೊಳ್ಳುವ ಅಮೆರಿಕದ ಹುನ್ನಾರಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಆದರೆ ನೇಪಾಳದೊಡನೆ ಕಳೆದ ಆರು ದಶಕಗಳಿಂದಲೂ ಉತ್ತಮ ಸ್ನೇಹ ಬಾಂಧವ್ಯಗಳನ್ನು ಹೊಂದಿರುವ ಭಾರತ ಸರ್ಕಾರ ಅಮೆರಿಕಾದ ಪಿತೂರಿಗೆ ಬಲಿಯಾಗದೆ ನೇಪಾಳದ ಜನತೆಯ ತೀರ್ಪಿಗೆ ಮನ್ನಣೆ ನೀಡಿ ಅಲ್ಲಿನ ಹೊಸ ಸರ್ಕಾರದೊಡನೆ ತನ್ನ ಸಂಬಂಧಗಳನ್ನು ವೃದ್ಧಿಸಿಕೊಳ್ಳುವುದತ್ತ ಗಮನ ಹರಿಸಬೇಕಾಗಿದೆ.

ಸಂಘ ಪರಿವಾರದ ದೃಷ್ಟಿಯಲ್ಲಿ ನೇಪಾಳದ ಬೆಳವಣಿಗೆಗಳು ತನ್ನ ಹಿಂದೂ ರಾಷ್ಟ್ರ ಪರಿಕಲ್ಪನೆಗೆ ಪ್ರತಿಕೂಲವೆನಿಸಿದರೂ ಭಾರತದ ಪ್ರಜಾತಾಂತ್ರಿಕ ಪುರೋಗಾಮಿ ಶಕ್ತಿಗಳು ಈ ಬೆಳವಣಿಗೆಯನ್ನು ಸ್ವಾಗತಿಸಬೇಕಾಗಿದೆ. ನೇಪಾಳದ ಜನತೆ ಪರಿಣಾಮಕಾರಿ, ಜನಪರ ಬದಲಾವಣೆಗಾಗಿ ಹಪಹಪಿಸುತ್ತಿದ್ದುದನ್ನು ಮಾವೋವಾದಿಗಳ ಗೆಲುವು ಸಾಬೀತುಮಾಡಿದೆ. ರಾಜಪ್ರಭುತ್ವದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಅಂಚಿಗೆ ತಳ್ಳಲ್ಪಟ್ಟಿದ್ದ ನೇಪಾಳದ ಸಾಮಾನ್ಯ ಜನತೆಗೆ, ದುಡಿಯುವ ಶ್ರಮಿಕ ವರ್ಗಗಳಿಗೆ ಮಾವೋವಾದಿಗಳು ಒಂದು ಆಶಾಭಾವನೆಯನ್ನು ಮೂಡಿಸಿರುವುದನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಭಾರತದಲ್ಲೂ ಗಣರಾಜ್ಯ ಸ್ಥಾಪನೆಗಾಗಿ ಬ್ರಿಟೀಷರ ವಸಾಹತು ಶಾಹಿಯ ವಿರುದ್ಧ ಜನತೆ ನಿರಂತರ ಹೋರಾಟ ನಡೆಸಿದ್ದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಒಂದು ಹೊಸ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಕಮ್ಯುನಿಸ್ಟರು ಆಳ್ವಿಕೆ ನಡೆಸುತ್ತಿರುವುದೇ ೨೧ನೆಯ ಶತಮಾನದ ಒಂದು ಹೊಸ ಅಧ್ಯಾಯವೆಂದು ಹೇಳಬಹುದು. ಸಶಸ್ತ್ರ ಹೋರಾಟ, ಗೆರಿಲ್ಲಾ ಹೋರಾಟಗಳನ್ನು ಒಂದು ಸಾಮಾಜಿಕ ಧ್ಯೇಯವುಳ್ಳ ಜನಪರ ಹೋರಾಟಗಳೆಂದು ಪರಿಗಣಿಸದೆ, ಸಮಾಜಘಾತುಕ ಬೆಳವಣಿಗೆ ಎಂದೇ ವಿಶ್ಲೇಷಿಸುವ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಮತ್ತು ಭಾರತೀಯ ಬೂರ್ಷ್ವಾ ವರ್ಗಗಳಿಗೆ ನೇಪಾಳದ ಮಾವೋವಾದಿಗಳ ಗೆಲುವು ಕಣ್ತೆರೆಸಬೇಕಾಗಿದೆ.

ಮಾರ್ಕ್ಸ್‌ವಾದಿ ತತ್ವಗಳನ್ನಾಧರಿಸಿ ರೂಪಿತಗೊಂಡ ನೇಪಾಳದ ಮಾವೋವಾದಿಗಳ ಹೋರಾಟದ ಗೆಲುವು ವಿಶ್ವದ ಇತರ ರಾಷ್ಟ್ರಗಳಲ್ಲಿನ ಹೋರಾಟಗಳಿಗೂ ಸ್ಫೂರ್ತಿಯಾಗಬಹುದು. ಆದರೆ ನೇಪಾಳದ ಅನುಭವ ಭಾರತವನ್ನೊಳಗೊಂಡಂತೆ ಇತರ ದೇಶಗಳ ಮಾವೋವಾದಿಗಳಿಗೆ ಮಾರ್ಗದರ್ಶಕವಾಗುವ ಅಗತ್ಯತೆ ಕಂಡುಬರುವುದಿಲ್ಲ. ಭಾರತದ ಮಾಧ್ಯಮಗಳಲ್ಲಿ " ಭಾರತದ ಮಾವೋವಾದಿಗಳು ನೇಪಾಳದ ಅನುಭವದಿಂದ ಪಾಠ ಕಲಿಯಬೇಕು " ಎಂದು ವಿಶ್ಲೇಷಿಸಿರುವುದು ಬಾಲಿಶವೆನಿಸುತ್ತದೆ. ಒಂದು ಸೈದ್ಧಾಂತಿಕ ನಿಲುವಿಗೆ ಬದ್ಧರಾಗಿ, ಅಲ್ಲಿನ ಸನ್ನಿವೇಶಗಳಿಗನುಗುಣವಾಗಿ ತಮ್ಮ ಹೋರಾಟವನ್ನು ರೂಪಿಸಿ, ನೇಪಾಳದ ಶ್ರಮಿಕ ವರ್ಗಗಳಿಗೆ ಒಂದು ಹೊಸ ಸಮಾಜವನ್ನು ನಿರ್ಮಿಸುವ ಆಶಾದಾಯಕ ಸಂದರ್ಭವನ್ನು ಕಲ್ಪಿಸಿರುವ ಕೀರ್ತಿ ನೇಪಾಳದ ಮಾವೋವಾದಿಗಳಿಗೆ ಸಲ್ಲುತ್ತದೆ. ಹೊಸ ಸಂವಿಧಾನ ರಚನೆಯ ನಂತರದಲ್ಲಿ ಮಾವೋವಾದಿಗಳು ಯಾವ ನೀತಿಯನ್ನು ಅನುಸರಿಸುತ್ತಾರೆ ಎಂಬುದನ್ನು ಕಾದುನೋಡಬೇಕಾಗಿದೆ. □



ನೆಲ ಮತ್ತು ಮರ

ಫಲಬದ್ರ ಮರ
ಕಾಯಿ-ಹಣ್ಣಾಗವು
ಬಂದ ಮಳೆಗೆ ಒಳಗೊಳಗೇ ಕೊಳೆತು
ತೊಟ್ಟು ಕಳಚಿ ಇಳಿಯುತ್ತಿವೆಯಲ್ಲ
ನೆಲದತ್ತ

ನೆಲ ಬೇಯುತ್ತೆ
ಬಿದ್ದ ಬೀಜಕ್ಕೆ ಒಳಗೊಳಗೇ ಬೆದೆ ಹಾರಿ
ದಿಂಡು ಬಿಸಿದು
ಕಾಲಕಂಬ ಲಾಳೀಕಡ್ಡಿ

ಕಲ್ಲೂ ಬೆವತು
ಕತ್ತಿನ ಕಳಸ ಮುರಿದು
ಪ್ರಾಯದ ಕಂದ ತೊಂಡೆ ಸತ್ತು
ಪ್ರಸ್ಥದ ಮನೆ ಬರಿ ಕಂದೋಕಂದು

ಆದರೂ ಕಾದವುರೆ
ಹಿರಿಕೊಳ್ಳಿ ನೆರಳ ಹಾಸಿನ ಹಿಂದೆ
ಮಿಂಡುಗಾರರ

○ ಉಜ್ಜಜ್ಜಿರಾಜಣ್ಣ



೨೦೦೩ರಿಂದಲೇ ಪ್ರಾರಂಭಗೊಂಡ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಪ್ರಕ್ರಿಯೆ ೨೦೦೬ರ ನಂತರ ತೀವ್ರವಾಗತೊಡಗಿತ್ತು. ಕೃಷಿ ಕಚ್ಚಾ ಪದಾರ್ಥಗಳನ್ನು ಹೊರತುಪಡಿಸಿ ಎಲ್ಲಾ ಪದಾರ್ಥಗಳ ಬೆಲೆಗಳೂ ಏರತೊಡಗಿದ್ದವು. ೨೦೦೭ರ ಜನವರಿಯುವರೆಗೂ ಅಲ್ಪ ಏರಿಕೆಯಿದ್ದ ಆಹಾರ ಪದಾರ್ಥ ಬೆಲೆಗಳು ನಂತರದಲ್ಲಿ ತೀವ್ರಗತಿಯಲ್ಲಿ ಏರತೊಡಗಿದ್ದು ಪ್ರಸ್ತುತ ಪರಿಸ್ಥಿತಿಗೆ ಕಾರಣವಾಗಿದೆ. ಈ ಪ್ರವೃತ್ತಿಗೆ ಬೇಡಿಕೆಯಲ್ಲಿನ ಹೆಚ್ಚಳವೇ ಕಾರಣವೆಂದೂ, ಹಲವು ವರ್ಷಗಳ ಆರ್ಥಿಕ ಅಭಿವೃದ್ಧಿಯ ಪರಿಣಾಮವಾಗಿ ಜನರ ಜೀವನ ಮಟ್ಟ ಸುಧಾರಿಸುವುದೇ ಕಾರಣವೆಂದೂ, ಚೀನಾದಂತಹ ಶೀಘ್ರಗತಿಯಲ್ಲಿ ಪ್ರಗತಿ ಹೊಂದುತ್ತಿರುವ ದೇಶಗಳು ಕಾರಣವೆಂದೂ ಹೇಳಲಾಗುತ್ತಿದೆ. ಈ ಪ್ರತಿಪಾದನೆ ಚರ್ಚಾಸ್ಪದವಾದರೂ ಬಂಡವಾಳಶಾಹಿ ಆರ್ಥಿಕತೆ ಹಣದುಬ್ಬರದ ಸಮಸ್ಯೆಯನ್ನು ಎದುರಿಸಿಯೇ ತೀರುತ್ತದೆ ಎಂಬ ಅಂಶವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ.

ನಾ ದಿವಾಕರ

ಬೆಲೆ ಏರಿಕೆಯ ಸುಳಿಯಲ್ಲಿ

ಜಾಗತೀಕರಣ ಪ್ರಕ್ರಿಯೆಯ ಯಶಸ್ಸಿನ ಭ್ರಮಾಲೋಕದಲ್ಲಿ ವಿಹರಿಸುತ್ತಾ ಹಣದುಬ್ಬರ ಎಂಬ ಅಂಶವನ್ನೇ ಮರೆತಿದ್ದ ಸರ್ಕಾರಗಳಿಗೆ ಕಳೆದ ಆರು ತಿಂಗಳಿನ ಆರ್ಥಿಕ ಬೆಳವಣಿಗೆಗಳು ಆಘಾತಕಾರಿಯಾಗಿ ಪರಿಣಮಿಸಿವೆ. ಸಗಟು ವ್ಯಾಪಾರ ಬೆಲೆ ಸೂಚ್ಯಂಕವು ಡಿಸೆಂಬರ್ ೨೦೦೭ರಲ್ಲಿ ಶೇ ೪ಕ್ಕಿಂತಲೂ ಕಡಿಮೆ ಇದ್ದದ್ದು, ಈ ನಾಲ್ಕು ತಿಂಗಳುಗಳ ಅವಧಿಯಲ್ಲಿ ಶೇ ೭.೫ರಷ್ಟಾಗಿರುವುದು ಆಳುವ ವರ್ಗಗಳನ್ನು ಕಂಗೆಡಿಸಿದೆ. ಹಣದುಬ್ಬರವನ್ನು ಕಡಿಮೆ ಮಾಡಿ, ಸಾಮಾನ್ಯ ಜನತೆಯ ದಿನನಿತ್ಯದ ಜೀವನವನ್ನು ಸುಧಾರಿಸುವುದಕ್ಕಿಂತಲೂ ಹೆಚ್ಚಾಗಿ ರಾಜಕೀಯ ಪಕ್ಷಗಳು ಪರಸ್ಪರ ಕೆಸರೆರಚಾಟದಲ್ಲಿ ತೊಡಗಿರುವುದು, ಜನತೆಯ ಆಕ್ರೋಷಕ್ಕೆ ಎಡೆ ಮಾಡಿಕೊಟ್ಟಿದೆ.

ಮಾರ್ಚ್ ೨೦೦೮ರ ನಂತರ ಪ್ರತಿ ವಾರವೂ ಸಗಟು ಬೆಲೆ ಸೂಚ್ಯಂಕವು ಏರುತ್ತಲೇ ಇದ್ದು, ಸರ್ಕಾರ ಕೈಗೊಳ್ಳುತ್ತಿರುವ ಎಲ್ಲ ಪರಿಹಾರ ಕಾರ್ಯಗಳೂ ವಿಫಲವಾಗುತ್ತಿರುವುದು ಆರ್ಥಿಕ ತಜ್ಞರನ್ನೂ ಕಂಗೆಡಿಸಿದೆ. ಇಡೀ ವಿದ್ಯಮಾನ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಬದಲಾವಣೆಗಳ ಪರಿಣಾಮ ಎಂದು ನುಣುಚಿಕೊಳ್ಳುವ ದೇಶದ ಪ್ರಧಾನ ಮಂತ್ರಿಗಳು ಒಂದೆಡೆಯಾದರೆ, ತಮ್ಮ ಆಡಳಿತಾವಧಿಯಲ್ಲಿ ಪ್ರಸ್ತುತ ಬೆಲೆ ಏರಿಕೆಗೆ ವೇದಿಕೆಯನ್ನು ಸಿದ್ಧ ಪಡಿಸಿದ ಭಾಜಪ ಮತ್ತು ಎನ್.ಡಿ.ಎ ಪಕ್ಷಗಳು, ಇಡೀ ಸಮಸ್ಯೆಯನ್ನು ರಾಜಕೀಯ ಲಾಭಗಳಿಕೆಯ ದೃಷ್ಟಿಯಿಂದಲೇ ವಿಶ್ಲೇಷಿಸುತ್ತಿದೆ. ಇನ್ನೊಂದೆಡೆ ಪ್ರಸ್ತುತ ಸರ್ಕಾರದ ಆರ್ಥಿಕ ನೀತಿಗಳಿಂದ ಸಾಮಾನ್ಯ ಜನತೆಯ ಬಾಳು ಜರ್ಝರಿತವಾಗುತ್ತಿದ್ದು, ಸಾಮಾಜಿಕ ಕ್ಷೋಭೆ ಹರಡುತ್ತಿದ್ದರೂ ಭಾರತೀಯ ಜನತಾ ಪಕ್ಷವನ್ನು ಅಧಿಕಾರದಿಂದ ದೂರವಿಡುವ ಉದ್ದೇಶದಿಂದ ಎಡ ಪಕ್ಷಗಳು ಈ ಸಂದರ್ಭದಲ್ಲಿ ಪ್ರತಿಭಟನೆಗಳ ಮೂಲಕ ಮಾತ್ರವೇ ಸರ್ಕಾರವನ್ನು ವಿರೋಧಿಸುತ್ತಿವೆ. ಈ ಜಂಜಾಟದಲ್ಲಿ ದೇಶದ ದುಡಿಯುವ ಜನತೆ, ಮಧ್ಯಮ ವರ್ಗದ ಜನತೆ ಮತ್ತು ಗ್ರಾಮೀಣ ಬಡ ಜನತೆ ಜಾಗತೀಕರಣದ ಪ್ರಭಾವದಿಂದ ಚಲಿಸುತ್ತಿರುವ ಜಗನ್ನಾಥರಥದ ಚಕ್ರದಡಿಗೆ ಸಿಲುಕಿ ನಲುಗಿಹೋಗುತ್ತಿದ್ದಾರೆ.

ಕಳೆದ ಮೂರು ದಶಕಗಳಲ್ಲಿ ಈ ಪ್ರಮಾಣದ ಬೆಲೆ ಏರಿಕೆಯನ್ನು ಜಾಗತಿಕ ಮಾರುಕಟ್ಟೆಯಲ್ಲಾಗಲೀ, ದೇಶೀಯ ಮಾರುಕಟ್ಟೆಯಲ್ಲಾಗಲೀ ಕಂಡಿರಲೇ ಇಲ್ಲವೆಂದು ಹೇಳಬಹುದು. ೭೦ರ ದಶಕದಲ್ಲಿ ಹಣದುಬ್ಬರದ ಪರಿಣಾಮಗಳನ್ನು ಎದುರಿಸಲು ಹಣಕಾಸು ನೀತಿಗಳನ್ನೇ ಮಾನದಂಡಗಳನ್ನಾಗಿ ಉಪಯೋಗಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲೇ ೮೦ರ ದಶಕದ ಪ್ರಾರಂಭದಿಂದ ಬಂಡವಾಳಶಾಹಿ ವ್ಯವಸ್ಥೆಯ ಪ್ರಮುಖ ಲಕ್ಷಣವಾದ ಹಣದುಬ್ಬರವನ್ನು ನಿಯಂತ್ರಿಸುವ ಪ್ರಕ್ರಿಯೆ ಬಂಡವಾಳಶಾಹಿ ದೇಶಗಳಲ್ಲಿ ಪ್ರಾರಂಭವಾಗಿತ್ತು. ಆದರೆ ಈ ಹಣಕಾಸು ನೀತಿಗಳ ಮುಖ್ಯ ಲಕ್ಷಣವೆಂದರೆ ಹಣದುಬ್ಬರ ನಿಯಂತ್ರಣಕ್ಕೆ ಹಣಕಾಸಿನ ಪೂರೈಕೆಯನ್ನು ತಡೆಗಟ್ಟುವುದರ ಬದಲು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ದುಡಿಯುವ ವರ್ಗಗಳ ಕೊಳ್ಳುವ ಸಾಮರ್ಥ್ಯವನ್ನು ಮತ್ತು ಅಭಿವೃದ್ಧಿ ಶೀಲ ದೇಶಗಳಲ್ಲಿ ಉತ್ಪಾದನಾ ಶಕ್ತಿಗಳ ಆದಾಯದಲ್ಲಿನ ಪಾಲನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿತ್ತು. ಇನ್ನೊಂದೆಡೆ ಬಂಡವಾಳಶಾಹಿಗಳ ಲಾಭಾಂಶ ಹೆಚ್ಚಾಗುತ್ತಲೇ ಹೋಗುತ್ತಿತ್ತು. ಈ ಪ್ರಕ್ರಿಯೆಯ ಪರಿಣಾಮವಾಗಿಯೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಣಕಾಸು ಬಂಡವಾಳವೇ ಹಣದುಬ್ಬರವನ್ನು ನಿಯಂತ್ರಿಸಲಾರಂಭಿಸಿತ್ತು.

ಇದರ ಪರಿಣಾಮವಾಗಿ ಜಾಗತಿಕ ಆರ್ಥಿಕ ವ್ಯವಸ್ಥೆಯೂ ರಾಷ್ಟ್ರೀಯ ಬೃಹದರ್ಥಶಾಸ್ತ್ರದ (Macro Economics) ನೀತಿಗಳಿಗನುಸಾರವಾಗಿಯೇ ಸಾಗತೊಡಗಿ, ಒಂದೆಡೆ ನಿರುದ್ಯೋಗದ ಪ್ರಮಾಣ ಹೆಚ್ಚಾಗುತ್ತಿದ್ದರೂ ಲೆಕ್ಕಿಸದೆ ಹಣದುಬ್ಬರದ ನಿಯಂತ್ರಣದಲ್ಲಿ ತೊಡಗಿತ್ತು. ಹಾಗಾಗಿ ಸುಸ್ಥಿರ ಪ್ರಗತಿಯ ಅವಧಿಯಲ್ಲೂ ಹೆಚ್ಚಿನ ಬೆಲೆ ಏರಿಕೆ ಕಂಡುಬರಲಿಲ್ಲ. ಕಳೆದ ಐದು ವರ್ಷಗಳಲ್ಲಿ ಒಟ್ಟು ಜಾಗತಿಕ ಉತ್ಪಾದನೆ ವಾರ್ಷಿಕ ಶೇ ೫ರಷ್ಟು ಏರಿಕೆಯಾಗಿದ್ದು, ಜಾಗತಿಕ ವಹಿವಾಟು ಶೇ ೮ರಷ್ಟು ವೃದ್ಧಿಯಾಗಿದ್ದರೂ ಹಣದುಬ್ಬರದ ಪ್ರಮಾಣ

ಶೇ ೨ಕ್ಕಿಂತಲೂ ಹೆಚ್ಚಾಗಿರಲಿಲ್ಲ. ಆದರೆ ಕಳೆದ ಎರಡು ವರ್ಷಗಳಲ್ಲಿ ಇಡೀ ಪರಿಸ್ಥಿತಿಯೇ ಬದಲಾಗಿರುವುದನ್ನು ಕಾಣಬಹುದು. ೨೦೦೨ರಿಂದಲೇ ಪ್ರಾರಂಭಗೊಂಡ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಪ್ರಕ್ರಿಯೆ ೨೦೦೬ರ ನಂತರ ತೀವ್ರವಾಗತೊಡಗಿತ್ತು. ಕೃಷಿ ಕಚ್ಚಾ ಪದಾರ್ಥಗಳನ್ನು ಹೊರತುಪಡಿಸಿ ಎಲ್ಲಾ ಪದಾರ್ಥಗಳ ಬೆಲೆಗಳೂ ಏರತೊಡಗಿದ್ದವು. ೨೦೦೭ರ ಜನವರಿಯವರೆಗೂ ಅಲ್ಪ ಏರಿಕೆಯಿದ್ದ ಆಹಾರ ಪದಾರ್ಥ ಬೆಲೆಗಳು ನಂತರದಲ್ಲಿ ತೀವ್ರಗತಿಯಲ್ಲಿ ಏರತೊಡಗಿದ್ದು ಪ್ರಸ್ತುತ ಪರಿಸ್ಥಿತಿಗೆ ಕಾರಣವಾಗಿದೆ. ಜಾಗತಿಕ ಮಟ್ಟದಲ್ಲಿ ಕಂಡುಬರುತ್ತಿರುವ ಈ ಪ್ರವೃತ್ತಿಗೆ ಬೇಡಿಕೆಯಲ್ಲಿನ ಹೆಚ್ಚಳವೇ ಕಾರಣವೆಂದೂ, ಹಲವು ವರ್ಷಗಳ ಆರ್ಥಿಕ ಅಭಿವೃದ್ಧಿಯ ಪರಿಣಾಮವಾಗಿ ಜನರ ಜೀವನ ಮಟ್ಟ ಸುಧಾರಿಸುವುದೇ ಕಾರಣವೆಂದೂ, ಚೀನಾದಂತಹ ಶೀಘ್ರಗತಿಯಲ್ಲಿ ಪ್ರಗತಿ ಹೊಂದುತ್ತಿರುವ ದೇಶಗಳು ಕಾರಣವೆಂದೂ ಹೇಳಲಾಗುತ್ತಿದೆ. ಈ ಪ್ರತಿಪಾದನೆ ಚರ್ಚಾಸ್ಪದವಾದರೂ ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದುವ ಬಂಡವಾಳಶಾಹಿ ಆರ್ಥಿಕತೆ ಹಣದುಬ್ಬರದ ಸಮಸ್ಯೆಯನ್ನು ಎದುರಿಸಿಯೇ ತೀರುತ್ತದೆ ಎಂಬ ಅಂಶವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ.

ಬೆಲೆ ಏರಿಕೆಯ ಮೂಲಕಾರಣಗಳು

ಚಿದಂಬರಂರವರ ಆಯವ್ಯಯ ಪತ್ರದಲ್ಲಿನ ೬೦ ಸಾವಿರ ಕೋಟಿಯ ಸಾಲಮನ್ನಾದ ಬಳಿಕ ಲೋಕಸಭಾ ಚುನಾವಣೆಗಳಿಗೂ ಸಿದ್ಧರಾಗಿದ್ದ ಆಳುವ ಪಕ್ಷ ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ತನ್ನ ಚಹರೆ ಬದಲಾಯಿಸಿದೆ. ಬಜೆಟ್‌ನಲ್ಲಿ ಪ್ರಸ್ತುತ ಪಡಿಸಿದ್ದ ಅನೇಕ ಜನಪರ ಯೋಜನೆಗಳ ಹೊರತಾಗಿಯೂ ಚಿದಂಬರಂ ತಮ್ಮ ಭಾಷಣದಲ್ಲಿ ಹಣದುಬ್ಬರದ ಬಗ್ಗೆ ಎಚ್ಚರಿಕೆಯ ಮಾತುಗಳನ್ನಾಡಿದ್ದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಕಳೆದ ನಾಲ್ಕು ವರ್ಷಗಳ ಆಡಳಿತಾವಧಿಯಲ್ಲಿ ಯು.ಪಿ.ಎ ಸರ್ಕಾರ ಮತ್ತು ಹಿಂದಿನ ಎನ್.ಡಿ.ಎ ಸರ್ಕಾರಗಳು ಅನುಸರಿಸಿದ ಆರ್ಥಿಕ ನೀತಿಗಳು ಪ್ರಸ್ತುತ ಬೆಲೆ ಏರಿಕೆ ಮತ್ತು ಹಣದುಬ್ಬರಕ್ಕೆ ಮೂಲ ಕಾರಣ ಎಂಬ ಅಂಶವನ್ನು ಒಪ್ಪಲೇಬೇಕಾಗುತ್ತದೆ. ಆದರೂ ಈ ಗಂಭೀರ ಸಮಸ್ಯೆಯ ಪರಿಹಾರಕ್ಕೆ ದೂರದೃಷ್ಟಿಯ, ದೂರಗಾಮಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದೆ ಅಲ್ಪಕಾಲಿಕ–ಕ್ಷಣಿಕ ಜನಪ್ರಿಯ ಯೋಜನೆಗಳ ಮೂಲಕವೇ ಪರಿಸ್ಥಿತಿಯನ್ನು ನಿಭಾಯಿಸಲು ಯತ್ನಿಸಿದ ಸರ್ಕಾರಗಳ ಕ್ರಮಗಳ ಪರಿಣಾಮವನ್ನು ಈಗ ಸಾಮಾನ್ಯ ಜನತೆ ಎದುರಿಸುತ್ತಿದ್ದಾರೆ. ಎನ್.ಡಿ.ಎ ಸರ್ಕಾರದ "ಭಾರತ ಪ್ರಕಾಶಿಸುತ್ತಿದೆ" ಘೋಷಣೆಯನ್ನು ವಿರೋಧಿಸುತ್ತಲೇ ಭಾರತೀಯ ಮತದಾರರ ಬೆಂಬಲ ಗಳಿಸಿದ ಯು.ಪಿ.ಎ ಪಕ್ಷಗಳು ಈ ವಿರೋಧದ ಹಿನ್ನೆಲೆಯನ್ನಾಗಲೀ, ಅಂತಃಸತ್ವವನ್ನಾಗಲೀ ಗ್ರಹಿಸಿಲ್ಲವೆಂದೇ ಹೇಳಬಹುದು. ಹಾಗಾಗಿಯೇ ಭಾಜಪ ನೇತೃತ್ವದ ಸರ್ಕಾರದಂತೆ ಈ ಸರ್ಕಾರವೂ ಶ್ರೀಮಂತರ ಪರವಾದ ನೀತಿಗಳನ್ನೇ ಅನುಸರಿಸುತ್ತಾ ಬಂದಿದೆ.

ಇತ್ತೀಚಿನ ದಿನಗಳಲ್ಲಿ ಕಾಣುತ್ತಿರುವ ಬೆಲೆ ಏರಿಕೆಗಳ ವೈಶಿಷ್ಟ್ಯವೆಂದರೆ ಬಹುತೇಕ ಎಲ್ಲಾ ಆಹಾರ ಪದಾರ್ಥಗಳಲ್ಲೂ ಈ ವಿದ್ಯಮಾನ ಕಂಡುಬಂದಿದೆ. ಶೇ ೨೫ರಷ್ಟು ಪ್ರಮಾಣದ ಬೆಲೆ ಏರಿಕೆ ಆಹಾರ ಧಾನ್ಯಗಳಲ್ಲಿ ಕಂಡುಬಂದಿದ್ದು ಶೇ ೧೫ರಷ್ಟು ಪ್ರಮಾಣ ಪೆಟ್ರೋಲಿಯಂ ತೈಲಗಳಲ್ಲಿನ ಬೆಲೆಗಳಲ್ಲಿ ಕಾಣಬಹುದಾಗಿದೆ. ಖಾದ್ಯ ತೈಲಗಳು (ಶೇ ೭.೫) ಮತ್ತು ಕಬ್ಬಿಣ–ಉಕ್ಕು (ಶೇ ೧೭) ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿವೆ. ಯಾವುದೇ ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾನ್ಯ ರೂಪದ ಹಣದುಬ್ಬರ ಆಳುವ ಪಕ್ಷಗಳಿಗೆ ಮಾರಕವಾಗಿ ಪರಿಣಮಿಸುತ್ತದೆ. ಏಕೆಂದರೆ ಈ ಸನ್ನಿವೇಶದಲ್ಲಿ ಮಾರುಕಟ್ಟೆಯ ಎಲ್ಲಾ ವಸ್ತುಗಳ ಬೆಲೆಗಳೂ ಗಗನಕ್ಕೇರುತ್ತವೆ. ಪ್ರಸ್ತುತ ಸನ್ನಿವೇಶಲ್ಲೂ ಇದೇ ವಿದ್ಯಮಾನವನ್ನು ನಾವು ಕಾಣುತ್ತಿದ್ದೇವೆ. ಇತ್ತೀಚಿನ ವರ್ಷಗಳ ಬೆಲೆ ಏರಿಕೆಯ ಪ್ರಮಾಣವನ್ನು ವಿಶ್ಲೇಷಿಸಿದಾಗ ಕಳೆದ ವರ್ಷ ಆಹಾರ ಧಾನ್ಯಗಳ ಬೆಲೆಗಳಲ್ಲಿ ಹೆಚ್ಚಿನ ಪ್ರಮಾಣದ ಏರಿಕೆಯಾಗಿದ್ದುದನ್ನು ಗಮನಿಸಬಹುದು.

> **ಚಿದಂಬರಂರವರ ಆಯವ್ಯಯ ಪತ್ರದಲ್ಲಿನ ೬೦ ಸಾವಿರ ಕೋಟಿಯ ಸಾಲಮನ್ನಾದ ಬಳಿಕ ಲೋಕಸಭಾ ಚುನಾವಣೆಗಳಿಗೂ ಸಿದ್ಧರಾಗಿದ್ದ ಆಳುವ ಪಕ್ಷ ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ತನ್ನ ಚಹರೆ ಬದಲಾಯಿಸಿದೆ. ಬಜೆಟ್‌ನಲ್ಲಿ ಪ್ರಸ್ತುತ ಪಡಿಸಿದ್ದ ಅನೇಕ ಜನಪರ ಯೋಜನೆಗಳ ಹೊರತಾಗಿಯೂ ಚಿದಂಬರಂ ತಮ್ಮ ಭಾಷಣದಲ್ಲಿ ಹಣದುಬ್ಬರದ ಬಗ್ಗೆ ಎಚ್ಚರಿಕೆಯ ಮಾತುಗಳನ್ನಾಡಿದ್ದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಕಳೆದ ನಾಲ್ಕು ವರ್ಷಗಳ ಆಡಳಿತಾವಧಿಯಲ್ಲಿ ಯು.ಪಿ.ಎ ಸರ್ಕಾರ ಮತ್ತು ಹಿಂದಿನ ಎನ್.ಡಿ.ಎ ಸರ್ಕಾರಗಳು ಅನು ಸರಿಸಿದ ಆರ್ಥಿಕ ನೀತಿಗಳು ಪ್ರಸ್ತುತ ಬೆಲೆ ಏರಿಕೆ ಮತ್ತು ಹಣದುಬ್ಬರಕ್ಕೆ ಮೂಲ ಕಾರಣ ಎಂಬ ಅಂಶವನ್ನು ಒಪ್ಪಲೇಬೇಕಾಗುತ್ತದೆ.**

೨೦೦೭ರ ಮೊದಲ ಮೂರು ತಿಂಗಳ ಅವಧಿಯಲ್ಲಿ ಅವಶ್ಯ ಆಹಾರ ಧಾನ್ಯಗಳ ಬೆಲೆಗಳಲ್ಲಿ ಶೇ ೮ರಿಂದ ೧೨ರವರೆಗೆ ವಾರ್ಷಿಕ ಹಣದುಬ್ಬರವನ್ನು ಕಾಣಬಹುದಿತ್ತು. ತದ ನಂತರದಲ್ಲಿ ಇದರ ಪ್ರಮಾಣ ಶೇ. ೪ಕ್ಕಿಂತಲೂ ಕಡಿಮೆಯಾಗಿತ್ತು. ಪ್ರಸ್ತುತ ಸಂದರ್ಭದಲ್ಲಿ ಆಹಾರ ಧಾನ್ಯಗಳ ಬೆಲೆಗಳಲ್ಲಿ ಶೇ ೩.೯ರಿಂದ ಶೇ ೯ರವರೆಗೆ ಹಣದುಬ್ಬರವನ್ನು ಕಾಣಬಹುದು. ಹಾಗಾಗಿ ಆಹಾರ ಧಾನ್ಯಗಳಲ್ಲಿನ ಬೆಲೆ ಏರಿಕೆಯ ಪ್ರಮಾಣವನ್ನೇ ಮಾನದಂಡವನ್ನಾಗಿ ಪರಿಗಣಿಸಿದಲ್ಲಿ, ಕಳೆದ ವರ್ಷಕ್ಕಿಂತಲೂ ಈ ವರ್ಷದಲ್ಲಿ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಬಹುದು. ಆದರೆ ಈ ವಿದ್ಯಮಾನಗಳು ಆರ್ಥಿಕ ತಜ್ಞರ ವಾದ ಪ್ರತಿವಾದಗಳಿಗೆ ಸೀಮಿತವಾಗಿದ್ದು ಸಾಮಾನ್ಯ ಜನತೆಗೆ ನಿಲುಕುವುದಿಲ್ಲ.

ಏಕೆಂದರೆ ಪ್ರಸ್ತುತ ಹಣದುಬ್ಬರ ಮತ್ತು ಬೆಲೆ ಏರಿಕೆಯಲ್ಲಿ ಕಾಣುತ್ತಿರುವ ಪ್ರಧಾನ ಅಂಶವೆಂದರೆ ಕೆಲವು ಸೂಕ್ಷ್ಮವಾದ ಆಹಾರ ಪದಾರ್ಥಗಳಾದ ಅಕ್ಕಿ, ಬೇಳೆ ಮತ್ತು ಖಾದ್ಯ ತೈಲಗಳಲ್ಲಿನ ಬೆಲೆ ಏರಿಕೆ ತೀವ್ರಗತಿಯಲ್ಲಿ ಏರುತ್ತಿದೆ. ಸರ್ಕಾರದ ದಾಖಲೆಗಳ ಪ್ರಕಾರವೇ ಅಕ್ಕಿಯ ಬೆಲೆ ಸರಾಸರಿ ರೂ ೧೨.೫೦ ರಿಂದ ರೂ ೧೫.೨ರಷ್ಟು, ಅಂದರೆ ಶೇ ೨೧.೭ರಷ್ಟು ಹೆಚ್ಚಾಗಿದೆ. ಕಳೆದ ವರ್ಷದ ಬೆಲೆ ಏರಿಕೆಯ ಪ್ರಮಾಣ ಶೇ ೫.೪ರಷ್ಟಿತ್ತು. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಕಳೆದ ಎರಡು ವರ್ಷಗಳಲ್ಲಿ ಬೆಲೆ ಏರಿಕೆಯ ಪ್ರಮಾಣ ತೀವ್ರವಾಗಿ ಹೆಚ್ಚಾಗಿರುವುದನ್ನು ನಾಲ್ಕು ಆಹಾರ ಪದಾರ್ಥಗಳಲ್ಲಿ ಕಾಣಬಹುದು. ಅಕ್ಕಿ, ಗೋಧಿ, ಹಿಟ್ಟು ಮತ್ತು ಬೇಳೆಗಳ ಬೆಲೆಗಳನ್ನು ವಿಶ್ಲೇಷಿಸಿದಾಗ, ಕಳೆದ ವರ್ಷದ ಬೆಲೆಗಳಿಗೆ ಹೋಲಿಸಿದಲ್ಲಿ ಶೇ ೪.೨ರಿಂದ ಶೇ ೨೧.೭ರಷ್ಟು ಹೆಚ್ಚಳವನ್ನು ಕಾಣಬಹುದು. ೨೦೦೬ರ ಬೆಲೆಗಳಿಗೆ ಹೋಲಿಸಿದಲ್ಲಿ ಏರಿಕೆಯ ಪ್ರಮಾಣ ಶೇ ೨೧.೧ರಿಂದ ಶೇ ೨೯ರಷ್ಟು ಕಾಣಬಹುದಾಗಿದೆ. ಅರ್ಥಾತ್ ಕಳೆದ ಎರಡು ವರ್ಷಗಳಲ್ಲಿ ಈ ನಾಲ್ಕು ಪ್ರಮುಖ ಆಹಾರ ಧಾನ್ಯಗಳ ಬೆಲೆಗಳಲ್ಲಿ ಶೇ ೧೦ರಷ್ಟು ಹೆಚ್ಚಳವನ್ನು ಕಾಣಬಹುದು. ಈ ಎಲ್ಲಾ ಆರ್ಥಿಕ ಪ್ರವೃತ್ತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಪ್ರಮುಖವಾಗಿ ಕಂಡು ಬರುವ ಅಂಶವೆಂದರೆ ಭಾರತದ ಆರ್ಥಿಕ ವ್ಯವಸ್ಥೆ ಕಳೆದ ಹಲವು ವರ್ಷಗಳಿಂದ ಹಣದುಬ್ಬರದಿಂದ ಬಳಲುತ್ತಿದ್ದರೂ, ಸಗಟು ವ್ಯಾಪಾರ ಸೂಚ್ಯಂಕದ ವಾರ್ಷಿಕ ಬದಲಾವಣೆಗಳಲ್ಲಿ ಇದು ವ್ಯಕ್ತವಾಗುತ್ತಿರಲಿಲ್ಲವೆಂದು ಆರ್ಥಿಕ ತಜ್ಞರು ಪ್ರತಿಪಾದಿಸುತ್ತಾರೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಪರಿಸ್ಥಿತಿಗೆ ಹಲವು ಕಾರಣಗಳನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಮೊದಲನೆಯದಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಗೆ ಏಷ್ಯಾ ಖಂಡದ ದೇಶಗಳ ಜನಜೀವನದಲ್ಲಿ ಕಂಡಿರುವ ಪ್ರಗತಿ ಒಂದು ಕಾರಣವಾದರೂ, ಆಹಾರ ಪೂರೈಕೆಯ ನೀತಿಗಳೂ ಕಾರಣವಾಗಿರುವುದನ್ನು ಗುರುತಿಸಬಹುದು. ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆಯ ಮೇಲೆ ಪ್ರಭಾವ ಬೀರುವ ತೈಲ ಬೆಲೆ ಏರಿಕೆ ಮಹತ್ವದ್ದಾಗಿದೆ. ಉತ್ಪಾದನಾ ಕ್ರಿಯೆಯಲ್ಲಿ ಹೆಚ್ಚಿನ ತೈಲಾಧಾರಿತ ವಿದ್ಯುತ್ತನ್ನು ಉಪಯೋಗಿಸುವುದರಿಂದ ಕೃಷಿ ಉತ್ಪನ್ನಗಳ ಸಾಗಾಣಿಕೆಯ ವೆಚ್ಚಗಳೂ ಏರುತ್ತಿರುತ್ತವೆ. ವಿಶ್ವದಾದ್ಯಂತ ಬಹುತೇಕ ದೇಶಗಳಲ್ಲಿ ಕೃಷಿ ಸಬ್ಸಿಡಿಗಳನ್ನು ಕಡಿತಗೊಳಿಸಿರುವುದರಿಂದ ಉತ್ಪಾದನಾ ವೆಚ್ಚದಲ್ಲಿನ ಏರಿಕೆ ನೇರವಾಗಿ ಮಾರುಕಟ್ಟೆಯಲ್ಲಿ ವ್ಯಕ್ತವಾಗುತ್ತದೆ.

ಎರಡನೆಯದಾಗಿ ಅಮೆರಿಕಾ, ಯೂರೋಪ್, ಬ್ರೆಜಿಲ್ ಮತ್ತು ಇತರ ಬಂಡವಾಳಶಾಹಿ ದೇಶಗಳಲ್ಲಿ ಪೆಟ್ರೋಲಿಯಂಗೆ ಪರ್ಯಾಯವಾಗಿ ಜೈವಿಕ ಇಂಧನವನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಇದರ ಪರಿಣಾಮವಾಗಿ ಅಮೆರಿಕದಲ್ಲಿ ೨೦೦೬ರಲ್ಲಿ \ಶೇ ೨೦ಕ್ಕಿಂತಲೂ ಹೆಚ್ಚು ಜೋಳದ ಬೆಳೆಯನ್ನು ಇಥನಾಲ್ ಉತ್ಪಾದನೆಗೆ ಉಪಯೋಗಿಸಲಾಗಿತ್ತು. ಬ್ರೆಜಿಲ್ ತನ್ನ ಎಲ್ಲಾ ಕಬ್ಬಿನ ಬೆಳೆಯ ಅರ್ಧದಷ್ಟನ್ನು ಇಂಧನಕ್ಕಾಗಿ ಬಳಸಿತು. ಯೂರೋಪ್ ರಾಷ್ಟ್ರಗಳಲ್ಲಿ ವನಸ್ಪತಿಯನ್ನು ಜೈವಿಕ ಇಂಧನಕ್ಕಾಗಿ ಬಳಸಲಾಗಿತ್ತು. ಈ ನೀತಿಗಳ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಕೃಷಿ ಉತ್ಪಾದನೆಯ ಪೂರೈಕೆ ಕುಂಠಿತವಾಗತೊಡಗಿತು.

ಮೂರನೆಯದಾಗಿ ವಿಶ್ವದಾದ್ಯಂತ ಕೃಷಿ ಕ್ಷೇತ್ರದ ನಿರ್ಲಕ್ಷ್ಯವೂ ಪ್ರಸ್ತುತ ಬೆಲೆ ಏರಿಕೆಗೆ ಕಾರಣವಾಗಿದೆ. ಅಭಿವೃದ್ಧಿ ಶೀಲ ದೇಶಗಳಲ್ಲಿನ ದೀರ್ಘಕಾಲಿಕ ಕೃಷಿ ಬಿಕ್ಕಟ್ಟು, ಆಹಾರ ಉತ್ಪಾದನೆಯ ಬದಲು ಹೆಚ್ಚು ಮೌಲ್ಯವುಳ್ಳ ಬೆಳೆಗಳಿಗೆ ಮೊರೆಹೋಗಿದ್ದು, ಅತಿ ಹೆಚ್ಚಿನ ಅಂತರ್ಜಲದ ಉಪಯೋಗ, ಭೂಮಿ ಮತ್ತು ಮಣ್ಣಿನ ಗುಣಮಟ್ಟವನ್ನು ಕಾಪಾಡುವಲ್ಲಿ ತೋರಿದ ನಿರ್ಲಕ್ಷ್ಯ, ಕೃಷಿ ಸಂಶೋಧನೆಯ

[illegible] ಕೃಷಿ ಭೂಮಿಗಳ ಅತಿಕ್ರಮಣ ಮತ್ತು ಕಾಂಕ್ರೀಟ್ ಕಾಡುಗಳ ನಿರ್ಮಾಣ ಈ ಎಲ್ಲ ಅಂಶಗಳೂ ಪ್ರಸ್ತುತ ಸನ್ನಿವೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿವೆ.

ನಾಲ್ಕನೆಯದಾಗಿ ಮಾರುಕಟ್ಟೆಯ ಸಂರಚನೆಯಲ್ಲಿ ಉಂಟಾಗಿರುವ ಬದಲಾವಣೆಗಳು, ಆಹಾರ ಪದಾರ್ಥಗಳಲ್ಲಿ ಸಟ್ಟಾ ವ್ಯಾಪಾರದ ಪ್ರವೇಶವೂ ಇಂದಿನ ವಿಷಮ ಪರಿಸ್ಥಿತಿಗೆ ಕಾರಣವಾಗಿವೆ. ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ರೈತರಿಗೆ ಲಾಭವಾಗುತ್ತದೆ ಎಂಬ ಪ್ರತೀತಿ ಇದೆ. ಆದರೆ ಜಾಗತೀಕರಣ ಪ್ರಕ್ರಿಯೆಯಲ್ಲಿ ಇಡೀ ವಿಶ್ವದ ಕೃಷಿ ಮಾರುಕಟ್ಟೆಯನ್ನು ಮತ್ತು ಬೀಜ ಮಾರುಕಟ್ಟೆಯನ್ನು ಕೆಲವೇ ಕಾರ್ಪೋರೇಟ್ ಉದ್ದಿಮೆಗಳು ನಿಯಂತ್ರಿಸುವುದರಿಂದ ಉತ್ಪಾದನೆ ಮಾಡುವ ರೈತರ ಲಾಭಾಂಶಕ್ಕಿಂತಲೂ, ಕಾರ್ಪೋರೇಟ್ ಉದ್ದಿಮೆಗಳ ಲಾಭಾಂಶವೇ ಹೆಚ್ಚಾಗಿರುತ್ತದೆ. ಇಡೀ ಕೃಷಿ ವ್ಯವಸ್ಥೆ ಕೆಲವೇ ಉದ್ದಿಮೆಗಳಲ್ಲಿ ಕ್ರೋಢೀಕೃತವಾಗಿರುವುದರಿಂದ ಆಹಾರ ಪದಾರ್ಥಗಳ ಮಾರುಕಟ್ಟೆಯಲ್ಲಿ ಸಟ್ಟಾ ವ್ಯಾಪಾರವೂ ಹೆಚ್ಚಾಗುತ್ತಿದೆ.

ಭಾರತೀಯ ಸನ್ನಿವೇಶದಲ್ಲಿ ವಿಶ್ಲೇಷಿಸಿದಾಗ ಈ ವಿದ್ಯಮಾನಕ್ಕೆ ನಿರ್ಲಕ್ಷಿಸಲಾಗದ ಎರಡು ಮೂಲಭೂತ ಕಾರಣಗಳನ್ನು ಇಲ್ಲಿ ಉಲ್ಲೇಖಿಸಬಹುದು. ಮೊದಲನೆಯದೆಂದರೆ ಕೃಷಿ ಕ್ಷೇತ್ರದ ನಿರ್ಲಕ್ಷ್ಯ. ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯ ಇಳಿಮುಖ, ಏರುತ್ತಿರುವ ಕೃಷಿ ಉಪಕರಣ ಮತ್ತು ಸಲಕರಣೆಗಳ ಬೆಲೆಗಳು, ಫಸಲಿಗೆ ಸೂಕ್ತ ಬೆಲೆ ದೊರೆಯದಿರುವುದು ಕೃಷಿ ಕ್ಷೇತ್ರದ ಬಿಕ್ಕಟಿನ ಪ್ರಮುಖ ಕಾರಣಗಳಾಗಿವೆ. ಈ ಬಿಕ್ಕಟ್ಟಿನ ಪರಿಣಾಮವಾಗಿ ಕೃಷಿ ಉತ್ಪನ್ನವೂ ಕುಸಿಯುತ್ತಿದ್ದು ೧೯೯೦ರ ದಶಕದಲ್ಲಿ ಆಹಾರ ಧಾನ್ಯಗಳ ತಲಾ ಉತ್ಪಾದನೆ ಕ್ಷೀಣಿಸಿರುವುದನ್ನು ಗಮನಿಸಬಹುದು. ಮತ್ತೊಂದು ಮೂಲಭೂತ ಕಾರಣವೆಂದರೆ ಆಹಾರ ಧಾನ್ಯಗಳ ಬೆಲೆ ನಿಯಂತ್ರಿಸುವಲ್ಲಿ ಮಹತ್ವದ ಪಾತ್ರ ವಹಿಸುವ ಆಹಾರ ಧಾನ್ಯಗಳ ಸಂಗ್ರಹಣೆ ಮತ್ತು ವಿತರಣೆಯಲ್ಲಿ ಸರ್ಕಾರದ ವೈಫಲ್ಯ ಮತ್ತು ನಿರಾಸಕ್ತಿ. ಬಹುತೇಕ ಆಹಾರ ಧಾನ್ಯಗಳ ಮಾರುಕಟ್ಟೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರವೇಶಾವಕಾಶವಿರುವುದರಿಂದ, ಖಾಸಗೀ ವ್ಯಾಪಾರಿಗಳೊಂದಿಗೆ ಈ ಕಾರ್ಪೋರೇಟ್ ಉದ್ಯಮಿಗಳು ಅಪಾರ ಪ್ರಮಾಣದ ಆಹಾರ ಧಾನ್ಯಗಳನ್ನು ಖರೀದಿಸಿ ಶೇಖರಿಸಲಾರಂಭಿಸಿದರು. ಪರಿಣಾಮವಾಗಿ ಭಾರತೀಯ ಆಹಾರ ನಿಗಮದ ಸಂಗ್ರಹಣಾ ಸಾಮರ್ಥ್ಯ ಕ್ಷೀಣಿಸತೊಡಗಿತು.

೨೦೦೬-೦೭ರಲ್ಲಿ ಆಹಾರ ನಿಗಮವು ಸಂಗ್ರಹಿಸಿ ಆಹಾರ ಧಾನ್ಯಗಳ ಪ್ರಮಾಣ ೧೧.೧೦ ದಶಲಕ್ಷ ಟನ್‌ಗಳಾಗಿದ್ದು, ೨೦೦೫-೦೬ರ ೯.೨ ದಶಲಕ್ಷ ಟನ್ ಗಿಂತಲೂ ಹೆಚ್ಚಾಗಿ ಕಂಡುಬಂದರೂ, ಆಹಾರ ನಿಗಮದ ಸಂಗ್ರಹಣೆಯ ಪ್ರಮಾಣ ೨೦೦೪-೦೫ರಲ್ಲಿ ೧೪.೮ ದಶಲಕ್ಷ ಟನ್ ಮತ್ತು ೨೦೦೩-೦೪ರಲ್ಲಿ ೧೬.೮ ದಶಲಕ್ಷ ಟನ್‌ಗಳಷ್ಟಿದ್ದುದನ್ನು ನೋಡಿ ದಾಗ ನೈಜ ಪರಿಸ್ಥಿತಿಯನ್ನು ಗ್ರಹಿಸಬಹುದಾಗಿದೆ. ಕಳೆದ ಐದು ವರ್ಷಗಳಲ್ಲಿ ಭಾರತೀಯ ಆಹಾರ ನಿಗಮದ ಸಂಗ್ರ ಹಣೆ ಶೇ ೫೦ರಷ್ಟು ಕಡಿಮೆಯಾಗಿರುವುದನ್ನು ಇಲ್ಲಿ ಗಮ ನಿಸಬಹುದು. ೨೦೦೧-೦೨ರಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಗಾಗಿ ಸಂಗ್ರಹಿಸಲಾಗುತ್ತಿದ್ದ ಆಹಾರ ಧಾನ್ಯದ ಪ್ರಮಾಣ ಶೇ ೩೦ರಷ್ಟಿದ್ದು, ೨೦೦೬-೦೭ರಲ್ಲಿ ಈ ಪ್ರಮಾಣ ಶೇ

೧೫ರಷ್ಟಾಗಿರುವುದು ಕಂಡುಬರುತ್ತದೆ.

ಉದಾರೀಕರಣದ ಪೂಜಾರಿಗಳು ಈ ವಿದ್ಯಮಾನವನ್ನು ಒಂದು ಸಮಸ್ಯೆಯೆಂದು ಪರಿಗಣಿಸುವುದೇ ಇಲ್ಲ. ಸರ್ಕಾರದ ಬಳಿ ಇರುವ ವಿದೇಶೀ ವಿನಿಮಯದಿಂದ ಎಷ್ಟು ಪ್ರಮಾಣದಲ್ಲಿ ಬೇಕಾದರೂ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬಹುದೆಂದು ಇವರು ಪ್ರತಿಪಾದಿಸುತ್ತಾರೆ. ಆದರೆ ಆಮದು ಮಾಡಿಕೊಂಡ ಆಹಾರ ಧಾನ್ಯಗಳನ್ನು ಅಗ್ಗದ ದರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದಲ್ಲಿ ಸ್ಥಳೀಯ ಉತ್ಪಾದನೆಗೆ ಮಾರಕವಾಗುವುದಷ್ಟೇ ಅಲ್ಲದೆ ಆಹಾರ ಸುಭದ್ರತೆಗೂ ಸಂಚಕಾರ ತರುತ್ತದೆ ಎಂಬ ಸೂಕ್ಷ್ಮ ಅಂಶವನ್ನು ಇವರು ಮರೆಮಾಚುತ್ತಾರೆ.

ಉದಾರೀಕರಣದ ಪೂಜಾರಿಗಳು ಈ ವಿದ್ಯಮಾನವನ್ನು ಒಂದು ಸಮಸ್ಯೆಯೆಂದು ಪರಿಗಣಿಸುವುದೇ ಇಲ್ಲ. ಸರ್ಕಾರದ ಬಳಿ ಇರುವ ವಿದೇಶೀ ವಿನಿಮಯದಿಂದ ಎಷ್ಟು ಪ್ರಮಾಣದಲ್ಲಿ ಬೇಕಾದರೂ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬಹುದೆಂದು ಇವರು ಪ್ರತಿಪಾದಿಸುತ್ತಾರೆ. ಆದರೆ ಆಮದು ಮಾಡಿಕೊಂಡ ಆಹಾರ ಧಾನ್ಯಗಳನ್ನು ಅಗ್ಗದ ದರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದಲ್ಲಿ ಸ್ಥಳೀಯ ಉತ್ಪಾದನೆಗೆ ಮಾರಕವಾಗುವುದಷ್ಟೇ ಅಲ್ಲದೆ ಆಹಾರ ಸುಭದ್ರತೆಗೂ ಸಂಚಕಾರ ತರುತ್ತದೆ ಎಂಬ ಸೂಕ್ಷ್ಮ ಅಂಶವನ್ನು ಇವರು ಮರೆಮಾಚುತ್ತಾರೆ. ಇಲ್ಲಿ ದೇಶೀಯ ಆಹಾರ ಉತ್ಪಾದನೆಯನ್ನು ಸಂರಕ್ಷಿಸುವುದು ಸರ್ಕಾರದ ಧ್ಯೇಯವಾಗಬೇಕೇ ಹೊರತು ಅದನ್ನು ಶಿಥಿಲಗೊಳಿಸುವ ಉದ್ದೇಶ ಇರಕೂಡದು.

ಇಲ್ಲಿ ದೇಶೀಯ ಆಹಾರ ಉತ್ಪಾದನೆಯನ್ನು, ಸಂರಕ್ಷಿಸುವುದು ಸರ್ಕಾರದ ಧ್ಯೇಯವಾಗಬೇಕೇ ಹೊರತು ಅದನ್ನು ಶಿಥಿಲಗೊಳಿಸುವ ಉದ್ದೇಶ ಇರಕೂಡದು.

ಇತ್ತೀಚಿನ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಕಂಡುಬರುತ್ತಿರುವ ಬೆಲೆ ಏರಿಕೆಯ ಕಾರಣ ಕೇವಲ ಬೇಡಿಕೆ ಮತ್ತು ಸರಬರಾಜಿಗೆ ಸೀಮಿತವಾಗಿರದೆ, ಆಹಾರ ಧಾನ್ಯಗಳ ಸಟ್ಟಾ ಮಾರುಕಟ್ಟೆಯ ಪರಿಣಾಮವನ್ನೂ ಇದರಲ್ಲಿ ಕಾಣಬಹುದಾಗಿದೆ. ಆದ್ದರಿಂದಲೇ ಇಲ್ಲಿ ನಮ್ಮ ರೈತರಿಗೆ ನೀಡುವ ಬೆಲೆಗಿಂತಲೂ ಆಮದು ಮಾಡಿಕೊಂಡ ಪದಾರ್ಥಗಳಿಗೆ ಹೆಚ್ಚಿನ ಮೌಲ್ಯವಿರುತ್ತದೆ. ಈ ಪದಾರ್ಥಗಳನ್ನು ಮಾರುಕಟ್ಟೆ ಬೆಲೆಯಲ್ಲಿ ಮಾರಾಟ ಮಾಡಲು ಸಬ್ಸಿಡಿ ನೀಡುವುದು ಅನಿವಾರ್ಯವಾಗುತ್ತದೆ. ತನ್ನ ಈ ಕ್ರಮವನ್ನು ಸಮರ್ಥಿಸಿಕೊಳ್ಳಲು ಅಸಮರ್ಥವಾದ ಸರ್ಕಾರ ದೇಶೀಯ ಬೆಲೆಗಳನ್ನು ಅಂತಾರಾಷ್ಟ್ರೀಯ ಬೆಲೆಗಳೊಡನೆ ಸಮೀಕರಿಸಲಾಗುತ್ತದೆ ಎಂಬ ನಂಬಿಕೆ ಹುಟ್ಟಿಸಿ, ಆಂತರಿಕವಾಗಿಯೂ ಸಟ್ಟಾ ಮಾರುಕಟ್ಟೆಯನ್ನು ಪ್ರಚೋದಿಸುತ್ತಿರುವುದು ಪ್ರಸ್ತುತ ಬೆಲೆ ಏರಿಕೆಗೆ ಮುಖ್ಯ ಕಾರಣಗಳಲ್ಲೊಂದಾಗಿದೆ. ಅಂತಾರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಉಂಟಾದ ಬೆಲೆಗಳ ಏರುಪೇರಿನ ಪರಿಣಾಮವಾಗಿ ಇಲ್ಲಿಯೂ ತೈಲಬೆಲೆಗಳನ್ನು ಏರಿಸಿರುವುದರಿಂದ ಹಣದುಬ್ಬರಕ್ಕೆ ಮತ್ತಷ್ಟು ಪುಷ್ಟಿ ನೀಡಿದಂತಾಗಿದೆ. ಯಾವುದೇ ಸಂದರ್ಭದಲ್ಲೂ ತೈಲ ಬೆಲೆಗಳಲ್ಲಿನ ಏರುಪೇರುಗಳು ಆರ್ಥಿಕತೆಯ ಎಲ್ಲ ಕ್ಷೇತ್ರಗಳಲ್ಲೂ ತನ್ನ ಪ್ರಭಾವವನ್ನು ಬೀರುತ್ತದೆ. ಆದರೆ ಪೆಟ್ರೋಲಿಯಂ ಪದಾರ್ಥಗಳ ಮೇಲಿನ ಪರೋಕ್ಷ ತೆರಿಗೆಯಿಂದ ಅಪಾರ ಆದಾಯ ಗಳಿಸುವ ಕೇಂದ್ರ ಸರ್ಕಾರ ಈ ಪರೋಕ್ಷ ತೆರಿಗೆಗಳನ್ನು ಕಡಿತಗೊಳಿಸಬಹುದಿತ್ತು. ಆದರೆ ಸರ್ಕಾರ ಈ ಕ್ರಮಕೈಗೊಳ್ಳದಿರುವುದು ದುರದೃಷ್ಟಕರ.

ಉದಾರೀಕರಣದ ಮತ್ತೊಂದು ವೈಶಿಷ್ಟ್ಯವೆಂದರೆ ದೇಶೀಯ ಬೆಲೆಗಳು ಅಂತಾರಾಷ್ಟ್ರೀಯ ಬೆಲೆಗಳೊಂದಿಗೆ ಸರಿದೂಗುವ ಪ್ರಕ್ರಿಯೆಗೆ ಆಮದು ಮಾಡಿಕೊಳ್ಳಲಾಗುವ ಪದಾರ್ಥಗಳು ಮಾತ್ರವಲ್ಲದೆ ನಾವು ರಫ್ತು ಮಾಡುವ ಪದಾರ್ಥಗಳ ಬೆಲೆಗಳೂ ಕಾರಣವಾಗಿರುತ್ತವೆ. ಉಕ್ಕು, ಕಬ್ಬಿಣ ಮತ್ತಿತರ ಲೋಹಗಳ ವಿಷಯದಲ್ಲಿ ಈ ಪ್ರಕ್ರಿಯೆಯನ್ನೇ ನಾವು ಕಾಣುತ್ತಿದ್ದೇವೆ. ಚೀನಾದ ಮಾರುಕಟ್ಟೆಯಲ್ಲಿ ಕಬ್ಬಿಣ ಮತ್ತು ಉಕ್ಕು ತೀವ್ರ ಬೇಡಿಕೆಯಲ್ಲಿದ್ದು, ಭಾರತೀಯ ಉದ್ದಿಮೆಗಳು ತಮ್ಮ ಉತ್ಪನ್ನಗಳನ್ನು ಹೆಚ್ಚಿನ ಬೆಲೆಗಳಲ್ಲಿ ರಫ್ತು ಮಾಡುತ್ತಿವೆ. ಈ ಬೆಲೆಯ ಪ್ರಮಾಣವನ್ನು ಸರಿದೂಗಿಸಲು ದೇಶೀಯ ಮಾರುಕಟ್ಟೆಯಲ್ಲೂ ಬೆಲೆಗಳನ್ನು ಹೆಚ್ಚಿಸುತ್ತಿವೆ. ಇದರಿಂದಾಗಿ ಸರ್ಕಾರಕ್ಕೆ ಉಕ್ಕು ಮತ್ತು ಕಬ್ಬಿಣದ ರಫ್ತು ವ್ಯಾಪಾರವನ್ನು ನಿರ್ಬಂಧಿಸುವುದೇ ಅಲ್ಲದೆ ಬೆಲೆಗಳನ್ನೂ ನಿಯಂತ್ರಿಸುವುದು ಅನಿವಾರ್ಯವಾಗಿದೆ.

ಆದರೆ ದೇಶದಲ್ಲಿ ಕಾಣುತ್ತಿರುವ ಅಪೂರ್ವ ಬೆಲೆ ಏರಿಕೆಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಪ್ರವೃತ್ತಿಗಳೇ ಕಾರಣವೆಂದು ಹೇಳುವುದು ಪಲಾಯನವಾದವಾಗುತ್ತದೆ. ಕಳೆದ ೧೫ ವರ್ಷಗಳ ಆರ್ಥಿಕ ನೀತಿಗಳ ಪ್ರಮುಖ ಲಕ್ಷಣವೆಂದರೆ ಆಹಾರ ಭದ್ರತೆಯ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದಿರುವುದಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಶಿಥಿಲಗೊಳಿಸಿದ ನೀತಿಯನ್ನು ಈ ಹಿನ್ನೆಲೆಯಲ್ಲೇ ವಿಶ್ಲೇಷಿಸಬೇಕಾಗುತ್ತದೆ. ಹಣಕಾಸು ಸಚಿವರು ಹೇಳುವಂತೆ ಈ ಬಿಕ್ಕಟ್ಟು ಅಲ್ಪ ಕಾಲಿಕವೆಂಬ ಅಂಶವನ್ನೂ ಒಪ್ಪಲಾಗುವುದಿಲ್ಲ. ೧೯೬೫ರಿಂದ ೧೯೯೦ರವರೆಗೆ

ಸಾರ್ವಜನಿಕ ವಿತರಣಾ ವ್ಯವಸ್ಥೆ ಯಶಸ್ವಿಯಾಗಿ ನಡೆಯಲು ಕಾರಣ ಅಪಾರ ಪ್ರಮಾಣದ ಆಹಾರ ಧಾನ್ಯ ಉತ್ಪಾದನೆ ಮತ್ತು ಸಂಗ್ರಹಣೆಯೇ ಎಂದು ಹೇಳಬೇಕಿಲ್ಲ. ಆದರೆ ಉದಾರೀಕರಣ ನೀತಿಯ ಪ್ರಥಮ ಪ್ರಹಾರ ಆಹಾರ ಸಬ್ಸಿಡಿಗಳ ಮೇಲೆಯೇ ಎರಗಿದ್ದು ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡಲಾರಂಭಿಸಿತ್ತು. ಆಹಾರ ಸಂಗ್ರಹಣೆಯ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಉದ್ದೇಶದಿಂದಲೇ ೧೯೯೭ರಲ್ಲಿ ಕೇಂದ್ರ ಸರ್ಕಾರವು ಕೆಲವು ಉದ್ದೇಶಿತ ವರ್ಗಗಳಿಗೆ ಆಹಾರ ವಿತರಣೆ ಮಾಡುವ ನೀತಿಯನ್ನು ಅನುಸರಿಸಿ ದಾರಿದ್ರ್ಯರೇಖೆ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿತ್ತು.

ವಿಶ್ವ ವಾಣಿಜ್ಯ ಸಂಸ್ಥೆಯೊಡನೆ ಭಾರತದ ಒಪ್ಪಂದದ ಅನುಸಾರವಾಗಿ ಭಾರತ ಸರ್ಕಾರವು ಆಹಾರ ಭದ್ರತೆಯ ದೃಷ್ಟಿಯಿಂದ ಸಾಕಷ್ಟು ಆಹಾರ ಧಾನ್ಯಗಳನ್ನು ಶೇಖರಿಸುವುದು ಅಗತ್ಯವಾದರೂ, ರೈತರಿಗೆ ನೀಡುವ ಬೆಲೆ ಜಾಗತಿಕ ಮಾರುಕಟ್ಟೆಯ ಬೆಲೆಗಿಂತ ಹೆಚ್ಚಾಗಿರುವಂತಿಲ್ಲ. ಇಲ್ಲಿ ರೈತ ಮತ್ತು ಬಳಕೆದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಹೊಣೆಗಾರಿಕೆ ಸರ್ಕಾರದ್ದಾಗಿರುತ್ತದೆ. ೮೦ರ ದಶಕದ ಅಂಚಿನವರೆಗೂ ಭಾರತೀಯ ಆಹಾರ ನಿಗಮವು ಶೇ ೪೫ರಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದುದರಿಂದ ಖಾಸಗಿ ವ್ಯಾಪಾರಿಗಳಿಗೆ ಬೆಲೆ ಏರಿಸುವುದು ಕಷ್ಟಸಾಧ್ಯವಾಗಿತ್ತು. ರೈತರಿಗೂ ಸೂಕ್ತ ಬೆಲೆ ದೊರಕುತ್ತಿತ್ತು. ಆದರೆ ನವ ಉದಾರೀಕರಣ ನೀತಿಯ ಪರಿಣಾಮವಾಗಿ ಈ ನೀತಿಗಳಿಗೆ ತಿಲಾಂಜಲಿ ನೀಡಲಾಗಿದ್ದು, ೮ ದಶಲಕ್ಷಕ್ಕೂ ಹೆಚ್ಚು ಭೂಮಿಯನ್ನು ಆಹಾರ ಉತ್ಪಾದನೆಯಿಂದ ಕಾಫಿ, ತೋಟಗಾರಿಕೆ, ಹತ್ತಿ, ಕಬ್ಬು ಮುಂತಾದ ವಾಣಿಜ್ಯ ಬೆಳೆಗಳಿಗೆ ಪರಿವರ್ತಿಸಲಾಗಿದೆ. ಈ ಪರಿವರ್ತನೆಯ ನಂತರದಲ್ಲಿ ಸರ್ಕಾರದ ರಕ್ಷಣೆ ಇಲ್ಲದೆ ಹೋದುದರಿಂದ ರೈತ ಸಮುದಾಯವೂ ಸಂಕಷ್ಟಕ್ಕೆ ಸಿಲುಕಿರುವುದನ್ನು ಕಾಣಬಹುದು.

೨೦೦೧ರಲ್ಲಿ ಭಾಜಪ ನೇತೃತ್ವದ ಎನ್.ಡಿ.ಎ ಅಧಿಕಾರದಲ್ಲಿದ್ದಾಗ ರೈತ ಸಮುದಾಯರಿಗೆ ಲಭ್ಯವಿದ್ದ ಎಲ್ಲಾ ರಕ್ಷಣಾ ವ್ಯವಸ್ಥೆಗಳನ್ನೂ ನಿರ್ಮೂಲ ಮಾಡಲಾಯಿತು. ಆಹಾರ ಪದಾರ್ಥಗಳ ಆಮದು ಮತ್ತು ರಫ್ತು ವ್ಯಾಪಾರದಲ್ಲಿ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕಿ, ಸುಂಕ-ತೆರಿಗೆಗಳನ್ನೂ ಕಡಿತಗೊಳಿಸಲಾಯಿತು. ಈ ಹಂತದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಪ್ರಾರಂಭವಾದ ಕೂಡಲೇ ಭಾರತದಲ್ಲಿ ರೈತರು ಸಂಕಷ್ಟಗಳಿಗೆ ಗುರಿಯಾಗಿ ರೈತರ ಆತ್ಮಹತ್ಯೆಯ ಸರಣಿ ಪ್ರಾರಂಭವಾಗಿತ್ತು. ೧೯೯೦ರಿಂದಲೇ ಪ್ರಾರಂಭಗೊಂಡ ಆಹಾರ ಉತ್ಪಾದನೆಯಲ್ಲಿನ ಕುಸಿತ ೨೦೦೦ದ ನಂತರದಲ್ಲಿ ತೀವ್ರವಾಗಿದ್ದೇ ಅಲ್ಲದೆ ರೈತರ ಬೆಳೆಗಳಿಗೆ ದೊರೆಯುತ್ತಿದ್ದ ಬೆಲೆಗಳಲ್ಲೂ ತೀವ್ರ ಕುಸಿತ ಪ್ರಾರಂಭವಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಬಂಡವಾಳ ಹೂಡಿಕೆ ಕ್ಷೀಣಿಸುತ್ತಿದ್ದಂತೆ ನಿರುದ್ಯೋಗವೂ ಹೆಚ್ಚಾಗಿ ಜನತೆಯ ಕೊಳ್ಳುವ ಸಾಮರ್ಥ್ಯವೂ ಕುಸಿಯತೊಡಗಿತು. ಇವೆಲ್ಲದರ ಪರಿಣಾಮವಾಗಿ ಆಹಾರ ಧಾನ್ಯಗಳ ತಲಾ ಸರಾಸರಿ ಬೇಡಿಕೆ ಎರಡನೇ ಮಹಾ ಯುದ್ಧಕ್ಕೂ ಮುಂಚೆ ಇದ್ದ ಹಂತಕ್ಕೆ ಇಳಿದಿತ್ತು. ಹಾಗಾಗಿಯೇ ೨೦೦೨ರ ವೇಳೆಗೆ ೬೪ ದಶಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳ ಶೇಖರಣೆಯಾಗಿತ್ತು. ಆದರೆ ಅದನ್ನು ಕೊಳ್ಳುವವರಿರಲಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲೇ ೧೯೯೭ರಿಂದ ರಾಜ್ಯಗಳಿಗೆ ನೀಡಲಾಗುವ ಆಹಾರ ಧಾನ್ಯಗಳ ಪ್ರಮಾಣದಲ್ಲೂ ಕಡಿಮೆ ಮಾಡುವ ನೀತಿಯನ್ನು

ಮೂರು-ನಾಲ್ಕು ದಶಕಗಳ ಹಿಂದೆ ಕಾಳಸಂತೆಕೋರರು ಆಕ್ರಮವಾಗಿ ಆಹಾರ ಧಾನ್ಯಗಳನ್ನು ರಫ್ತು ಮಾಡುತ್ತಿದ್ದುದರಿಂದ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗುತ್ತಿದ್ದುದು ಸಾಮಾನ್ಯವಾದ ಸಂಗತಿಯಾಗಿತ್ತು. ಆದರೆ ಜಾಗತೀಕರಣ ಪ್ರಕ್ರಿಯೆಯಲ್ಲಿ ಕಾಳಸಂತೆಕೋರರಿಗೆ ಒಂದು ಪ್ರತಿಷ್ಠಿತ ಸ್ಥಾನವೇ ದೊರೆತಿದ್ದು ಇಡೀ ದೇಶದ ಮಾರುಕಟ್ಟೆ ಅವರ ನಿಯಂತ್ರಣಕ್ಕೆ ಸಿಲುಕಿರುವುದನ್ನು ಕಾಣಬಹುದು. ಈ ನವ ಕಾಳಸಂತೆಕೋರರಿಗೆ ಅನುಕೂಲ ಮಾಡಿಕೊಡಲು ಎಲ್ಲಾ ರಾಜ್ಯ ಸರ್ಕಾರಗಳು ಎ.ಪಿ.ಎಂ.ಸಿ ಕಾಯ್ದೆಯನ್ನೂ ಮಾರ್ಪಡಿಸಿವೆ.

ಸರ್ಕಾರ ಅನುಸರಿಸತೊಡಗಿತ್ತು. ಇದರ ನೇರ ಪರಿಣಾಮವನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ದುರವಸ್ಥೆಯಲ್ಲಿ ಕಾಣಬಹುದು. ಲಭ್ಯವಿದ್ದ ಅಲ್ಪ ಆಹಾರ ಧಾನ್ಯಗಳನ್ನು ವಿತರಿಸಲು ಸರ್ಕಾರವು ಎ.ಪಿ.ಎಲ್-ಬಿ.ಪಿ.ಎಲ್ ಎಂಬ ವರ್ಗೀಕರಣಕ್ಕೆ ಮೊರೆ ಹೋಗಿ ಬಹುಸಂಖ್ಯೆಯ ಬಡಜನತೆಯನ್ನು ಬಿ.ಪಿ.ಎಲ್ ಪಟ್ಟಿಯಿಂದ ಹೊರಗಿಟ್ಟಿತ್ತು. ಬಿ.ಪಿ.ಎಲ್ ಪಟ್ಟಿಯಿಂದ ಹೊರಗುಳಿದ ಜನರನ್ನು ಬಡಜನರ ಗುಂಪಿಗೆ ಸೇರಿಸದ ಸರ್ಕಾರ ಈ ಜನ ಸಮುದಾಯಕ್ಕೆ ಯಾವುದೇ ರೀತಿಯ ಆಹಾರ ಭದ್ರತೆಯನ್ನು ಒದಗಿಸುವಲ್ಲಿ ವಿಫಲವಾಗಿದ್ದು, ಬೆಲೆ ಏರಿಕೆಯ ಬೇಗೆಯಲ್ಲಿ ಬೇಯುವಂತೆ ಮಾಡಿರುವುದು ಸ್ಪಷ್ಟವಾಗಿದೆ.

ಆಳುವ ವರ್ಗಗಳ ಜನವಿರೋಧಿ ನೀತಿಗಳು

"ಭಾರತದಲ್ಲಿ ಜನಜೀವನ ಮಟ್ಟ ಸುಧಾರಿಸಿರುವುದೇ ಬೆಲೆ ಏರಿಕೆಗೆ ಕಾರಣ" ಎಂಬ ಜಾರ್ಜ್ ಬುಷ್‌ರವರ ಹೇಳಿಕೆ ತೀವ್ರ ಟೀಕೆಗೊಳಗಾಗಿದ್ದರೂ, ಅಂತಾರಾಷ್ಟ್ರೀಯ ಮಟ್ಟದ ಬಂಡವಾಳಶಾಹಿ ಆರ್ಥಿಕ ತಜ್ಞರು ಹೆಚ್ಚುಕಡಿಮೆ ಇದೇ ವಾದವನ್ನು ಮಂಡಿಸುತ್ತಾರೆ. ಬುಷ್‌ರವರ ಹೇಳಿಕೆ ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕುಗಳ ಅಭಿಪ್ರಾಯಗಳ ಪುನರುಚ್ಚಾರಣೆಯಷ್ಟೆ. ಕೇಂದ್ರ ಮಂತ್ರಿ ಕಪಿಲ್ ಸಿಬ್ಬಾಲ್‌ರವರೂ ಸಹ ಇತ್ತೀಚಿನ ಹೇಳಿಕೆಯಲ್ಲಿ *"ಬೆಲೆ ಏರಿಕೆ ಜಾಗತಿಕ ವಿದ್ಯಮಾನವಾಗಿದ್ದು ಇದರಲ್ಲಿ ನಮ್ಮ ಸರ್ಕಾರ ಮಾಡುವುದೇನೂ ಇಲ್ಲ"* ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಇನ್ನೊಂದೆಡೆ ಪ್ರಧಾನ ಮಂತ್ರಿಗಳು ಶ್ರೀಮಂತ ವರ್ಗದವರಿಗೆ ತಮ್ಮ ಜೀವನ ಶೈಲಿಯನ್ನು ಸುಧಾರಿಸಿಕೊಳ್ಳುವ ಕರೆ ನೀಡುತ್ತಾರೆ. ಅರ್ಥಾತ್ ಶ್ರೀಮಂತರು ತಮ್ಮ ಐಷಾರಾಮಿ ಜೀವನವನ್ನು ಸರಳೀಕರಿಸಿದಲ್ಲಿ ಬೆಲೆಗಳು ಇಳಿಯುತ್ತವೆ ಎಂದು ಜನರನ್ನು ನಂಬಿಸುವ ಕುಟಿಲ ನೀತಿಯನ್ನು ಪ್ರಧಾನಿಗಳೂ ಅನುಸರಿಸುತ್ತಿದ್ದಾರೆ. ಪ್ರಧಾನ ವಿರೋಧ ಪಕ್ಷವಾದ ಭಾಜಪವೂ ಸಹ ತನ್ನ ಹೊಣೆಗಾರಿಕೆಯನ್ನು ಮರೆತು, ಪ್ರಸ್ತುತ ಬೆಲೆ ಏರಿಕೆ ಮತ್ತು ಹಣದುಬ್ಬರಕ್ಕೆ ತನ್ನ ಸರ್ಕಾರದ ನೀತಿಗಳೂ ಕಾರಣವೆಂಬ ಅಂಶವನ್ನು ಮರೆಮಾಚಲೆತ್ನಿಸುತ್ತಿದೆ. ಆದರೆ ತನ್ನದೇ ಆಡಳಿತಾವಧಿಯನ್ನೊಳಗೊಂಡ ಕಳೆದ ಹತ್ತು ವರ್ಷಗಳ ಆರ್ಥಿಕ ನೀತಿಗಳ ನೇರ ಪರಿಣಾಮವನ್ನು ಇಂದು ದೇಶ ಎದುರಿಸುತ್ತಿದೆ ಎಂಬ ಅಂಶವನ್ನು ಭಾಜಪ ಮರೆತಂತಿದೆ.

ಮೂರು-ನಾಲ್ಕು ದಶಕಗಳ ಹಿಂದೆ ಕಾಳಸಂತೆಕೋರರು ಆಕ್ರಮವಾಗಿ ಆಹಾರ ಧಾನ್ಯಗಳನ್ನು ರಫ್ತು ಮಾಡುತ್ತಿದ್ದುದರಿಂದ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗುತ್ತಿದ್ದುದು ಸಾಮಾನ್ಯವಾದ ಸಂಗತಿಯಾಗಿತ್ತು. ಆದರೆ ಜಾಗತೀಕರಣ ಪ್ರಕ್ರಿಯೆಯಲ್ಲಿ ಕಾಳಸಂತೆಕೋರರಿಗೆ ಒಂದು ಪ್ರತಿಷ್ಠಿತ ಸ್ಥಾನವೇ ದೊರೆತಿದ್ದು ಇಡೀ ದೇಶದ ಮಾರುಕಟ್ಟೆ ಅವರ ನಿಯಂತ್ರಣಕ್ಕೆ ಸಿಲುಕಿರುವುದನ್ನು ಕಾಣಬಹುದು. ಈ ನವ ಕಾಳಸಂತೆಕೋರರಿಗೆ ಅನುಕೂಲ ಮಾಡಿಕೊಡಲು ಎಲ್ಲಾ ರಾಜ್ಯಸರ್ಕಾರಗಳು ಎ.ಪಿ. ಎಂ.ಸಿ ಕಾಯ್ದೆಯನ್ನೂ ಮಾರ್ಪಡಿಸಿವೆ. ಕರ್ನಾಟಕದಲ್ಲೂ ಜೆ.ಡಿ.ಎಸ್-ಭಾಜಪ ಸರ್ಕಾರ ಈ ಕ್ರಮ ಕೈಗೊಂಡಿದ್ದನ್ನು ಸ್ಮರಿಸಬಹುದು. ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಖಾಸಗಿ ವ್ಯಾಪಾರಿಗಳಿಗೆ ನೇರ ಪ್ರವೇಶ ನೀಡುವುದರ ಮೂಲ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕಾರ್ಪೋರೇಟ್ ಉದ್ದಿಮೆಗಳು ರೈತರಿಂದ ನೇರವಾಗಿ ಫಸಲನ್ನು ಖರೀದಿಸಬಹುದಾಗಿದೆ. ಗುತ್ತಿಗೆ ಕೃಷಿಯ ನೀತಿಯಡಿಯಲ್ಲಿ ಕಾರ್ಪೋರೇಟ್ ಉದ್ಯಮಿಗಳು ಭೂಮಿಯನ್ನು ಕೊಳ್ಳುವುದು ಮಾತ್ರವಲ್ಲದೆ, ರೈತರನ್ನೇ ಕೊಂಡುಕೊಳ್ಳುವ ಮಾರ್ಗ ಅನುಸರಿಸುತ್ತಿದ್ದಾರೆ. ಈ ಪ್ರಕ್ರಿಯೆಗೆ ಪೂರಕವಾಗಿ ೧೯೫೨ರ ಮುಂಗಡ ಒಪ್ಪಂದ (ನಿಯಂತ್ರಣ) ಕಾಯ್ದೆಯನ್ನೂ ಸರ್ಕಾರ ತಿದ್ದುಪಡಿ ಮಾಡಿ, ಬಜೆಟ್ ಅಧಿವೇಶನ ಪ್ರಾರಂಭವಾಗುವ ಎರಡು ವಾರಗಳ ಮುನ್ನ, ಫೆಬ್ರವರಿ ೧೨ರಂದು, ಆದೇಶ ಹೊರಡಿಸಿದೆ.

ಮುಂಗಡ ಒಪ್ಪಂದ ಪದ್ಧತಿಯಲ್ಲಿ ಎರಡು ರೀತಿಯ ವ್ಯವಹಾರ ನಡೆಯುತ್ತದೆ. ಮೊದಲನೆಯದು ಸ್ಥಳದಲ್ಲೇ ವ್ಯವಹಾರ ಕುದುರಿಸುವ ಪದ್ಧತಿ. ಇದರಲ್ಲಿ ಕೊಳ್ಳುವವರು ಮತ್ತು ಮಾರುವವರು ಒಂದು ಒಪ್ಪಂದಕ್ಕೆ ಬಂದು ಒಂದು ನಿರ್ದಿಷ್ಟ ವಾಯಿದಾ ಅವಧಿಯೊಳಗಾಗಿ ಹಣ ಪಾವತಿ ಮಾಡಿ ಪದಾರ್ಥ ಪೂರೈಕೆ ಮಾಡುವ ಒಪ್ಪಂದಕ್ಕೆ ಬರುತ್ತಾರೆ. ಮೊದಲು ಈ ಅವಧಿ ೧೧ ದಿನಗಳಿದ್ದುದು, ೨೦೦೬ ರಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ೩೦ ದಿನಗಳಿಗೆ ಏರಿಸಲಾಗಿದೆ. ಎರಡನೆಯ ಪದ್ಧತಿಯಲ್ಲಿ ಪದಾರ್ಥದ ಪೂರೈಕೆ ಮತ್ತು ಹಣ ಪಾವತಿ ಒಪ್ಪಂದಕ್ಕೆ ಬರಲಾದ ಒಂದು\ನಿರ್ದಿಷ್ಟ ಅವಧಿಯ ನಂತರದಲ್ಲಿ ನಡೆಯುತ್ತದೆ. ಇದಕ್ಕೆ ಮುಂಗಡ ಒಪ್ಪಂದವೆಂದು ಹೇಳಲಾಗುತ್ತದೆ. ೧೯೫೨ರಲ್ಲಿ ಈ ಕಾಯ್ದೆಯನ್ನು ಜಾರಿಗೊಳಿಸಿದಾಗ ಕೆಲವೇ ನಿರ್ದಿಷ್ಟ ಪದಾರ್ಥಗಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ ೧೯೯೮ರಲ್ಲಿ ಎನ್.ಡಿ.ಎ ಸರ್ಕಾರ ಈ ನಿರ್ಬಂಧಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಕಾಯ್ದೆಯನ್ನು ತಿದ್ದುಪಡಿ ಮಾಡಲು ಯತ್ನಿಸಿ ೨೦೦೩ರಲ್ಲಿ ರಾಜ್ಯಸಭೆಯಲ್ಲಿ ಅಂಗೀಕಾರವನ್ನೂ ಪಡೆದಿತ್ತು. "ಆಹಾರ ಪದಾರ್ಥಗಳ ಬೆಲೆಗಳಲ್ಲಿ ಉಂಟಾಗುವ ಏರಿಳಿತಗಳನ್ನು ನಿಯಂತ್ರಿಸಲು ಮತ್ತು ನಷ್ಟ ಸಂಭವಗಳನ್ನು ತಡೆಗಟ್ಟಲು ಈ ಕ್ರಮ ಅಗತ್ಯ" ಎಂದು ತನ್ನ ನೀತಿಯನ್ನು ಸಮರ್ಥಿಸಿಕೊಂಡಿದ್ದ ಭಾಜಪ ನೇತೃತ್ವದ ಸರ್ಕಾರ ಎಲ್ಲಾ ೫೪ ಪದಾರ್ಥಗಳ ಮೇಲಿದ್ದ ಮುಂಗಡ ಒಪ್ಪಂದದ ನಿರ್ಬಂಧಗಳನ್ನು ತೊಡೆದು ಹಾಕಿತ್ತು. ಆದರೆ

(೪೦ನೇ ಪುಟಕ್ಕೆ)

ಒಂದು ಮರು ವಿವೇಚನೆ

ಜಾತಿ ಮತ್ತು ಸಾಮಾಜಿಕ ತಾರತಮ್ಯ

ಇಂದು ಭಾರತದಲ್ಲಿ ಸಾಮಾಜಿಕ ವಿಜ್ಞಾನಕ್ಕಿಂತ ಹೆಚ್ಚಾಗಿ ಅಲ್ಲಿ ಐಡಿಯಾಲಜಿಯೇ ತುಂಬಿಕೊಂಡಿದೆ, ಹಾಗೆಯೇ ಜಾತಿಯನ್ನು ಸಾಮಾಜಿಕ ವಿಜ್ಞಾನಗಳು ಅರ್ಥೈಸುವುದಕ್ಕಿಂತಲೂ ಅಧಿಕವಾಗಿ ಇದೊಂದು ಐಡಿಯಾಲಜಿಯಾಗಿ ಕ್ರಿಯಾಶೀಲವಾಗಿದೆ. ಹೀಗಿರುವಲ್ಲಿ ದಲಿತ ಚಳವಳಿ ನಮ್ಮನ್ನು ಈ ಜಾತಿ ಐಡಿಯಾಲಜಿಯ ಬಗ್ಗೆ ಮರುಚಿಂತಿಸುವಂತೆ ಮಾಡಿದೆ. ಆದ್ದರಿಂದ ನಾನು ಸೂಚಿಸುವುದೇನೆಂದರೆ, ಜಾತಿ ಎನ್ನುವುದು ವೇದಕಾಲದಷ್ಟು ಹಳೆಯದೆಂದು ಗ್ರಹಿಸುವ ಬದಲು ಅದೊಂದು ಆಧುನಿಕ ವಾಸ್ತವ ಎಂದು ನೋಡಬೇಕಾಗುತ್ತದೆ. ಈ ಆಧುನಿಕ ಸಂದರ್ಭದಲ್ಲೇ ವಸಾಹತುಶಾಹಿ, ಪೌರಾಸ್ತ್ಯವಾದ ಮತ್ತು ರಾಷ್ಟ್ರೀಯವಾದವನ್ನು ನಾವು ಸಮಸ್ಯೀಕರಿಸಬೇಕಾಗಿದೆ. ಕಾರಣ ಈ ಮೂರು ಸಿದ್ಧಾಂತಗಳು ಬಾಹ್ಯ ಮೂಲವಾಗಿದ್ದು ಆಂತರಿಕವಾಗಿ ಜಾತಿಯನ್ನು ಸಂಘಟಿಸಿ, ಅದರ ಮೂಲಕ ನಿಯಂತ್ರಣವನ್ನು ಸಾಧಿಸುತ್ತವೆ.

ಡಾ. ಡೊಮಿನಿಕ್ ಡಿ.

ಈ ಮೇಲಿನ ವಿಷಯದ ಬಗ್ಗೆ ಕಾರ್ಯಾಗಾರವನ್ನು ದಿನಾಂಕ ೨೯-೪-೦೮ ರಿಂದ ೩೦-೪-೦೮ರಂದು ಕುವೆಂಪು ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಲಾಗಿತ್ತು. ಇದಕ್ಕೆ ಪ್ರಮುಖ ಕಾರಣವೂ ಇತ್ತು. ಎರಡು-ಮೂರು ತಿಂಗಳ ಹಿಂದೆ ಇದೇ ವಿ.ವಿ.ಯಲ್ಲಿ 'ಜಾತಿ'ಯ ಬಗ್ಗೆ ಮಹಾನ್ ಬಲಪಂಥೀಯ ಪಂಡಿತರು ಚರ್ಚೆ ನಡೆಸಿ, **ಜಾತಿ** ಎನ್ನೋದು ಭಾರತದಲ್ಲಿ ಇರಲಿಲ್ಲ, ಅದನ್ನು ಪಾಶ್ಚಾತ್ಯರು 'ಓರಿಯಂಟಲಿಸಂ' ಎನ್ನೋ ಪೌರಾಸ್ತ್ಯವಾದದ ಮೂಲಕ ಭಾರತೀಯರಿಗೆ ಸಂಘಟಿಸಿಕೊಟ್ಟಿದ್ದಾರೆ. ಹಾಗಾಗಿ ಯಾವುದೇ ರೀತಿಯ ಜಾತಿ ಪ್ರತಿಭಟನೆ ಅಥವಾ ಬ್ರಾಹ್ಮಣ್ಯದ ವಿರುದ್ಧದ ಪ್ರತಿರೋಧ ಅಂತಿಮವಾಗಿ ಪಶ್ಚಿಮದ ಯಜಮಾನ್ಯವನ್ನೇ ಮುಂದುವರಿಸುವಂಥದ್ದು. ಇಂಥ ಚಿಂತನೆಯ ಮಂಚೂಣಿಯಲ್ಲಿರುವ ವ್ಯಕ್ತಿಯೆಂದರೆ ರ್‍ಯಾಡಿಕಲ್ ಮಾರ್ಕ್ಸ್‌ವಾದಿಯೆಂದು ಹೆಸರುವಾಸಿಯಾಗಿದ್ದ ಹಾಗೂ ಇಂದು ಅದೇ ಪಶ್ಚಿಮದಲ್ಲಿರುವ ಬೆಲ್ಜಿಯಂನಲ್ಲಿ 'ಫಿಲಾಸಫಿ ಆಫ್ ರಿಲಿಜನ್' ಬೋಧಕರಾಗಿರುವ ಬಾಲು ಅಥವಾ ಬಾಲಗಂಗಾಧರ್. ಇವರೊಡನೆ ಹಿಂದುತ್ವವಾದಿಯಾದ ಎಂ ವಿ ನಾಡಕರ್ಣಿ.

ಇವರು ನೀನಾಸಂ, ಸೆಂಟರ್ ಫಾರ್ ಸ್ಟಡೀಸ್ ಆನ್ ಕಲ್ಚರ್ ಆ್ಯಂಡ್ ಸೊಸೈಟಿ, ಎಎಲ್‌ಎಫ್ ಮುಂತಾದ ಕಡೆ ತಮ್ಮ ಪ್ರಯೋಗಗಳನ್ನು ಮಾಡಿ, ಇಲ್ಲೆಲ್ಲಾ ಎದುರಾದ ಸವಾಲು ಮತ್ತು ಪ್ರಶ್ನೆಗಳಿಗೆ ನೇರ ಉತ್ತರಗಳನ್ನು ಕೊಡದೆ, ಅವಕ್ಕೆ ಭಿನ್ನವಾದ ಸಾಂಸ್ಥಿಕ ಸ್ವರೂಪವನ್ನು ಸಾರ್ವಜನಿಕ ವಿದ್ಯಾ ಕೇಂದ್ರವಾಗಿರುವ 'ಕುವೆಂಪು' ವಿ.ವಿ.ಯಲ್ಲಿ ಆರಂಭಿಸಿದ್ದಾರೆ. ಅಂದರೆ ಅಂತಿಮವಾಗಿ ತಮ್ಮ ವೈಚಾರಿಕ ಪ್ರಯೋಗ ಕೇಂದ್ರವನ್ನಾಗಿ ಆಯ್ದುಕೊಂಡದ್ದು ಈ 'ಕುವೆಂಪು ವಿ.ವಿ.ಯನ್ನೇ! ಅಲ್ಲದೆ, ಒಂದುಗೂಡಿದ ಇವರೆಲ್ಲಾ, ತಮ್ಮ ಆಪ್ತ ಮಿತ್ರರನ್ನು ಅದೇ ವಿ.ವಿ.ಯಲ್ಲಿ ಗುರುತಿಸಿಕೊಂಡು, ಅವರಿಗೆ ಪಾಶ್ಚಾತ್ಯ ಪ್ರವಾಸಗಳ ಆಮಿಷವೊಡ್ಡಿ, ಕೊನೆಗೆ ಕರ್ನಾಟಕದಲ್ಲಿ ಈ ಹಿಂದೆ ಆಡಳಿತ ವಹಿಸಿದ್ದ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ಮೂಲಕ ಅಂದಿನ ಉನ್ನತ ಶಿಕ್ಷಣ ಮಂತ್ರಿಯಾಗಿದ್ದ ಶಂಕರಮೂರ್ತಿಯವರೊಡನೆ ಒಪ್ಪಂದ ಮಾಡಿಕೊಂಡು ೪೮ ಕೋಟಿ ರೂಗಳ ಅನುದಾನವನ್ನು ಸಹ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇದಾದ ನಂತರ ಕುವೆಂಪು ವಿ.ವಿ.ಯಲ್ಲಿ **ಕರ್ನಾಟಕ ಅಕಾಡೆಮಿ ಆಫ್ ಸೋಶಿಯಲ್ ಸೈನ್ಸಸ್** ಎಂಬ ವಿಭಾಗವನ್ನು ತೆರೆಯುವ ಯೋಜನೆಗೆ ಪೂರ್ವಭಾವಿಯಾಗಿ ಜಾತಿಯ ಬಗ್ಗೆ ತಮ್ಮ ವಿಧ್ವಂಸಕಾರಿ ಚಿಂತನೆಗಳನ್ನು ಚರ್ಚಿಸಿದ್ದಾರೆ. ಈ ಸಾಂಸ್ಕೃತಿಕ ರಾಜಕಾರಣದ ಹಿನ್ನೆಲೆಯಲ್ಲಿ 'ಜಾತಿ ಮತ್ತು ಸಾಮಾಜಿಕ ತಾರತಮ್ಯ ಕುರಿತ ಮರುವಿವೇಚನೆ' ಎಂಬ ರಾಷ್ಟ್ರ ಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಂಡದ್ದು.

ಕಾರ್ಯಾಗಾರದ ಉದ್ಘಾಟಕರಾಗಿ ಬಂದವರು ಪ್ರೊ. ಕಾಂಚಾ ಐಲಯ್ಯನವರು. ಅವರು ತಮ್ಮ ಹಿಂದಿನ ಪಾಲಿಮಿಕಲ್ ಸ್ಟೈಲ್‌ನಲ್ಲೇ ಉದ್ಘಾಟನಾ ಭಾಷಣವನ್ನು ಆರಂಭಿಸಿದರು: "ಕರ್ನಾಟಕದಲ್ಲಿ ಶೂದ್ರ ಶಕ್ತಿಯ ಸಂಕೇತವಾಗಿರುವ ಕುವೆಂಪು ವಿ.ವಿ.ಯಲ್ಲಿ ಜಾತಿ ಮತ್ತು ಸಾಮಾಜಿಕ ತಾರತಮ್ಯದ ಕುರಿತು ಚರ್ಚಿಸಲು ನನಗೆ ಅತೀವ ಸಂತೋಷವಾಗುತ್ತಿದೆ. ನಾವು ಮತ್ತು ನಮ್ಮ ಸಾಮಾಜಿಕ ವ್ಯವಸ್ಥೆ ರೂಪುಗೊಂಡಿರುವುದೇ ಕಾಸ್ಟ್ ಎನ್ನೋ ಜಾತಿಯಿಂದ. ಆದ್ದರಿಂದ ನಮ್ಮ ಎಲ್ಲಾ ಪಬ್ಲಿಕ್ ನಡಾವಳಿ ಈ ಜಾತಿಯಿಂದಲೇ ಪ್ರಭಾವಿತಗೊಂಡಿರುವುದನ್ನು ತಪ್ಪಿಸಲಾದೀತೆ? ಈ ಮರ್ಮವನ್ನರಿತ ಅನೇಕ



ಮಂದಿ ಪ್ರವಾದಿಗಳು. ಅದಕ್ಕೆ ನೇರ ಸವಾಲು ಮತ್ತು ಪ್ರತಿರೋಧವನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ.

ಅಂಥ ಐದು ಮಂದಿ ಪ್ರವಾದಿಗಳು ನಮಗೆ ಚರಿತ್ರೆಯಲ್ಲಿ ಸಿಗುತ್ತಾರೆ. ಈ ಸಾಲಿನಲ್ಲಿ ನಿಲ್ಲುವ ಮೊದಲ ಪ್ರವಾದಿಯೆಂದರೆ ಗೌತಮ ಬುದ್ಧ. ಎರಡನೆಯ ಪ್ರವಾದಿ ಜೀಸಸ್. ಬುದ್ಧ ದೈವಕ್ಕೆ ಒಂದು ಹೆಸರು ನೀಡದೆ ಅದನ್ನು ತಾತ್ವಿಕ ಶಕ್ತಿಯನ್ನಾಗಿ ನಮ್ಮ ಮುಂದಿಟ್ಟ. ಹಾಗೆಯೇ ಜೀಸಸ್ ಸಹ ದೈವಕ್ಕೆ ಅಗೋಚರ ಮತ್ತು ಚರ್ಚಿಸುವಂಥ ದೈವವನ್ನು ನಮ್ಮ ಮುಂದಿಟ್ಟ. ಈ ಕಲ್ಪನೆಯ ಮಹತ್ವವಾದರೂ ಏನು? ಅಲ್ಲೀ ತನಕ ಚರಿತ್ರೆಯಲ್ಲಿ ದೈವ ವಾಸ್ತವವಾಗಿದ್ದು ಅದೆಂದು ಅಮೂರ್ತ ಸ್ಥಿತಿಯಲ್ಲಿ ಗೋಚರಿಸಿರಲಿಲ್ಲ. ಇವರಿಬ್ಬರ ನಂತರ ಬಂದ ಪ್ರವಾದಿಯೆಂದರೆ ಮಹಮದ್ ಪೈಗಂಬರ್. ಈತ ದೈವವನ್ನು ಮತ್ತೂ ತಾತ್ವಿಕಗೊಳಿಸಿದ್ದಲ್ಲದೆ ಅದನ್ನು ಅಲೌಕಿಕ ಸ್ವರೂಪಕ್ಕೇರಿಸಿದ. ಮೌಖಿಕವಾಗಿದ್ದ ದೈವ ಪರಿಕಲ್ಪನೆಯನ್ನು ಲಿಖಿತ ರೂಪಕ್ಕಿಳಿಸಿದ. ಆದ್ದರಿಂದ ಬರಹ ಇಸ್ಲಾಂಗೆ ಪವಿತ್ರವಾದುದು. ನಾಲ್ಕನೆಯ ಪ್ರವಾದಿಯೆಂದರೆ, ಕಾರ್ಲ್ ಮಾರ್ಕ್ಸ್. ಮೇಲಿನವರು ಮಂಡಿಸಿದ ತಾತ್ವಿಕ ಮತ್ತು ಅಲೌಕಿಕ ದೈವವನ್ನು ಕಾರ್ಲ್ ಮಾರ್ಕ್ಸ್ ಮಾನವೀಕರಿಸಿ, ಅದನ್ನು ಮಾನವ ವ್ಯಕ್ತಿಯನ್ನಾಗಿಸಿದ. ಈತನ ತರುವಾಯದ ಐದನೆಯ ಪ್ರವಾದಿಯೆಂದರೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್. ಇವರು ಜಾತಿ ಮತ್ತು ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಮತ್ತೆ ಬುದ್ಧನತ್ತ ತಿರುಗಿ ಒಂದು ಆಧ್ಯಾತ್ಮಿಕ ಅಸ್ತ್ರವನ್ನು ನಮಗೆ ನೀಡಿದರು.

ಹೀಗೆ ಕಾಂಚ ಐಲಯ್ಯನವರು ತಮ್ಮ ಭಾಷಣವನ್ನು ಮುಂದುವರಿಸಿದಂತೆ, ಪ್ರೇಕ್ಷಕರಲ್ಲಿದ್ದ ವ್ಯಕ್ತಿಯೊಬ್ಬರು, "ಹಾಗಾದರೆ ಮಹಾತ್ಮ ಗಾಂಧಿಯವರು ಪ್ರವಾದಿಯಲ್ಲವೇ?" ಎಂದು ತನ್ನ ಅಸಹನೆಯನ್ನು ಕೂಡಲೇ ವ್ಯಕ್ತಪಡಿಸಿದರು. "ಪ್ರವಾದಿ ಎಂದು ಅಳೆಯುವ ಮಾನದಂಡ ಯಾವುದು? ಒಬ್ಬ ಪ್ರವಾದಿಯಾದವನು ಕಡುಬಡವರ ಪರವಾಗಿ ನಿಂತು ಅವರ ವಿಮೋಚನೆಗೆ ತನ್ನ ವ್ಯಕ್ತಿತ್ವವನ್ನು ಮುಡಿಪಾಗಿಡುತ್ತಾನೆ. ಈ ಅಳತೆಗೆ ಗಾಂಧಿ ನಿಲುಕಲಾರ. ಆತ ಎಂದೂ ಕಟ್ಟಕಡೆಯ ವ್ಯಕ್ತಿಯ ವಿಮೋಚನೆಯನ್ನು ಕೈಗೊಳ್ಳಲಿಲ್ಲ" ಎಂದು ಉತ್ತರ ನೀಡಿ ತಮ್ಮ ಭಾಷಣವನ್ನು ಮುಂದುವರೆಸಿದರು ಕಾಂಚ ಐಲಯ್ಯ.

"ಜಗತ್ತಿನಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿ ಬೇರೂರಬೇಕಾದರೆ ಇಂಥ ಜ್ಞಾನೋದಯಗೊಂಡ ಬೌದ್ಧಿಕ ವ್ಯಕ್ತಿತ್ವಗಳು ನಮಗೆ ಇಂದು ಅಗತ್ಯವಾಗಿದ್ದಾರೆ. ಆದರೆ ಭಾರತದಲ್ಲಿ ಅಂಥ ವ್ಯಕ್ತಿತ್ವಗಳನ್ನು ಮರೆಮಾಚಲಾಗಿದೆ. ಆದ್ದರಿಂದಲೇ ನಮ್ಮ ಗ್ರಾಮರ್ ತರಗತಿಗಳು ಆರಂಭವಾಗುವುದೇ, 'ರಾಮ ಕಿಲ್ಡ್ ರಾವಣ' ಎಂದು. ಇಂಥ ವ್ಯಾಕರಣದಲ್ಲಿ ಪಳಗಿದ ಮಕ್ಕಳು ಪ್ರಜಾಪ್ರಭುತ್ವವನ್ನು ಉಳಿಸುವುದಾದರೂ ಹೇಗೆ?... ಆದರೆ ನಮ್ಮ ದಲಿತ–ಬಹುಜನ ಸಂಸ್ಕೃತ ಜೀವ ಪೋಷಕವಾಗಿದೆ. ಇದನ್ನು ಮೆಟ್ಟಲೆಂಬಂತೆ ಜಾತಿ ನಮ್ಮೆಲ್ಲಾ ವೈಚಾರಿಕತೆಯನ್ನು ಕೊಲ್ಲುತ್ತಿದೆ. ಅಂದರೆ ಕೊಲ್ಲುವುದೇ ನಮ್ಮ ಕಾಯಕವಾಗಿಬಿಟ್ಟಿದೆ. ಯೌವನಕ್ಕೆ ಕಾಲಿಡುತ್ತಿದ್ದ ಶೂರ್ಪನಖಿ, ಮಿಶ್ರತಳಿಯ ರಾಮನಿಗೆ 'ಐ ಲವ್ ಯು' ಎಂದಿದಕ್ಕೆ ಆತ ಮಾಡಿದ್ದಾದರೂ ಏನು?

ಆತ ತನ್ನ ತಮ್ಮನಲ್ಲಿಗೆ ಕಳುಹಿಸುತ್ತಾನೆ. ತಮ್ಮ ಯಾವುದೇ ಕಾರಣ ನೀಡದೆ ಆಕೆಗೆ ಅವಮಾನ ಮಾಡುತ್ತಾನೆ. ಆದರೆ ರಾವಣ ಸೀತೆಗೆ ಅಂಥದ್ದನ್ನು ಮಾಡಿದನೇ?

"ಜಗತ್ತಿನಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿ ಬೇರೂರಬೇಕಾದರೆ ಇಂಥ ಜ್ಞಾನೋದಯಗೊಂಡ ಬೌದ್ಧಿಕ ವ್ಯಕ್ತಿತ್ವ ಗಳು ನಮಗೆ ಇಂದು ಅಗತ್ಯವಾಗಿದ್ದಾರೆ. ಆದರೆ ಭಾರತದಲ್ಲಿ ಅಂಥ ವ್ಯಕ್ತಿತ್ವಗಳನ್ನು ಮರೆ ಮಾಚಲಾಗಿದೆ. ಆದ್ದರಿಂದಲೇ ನಮ್ಮ ಗ್ರಾಮರ್ ತರಗತಿಗಳು ಆರಂಭವಾಗುವುದೇ, 'ರಾಮ ಕಿಲ್ಡ್ ರಾವಣ' ಎಂದು. ಇಂಥ ವ್ಯಾಕರಣ ದಲ್ಲಿ ಪಳಗಿದ ಮಕ್ಕಳು ಪ್ರಜಾಪ್ರಭುತ್ವವನ್ನು ಉಳಿಸುವು ದಾದರೂ ಹೇಗೆ?... ಆದರೆ ನಮ್ಮ ದಲಿತ–ಬಹುಜನ ಸಂಸ್ಕೃತ ಜೀವ ಪೋಷಕವಾಗಿದೆ. ಇದನ್ನು ಮೆಟ್ಟಲೆಂಬಂತೆ ಜಾತಿ ನಮ್ಮೆಲ್ಲಾ ವೈಚಾರಿಕತೆಯನ್ನು ಕೊಲ್ಲುತ್ತಿದೆ. ಅಂದರೆ ಕೊಲ್ಲುವುದೇ ನಮ್ಮ ಕಾಯಕವಾಗಿಬಿಟ್ಟಿದೆ. ಯೌವನಕ್ಕೆ ಕಾಲಿಡುತ್ತಿದ್ದ ಶೂರ್ಪನಖಿ, ಮಿಶ್ರತಳಿಯ ರಾಮನಿಗೆ 'ಐ ಲವ್ ಯು' ಎಂದಿದಕ್ಕೆ ಆತ ಮಾಡಿದ್ದಾದರೂ ಏನು? ಆತ ತನ್ನ ತಮ್ಮನಲ್ಲಿಗೆ ಕಳುಹಿಸುತ್ತಾನೆ. ತಮ್ಮ ಯಾವುದೇ ಕಾರಣ ನೀಡದೆ ಆಕೆಗೆ ಅವಮಾನ ಮಾಡುತ್ತಾನೆ. ಆದರೆ ರಾವಣ ಸೀತೆಗೆ ಅಂಥದ್ದನ್ನು ಮಾಡಿದನೇ?

...ಆ ಕಳ್ಳ ಕೃಷ್ಣ ... ಬೆಣ್ಣೆ ಕದಿಯುತ್ತಾನೆ. ಹೀಗೆ ಭಾರತೀಯ ದೈವಗಳೆಲ್ಲಾ ಇಂಥ ರಾಮ–ಕೃಷ್ಣರ ವ್ಯಕ್ತಿತ್ವದವರೇ ಆಗಿದ್ದಾರೆ. ಆಧುನಿಕ ಜಗತ್ತಿನಲ್ಲಿ ಅಗತ್ಯವಾದ 'Knowledge Society"ಗೆ ಇಂಥ ದೈವ ಮತ್ತು ಜಾತಿ ಕಲ್ಪನೆ ಮಾರಕವಾದುದು. ಇಂತೆಡೆ ದುಡಿಮೆಯನ್ನು ಮತ್ತು ಆ ದುಡಿಮೆಯಿಂದ ಉದಯಿಸುವ ವಿಜ್ಞಾನವನ್ನು ಅಪಹರಿಸಲಾಗಿದೆ. ಋಗ್ವೇದದಿಂದ ಹಿಡಿದು ಆಧುನಿಕ ಎಂ.ಎನ್. ಶ್ರೀನಿವಾಸ್‌ನ ತನಕ ಮಹಿಳೆಯರ ವಿಜ್ಞಾನವನ್ನು ಅಮುಕಲಾಗಿದೆ. ಆದರೆ ಬುದ್ಧ–ಜೀಸಸ್–ಮಹಮದ್–ಕಾರ್ಲ್ ಮಾರ್ಕ್ಸ್–ಅಂಬೇಡ್ಕರ್ ಇದಕ್ಕೆ ತದ್ವಿರುದ್ಧವಾಗಿ ವಿಜ್ಞಾನ ತಂತ್ರಜ್ಞಾನವನ್ನು ಪೋಷಿಸುತ್ತಾರೆ."

ಹೀಗೆ ದಲಿತ ಬಹುಜನರಲ್ಲಿ ಹುದುಗಿರುವ ವಿಜ್ಞಾನವನ್ನು ಹಲವಾರು ಉದಾಹರಣೆಗಳ ಮೂಲಕ ವಿವರಿಸಿ ಹೇಗೆ ಬ್ರಾಹ್ಮಣ್ಯ ಮತ್ತು ಜಾತಿ ಇಂಥ ವಿಜ್ಞಾನವನ್ನು ನಾಶಪಡಿಸುತ್ತದೆ ಎಂದು ಹೇಳುತ್ತಾ, ನಮ್ಮ ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ಬ್ರಾಹ್ಮಣ–ಬನಿಯಾಗಳಿಗೆ ಪ್ರವೇಶ ನೀಡದೆ ದಲಿತ–ಬಹುಜನ ಸಮುದಾಯಗಳಿಗೆ ಪ್ರವೇಶ ನೀಡಬೇಕಾಗಿದೆ. ಕಾರಣ ಈ ದಲಿತ–ಬಹುಜನ ಸಮುದಾಯಗಳಲ್ಲಿ ಎಲ್ಲವನ್ನೂ ಒಳಗೊಳ್ಳುವುದಲ್ಲದೆ, ಎಲ್ಲವನ್ನು ಸಮಾನತೆಯಲ್ಲಿ ಬಂಧಿಸುತ್ತದೆ. ಆದರೆ ಜಾತಿ ಅಸಮಾನತೆಯನ್ನು ಸ್ಥಾಪಿಸುತ್ತದೆ. ಆದ್ದರಿಂದ ಈ ದಲಿತ–ಬಹುಜನ ಸಮುದಾಯಗಳಿಂದಲೇ ನಿಜವಾದ ವಿಜ್ಞಾನ ಮತ್ತು ವೈಚಾರಿಕತೆ ಬೆಳೆಯುವುದು ಎಂದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ನೆರೆದಿದ್ದವರೆಲ್ಲಾ ಉತ್ಸಾಹಗೊಂಡು ಕರತಾಡನ ಮಾಡಿದರು.

ಈ ಉದ್ಘಾಟನಾ ಭಾಷಣ ಮುಗಿಯುತ್ತಿದ್ದಂತೆ ಕಾರ್ಯಾಗಾರದ ಮೊದಲ ಗೋಷ್ಠಿ ಆರಂಭವಾಯಿತು. ಈ ಗೋಷ್ಠಿಯ ವಿಷಯ 'ವಸಾಹತುಶಾಹಿ, ಪೌರಾಸ್ತ್ಯವಾದ ಮತ್ತು ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಜಾತಿ ನಿರ್ವಚನ'. ಇದನ್ನು ಮಂಡಿಸಿದವರು ಡಾ. ಜಿ. ಅಲೋಶಿಯಸ್, ಅಥಿತಿ ಪ್ರಾಧ್ಯಾಪಕರು, ದೆಹಲಿ ವಿ.ವಿ. ಇವರು ತಮ್ಮ ವಿಚಾರಗಳನ್ನು ಮಂಡಿಸುತ್ತಾ ಹೇಗೆ ವಸಾಹತುಶಾಹಿ ಸಂಸ್ಕೃತ ಪರಂಪರೆಯ ವರ್ಣವ್ಯವಸ್ಥೆಗೆ ಮರುಜೀವ ಕೊಟ್ಟಿತು ಎಂಬುದರತ್ತ ಸಭಿಕರ ಗಮನ ಸೆಳೆದರು. ಹಾಗೆಯೇ ಮುಂದುವರೆದು, ಇಂದು ಭಾರತದಲ್ಲಿ ಸಾಮಾಜಿಕ ವಿಜ್ಞಾನಕ್ಕಿಂತ ಹೆಚ್ಚಾಗಿ ಅಲ್ಲಿ ಐಡಿಯಾಲಜಿಯೇ ತುಂಬಿಕೊಂಡಿದೆ, ಹಾಗೆಯೇ ಜಾತಿಯನ್ನು ಸಾಮಾಜಿಕ ವಿಜ್ಞಾನಗಳು ಅರ್ಥೈಸುವುದಕ್ಕಿಂತಲೂ ಅಧಿಕವಾಗಿ ಅದೊಂದು ಐಡಿಯಾಲಜಿಯಾಗಿ ಕ್ರಿಯಾಶೀಲವಾಗಿದೆ. ಹೀಗಿರುವಲ್ಲಿ ದಲಿತ ಚಳವಳಿ ನಮ್ಮನ್ನು ಈ ಜಾತಿ ಐಡಿಯಾಲಜಿಯ ಬಗ್ಗೆ ಮರುಚಿಂತಿಸುವಂತೆ ಮಾಡಿದೆ.

ಆದ್ದರಿಂದ ನಾನು ಸೂಚಿಸುವುದೇನೆಂದರೆ, ಜಾತಿ ಎನ್ನುವುದು ವೇದಕಾಲದಷ್ಟು ಹಳೆಯದೆಂದು ಗ್ರಹಿಸುವ ಬದಲು ಅದೊಂದು ಆಧುನಿಕ ವಾಸ್ತವ ಎಂದು ನೋಡಬೇಕಾಗುತ್ತದೆ. ಈ ಆಧುನಿಕ ಸಂದರ್ಭದಲ್ಲೇ ವಸಾಹತುಶಾಹಿ, ಪೌರಾಸ್ತ್ಯವಾದ ಮತ್ತು ರಾಷ್ಟ್ರೀಯವಾದವನ್ನು ನಾವು ಸಮಸ್ಯೀಕರಿಸಬೇಕಾಗಿದೆ. ಕಾರಣ ಈ ಮೂರು ಸಿದ್ಧಾಂತಗಳು ಬಾಹ್ಯಮೂಲವಾಗಿದ್ದು ಆಂತರಿಕವಾಗಿ ಜಾತಿಯನ್ನು ಸಂಘಟಿಸಿ, ಅದರ ಮೂಲಕ ನಿಯಂತ್ರಣವನ್ನು ಸಾಧಿಸುತ್ತವೆ. ಈ ಹಿನ್ನಲೆಯಲ್ಲಿ ಕ್ಯಾಸ್ಟ್ ಎನ್ನುವುದು ವಸಾಹತುಶಾಹಿಯ ಸಂಘಟನೆಯೇ ಆಗಿದೆ. ಇದರಲ್ಲಿ ಬಾಹ್ಯ ಮತ್ತು ಆಂತರಿಕ ಶಕ್ತಿಗಳೆರಡು ಸಮಾನವಾಗಿ ಪಾಲ್ಗೊಂಡಿವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ವಸಾಹತುಶಾಹಿ ಜಾತಿಯನ್ನು ಮರುಸಂಘಟಿಸಿದರೆ, ಪೌರಾಸ್ತ್ಯವಾದವು ಹಾಗೆ ಸಂಘಟಿತವಾದದ್ದನ್ನು ಪ್ರತಿಷ್ಠಾಪಿಸುತ್ತದೆ ಮತ್ತು ರಾಷ್ಟ್ರೀಯವಾದವು ಅದನ್ನು ಪವಿತ್ರೀಕರಿಸುತ್ತದೆ.

ಬ್ರಿಟಿಷರು ಇಲ್ಲಿ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವಾಗ ಅವರು ಆಂತರಿಕವಾಗಿ ಇಲ್ಲಿನ ಸಾಂಪ್ರದಾಯಿಕ ನೀತಿಗಳಲ್ಲಿ "Non-Interference" ಮಾಡದೆ, ಅದನ್ನು ಹಾಗೆಯೇ ಬೆಳೆಯಗೊಡುತ್ತಾರೆ. ಹೀಗೆ ಜಾತಿ 'ಪೊಲಿಟಿಕಲ್ ಎಕಾನೊಮಿ'ಯಲ್ಲಿ ನಿರ್ಧಾರಾತ್ಮಕ ಪಾತ್ರ ವಹಿಸುವಂತಾಯಿತು. ಈ ವಿಧಾನದ ಮೂಲಕ ಆಸ್ತಿ ಹಕ್ಕನ್ನು ಜಾತಿ ನೀತಿಗೆ ಪರಿವರ್ತಿಸಲಾಗುತ್ತದೆ. ಇದಲ್ಲದೆ, ಬ್ರಿಟಿಷರು ಜಾತಿಗೊಂದು ಕಾನೂನಾತ್ಮಕ ಚೌಕಟ್ಟನ್ನು ನೀಡುತ್ತಾರೆ. ಅಂದರೆ, ನೇಟಿವ್ ಜನ ಸಮುದಾಯಗಳನ್ನು ಕಾನೂನಾತ್ಮಕವಾಗಿ 'ಹಿಂದೂ' ಧರ್ಮೀಯರನ್ನಾಗಿ ಪರಿವರ್ತಿಸಲಾಗುತ್ತದೆ. ಹೀಗೆ ಜಾತಿಗೆ ವೇದಗಳ ಆಧಾರವನ್ನು ಒದಗಿಸುತ್ತಾ, ಜನಸಮುದಾಯಗಳನ್ನು 'ಹಿಂದೂ' ಎನ್ನುವುದರ ಮೂಲಕ ಏಕೀಕರಿಸಿ ಬ್ರಾಹ್ಮಣ್ಯಕ್ಕೆ ಸಿಲುಕಿಸಲಾಯಿತು.

ಹೀಗೆ [illegible] ಬದುಕಿನ ಕ್ರಮಗಳಲ್ಲಿನ ಸಂಸ್ಕೃತಿಯನ್ನು ಬ್ರಾಹ್ಮಣೀಕರಿಸಿದಲ್ಲದೆ, ಅಲ್ಲಿನ ಆರ್ಥಿಕತೆಯನ್ನು ರೈತಾಪಿಯನ್ನಾಗಿಸಿತು. ಹೀಗೆ ಹೊಸತಾದ ಬ್ರಾಹ್ಮಣ ಪ್ರಾಬಲ್ಯ ಪಾನ್ ಇಂಡಿಯನ್ ರೂಪ ಪಡೆದು ರಾಷ್ಟ್ರೀಯತೆಯ ಮೂಲಕ ಪ್ರತಿಷ್ಠಾಪನೆಗೊಳ್ಳುತ್ತದೆ. ಈ ಪಾನ್ ಇಂಡಿಯನ್ ಸ್ಪೇಸ್-ಟೈಮ್ ಮೂಲಕ ಜಾತಿ/ವರ್ಣ ಎನ್ನೋದು ಹಿಂದೂವಾಗಿ ಜನಪ್ರಿಯತೆಯನ್ನು ಕಂಡುಕೊಳ್ಳುತ್ತದೆ. ಅಂದರೆ ಇಲ್ಲೊಂದು ಭ್ರಮಾತ್ಮಕ ಜಗತ್ತನ್ನು ಸೃಷ್ಟಿಸಿ, ಅದಕ್ಕೊಂದು ಅಧಿಕಾರ/ಶಕ್ತಿಯನ್ನು ನೀಡುವ ಮೂಲಕ ಜಾತಿಯನ್ನು ಉಳಿಸಿಕೊಳ್ಳಲಾಗಿದೆ.

ಹೀಗೆ ಉಳಿಸಿಕೊಂಡದ್ದಕ್ಕೆ ಭೂತ ಸುವರ್ಣ ಚೌಕಟ್ಟಿನ ಚರಿತ್ರೆಯನ್ನು ನೀಡುವ ಮೂಲಕ ಪೌರಾಸ್ತ್ಯವಾದ ಗಟ್ಟಿಯಾಗಿ ಬ್ರಾಹ್ಮಣೀಕರಣಕ್ಕೊಳಪಡುತ್ತದೆ. ಇದನ್ನು ರಾಷ್ಟ್ರೀಯತೆಯು ಸಾವಯವ ಹೆಣಿಗೆಯಲ್ಲಿ ಜನ ಸಮುದಾಯಗಳಲ್ಲಿ ಬೇರೂರಿಸುತ್ತದೆ. ಇಲ್ಲೇ ನಾನ್-ವೈದಿಕವಾದುದನ್ನೂ ಸಹ 'ಹಿಂದೂ' ಎನ್ನೂ ಛತ್ರಿಯಡಿ ತರಲಾಗುತ್ತದೆ. ಇದನ್ನು ಸಂಪ್ರದಾಯದ ಮೂಲಕ ಶಿಸ್ತಿಗೆ ಒಳಪಡಿಸಲಾಗುತ್ತದೆ. ಹೀಗೆ ಗೋಪಾಲ್ ಗುರು ಹೇಳುವಂತೆ ಬ್ರಾಹ್ಮಣನನ್ನು ಸಿದ್ಧಾಂತಿಯನ್ನಾಗಿಯೂ, ಶೂದ್ರನನ್ನು ಎಂಪಿರಿಕಲ್ ಆಗಿಯೂ ಸಂಘಟಿಸಿಕೊಡಲಾಗುತ್ತದೆ. ಆದ್ದರಿಂದ ಉದ್ಘಾಟನಾ ಭಾಷಣದಲ್ಲಿ ಕಾಂಚ ಐಲಯ್ಯನವರು ಹೇಳಿದಂತೆ 'ದಲಿತ-ಬಹುಜನ ಸಮುದಾಯಗಳಲ್ಲಿ ಎಲ್ಲವನ್ನೂ ಒಳಗೊಳ್ಳುವುದಲ್ಲದೆ, ಎಲ್ಲವನ್ನು ಸಮಾನತೆಯಲ್ಲಿ ಬಂಧಿಸುತ್ತದೆ' ಎನ್ನುವುದು ಸಾಧಿತವಾಗಬೇಕಾದರೆ, ಜಾತಿ ಎನ್ನೂ ಭ್ರಮಾತ್ಮಕ ಶಕ್ತಿಯನ್ನು ಛಿದ್ರೀಕರಿಸಬೇಕಾಗುತ್ತದೆ. ಆಗಲೇ ಆಧುನಿಕತೆ/ಪ್ರಗತಿ ಎನ್ನೋದು ನಮ್ಮದಾಗುತ್ತದೆ ಇಲ್ಲವಾದರೆ ಅದು ಬ್ರಹ್ಮಣ್ಯದ ಹಿಡಿತದಲ್ಲಿ ಮತ್ತಷ್ಟು ಸಂಕಟಕ್ಕೆ ಕಾರಣವಾಘುತ್ತದೆ ಎನ್ನುವ ಗಂಭೀರ ಚಿಂತನೆಯ ಮೂಲಕ ಚರ್ಚೆಗೆ ಆಹ್ವಾನಕೊಡುತ್ತ ಜೆ.ಅಲೋಶಿಯಸ್ ತಮ್ಮ ವಿಚಾರಗಳನ್ನು ಸುಲಲಿತವಾಗಿ ಮಂಡಿಸಿದರು.

ಎರಡನೇ ಗೋಷ್ಠಿಯಲ್ಲಿ ಪ್ರೊ.ರಹಮತ್, ಹಂಪಿ ವಿ.ವಿ., ಮುಸ್ಲಿಂ ಸಮುದಾಯದೊಳಗಿನ ಬಹುರೂಪಿ ವಾಸ್ತವಗಳು ಮತ್ತು ಜಾತಿ ವ್ಯವಸ್ಥೆಯ ಬಗ್ಗೆ ಪ್ರಬಂಧ ಮಂಡಿಸಿದರು. ಹೀಗೆ ಮಂಡಿಸುವಾಗ 'ಮುಸ್ಲಿಂ ಸಮುದಾಯ sumAru ೧೦೦೦ ವರ್ಷಗಳ ಸಹಬಾಳ್ವೆಯನ್ನು ಬಹುಜಾತಿಗಳು ನಡೆಸಿಕೊಂಡು ಬಂದಿವೆ. ಅನೇಕ ಸಮುದಾಯಗಳು ತಮ್ಮ ಪೂರ್ವಾಶ್ರಮದ ಜಾತಿ ಗುರುತುಗಳನ್ನು ಇಸ್ಲಾಂಗೆ ಕೊಂಡೊಯ್ದಿವೆ' ಎನ್ನುತ್ತಾ, ಜಾತಿಯ ಮೂರು ಮುಖ್ಯ ಲಕ್ಷಣಗಳನ್ನಿಟ್ಟುಕೊಂಡು ಅವರು ಭಾರತೀಯ ಮುಸ್ಲಿಂ ಸಮುದಾಯಗಳನ್ನು ಅರ್ಥೈಸಿದರು:೧. ಜಾತಿ ಎನ್ನುವುದು ಹುಟ್ಟಿನಿಂದ ಬರುವಂಥದ್ದು, ೨) ಜಾತಿಯ ಮತ್ತೊಂದು ಲಕ್ಷಣ - ಒಳಗೊಳ್ಳುವಿಕೆ ಮತ್ತು ತಿರಸ್ಕರಿಸುವಿಕೆ,

೩) ಅದರೊಳಗೆ ಅಡಗಿರುವ ತಾರತಮ್ಯ. ಉದಾಹರಣೆಗೆ ವೈವಾಹಿಕ ಸಂಬಂಧಗಳು ಎಂದೂ ಸಹ ಒಂದು ಸಮುದಾಯದೊಳಗೇ ಆಗುತ್ತಿರುವುದು.

ಈ ಮೂರು ಲಕ್ಷಣಗಳೂ ಮುಸ್ಲಿಂ ಸಮುದಾಯದಲ್ಲೂ ಕಾಣುತ್ತವೆಯಲ್ಲವೆ? ಆದರೆ ಇದನ್ನು ಗಮನಿಸದೇ ಅದನ್ನು ಏಕರೂಪಿ ಸಮುದಾಯ ಎಂದು ಬಿಂಬಿಸಲಾಗಿದೆ. ತಾವು ಭಯೋತ್ಪಾದನೆ ವಿರುದ್ಧ ಇದ್ದೇವೆ ಎನ್ನುವಾಗಲೂ ಸಹ ಅಂಥ ಏಕರೂಪಿ ಸಮುದಾಯವನ್ನು ಕಟ್ಟುತ್ತಿರುತ್ತೇವೆ. ಆದರೆ ಅದರೊಳಗೆ ಶಿಯಾ, ಸುನ್ನಿ ಮುಂತಾದ

ಬದುಕಿನ ಕ್ರಮಗಳಲ್ಲಿನ ಸಂಸ್ಕೃತಿಯನ್ನು ಬ್ರಾಹ್ಮಣೀಕರಿಸಿದಲ್ಲದೆ, ಅಲ್ಲಿನ ಆರ್ಥಿಕತೆಯನ್ನು ರೈತಾಪಿಯನ್ನಾಗಿಸಿತು. ಹೀಗೆ ಹೊಸತಾದ ಬ್ರಾಹ್ಮಣ ಪ್ರಾಬಲ್ಯ ಪಾನ್ ಇಂಡಿಯನ್ ರೂಪ ಪಡೆದು ರಾಷ್ಟ್ರೀಯತೆಯ ಮೂಲಕ ಪ್ರತಿಷ್ಠಾಪನೆಗೊಳ್ಳುತ್ತದೆ. ಈ ಪಾನ್ ಇಂಡಿಯನ್ ಸ್ಪೇಸ್-ಟೈಮ್ ಮೂಲಕ ಜಾತಿ/ವರ್ಣ ಎನ್ನೋದು ಹಿಂದೂವಾಗಿ ಜನಪ್ರಿಯತೆಯನ್ನು ಕಂಡುಕೊಳ್ಳುತ್ತದೆ. ಅಂದರೆ ಇಲ್ಲೊಂದು ಭ್ರಮಾತ್ಮಕ ಜಗತ್ತನ್ನು ಸೃಷ್ಟಿಸಿ, ಅದಕ್ಕೊಂದು ಅಧಿಕಾರ/ಶಕ್ತಿಯನ್ನು ನೀಡುವ ಮೂಲಕ ಜಾತಿಯನ್ನು ಉಳಿಸಿಕೊಳ್ಳಲಾಗಿದೆ. ಹೀಗೆ ಉಳಿಸಿಕೊಂಡದ್ದಕ್ಕೆ ಭೂತ ಸುವರ್ಣ ಚೌಕಟ್ಟಿನ ಚರಿತ್ರೆಯನ್ನು ನೀಡುವ ಮೂಲಕ ಪೌರಾಸ್ತ್ಯವಾದ ಗಟ್ಟಿಯಾಗಿ ಬ್ರಾಹ್ಮಣೀಕರಣಕ್ಕೊಳಪಡುತ್ತದೆ. ಇದನ್ನು ರಾಷ್ಟ್ರೀಯತೆಯು ಸಾವಯವ ಹೆಣಿಗೆಯಲ್ಲಿ ಜನ ಸಮುದಾಯಗಳಲ್ಲಿ ಬೇರೂರಿಸುತ್ತದೆ. ಇಲ್ಲೇ ನಾನ್-ವೈದಿಕವಾದುದನ್ನೂ ಸಹ 'ಹಿಂದೂ' ಎನ್ನುವ ಛತ್ರಿಯಡಿ ತರಲಾಗುತ್ತದೆ. ಇದನ್ನು ಸಂಪ್ರದಾಯದ ಮೂಲಕ ಶಿಸ್ತಿಗೆ ಒಳಪಡಿಸಲಾಗುತ್ತದೆ. ಹೀಗೆ ಗೋಪಾಲ್ ಗುರು ಹೇಳುವಂತೆ ಬ್ರಾಹ್ಮಣನನ್ನು ಸಿದ್ಧಾಂತಿಯನ್ನಾಗಿಯೂ, ಶೂದ್ರನನ್ನು ಎಂಪಿರಿಕಲ್ ಆಗಿಯೂ ಸಂಘಟಿಸಿ ಕೊಡಲಾಗುತ್ತದೆ.

ಪಂಗಡಗಳಿವೆ. ಕರ್ನಾಟಕದ ಎಂಪಿರಿಕಲ್ ಮಾಹಿತಿಯನ್ನು ಆಧರಿಸಿ ಈ ವಿಷಯವನ್ನು ಹೇಳುತ್ತಿದ್ದೇನೆ. ಈ ಪಂಗಡಗಳೊಳಗೆ ನಡೆದಿರುವ ರಕ್ತಪಾತಗಳು ಅಸಂಖ್ಯವಾಗಿವೆ. ಉದಾಹರಣೆಗೆ, ಆದಿಲ್‌ಶಾಹಿ ಆಳ್ವಿಕೆಯಲ್ಲಿ ಈ ಶಿಯಾ ಮತ್ತು ಸುನ್ನಿ ಪಂಗಡಗಳ ನಡುವೆ ಸುಮಾರು ೩೦೦ ಯುದ್ಧಗಳಾಗಿವೆ. ಆದರೆ, ಈ ಸಂಗತಿಗಳನ್ನು ಮರೆಮಾಚಿ, ವಸಾಹತುಶಾಹಿ ಸಂದರ್ಭದಲ್ಲಿ ಮುಸ್ಲಿಂ ಸಮುದಾಯವನ್ನು ಏಕೀಕರಿಸಿ, ಅದನ್ನು 'ಹಿಂದೂ'ಗೆ ವಿರುದ್ಧವಾಗಿ ಎತ್ತಿಕಟ್ಟಿ ಕೋಮುವಾದಕ್ಕೆ ಕುಮ್ಮಕ್ಕು ನೀಡಲಾಗಿದೆ. ಈಗಲೂ ಸಹ ಮುಸ್ಲಿಂ ಸಮುದಾಯದೊಳಗೇ ಅನೇಕ ಭಿನ್ನತೆಗಳು ಇವೆ. ತಬ್ಲಿಕ್ ಜಮಾಯತ್, ೪ ಇಮಾಮ್‌ಗಳು, ಅಹಮದೀಯ, ನದಾಫ್, ಪಿಂಜಾರ ಹೀಗೆ ಹಲವಾರು ಸಮುದಾಯಗಳು ಇಸ್ಲಾಂನೊಳಗೆ ಇವೆ. ಆದ್ದರಿಂದ ಮುಸ್ಲಿಂ ಎನ್ನೋದು ಒಂದು ಸಮುದಾಯ ಅಲ್ಲ.

ಆದರೆ ಇವುಗಳನ್ನು ಮರೆತು, ರಿಲಿಜಿಯಸ್ ಸಮುದಾಯವನ್ನು ರಿಲಿಜಿಯಸ್ ಮಾತ್ರ ಎಂದು ಅರ್ಥೈಸಿ, ಕೋಮುವಾದಿ ವರಸೆಯನ್ನು ಆಂತರಿಕವಾಗಿ ಮತ್ತು ಬಾಹ್ಯದಲ್ಲಿ ಸಂಘಟಿಸಿ ಕೊಡಲಾಗುತ್ತಿದೆ.

ಒಂದು ಸಮುದಾಯವನ್ನು ಕೇವಲ ರಿಲಿಜಿಯಸ್ ಆಗಿ ಮಾತ್ರ ಅರ್ಥೈಸದೆ, ಅದನ್ನು ಸಾಮಾಜಿಕವಾಗಿ ಅರ್ಥೈಸಬೇಕಾಗಿದೆ. ಹೀಗೆ ಅರ್ಥೈಸಿದಾಗ ಆ ಸಮುದಾಯದೊಳಗೆ ಅಡಗಿರುವ ಶ್ರೇಣೀಕೃತ ಮೌಲ್ಯಗಳು ಮತ್ತು ಹಿಂಸೆ ನಮಗೆ ಕಾಣುತ್ತವೆ. ಹಾಗೆಯೇ ಪುರುಷ ಪ್ರಧಾನ ಹಿತಾಸಕ್ತಿಗಳು ಅಲ್ಲಿರುವುದನ್ನು ರಹಮತ್‌ರವರು ವಿವರವಾಗಿ ಮಂಡಿಸಿ, 'ನಾವು ಒಂದು ಪ್ರದೇಶದಲ್ಲಿರುವ ಸಾಂಸ್ಕೃತಿಕ ಬಹುತ್ವವನ್ನು ಸಕಾರಾತ್ಮಕವಾಗಿ ವಿವರಿಸಿಕೊಳ್ಳುವಾಗ ಆ ಬಹುತ್ವದೊಳಗಿನ ಕ್ರೌರ್ಯವನ್ನು ಬಚ್ಚಿಡಲಾಗದು ಎಂಬುದನ್ನು ನಾವು ಗಮನಿಸಿ ಪರಿಹಾರೋಪಾಯಗಳನ್ನು ಚರ್ಚಿಸಬೇಕಾಗಿದೆ' ಎಂದರು. ಹೀಗೆ ಅವರು, ಮುಸ್ಲಿಂ ಸಮುದಾಯವನ್ನು ಏಕರೂಪಿಯಾಗಿಸಿರುವ ಸಿದ್ಧ ಮಾದರಿಗಳನ್ನು ಛಿದ್ರೀಕರಿಸಿದರಲ್ಲದೆ, ಮುಸ್ಲಿಂ ಸಮುದಾಯದೊಳಡೆಯೇ ಇರುವ ಭಿನ್ನತೆಗಳನ್ನು ಪರಿಚಯಿಸಿ ಕೊಟ್ಟರು.

ಇಲ್ಲಿಗೆ ಮೊದಲ ದಿನದ ಗೋಷ್ಠಿಗಳು ಮುಗಿದು ಕುವೆಂಪು ವಿ.ವಿ. ಪಕ್ಕದಲ್ಲೇ ಇದ್ದ ಭದ್ರಾ ಆಣೆಕಟ್ಟು ಮತ್ತು ಸೈಹ್ಯಾದ್ರಿ ಶ್ರೇಣಿಯ ಸೊಬಗನ್ನು ಕ್ಷಣ ನೋಡಲು, ನಮಗೆ ವ್ಯವಸ್ಥೆಯನ್ನು ಕಾರ್ಯಾಗಾರದ ಸಂಘಟಕರೇ ಏರ್ಪಾಟು ಮಾಡಿದ್ದರು. ಆದರೆ, ಕತ್ತಲಾವರಿಸುತ್ತಿದ್ದಂತೆ, ಅಲ್ಲಲ್ಲಿ ಸ್ನೇಹಿತರು ಸಣ್ಣ ಸಣ್ಣ ಗುಂಪುಗಳಾಗಿ ವಿಭಿನ್ನ ವಿಚಾರಗಳನ್ನು, ಹಾಸ್ಯ ಚುಟುಕನ್ನು ಹಂಚಿಕೊಳ್ಳುತ್ತಿದ್ದದ್ದು ಕಾಣುತ್ತಿತ್ತು. ಕಾಂಚ ಐಲಯ್ಯನವರೊಂದಿಗೆ ಅಂದು ಸಂಜೆ ನಾನು ಕಳೆದು ಚರ್ಚಿಸಿದ ವಿಚಾರಗಳನ್ನು ಮರೆಯಲಾಗದು.

ಎರಡನೇ ದಿನದ ಗೋಷ್ಠಿ, ರಮೇಶ್ ಬೈರಿಯವರು 'ಬ್ರಾಹ್ಮಣ ಸಮುದಾಯ ತನ್ನ ಹೆಜಮನಿ ಸ್ಥಾಪಿಸಿಕೊಂಡ ಔಪಚಾರಿಕ ಮತ್ತು ಅನೌಪಚಾರಿಕ ವಿಧಿವಿಧಾನಗಳ ಬಗ್ಗೆ ಮಂಡಿಸಿದ ಪ್ರಬಂಧದೊಂದಿಗೆ ಆರಂಭವಾಯಿತು. ನಮ್ಮಲ್ಲಿ ಜಾತಿಯ ಬಗ್ಗೆ ಎರಡು ಪೆಟ್ ಥಿಯರಿಗಳಿವೆ: ಒಂದು - ಜಾತಿ ಎನ್ನೋದು ಅನಿಷ್ಟವಾಗಿದ್ದು, ಅದರಿಂದ ಏನೂ ಪ್ರಯೋಜನ ಇಲ್ಲ ಎನ್ನುವುದು, ಎರಡು - ಜಾತಿ ಎನ್ನೋದು ಹೆಜಮನಿ ಸ್ಥಾಪಿಸುವ ಸಾಧನವಾಗಿದೆ ಎನ್ನುವುದು. ಆದರೆ ಈ ಎರಡೂ ಗ್ರಹೀತಗಳನ್ನು ಸಮಸ್ಯೀಕರಿಸಬೇಕಾಗಿದೆ. ಆದ್ದರಿಂದ 'ಬ್ರಾಹ್ಮಿಣ್' ಎನ್ನೋದನ್ನು ಚಾರಿತ್ರಿಕವಾಗಿಸುತ್ತಲೇ, ಅವರು ಎದುರಿಸಿದ ಸವಾಲುಗಳು ಮತ್ತು ಸಾಧಿತ ಸವಲತ್ತುಗಳನ್ನು ಗಮನಿಸಬೇಕಾಗಿದೆ. ವಸಾಹತುಶಾಹಿ ಆಧುನಿಕತೆ ಬ್ರಾಹ್ಮಿಣ್ ಸಮುದಾಯಕ್ಕೆ ಅನೇಕ ಅವಕಾಶಗಳನ್ನು ತೆರೆಯುತ್ತದೆ. ಹೀಗೆ ತೆರೆದುಕೊಂಡ ಅವಕಾಶಗಳನ್ನು ಅವರು ಸಹಜ ಎಂಬಂತೆ ತಮ್ಮದನ್ನಾಗಿಸಕೊಂಡರು. ಈ ಪ್ರಕ್ರಿಯೆಯಲ್ಲಿ ಅವರಿಗೆ ಎರಡು ಸಂಗತಿಗಳು ವರದಾನವಾಗುತ್ತವೆ: ಒಂದು-ಔಪಚಾರಿಕ ಆಡಳಿತಾತ್ಮಕ ಅವಕಾಶಗಳು, ಎರಡು-ಈ ಔಪಚಾರಿಕ ಅವಕಾಶಗಳಿಂದ ಏರ್ಪಟ್ಟ ಅನೌಪಚಾರಿಕ ಸಂಬಂಧಗಳು. ಈ ಎರಡು ಅಂಶಗಳು ಅವರು ವಸಾಹತುಶಾಹಿ ನಗರಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳಲು ನೆರವಾದವು.

೧೯೩೧ರ ವೇಳೆಗೆ ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರತಿ ಐದು ಮಂದಿ ಜನರಲ್ಲಿ ಒಬ್ಬರು ಬ್ರಾಹ್ಮಣರಾ

ಗಿದ್ದರು. ಅಂದರೆ ಆಗಷ್ಟೆ ಉದಯವಾಗಿದ್ದ ಸೆಕ್ಯುಲರ್ ಆಧುನಿಕತೆಯನ್ನು ಅವರು ಬೆಳಸಿಕೊಂಡು ತಾವೂ ಸಹ ಸೆಕ್ಯುಲರ್ ಸ್ವರೂಪವನ್ನು ಪಡೆದುಕೊಳ್ಳುತ್ತಾರೆ. ಹೀಗೆ ನಗರಗಳಲ್ಲಿ ಬೇರುಬಿಟ್ಟ ಬ್ರಾಹ್ಮಣರು, ಹಳ್ಳಿಗಳಲ್ಲಿದ್ದ ತಮ್ಮ ಬಂಧುಗಳನ್ನು ತಮ್ಮಲ್ಲಿಗೆ ಕರೆದು ತಂದರಲ್ಲದೆ, ಬಂಧುಗಳಲ್ಲದವರಿಗೂ ಅಲ್ಲಿ ವಿದ್ಯಾಯಾಭ್ಯಾಸದ ಸೌಕರ್ಯವನ್ನು ಕಲ್ಪಿಸುತ್ತಾರೆ. ಮತ್ತೆ ಇಂಥವರಿಗೆ ಸಹಾಯಕವಾದದ್ದು ಅವರಲ್ಲಿ ಆಚರಣೆಯಲ್ಲಿದ್ದ ಒಂದು– ವಾರನ್ನ (ವಾರಕ್ಕೊಮ್ಮೆ ಬ್ರಾಹ್ಮಣರ ಮನೆಯಲ್ಲಿ ಊಟ) ಮತ್ತು ಎರಡು–ಭಿಕ್ಷಾನ್ನ. ಬ್ರಾಹ್ಮಣ ಮನೆಗಳಲ್ಲಿ ದೈನಂದಿನ ಊಟಕ್ಕಾಗಿ ಭಿಕ್ಷೆ. ಈ ಎರಡು ಆಚರಣೆಗಳಲ್ಲಿ ವಾರನ್ನ ಅವರಲ್ಲಿ ಜನಪ್ರಿಯವಾಗಿತ್ತು. ಹೀಗೆ ಒದಗಿ ಬಂದ ಬೆಂಬಲಾತ್ಮಕ ಅವಕಾಶಗಳನ್ನು ತಮ್ಮ ಸ್ವ–ಸಾಮರ್ಥ್ಯವೆಂದೇ ಭಾವಿಸಿದ್ದಲ್ಲದೆ, ಆಧುನಿಕತೆಯನ್ನು ಹೀಗೆ ಭಾವಿಸಿಕೊಂಡ ಸ್ವಸಾಮರ್ಥ್ಯದಿಂದ ಪಡೆದುಕೊಳ್ಳುತ್ತಾ, ಹಾಗೆ ಪಡೆದುಕೊಂಡದ್ದನ್ನು 'ಪರಿಚಿತ ವಲಯ'ದ ಸಂಬಂಧಗಳಲ್ಲಿ ಗಟ್ಟಿಪಡಿಸಿಕೊಳ್ಳಲಾಯಿತು.

ಹೀಗೆ ಉದಯಗೊಂಡಂಥ ಬ್ರಾಹ್ಮಣ ಸೆಕ್ಯುಲರ್ ಆಗಿ ಜಾತಿ ಎನ್ನೋದು ಎಲ್ಲೋ ಆಚೆ ಇದೆ ಎಂದು ಭ್ರಮಿಸಿ ಅದನ್ನು ತನ್ನದಾಗಿಸಿಕೊಳ್ಳದೆ ತನ್ನಿಂದ ಹೊರಗೆ ಇದೆ ಎಂದೇ ಸಾಧಿಸುತ್ತಾನೆ. ಆದರೆ ಅದು ತನ್ನೊಳಗೆ ಇದ್ದು ಆಧುನಿಕತೆಯನ್ನು ಸಾಧಿಸಿಕೊಳ್ಳುವ ತಂತ್ರವಾಗಿದೆ ಎಂದು ರಮೇಶ್ ಬೈರಿ ತಮ್ಮ ಸಂಶೋಧನೆಯನ್ನು ಮಂಡಿಸಿ ಚರ್ಚೆಗೆ ಅನುವು ಮಾಡಿಕೊಟ್ಟರು. ಚರ್ಚೆಯಲ್ಲಿ ವ್ಯಕ್ತವಾದ ಮೂರು ಮುಖ್ಯ ಸಂಗತಿಗಳೆಂದರೆ: ೧) ಗಟ್ಟಿಯಾದ ಸೆಕ್ಯುಲರ್ ಬ್ರಾಹ್ಮಿಣ್ ಪ್ರಸ್ತುತ 'ಹಿಂದುತ್ವ ಐಡಿಯಾಲಜಿ'ಯನ್ನು ಹುಟ್ಟುಹಾಕಿದೆ. ೨) ದಲಿತರು ಮತ್ತು ಬ್ರಾಹ್ಮಣರಿಬ್ಬರೂ ಸಹ ಜಾತಿಯನ್ನು ತಮ್ಮ ಭಿತ್ತಿಯನ್ನಾಗಿ ಮಾಡಿಕೊಂಡಿದ್ದಾರೆ ಎನ್ನುವಾಗ, ಬ್ರಾಹ್ಮಣ ಅಸ್ಪೃಶ್ಯತೆಯನ್ನು ದಲಿತನ ಮೇಲೆ ಹೇರುತ್ತಾನೆ. ಇದು ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ನಮ್ಮೆದುರು ಇಡುತ್ತದೆ. ಇದರಿಂದ ಬ್ರಾಹ್ಮಣ ತಪ್ಪಿಸಿಕೊಳ್ಳಲಾಗದು. ೩) ವಸಾಹತುಶಾಹಿ ಆಧುನಿಕತೆ ಎನ್ನೋದು ಪುರುಷತ್ವ (Masculine)ದ ಆಧುನಿಕತೆಯೇ ಆಗಿದೆ. ಆದ್ದರಿಂದ ಮಂಡಿತವಾದ ಪ್ರಬಂಧ ಬ್ರಾಹ್ಮಣ ಪುರುಷನನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಬ್ರಾಹ್ಮಣ ಮಹಿಳೆಯನ್ನು ಎಲ್ಲೂ ಚರ್ಚೆಗೆ ತೆಗೆದುಕೊಂಡಿಲ್ಲ.

ಈ ಗೋಷ್ಠಿಯ ನಂತರದಲ್ಲಿ ಚಿತ್ರಾ ಪಣ್ಣಿಕರ್, ರೀಡರ್, ಇಂಗ್ಲೀಷ್ ವಿಭಾಗ, ಬೆಂ.ವಿ.ವಿ ಮತ್ತು ಮುರುಳೀಧರ್, ಕಂಪ್ಯೂಟರ್ ಸೈನ್ಸ್ ವಿಭಾಗ, ಬೆಂ.ವಿ.ವಿ, ಇವರಿಬ್ಬರೂ ಸಿದ್ಧಮಾಡಿದ 'ಮೀಸಲಾತಿಯಲ್ಲಿ ಕೆನೆಪದರಿನ ಪ್ರಶ್ನೆ' ಎಂಬ ಪ್ರಬಂಧವನ್ನು ಮಂಡಿಸಿದರು. ವಸಾಹತುಶಾಹಿಯ ಸಂದರ್ಭದಿಂದ ಹಿಡಿದು ಇಂದಿನ ಒಬಿಸಿ ಮೀಸಲಾತಿಯ ಕುರಿತಂತೆ ಸುಪ್ರೀಮ್ ಕೋರ್ಟ್ ತಳೆದಿರುವ ನಿಲುವಿನ ಬಗ್ಗೆ ವಿವರಗಳನ್ನು ಮತ್ತು ಅದರ ರಾಜಕೀಯವನ್ನು ಮಂಡಿಸುತ್ತಾ 'ಕೆನೆಪದರಿನ ಪ್ರಶ್ನೆ' ಕೇವಲ ಬೂಟಾಟಿಕೆಯ ಸಂಗತಿಯಾಗಿದೆ ಎನ್ನುವುದರತ್ತ ಸಭಿಕರ ಗಮನವನ್ನು ಸೆಳೆಯಲಾಯಿತು. ಈ ನಡುವೆ ದಲಿತ ಚಳವಳಿ ಎಲ್ಲಿ ಎಡವಿತು ಎಂಬಂಥ ಪ್ರಶ್ನೆಯೂ ಈ ಪ್ರಬಂಧದಲ್ಲಿ ಅನಾವರಣಗೊಂಡಿತು. ಚರ್ಚೆಯಲ್ಲಿ ಬಂದ ಮುಖ್ಯ ಸಂಗತಿಗಳೆಂದರೆ, ೧) ದಲಿತ ಚಳುವಳಿ ಮತ್ತೆ ಭೂಮಿ ಸಂಗತಿಯನ್ನು ತನ್ನ ಕೇಂದ್ರ ಸಂಗತಿಯನ್ನಾಗಿ ಮಾಡಿಕೊಳ್ಳಬೇಕಾಗಿದೆ. ೨) ದಲಿತ ಚಳುವಳಿ ತನ್ನ 'Solidarity' ಯನ್ನು ಇತರ ಚಳುವಳಿಗೂ ವಿಸ್ತರಿಸಿಕೊಳ್ಳಬೇಕಾಗಿದೆ. ೩) ಸಾಮಾಜಿಕ ಬದಲಾವಣೆ ಎನ್ನೋದು ದಲಿತನ ಅಥವಾ ಬಡವನ ಜವಾಬ್ದಾರಿಯಲ್ಲ. ಅವರದ್ದು ಸಾಮಾಜಿಕ ನ್ಯಾಯವನ್ನು ಪಡೆಯುವುದು ಮುಖ್ಯವಾಗುತ್ತದೆ. ಆದ್ದರಿಂದ ಸಾಮಾಜಿಕ ಅನ್ಯಾಯಕ್ಕೆ ಕಾರಣರಾದವರು ಸಾಮಾಜಿಕ ಬದಲಾವಣೆಯನ್ನು ಹೊರುವಂತೆ ಮಾಡಬೇಕಾಗಿದೆ. ೪) ಒಬಿಸಿ ಮೀಸಲಾತಿ ಎನ್ನೋದು ದಲಿತ ಮೀಸಲಾತಿ ಅಲ್ಲ. ಆದರೆ ಒಬಿಸಿ ಮೀಸಲಾತಿ ಬಂದಾಗಲೆಲ್ಲಾ ದಲಿತರನ್ನು ಅನಾವಶ್ಯಕವಾಗಿ ಗುರಿಯಾಗಿಸಿಕೊಳ್ಳಲಾಗಿದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ಅನಂತರದ ಗೋಷ್ಠಿಯಲ್ಲಿ ಎರಡು ಮುಖ್ಯ ಸಂಗತಿಗಳು ಮಂಡನೆಯಾಗಿ ಚರ್ಚೆಗೆ ಒಳಪಟ್ಟವು: ಒಂದು–'ವರ್ಗ ಚಲನೆ ಮತ್ತು ಜಾತಿ ತಾರತಮ್ಯ. ಈ ಪ್ರಬಂಧವನ್ನು ಅದ್ಭುತವಾಗಿ ಮಂಡಿಸಿದವರು ದೆಹಲಿ ವಿ.ವಿಯಲ್ಲಿ ಸಮಾಜಶಾಸ್ತ್ರ ವಿಭಾಗದ ಉಪನ್ಯಾಸಕರಾದ ಡಾ. ಗುರ್ರಂ ಶ್ರೀನಿವಾಸ್. ಎರಡು–'ಕಾನೂನಾತ್ಮವಾಗಿ ಹೊರಹೊಮ್ಮಿರುವ ಜಾತಿ ಸ್ವರೂಪ ಮತ್ತು ಒಬಿಸಿ, ಎಸ್ಸಿ.ಎಸ್‌ಟಿ ವ್ಯಾಖ್ಯಾನ'. ಈ ವಿಷಯವಾಗಿ ಚರ್ಚಿಸಿದವರು ಡಾ. ಸತ್ಯನಾರಾಯಣ, ಹೈದರಾಬಾದ್.

ಮೊದಲನೇ ಪ್ರಬಂಧ ೧೦೦ ಮಂದಿ ದಲಿತ ಹಿನ್ನೆಲೆಯ ವರ್ಗ–೧, ಮತ್ತು ವರ್ಗ–೨ ನೌಕರರನ್ನು ಸಂದರ್ಶನ ಮಾಡಿ, ಕಂಡುಕೊಂಡ ಸಂಗತಿಗಳನ್ನು ಒಳಗೊಂಡಿತ್ತು. ಈ ಅಂಕಿ ಅಂಶಗಳನ್ನು ವಿಶ್ಲೇಷಿಸುತ್ತಾ ಹೇಗೆ ಆರ್ಥಿಕ ಚಲನೆ ಸಾಮಾಜಿಕ ಚಲನೆಯನ್ನು ಧಿಕ್ಕರಿಸುತ್ತಿದೆ ಎಂಬ ಸಂಗತಿಯನ್ನು ಸಭಿಕರೆದುರು ಮಾರ್ಮಿಕವಾಗಿ ಮಂಡಿಸಲಾಯಿತು. ಆದ್ದರಿಂದ 'ದಲಿತ ಮಧ್ಯಮ ವರ್ಗ' ಎನ್ನೋದು ಮೀಸಲಾತಿಯಿಂದ ಸಾಧ್ಯವಾಗಿದೆ ಎಷ್ಟು

ಬ್ರಾಹ್ಮಣ ಸೆಕ್ಯುಲರ್ ಆಗಿ ಜಾತಿ ಎನ್ನೋದು ಎಲ್ಲೋ ಆಚೆ ಇದೆ ಎಂದು ಭ್ರಮಿಸಿ ಅದನ್ನು ತನ್ನದಾಗಿಸಿಕೊಳ್ಳದೆ ತನ್ನಿಂದ ಹೊರಗೆ ಇದೆ ಎಂದೇ ಸಾಧಿಸುತ್ತಾನೆ. ಆದರೆ ಅದು ತನ್ನೊಳಗೆ ಇದ್ದು ಆಧುನಿಕತೆಯನ್ನು ಸಾಧಿಸಿಕೊಳ್ಳುವ ತಂತ್ರವಾಗಿದೆ ಎಂದು ರಮೇಶ್ ಬೈರಿ ತಮ್ಮ ಸಂಶೋಧನೆಯನ್ನು ಮಂಡಿಸಿ ಚರ್ಚೆಗೆ ಅನುವು ಮಾಡಿಕೊಟ್ಟರು. ಚರ್ಚೆಯಲ್ಲಿ ವ್ಯಕ್ತವಾದ ಮುಖ್ಯ ಸಂಗತಿಗಳೆಂದರೆ: ೧) ಗಟ್ಟಿಯಾದ ಸೆಕ್ಯುಲರ್ ಬ್ರಾಹ್ಮಿಣ್ ಪ್ರಸ್ತುತ 'ಹಿಂದುತ್ವ ಐಡಿಯಾಲಜಿ'ಯನ್ನು ಹುಟ್ಟುಹಾಕಿದೆ. ೨) ದಲಿತರು ಮತ್ತು ಬ್ರಾಹ್ಮಣರಿಬ್ಬರೂ ಸಹ ಜಾತಿ ಯನ್ನು ತಮ್ಮ ಭಿತ್ತಿಯನ್ನಾಗಿ ಮಾಡಿ ಕೊಂಡಿದ್ದಾರೆ ಎನ್ನುವಾಗ, ಬ್ರಾಹ್ಮಣ ಅಸ್ಪೃಶ್ಯತೆಯನ್ನು ದಲಿತನ ಮೇಲೆ ಹೇರುತ್ತಾನೆ.

ಸಾಧ್ಯವಾಗಿದೆ ಎನ್ನೋದು ಮರು ಪ್ರಶ್ನೆಗೆ ಒಳಪಡಿಸಲಾಯಿತು.

ಎರಡನೇ ಪ್ರಬಂಧದಲ್ಲಿ, ಸತ್ಯನಾರಾಯಣ್‌ರವರು, ಪ್ರಸ್ತುತ ಸಂದರ್ಭದಲ್ಲಿ ಜಾತಿ ಎನ್ನೋದನ್ನು ನಾವೆಲ್ಲಾ ಸಾಮಾಜಿಕವಾಗಿ ವಿವರಿಸಿಕೊಂಡಿದ್ದೇವೆ. ಆದರೆ, ಕಾನೂನಿನ ಚೌಕಟ್ಟಿನಲ್ಲಿ ಹೇಗೆ ವ್ಯಾಖ್ಯಾನಗೊಂಡಿದೆ ಎನ್ನುವುದು ಬಹಳ ಕುತೂಹಲಕಾರಿಯಾದುದು. ಅಲ್ಲದೆ, ಅದನ್ನು ಗಮನಿಸುವಾಗ ಸುಪ್ರೀಮ್ ಕೋರ್ಟ್ ಇಲ್ಲಿಯವರೆಗೆ 'ಜಾತಿ'ಯ ಬಗ್ಗೆ ನೀಡಿರುವ ವ್ಯಾಖ್ಯಾನಗಳನ್ನು ಗಮನಿಸುವುದು ಸೂಕ್ತವಾದುದು. ೧೯೬೨ರವರೆಗೆ ಮೀಸಲಾತಿ ಎನ್ನೋದು 'ಸಮಾನತೆ' ಪರಕಲ್ಪನೆಗೆ ವಿರೋಧವಾಗಿತ್ತು. ಕಾರಣ ಒಮ್ಮ ನಾಗರಿಕ ಪ್ರಜೆಯೆಂದು ಪರಿಗಣಿತವಾದರೆ, ಅಂಥ ನಾಗರಿಕ ಪ್ರಜೆಗೆ ಮೀಸಲಾತಿ ನೀಡುವುದು ಅಸಮಾನತೆಯನ್ನು ಸ್ಥಾಪಿಸಿದಂತೆ. ಆದ್ದರಿಂದ ಪ್ರಜೆಗಳ ಮಧ್ಯೆ ಅಸಮಾನತೆ ಇರಕೂಡದು ಎನ್ನೋ ಭಾವನೆ ಆಗ ಇತ್ತು. ಆದರೆ, ಅನಂತರದಲ್ಲಷ್ಟೇ ಮೀಸಲಾತಿ ಎನ್ನೋ ಪರಿಕಲ್ಪನೆ ಸಮಾನತೆಯನ್ನು ಒಳಗೊಂಡದ್ದು ಎನ್ನುವಂಥ ಚಿಷಯದತ್ತ ಗಮನ ಹರಿಸುತ್ತಲೇ ಹೇಗೆ ಕಾನೂನು ಸಹ ಅನೇಕ ಸಲ ತನ್ನದೇ ಆದ ಜಾತಿ ವ್ಯಾಖ್ಯಾನವನ್ನು ಒಳಗೊಂಡಿದೆ ಎನ್ನುವುದನ್ನು ಹಲವಾರು ಪ್ರಕರಣಗಳ ಸಹಿತವಾಗಿ ಸತ್ಯನಾರಾಯಣ್‌ರವರು ವಿವರಿಸಿದರು.

ಕಾರ್ಯಾಗಾರದ ಕೊನೆಯ ಗೋಷ್ಠಿ 'ವಸಾಹತುಶಾಹಿ ಪೂರ್ವ ಕರ್ನಾಟಕದಲ್ಲಿ ಜಾತಿ ಸ್ವರೂಪ' ಎನ್ನುವ ವಿಷಯದ ಬಗ್ಗೆ ಪ್ರೊ. ಕಿ.ರಂ.ನಾಗರಾಜ್‌ರವರು ವಿಷಯ ಮಂಡಿಸಿದರು. ಅವರು ತಮ್ಮ ವಿಷಯ ರೂಪುಗೊಂಡ ಹಿನ್ನೆಲೆಯನ್ನು ಮೊದಲಿಗೆ ಚರ್ಚೆಗೆ ತೆಗೆದುಕೊಂಡರು. ಬಾಲಗಂಗಾಧರ ಮತ್ತು ಅವರ ಪರಿವಾರ ಜಾತಿಯನ್ನು ವಿಭಿನ್ನವಾಗಿ ವಿವರಿಸುತ್ತಿದ್ದಾರೆ. ಅವರ ಪ್ರಕಾರ, ವಸಾಹತೋತ್ತರ ಸಂದರ್ಭದಲ್ಲಿ ಜಾತಿಯನ್ನು ಕುರಿತ ನಿರ್ವಚನಗಳೆಲ್ಲಾ ವಸಾಹತುಶಾಹಿ ಸಂದರ್ಭದಲ್ಲೇ ನಿರೂಪಿತಗೊಂಡವಾಗಿವೆ. ಅಂದರೆ ಜಾತಿಯನ್ನು ಕುರಿತ ವಿಚಾರಗಳೆಲ್ಲವೂ ಸಹ ಪಶ್ಚಿಮದ ಸಮಾಜಶಾಸ್ತ್ರದಿಂದ ಹೊರಹೊಮ್ಮಿದ್ದು, ಜಾತಿಯ ಚರ್ಚೆ ಎನ್ನೋದು ಆ ಪಶ್ಚಿಮದ ಮರು ಉತ್ಪಾದನೆಯೇ ಆಗುತ್ತದೆ. ಆದರೆ ಜಾತಿಯ ನಿರ್ವಚನ ವಸಾಹತುಶಾಹಿಪೂರ್ವದಲ್ಲಿ ಹೀಗೆ ಇರಲಿಲ್ಲ ಎನ್ನುವಂಥ ನಿಲುವುಗಳು ನಿಜವೇ? ಹಾಗಾದರೆ ಈ ಪೌರಾಸ್ತ್ಯವಾದವನ್ನು ಮೀರುವ ಕ್ರಮಗಳು ನಮ್ಮಲ್ಲಿ ಇವೆಯೇ?

ಮೇಲಿನ ಪ್ರಶ್ನೆಗಳನ್ನು ವಿವರಿಸಿಕೊಳ್ಳುವಾಗ ನಮ್ಮೆದುರು ೧೦೦೦ ವರ್ಷಗಳಿಗೂ ಮೇಲ್ಪಟ್ಟು ಉಳಿದುಕೊಂಡಿರುವ ಕೃತಿಗಳನ್ನು ಗಮನಿಸಬೇಕಾಗುತ್ತದೆ. ಈ ಕೃತಿಗಳೆಲ್ಲಾ ಜಾತಿ, ಧರ್ಮ ಮತ್ತು ಪ್ರಭುತ್ವವನ್ನು ಕುರಿತು ಚರ್ಚೆ ಮಾಡಿವೆ. ಅಲ್ಲಿ ಎಲ್ಲ ವಿಧವಾದ ಜಡತ್ವವನ್ನು ಪ್ರತಿಪಾದಿಸುವ ಮತ್ತು ಅವನ್ನು ಪ್ರತಿರೋಧಿಸುವ ಸಾಹಿತ್ಯ ರಚನೆಗೊಂಡಿವೆ. ಕನ್ನಡದ ಆದಿ ಕವಿ ಪಂಪ ಆ ಕಾಲದಲ್ಲಿ ಇದ್ದ ಜಾತಿ, ಪ್ರಭುತ್ವ ಮತ್ತು ಗಂಡು–ಹೆಣ್ಣು ಸಂಬಂಧಗಳನ್ನು ಪ್ರಶ್ನಿಸಿದಲ್ಲದೆ, ಅಂದಿನ ಯಜಮಾನ ಮೌಲ್ಯಗಳನ್ನು ಪ್ರಭಟಿಸಿರುವುದನ್ನು ನಾವು ಕಾಣುತ್ತೇವೆ. ಹಾಗೆಯೇ ೧೨ನೇ ಶತಮಾನ ಮತ್ತು ಅನಂತರದಲ್ಲಿ ಜಾತಿ ಪ್ರಶ್ನೆ ಮತ್ತೆ ಮತ್ತೆ ಸಮಾಜದಲ್ಲಿ ಕಾಣಿಸಿಕೊಂಡಿದೆ. ಅಲ್ಲಿನ ಜಾತಿಯ ಜಡತ್ವ, ಬ್ರಾಹ್ಮಣ್ಯದ ಕ್ರೌರ್ಯ, ದೇವಾಲಯ

(೪೧ನೇ ಪುಟಕ್ಕೆ)

'ಜನಪರವಾಗಲಿ ಕೆನೆಪದರ'

ಡಾ॥ ಮ.ಪು. ಪೂರ್ಣಾನಂದ

> **ಕೆನೆಪದರ ಜನಪರವಾಗಬೇಕಾದರೆ ಕೇಂದ್ರ ಸರ್ಕಾರ ಅಲ್ಪಮಟ್ಟದ ಕಾನೂನು ತಿದ್ದುಪಡಿ ಮಾಡಬೇಕು. ಉದಾಹರಣೆಗೆ ಕರ್ನಾಟಕದ ಪ್ರವರ್ಗ-I ರಲ್ಲಿ ಬೆಸ್ತ, ಗೊಲ್ಲ, ಉಪ್ಪಾರ, ಇನ್ನಿತರ ಜಾತಿಗಳು ಸೇರುತ್ತವೆ. ಇವರಲ್ಲಿ ಉನ್ನತ ಶಿಕ್ಷಣ ಅಥವಾ ಉದ್ಯೋಗಕ್ಕೆ ಬೆಸ್ತರ ಜಾತಿಗೆ ಸೇರಿದ ಇವತ್ತಿಗೂ ಹರಿಗೋಲಿನಲ್ಲಿ ಬಲೆ ಬೀಸಿ ಮೀನು ಹಿಡಿಯುವ ವ್ಯಕ್ತಿಯ ಮಗ ಅಭ್ಯರ್ಥಿಯಾಗುತ್ತಾನೆ, ಅದೇ ಜಾತಿಯ "ಡಿ" ದರ್ಜೆ ನೌಕರನ ಮಗನೂ ಬರುತ್ತಾನೆ, ಶಾಲಾ ಮೇಷ್ಟ್ರ ಮಗನೂ ಬರುತ್ತಾನೆ, ಪ್ರಿನ್ಸಿಪಾಲ ಮಗನೂ ಬರುತ್ತಾನೆ, ಅಪ್ಪ-ಅಮ್ಮ ಇಬ್ಬರೂ ವೈದ್ಯರಾಗಿರುವವರ ಮಗನೂ ಬರುತ್ತಾನೆ, ಐ.ಎ.ಎಸ್/ ಐ.ಪಿ.ಎಸ್ ಅಧಿಕಾರಿಯ ಮಗನೂ ಬರುತ್ತಾನೆ, ಅವರಲ್ಲೇ ಅತ್ಯಂತ ಶ್ರೀಮಂತ ಉದ್ಯಮಿಯ ಮಗನೂ ಬರುತ್ತಾನೆ ಇವರಲ್ಲಿ ಯಾರಿಗೆ ಮೊದಲ ಆದ್ಯತೆ ನೀಡಬೇಕು?**

ಉನ್ನತ ಶಿಕ್ಷಣದಲ್ಲಿ ಇತರರೆ ಹಿಂದುಳಿದ ವರ್ಗಗಳಿಗೆ (ಓ.ಬಿ.ಸಿ) ಮೀಸಲಾತಿ ನೀಡುವ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕೆನೆಪದರದ ಅಂಶ ಮತ್ತೆ ಚರ್ಚೆಗೆ ಬಂದಿದೆ.

ಓಬಿಸಿಗಳಿಗೆ ಉನ್ನತ ಶಿಕ್ಷಣದಲ್ಲಿ ಈಗ ಮೀಸಲಾತಿ ಜಾರಿಯಾಗಿದೆ. ವಿಪರ್ಯಾಸವೆಂದರೆ ಮಂಡಲ್ ಚಾಂಪಿಯನ್ ವಿ.ಪಿ. ಸಿಂಗ್ ಜಾರಿಗೊಳಿಸಿದ ಮಂಡಲ್ ವರದಿ ಭಾಗಶ: ಜಾರಿಯಲ್ಲಿ ಉದ್ಯೋಗ ಮತ್ತು ಸಾಮಾನ್ಯ ಶಿಕ್ಷಣದಲ್ಲಿ ಮಾತ್ರ ಮೀಸಲಾತಿ ಇತ್ತು. ಇದು ಒಂದು ರೀತಿ ಪೂಜೆ ಮಾಡಲು ಅವಕಾಶ ನೀಡಿ, ದೇವಸ್ಥಾನದ ಒಳಗೆ ಹೋಗಲು ಅನುಮತಿ ನೀಡದಿರುವ ಸ್ಥಿತಿಯಾಗಿತ್ತು.

ಉದ್ಯೋಗ ಪಡೆಯಲು ಮುಖ್ಯವಾಗಿರುವ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಜಾರಿಯಾಗಿರಲಿಲ್ಲ. ಮೊದಲಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡದೆ, ಉದ್ಯೋಗದಲ್ಲಿ ಮೀಸಲಾತಿ ನೀಡಿದರೆ, ಉನ್ನತ ಉದ್ಯೋಗಕ್ಕೆ ಮೂಲಭೂತ ಅವಶ್ಯವಾದ ಉನ್ನತ ಉದ್ಯೋಗಕ್ಕೆ ಮೂಲಭೂತ ಅವಶ್ಯವಾದ ಉನ್ನತ ಶಿಕ್ಷಣವೇ ಇಲ್ಲದೆ, ಉದ್ಯೋಗ ಗಿಟ್ಟಿಸಿಕೊಳ್ಳುವುದಾದರೂ ಹೇಗೆ? ಎಂಬ ಸಂಕಟ ಪರಿಸ್ಥಿತಿಯಿತ್ತು. ಆದರೆ ಕರ್ನಾಟಕ, ತಮಿಳುನಾಡು ಮತ್ತು ಕೆಲವೇ ರಾಜ್ಯಗಳಲ್ಲಿ ಓಬಿಸಿಗಳಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯಿದ್ದರಿಂದ, ಅಂತಹ ಫಲಾನುಭವಿಗಳು ಮಾತ್ರ ಉದ್ಯೋಗಗಳಿಸುವ ಅವಕಾಶವಿತ್ತು.

ಕೇಂದ್ರ ಸರ್ಕಾರದ ಮೀಸಲಾತಿ ನೀತಿಯಲ್ಲಿ ಪರಿಶಿಷ್ಟಜಾತಿ (ಎಸ್‌ಸಿ), ಪರಿಶಿಷ್ಟವರ್ಗ (ಎಸ್‌ಟಿ)ಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಕೆನೆಪದರ ನೀತಿ ಅನ್ವಯಿಸುವುದಿಲ್ಲ. ಇಡೀ ದೇಶದಲ್ಲೇ ಪ್ರಥಮ ಬಾರಿಗೆ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡಿದ ಮೌನ ಕ್ರಾಂತಿಯ ಹರಿಕಾರ ದೇವರಾಜ್ ಅರಸ್ ಕರ್ನಾಟಕದಲ್ಲಿ ಎಸ್.ಸಿ. ಎಸ್.ಟಿ. ಬಿ.ಟಿ. ೨ (ಹಿಂದುಳಿದ ಬುಡಕಟ್ಟು) ಈಗ ಪ್ರವರ್ಗ-I ಗಳಿಗೆ ಕೆನೆಪದರ ನೀತಿ ಅನ್ವಯಿಸಿರಲಿಲ್ಲ. ಈಗಲೂ ಇದೇ ಕಾನೂನಿದೆ. ಆದರೆ ಕರ್ನಾಟಕ ರಾಜ್ಯದ ಇನ್ನಿತರ ಮೀಸಲಾತಿ ವರ್ಗಗಳಾದ 2A, 2B, 3A ಮತ್ತು 3B ಗಳಿಗೆ ಕೆನೆಪದರ ಅನ್ವಯವಾಗಿದೆ.

ಮೀಸಲಾತಿ ಪರವಾದ ಬೌದ್ಧಿಕ ಚಿಂತಕರಲ್ಲಿ ಹೆಚ್ಚಿನ ಜನ ಕೆನೆಪದರದ ಅನ್ವಯಕ್ಕೆ ವಿರುದ್ಧವಾಗಿದ್ದಾರೆ. ಇವರ ವಾದವೆಂದರೆ ಉನ್ನತ ಶಿಕ್ಷಣಕ್ಕೆ ಬರಲು ಸುಸ್ಥಿತಿಯಲ್ಲಿರುವ ಹಿಂದುಳಿದ ಜಾತಿ ಜನರಿಗೆ ಮಾತ್ರ ಸಾಧ್ಯ, ಹಾಗಾಗಿ ಕೆನೆಪದರ ಅನ್ವಯಿಸಿದರೆ, ಅರ್ಹ ಅಭ್ಯರ್ಥಿಗಳು ದೊರೆಯದೆ ಸೀಟುಗಳು ಖಾಲಿ ಉಳಿದು, ಅವುಗಳು ಮತ್ತೆ ಸಾಮಾನ್ಯ ವರ್ಗಕ್ಕೆ ವರ್ಗಾಂತರವಾಗುತ್ತದೆ. ಬಡತನದ ಕಾರಣಕ್ಕಾಗಿ ಮಧ್ಯಾಂತರದಲ್ಲೆ ಪದವಿ ಮುಗಿಸದೆ ಬಿಟ್ಟು ಹೋಗುತ್ತಾರೆ ಹಾಗೂ ಪದವಿ ಮುಗಿಸಲು ಧೀರ್ಘಕಾಲ ತೆಗೆದುಕೊಳ್ಳುತ್ತಾರೆ ಎಂಬುದು. ಇದು ವಾಸ್ತವವೇ ಆಗಿದ್ದರೆ ಹಾಗು ಇದೇ ವಾದಗಳನ್ನು ಮೀಸಲಾತಿ ಜಾರಿಯಾಗುವ ಆರಂಭದ ದಿನಗಳಲ್ಲಿ ಮಂಡಿಸಿದ್ದರೆ, ಇವರೆಗಿನ ಎಲ್ಲಾ ರೀತಿಯ ಮೀಸಲಾತಿ ಫಲಾನುಭವಿಗಳು ಯಾರೂ ಇರುತ್ತಿರಲಿಲ್ಲ!

ಆದರೆ ಮೀಸಲಾತಿಯ ಮುಖ್ಯ ಉದ್ದೇಶವಾದ ಕಟ್ಟ ಕಡೆಯ ಜನರಿಗೆ ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕೆನೆಪದರದ ಅಂಶವನ್ನು ಅಮೂಲಾಗ್ರವಾಗಿ ವ್ಯಾಖ್ಯಾನಿಸಿದರೆ ತುಂಬಾ ಕೆಳಸ್ತರದಲ್ಲಿರುವ ತಳಸಮುದಾಯಗಳಿಗೆ ನೈಜವಾದ ಸಾಮಾಜಿಕ ನ್ಯಾಯವನ್ನು ಜಾರಿಗೆ ತಂದಂತಾಗುತ್ತದೆ.

ಇಲ್ಲಿ ಕೆನೆಪದರ ಜನಪರವಾಗಬೇಕಾದರೆ ಕೇಂದ್ರ ಸರ್ಕಾರ ಅಲ್ಪಮಟ್ಟದ ಕಾನೂನು ತಿದ್ದುಪಡಿ ಮಾಡಬೇಕು. ಉದಾಹರಣೆಗೆ ಕರ್ನಾಟಕದ ಪ್ರವರ್ಗ-I ರಲ್ಲಿ ಬೆಸ್ತ, ಗೊಲ್ಲ, ಉಪ್ಪಾರ, ಇನ್ನಿತರ ಜಾತಿಗಳು ಸೇರುತ್ತವೆ. ಇವರಲ್ಲಿ ಉನ್ನತ ಶಿಕ್ಷಣ ಅಥವಾ ಉದ್ಯೋಗಕ್ಕೆ ಬೆಸ್ತರ ಜಾತಿಗೆ ಸೇರಿದ ಇವತ್ತಿಗೂ ಹರಿಗೋಲಿನಲ್ಲಿ ಬಲೆ ಬೀಸಿ ಮೀನು ಹಿಡಿಯುವ ವ್ಯಕ್ತಿಯ ಮಗ ಅಭ್ಯರ್ಥಿಯಾಗುತ್ತಾನೆ, ಅದೇ ಜಾತಿಯ "ಡಿ" ದರ್ಜೆ ನೌಕರನ ಮಗನೂ ಬರು ತ್ತಾನೆ, ಶಾಲಾ ಮೇಷ್ಟು ಮಗನೂ ಬರುತ್ತಾನೆ, ಪ್ರಿನ್ಸಿಪಾಲ್ ಮಗನೂ ಬರುತ್ತಾನೆ, ಅಪ್ಪ-ಅಮ್ಮ ಇಬ್ಬರೂ ವೈದ್ಯರಾಗಿರು ವವರ ಮಗನೂ ಬರುತ್ತಾನೆ, ಐ.ಎ.ಎಸ್/ಐ.ಪಿ.ಎಸ್ ಅಧಿ ಕಾರಿಯ ಮಗನೂ



ಬರುತ್ತಾನೆ, ಅವರಲ್ಲೇ ಅತ್ಯಂತ ಶ್ರೀಮಂತ ಉದ್ಯಮಿಯ ಮಗನೂ ಬರುತ್ತಾನೆ ಇವರಲ್ಲಿ ಯಾರಿಗೆ ಮೊದಲ ಆದ್ಯತೆ ನೀಡಬೇಕು? ಎಂಬುದು ಪ್ರಶ್ನೆ. ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಕಲ್ಪ ನೆಯೇ ಅವಕಾಶ ವಂಚಿತ ಕಟ್ಟಕಡೆಯ ಮನುಷ್ಯನಿಗೆ ಮೊದಲ ಆದ್ಯತೆ. ಇವರಲ್ಲಿ ಅರ್ಹ ಅಭ್ಯರ್ಥಿ ಸಿಗದಿದ್ದಾಗ ಅನುಕ್ರಮವಾಗಿ ಮೀನುಗಾರರ ಮಗ, "ಡಿ" ದರ್ಜೆ ನೌಕ ರರ ಮಗ, ಮೇಷ್ಟ್ರು ಮಗ, ಪ್ರಿನ್ಸಿಪಾಲರ ಮಗ, ವೈದ್ಯರ ಮಗ, ಐ.ಎ.ಎಸ್ ಅಧಿಕಾರಿಯ ಮಗ, ನಂತರ ಅತ್ಯಂತ ಶ್ರೀಮಂತ ಉದ್ಯಮಿಯ ಮಗನನ್ನು ಅನುಕ್ರಮವಾಗಿ ಪರಿಗಣಿಸಿದರೆ, ನಿಜವಾದ ಸಾಮಾಜಿಕ ನ್ಯಾಯ ಜಾರಿಯಾಗುತ್ತದೆ. ಇದು ಎಸ್.ಸಿ, ಎಸ್.ಟಿ ವರ್ಗದವರಿಗೂ ಅನ್ವಯಿಸಬಹುದು.

ಯಾವುದೇ ಕಾರಣಕ್ಕೂ ಬ್ಯಾಕ್‌ಲಾಗ್ ಉಳಿಯಬಾರದು. ಈ ಮೇಲಿನ ಪ್ರಾಮಾಣಿಕ ಪ್ರಯತ್ನದ ನಂತರವೂ ಸೀಟುಗಳು ಉಳಿದರೆ ಅವುಗಳನ್ನು ಓಬಿಸಿ ಬ್ಯಾಕ್‌ಲಾಗ್ ಆಗಿ ಇಡಬೇಕು. ಈಗಾಗಲೇ ಎಸ್.ಸಿ, ಎಸ್.ಟಿಗಳಿಗೆ ಬ್ಯಾಕ್‌ಲಾಗ್ ಜಾರಿಯಲ್ಲಿದೆ. ಆದರೆ ಬ್ಯಾಕ್‌ಲಾಗ್ ಕೇವಲ ಉದ್ಯೋಗದಲ್ಲಿದೆ, ಶಿಕ್ಷಣದಲ್ಲಿ ಇಲ್ಲ. ಶಿಕ್ಷಣದಲ್ಲಿ ಓಬಿಸಿ ವರ್ಗಗಳ ಸೀಟು ಉಳಿಕೆಯನ್ನು ಅನುಪಾತದ ಆಧಾರದ ಮೇಲೆ ಎಸ್.ಸಿ, ಎಸ್.ಟಿ ವರ್ಗಗಳಿಗೆ ವರ್ಗಾಯಿಸಬೇಕು. ಹಾಗೆ ಎಸ್.ಸಿ. ಎಸ್.ಟಿಗಳ ಉಳಿಕೆ ಸೀಟುಗಳನ್ನು ಓಬಿಸಿಗಳಿಗೆ ವರ್ಗಾಯಿಸಬೇಕು. ಯಾವುದೇ ಕಾರಣಕ್ಕೂ ಸಾಮಾನ್ಯ ವರ್ಗಕ್ಕೆ ವರ್ಗಾಯಿಸಬಾರದು.

ಇವತ್ತಿನ ಹಣದುಬ್ಬರದ ಸಂಕಟದಲ್ಲಿ ಆರ್ಥಿಕ ಮಿತಿಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಈಗಿರುವ ರೂ ೨ಲಕ್ಷ ಮತ್ತು ೨.೫ ಲಕ್ಷಗಳ ಮಿತಿಯನ್ನು ಹೆಚ್ಚು ಮಾಡಬೇಕು. ಪ್ರತಿ ಎರಡು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು.

ಇಂತಹ ಕಾನೂನು ತಿದ್ದುಪಡಿಯಿಂದ ಕೆನೆಪದರವನ್ನು ಮೀಸಲಾತಿಯ ಎಲ್ಲಾ ವರ್ಗಗಳಿಗೂ ಅನ್ವಯಿಸಿದರೆ, ಜನಪರವಾಗಿ ಸಾಮಾಜಿಕ ನ್ಯಾಯ ಜಾರಿಯಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಜಾತಿಯ ಉಳ್ಳವರೆ ಮೇಲುವರ್ಗವಾಗಿ ಮತ್ತೆ ಶೋಷಣೆಗೆ ದಾರಿಯಾಗುತ್ತದೆ. ಸಮಾನ ಅವಕಾಶ, ಸಮಾನತೆ ಮರಿಚಿಕೆಯಾಗುತ್ತದೆ.

ಕೆನೆಪದರ ಹಾಗೆಂದರೇನು?

ಕೇಂದ್ರ ಸರ್ಕಾರದಲ್ಲಿ ಎಸ್.ಸಿ, ಎಸ್.ಟಿ, ಓಬಿಸಿ ಮತ್ತು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಎಸ್.ಸಿ, ಎಸ್.ಟಿ, ಪ್ರವರ್ಗ–I, ಪ್ರವರ್ಗ–2A, 2B, 3A ಮತ್ತು 3B ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯಿದೆ. ತಮಿಳುನಾಡು ಹೊರತುಪಡಿಸಿ ದೇಶದಲ್ಲಿ ಯಾವುದೇ ಕಾರಣಕ್ಕೂ ಶೇಕಡಾ ೫೦ ಮೀಸಲಾತಿ ಮೀರಬಾರದು. ಇದು ಸರ್ವೋಚ್ಚ ನ್ಯಾಯಾಲಯದ ಕಟ್ಟಪ್ಪಣೆ,

ಕೇಂದ್ರ ಸರ್ಕಾರದ ಮೀಸಲಾತಿಯಲ್ಲಿ ಎಸ್.ಸಿ. ಎಸ್.ಟಿ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಾಮಾಜಿಕ (ಜಾತಿ) ಆಧಾರದ ಮೇಲೆ ಮೀಸಲಾತಿ ನಿಡುತ್ತಾರೆ, ಆರ್ಥಿಕ ಆಧಾರವನ್ನು ಪರಿಗಣಿಸುವುದಿಲ್ಲ. ಓಬಿಸಿಗಳಿಗೆ ರೂ. ೨.೫ ಲಕ್ಷ ವಾರ್ಷಿಕ ಆದಾಯ ಮೀರಿದರೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಅನರ್ಹರಾಗುತ್ತಾರೆ. ಇಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮಾನದಂಡಗಳು ಅನ್ವಯಿಸುತ್ತವೆ. ಆದರೆ ಎಸ್.ಸಿ, ಎಸ್.ಟಿಗಳಿಗೂ ಮತ್ತೊಂದು ರೂಪದಲ್ಲಿ ಭಾಗಶಃ ಕೆನೆಪದರ ಅನ್ವಯವಾಗುತ್ತಿದೆ.

ಕೇಂದ್ರ ಸರ್ಕಾರದಲ್ಲಿ ಎಸ್.ಸಿ, ಎಸ್.ಟಿ, ಓಬಿಸಿ ಮತ್ತು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಎಸ್.ಸಿ, ಎಸ್.ಟಿ, ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯಿದೆ. ತಮಿಳುನಾಡು ಹೊರತುಪಡಿಸಿ ದೇಶದಲ್ಲಿ ಯಾವುದೇ ಕಾರಣಕ್ಕೂ ಶೇಕಡಾ ೫೦ ಮೀಸಲಾತಿ ಮೀರಬಾರದು. ಇದು ಸರ್ವೋಚ್ಚ ನ್ಯಾಯಾಲಯದ ಕಟ್ಟಪ್ಪಣೆ. ಕೇಂದ್ರ ಸರ್ಕಾರದ ಮೀಸಲಾತಿಯಲ್ಲಿ ಎಸ್.ಸಿ. ಎಸ್.ಟಿ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಾಮಾಜಿಕ (ಜಾತಿ) ಆಧಾರದ ಮೇಲೆ ಮೀಸಲಾತಿ ನಿಡುತ್ತಾರೆ, ಆರ್ಥಿಕ ಆಧಾರವನ್ನು ಪರಿಗಣಿಸುವುದಿಲ್ಲ. ಓಬಿಸಿಗಳಿಗೆ ರೂ. ೨.೫ ಲಕ್ಷ ವಾರ್ಷಿಕ ಆದಾಯ ಮೀರಿದರೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಅನರ್ಹರಾಗುತ್ತಾರೆ. ಇಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮಾನದಂಡಗಳು ಅನ್ವಯಿಸುತ್ತವೆ. ಆದರೆ ಎಸ್.ಸಿ, ಎಸ್.ಟಿಗಳಿಗೂ ಮತ್ತೊಂದು ರೂಪದಲ್ಲಿ ಭಾಗಶಃ ಕೆನೆಪದರ ಅನ್ವಯವಾಗುತ್ತಿದೆ.

SSLC ಪೂರ್ವ ಮತ್ತು SSLC ನಂತರ ಹೀಗೆ ಎರಡು ವಿಭಾಗ ಮಾಡಿ, SSLC ಪೂರ್ವದಲ್ಲಿರುವ ಅಭ್ಯರ್ಥಿಗಳಿಗೆ ಯಾವುದೇ ಆರ್ಥಿಕ ಮಾನದಂಡ ಇಲ್ಲ. ಶಾಲಾ ಶುಲ್ಕ ವಿನಾಯಿತಿ, ವಿದ್ಯಾರ್ಥಿವೇತನ ಮತ್ತು ಹಾಸ್ಟೆಲ್ ಸೌಲಭ್ಯ ಇರುತ್ತದೆ. ಇವರಿಗೆ ಆರ್ಥಿಕ, ವಯಸ್ಸಿನ ಮಿತಿಯಿಲ್ಲ. ಮತ್ತು ಎಷ್ಟೇ ಬಾರಿ ಫೇಲಾದರೂ ಮತ್ತೆ ಅವಕಾಶ ನೀಡುವ ಮಾನವೀಯ ಕಾನೂನಿದೆ.

SSLC ನಂತರದ ಅಭ್ಯರ್ಥಿಗಳಿಗೆ ರೂ. ೨ ಲಕ್ಷ ಆರ್ಥಿಕ ಮಿತಿಯನ್ನು ಹಾಕಲಾಗಿದೆ. ಇದನ್ನು ಮೀರಿದರೆ ಕಾಲೇಜು ಶುಲ್ಕ ವಿನಾಯಿತಿ, ವಿದ್ಯಾರ್ಥಿ ವೇತನ ಮತ್ತು ಹಾಸ್ಟೆಲ್ ಸೌಲಭ್ಯ ಸಿಗುವುದಿಲ್ಲ. ಆದರೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸೀಟು ಪಡೆಯಲು ಕೆನೆಪದರ ಅನ್ವಯಿಸುವುದಿಲ್ಲ.

ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಎಸ್.ಸಿ, ಎಸ್.ಟಿ ಮತ್ತು ಪ್ರವರ್ಗ–I ಗುಂಪುಗಳಿಗೆ ಕೆನೆಪದರವನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ಸೀಟು ಪಡೆಯಲು ಪರಿಗಣಿಸುವುದಿಲ್ಲ. ಉಳಿದ ಪ್ರವರ್ಗ–2A, 2B, 3A ಮತ್ತು 3B ವರ್ಗಗಳಿಗೆ ಆರ್ಥಿಕ ಮಿತಿಯನ್ನು ಪರಿಗಣಿಸಲಾಗಿದೆ. ಹೀಗೆ ಮೀಸಲಾತಿ ನೀಡುವಿಕೆಯಲ್ಲಿ ಅದೇ ವರ್ಗದೊಳಗೆ ಆರ್ಥಿಕ ಮಾನದಂಡ ಬಳಸಿದಾಗ ಕೆನೆಪದರವೆಂದು ಕರೆಯಲಾಗುತ್ತದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕನ್ನಡ ವಿಶ್ವವಿದ್ಯಾಲಯದ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆಯ ಹಿಂದೆ ಪ್ರೊ. ಕೆ.ವಿ. ನಾರಾಯಣ ಅವರ ಅಪಾರ ಶ್ರಮ ಇದೆ. ಕನ್ನಡ ವಿಶ್ವವಿದ್ಯಾಲಯದ ಉದ್ದೇಶ, ಸ್ವರೂಪ ಮತ್ತು ವಿನ್ಯಾಸ ಹೇಗಿರಬೇಕು ಎಂದು ಖಚಿತವಾಗಿ ಕಂಡುಕೊಂಡವರು ಅವರು. ಕನ್ನಡ ವಿಶ್ವವಿದ್ಯಾಲಯ ಇವತ್ತಿನ ಸ್ಥಿತಿಗೆ ಬೆಳೆಯಲು ಕೆ.ವಿ.ಎನ್. ಅವರ ಕೊಡುಗೆ ಅಪಾರವಾದುದು. ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾದ ಪ್ರೊ॥ ಚಂದ್ರಶೇಖರ ಕಂಬಾರ ಅವರ ಜೊತೆಗೆ ಅಧ್ಯಯನ ಮತ್ತು ಆಡಳಿತದಲ್ಲಿ ಕೈಗೂಡಿಸಿ ಸಂತೋಷ ದುಃಖಗಳೆರಡನ್ನೂ ಸಮಾನವಾಗಿ ಅನುಭವಿಸಿದವರು. ಕನ್ನಡ ವಿಶ್ವವಿದ್ಯಾಲಯ ಇಂದು ಹೀಗೆ ಬೆಳೆದು ನಿಲ್ಲಲು ಕಂಬಾರರ ಕನಸು ಮತ್ತು ಕೆ.ವಿ. ನಾರಾಯಣ ಅವರ ಸಹೋದ್ಯೋಗಿ ಮಿತ್ರರ ಶ್ರಮವೇ ಕಾರಣ.

ಡಾ॥ ಅಶೋಕ ಕುಮಾರ ರಂಜೇರೆ

ಕನ್ನಡ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಗಳಾಗಿದ್ದ ಪ್ರೊ॥ ಕೆ.ವಿ ನಾರಾಯಣ ಅವರು ಅಕ್ಟೋಬರ್ ೩೧, ೨೦೦೭ಕ್ಕೆ ೩೬ ವರ್ಷಗಳ ತಮ್ಮ ಅಧ್ಯಾಪಕ ವೃತ್ತಿ ಜೀವನದಿಂದ ನಿವೃತ್ತಿ ಹೊಂದಿದರು. ೧೯೯೨ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಬರುವ ಮೊದಲು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಸುಮಾರು ಎರಡು ದಶಕಗಳ ಕಾಲ ಬೋಧನೆ ಮತ್ತು ಸಂಶೋಧನೆ ಕೈಗೊಂಡವರು. ಕನ್ನಡ ವಿದ್ವತ್ ಲೋಕದಲ್ಲಿ ಕೆ.ವಿ.ಎನ್ ಎಂದೇ ಪ್ರರಿಚಿತರಾಗಿರುವ ಪ್ರೊ॥ ಕೆ.ವಿ. ನಾರಾಯಣ ಅವರು ಆರಂಭದಲ್ಲಿ ಎಡಪಂಥೀಯ ವಿಮರ್ಶಕರಾಗಿ ಗುರುತಿಸಿಕೊಂಡವರು. ಅಷ್ಟೇ ಅಲ್ಲ ಕಟ್ಟಾ ಮಾರ್ಕ್ಸ್‌ವಾದಿಯೂ ಆಗಿದ್ದರು ಎಂದು ಕೇಳಿದ್ದೇನೆ. ವಿಮರ್ಶೆಯ ಜೊತೆಗೆ ಸೃಜನಶೀಲ ನಾಟಕಕಾರರಾಗಿ, ಅನುವಾದಕರಾಗಿ ಕೆಲಸ ಮಾಡಿರುವ ಇವರು ಸಾಹಿತ್ಯವನ್ನು ಪಾರಂಪರಿಕ ದೃಷ್ಟಿಕೋನಕ್ಕಿಂತ ಬೇರೆ ಬೇರೆ ಡೈಮೆನ್ಶನ್ ಮೂಲಕ ನೋಡುವ ಪರಂಪರೆಯೊಂದನ್ನು ಆರಂಭಿಸಿದವರಲ್ಲಿ ಪ್ರಮುಖರು. ಜೊತೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅತ್ಯಂತ ಪ್ರಭಾವಿ ಅಧ್ಯಾಪಕರಲ್ಲೊಬ್ಬರು. ಏಕೆಂದರೆ ಕೆ.ವಿ.ಎನ್. ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿರುವಾಗಲೇ ಅವರ ಸಹೋದ್ಯೋಗಿಗಳಾಗಿ ಕನ್ನಡ ವಿದ್ವತ್ ಲೋಕದ ಪ್ರಖ್ಯಾತನಾಮರಾದ ಕವಿ ಜಿ.ಎಸ್. ಶಿವರುದ್ರಪ್ಪ, ಸಂಶೋಧಕರಾದ ಎಂ. ಚಿದಾನಂದ ಮೂರ್ತಿ, ನಾಟಕಕಾರರಾದ, ಕವಿ ಚಂದ್ರಶೇಖರ ಕಂಬಾರ, ಕವಿಗಳಾದ ಲಕ್ಷ್ಮೀನಾರಾಯಣ ಭಟ್, ಜೈನ್ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡಿದ ಸಂಶೋಧಕರೂ ಆದ ಹಂ.ಪ ನಾಗರಾಜಯ್ಯ, ಎಡಪಂಥೀಯ ನಿಲುವುಗಳೊಂದಿಗೆ ನಾಟಕ ವಿಮರ್ಶಕರೂ ಆಗಿದ್ದ ಕೆ. ಮರುಳಸಿದ್ದಪ್ಪ, ಸಿ. ವೀರಣ್ಣ ಹೀಗೆ ಅನೇಕರು ಆಗಲೇ ಪ್ರಖ್ಯಾತಿಗೆ ಬಂದವರು ಇದ್ದರು. ಜೊತೆಗೆ ಸಮ ವಯಸ್ಕರೂ ಬಂಡಾಯದ ಕವಿ ಹಾಗೂ ಚಿಂತಕರೂ ಆದ ಬರಗೂರು ರಾಮಚಂದ್ರಪ್ಪ, ಅತ್ಯಂತ ಪ್ರಭಾವಿ ಮೇಷ್ಟ್ರು ಎನಿಸಿಕೊಂಡ ಪ್ರೊ॥ ಕಿ.ರಂ. ನಾಗರಾಜ ಅವರು, ವಿದ್ಯಾರ್ಥಿಯೂ ಆಗಿದ್ದ ಮತ್ತು ಕನ್ನಡದ ಇನ್ನೊಬ್ಬ ಪ್ರಖ್ಯಾತ ಸಂಸ್ಕೃತಿ ಚಿಂತಕರೂ ಆದ ಡಿ.ಆರ್. ನಾಗರಾಜ್, ಕವಿ ಸಿದ್ಧಲಿಂಗಯ್ಯ, ಬಸವರಾಜ ಕಲ್ಗುಡಿ ಮತ್ತಿತರರೂ ಕೆ.ವಿ.ಎನ್. ಅವರ ಜೊತೆಗೆ ಸಹೋದ್ಯೋಗಿಗಳಾಗಿದ್ದರು. ಹಾಗಾಗಿ ಅವರಗಳೆಲ್ಲರ ಮಧ್ಯ ವಿಮರ್ಶಕರಾಗಿ, ಅತ್ಯುತ್ತಮ ಅಧ್ಯಾಪಕರಾಗಿ ಹೆಸರು ಮಾಡುವುದು ಅಷ್ಟೊಂದು ಸರಳವಾದ ಮಾತಾಗಿರಲಿಲ್ಲ. ಅಂಥದ್ದರಲ್ಲಿ ತಮ್ಮದೇ ಆದ ವಿಶೇಷ ಸ್ಥಾನವೊಂದನ್ನು ಕೆ.ವಿ.ಎನ್. ಅವರು ಸ್ಥಾಪಿಸಿಕೊಂಡವರು.



ಸಾಹಿತ್ಯ ವಿಮರ್ಶೆ, ಸಂಶೋಧನೆ ಮತ್ತು ಭಾಷಾಧ್ಯಯನ ಕ್ಷೇತ್ರಗಳಲ್ಲಿ ತಮ್ಮದೇ ದಾರಿಯೊಂದನ್ನು ಸೃಷ್ಟಿಸಿಕೊಂಡಿರುವ ಪ್ರೊ॥ ಕೆ.ವಿ. ನಾರಾಯಣ ಅವರು ೧೯೪೮ರ ಅಕ್ಟೋಬರ್ ೨೦ ರಂದು ಮೈಸೂರು ಜಿಲ್ಲೆಯ ಪಿರಿಯಪಟ್ಟಣ ತಾಲ್ಲೂಕಿನ ಕಂಪ್ಲಾಪುರ ಎನ್ನುವ ಸಣ್ಣ ಹಳ್ಳಿಹೊಂದರಲ್ಲಿ ಹುಟ್ಟಿದವರು. ಪ್ರೊ॥ ಕೆ.ವಿ. ನಾರಾಯಣ ಅವರು ಪ್ರಾಥಮಿಕ ಹಂತದ ಶಾಲೆಯನ್ನು ಕಂಪ್ಲಾಪುರದಲ್ಲೇ ಮುಗಿಸಿ ಆನಂತರ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪಿ.ಯು.ಸಿ. ಓದಿದರು. ಆನಂತರ ಮೈಸೂರಿನ ಯುವರಾಜ ಕಾಲೇಜಿನಲ್ಲಿ ೧೯೬೭ರಲ್ಲಿ ಬಿಎಸ್‌ಸಿ ಪದವಿ ಪಡೆದರು. ಪದವಿ ನಂತರ ಸ್ನಾತಕೋತ್ತರ ಪದವಿಗೆ ಹೋಗದೆ ೧೯೬೮ರಲ್ಲಿ ಬಿಎಡ್ ಮುಗಿಸಿ ಒಂದು ವರ್ಷ ಕಾಲ ಕುಶಾಲನಗರದ ಹೈಸ್ಕೂಲೊಂದರಲ್ಲಿ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ಆರಂಭದಲ್ಲಿ ವಿಜ್ಞಾನ ವಿಷಯದಲ್ಲಿ ಅಧ್ಯಯನ ಆಸಕ್ತಿ ಹೊಂದಿರುವ ಹೈಸ್ಕೂಲೊಂದರಲ್ಲಿ ಶಿಕ್ಷಕ

ಕೆ.ವಿ.ಎನ್
ಕನ್ನಡದ ನೋಮ್ ಚಾಮ್‌ಸ್ಕಿ

ರಾಗಿ ಕೆಲಸ ನಿರ್ವಹಿಸುತ್ತಿದ್ದ ಕೆ.ವಿ.ಎನ್. ಅವರು ಅದೇಕೋ ಶಿಕ್ಷಕ ವೃತ್ತಿಯನ್ನು ಬಿಟ್ಟು ತಮ್ಮ ಆಸಕ್ತಿ ಅಧ್ಯಯನ ಕ್ಷೇತ್ರವನ್ನೇ ಬದಲಾಯಿಸಿಕೊಂಡು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿಗೆ ಸೇರಿದರು. ಕೆ.ವಿಎನ್. ಅವರು ಕನ್ನಡ ಸ್ನಾತಕೋತ್ತರ ಪದವಿಗೆ ಸೇರಿದ್ದರಿಂದ ಜಿ.ಎಸ್.ಎಸ್. ಮುಂತಾದ ವಿದ್ವಾಂಸರ ಗರಡಿಯಲ್ಲಿ ಪಳಗುವಂತಾಯಿತು. ಸ್ನಾತಕೋತ್ತರ ಪದವಿ ಓದುವಾಗಲೇ ಪುಣೆಯ ಎಸ್.ಎಲ್.ಐನಲ್ಲಿ ಭಾಷಾ ವಿಜ್ಞಾನ ವಿಷಯದಲ್ಲಿ ಅಧ್ಯಯನ ಮಾಡಿ ಸಾಹಿತ್ಯ ಕ್ಷೇತ್ರಕ್ಕೆ ವಿಜ್ಞಾನ ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸನ್ನು ಮಾಡಿದರು. ವಿಜ್ಞಾನದಲ್ಲಿ ಅಧ್ಯಯನ ಮಾಡಿ ಸಾಹಿತ್ಯ ಕ್ಷೇತ್ರಕ್ಕೆ ಬಂದ ಕೆ.ವಿ.ನಾರಾಯಣ ಅವರಿಗೆ ಭಾಷಾಧ್ಯಯನದ ಸರ್ಟಿಫಿಕೇಟ್ ಕೋರ್ಸು ಸಾಹಿತ್ಯವನ್ನು ಮತ್ತೊಂದು ಬಗೆಯಲ್ಲಿ ಸೂಕ್ಷ್ಮವಾಗಿ ನೋಡಲು ಅನುಕೂಲವೇ ಆಯಿತು.

ಕನ್ನಡ ಎಂ.ಎ ಪದವಿಯನ್ನು ೧೯೭೧ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮುಗಿಸಿ ಅಲ್ಲೇ ಸಂಶೋಧನಾ ಸಹಾಯಕರಾಗಿ ಮತ್ತೊಮ್ಮೆ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಆನಂತರ ಕನ್ನಡ ಅಧ್ಯಯನ ಕೇಂದ್ರದಲ್ಲೇ ಉಪನ್ಯಾಸಕರಾಗಿ, ಪ್ರವಾಚಕರಾಗಿ ೧೯೯೨ರ ವರೆಗೆ ಸೇವೆ ಸಲ್ಲಿಸಿದರು. ಈ ಅವಧಿಯಲ್ಲೇ ಅಭಿನವ ಗುಪ್ತನ ಧ್ವನ್ಯಾಲೋಕದ ಮೇಲೆ ಆಳವಾಗಿ ಅಧ್ಯಯನ ಮಾಡಿ ೧೯೮೨ರಲ್ಲಿ ಪಿಎಚ್.ಡಿ ಪದವಿ ಪಡೆದುಕೊಂಡದ್ದಷ್ಟೇ ಅಲ್ಲದೇ ವಿಮರ್ಶಾ ಲೋಕದಲ್ಲಿ ಪ್ರತ್ಯೇಕ ದಾರಿಯೊಂದನ್ನು ಸೃಷ್ಟಿಸಿ ವಿದ್ವತ್ ಲೋಕದ ಗಮನ ಸೆಳೆದಿದ್ದರು. ಕನ್ನಡ ಆಕೃತಿಮಾವಿಜ್ಞಾನ ಯೋಜನೆಯ ಸಹ ಸಂಶೋಧಕರಾಗಿ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್, ಸ್ಟೋನಿಬ್ರೂಕ್‌ನಲ್ಲಿ ಎರಡು ವರ್ಷ (೧೯೮೬-೮೭) ವಿಶೇಷ ಅಧ್ಯಯನ ಮಾಡಿ ಯಶಸ್ವಿಯಾಗಿ ಹಿಂದುರಿಗಿದರು. ಅಮೆರಿಕಾದಿಂದ ಹಿಂದುರುಗಿದ ಮೇಲೆ ಅಧ್ಯಾಪಕ ವೃತ್ತಿಯೊಂದಿಗೆ ಸಾಹಿತ್ಯ ವಿಮರ್ಶೆ ಮುಂದುವರೆಸುವುದರ ಜೊತೆಗೆ ಭಾಷೆಯನ್ನು ಕುರಿತು ಬರೆಯಲು ಆರಂಭಿಸಿದರು.

ಈ ಹೊತ್ತಿಗೆ ಕನ್ನಡ ಸಾರಸ್ವತ ಲೋಕಕ್ಕೆ ಕನ್ನಡ, ಕನ್ನಡ ಸಂಸ್ಕೃತಿಯ ಉಳಿಸುವ ಮತ್ತು ಬೆಳೆಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯಕ್ಕೆ ಕವಿಗಳು, ನಾಟಕಕಾರರಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರು ಮಾಡಿರುವ ಪ್ರೊ॥ ಚಂದ್ರಶೇಖರ ಕಂಬಾರ ಅವರು ಮೊದಲ ಕುಲಪತಿಗಳಾಗಿ ನೇಮಕ ಹೊಂದಿದ್ದರು. ಅವರಿಗೆ ಕನ್ನಡ ವಿಶ್ವವಿದ್ಯಾಲಯವನ್ನು ಇತರೆ ವಿಶ್ವವಿದ್ಯಾಲಯಕ್ಕಿಂತ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಭಿನ್ನವಾಗಿ ಕಟ್ಟುವ ಇರಾದೆ ಇರುವುದರಿಂದ ಅದಕ್ಕೆ ಒಬ್ಬ ಸೂಕ್ಷ್ಮಮತಿಯಾದ ವಿದ್ವತ್ತು ಮತ್ತು ಮಾನವೀಯತೆಯುಳ್ಳ ಅಕಾಡೆಮಿಕ್‌ನ ಮುಂದಾಳತ್ವ ವಹಿಸುವ ವ್ಯಕ್ತಿ ಬೇಕಾಗಿತ್ತು. ಅದಕ್ಕೆ ಕೆ.ವಿ. ನಾರಾಯಣ ಅವರೇ ಸೂಕ್ತ ವ್ಯಕ್ತಿ ಎಂದು ತಿಳಿದ ಕಂಬಾರರು ೧೯೯೨ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಕರೆಸಿಕೊಂಡರು. ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಸಾಹಿತ್ಯ ವಿಮರ್ಶೆ, ನಾಟಕ, ಅನುವಾದ ಕ್ಷೇತ್ರದಿಂದ ತಮ್ಮ ಒಲವನ್ನು ಸಂಶೋಧನೆ ಕಡೆಗೆ ತಿರುಗಿಸಿದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅದುವರೆಗೆ ಹಳೇ ಪರಂಪರೆಯ ಸಂಶೋಧನಾ ವಿಧಾನಕ್ಕೆ ಹೊಸದೊಂದು ಭಾಷ್ಯೆಯನ್ನು ಬರೆದರು. ಹೊಸ ಮಾರ್ಗವೊಂದನ್ನು ಹಾಕಿಕೊಟ್ಟರು. ಮೂಲಭೂತವಾಗಿ ವಿಜ್ಞಾನದ

ಕನ್ನಡ ಸಾರಸ್ವತ ಲೋಕಕ್ಕೆ ಕನ್ನಡ, ಕನ್ನಡ ಸಂಸ್ಕೃತಿಯ ಉಳಿಸುವ ಮತ್ತು ಬೆಳೆಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯಕ್ಕೆ ಕವಿಗಳು, ನಾಟಕಕಾರರಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರು ಮಾಡಿರುವ ಪ್ರೊ॥ ಚಂದ್ರಶೇಖರ ಕಂಬಾರ ಅವರು ಮೊದಲ ಕುಲಪತಿಗಳಾಗಿ ನೇಮಕ ಹೊಂದಿದ್ದರು. ಅವರಿಗೆ ಕನ್ನಡ ವಿಶ್ವವಿದ್ಯಾಲಯವನ್ನು ಇತರೆ ವಿಶ್ವವಿದ್ಯಾಲಯಕ್ಕಿಂತ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಭಿನ್ನವಾಗಿ ಕಟ್ಟುವ ಇರಾದೆ ಇರುವುದರಿಂದ ಅದಕ್ಕೆ ಒಬ್ಬ ಸೂಕ್ಷ್ಮಮತಿಯಾದ ವಿದ್ವತ್ತು ಮತ್ತು ಮಾನವೀಯತೆಯುಳ್ಳ ಅಕಾಡೆಮಿಕ್‌ನ ಮುಂದಾಳತ್ವ ವಹಿಸುವ ವ್ಯಕ್ತಿ ಬೇಕಾಗಿತ್ತು. ಅದಕ್ಕೆ ಕೆ.ವಿ. ನಾರಾಯಣ ಅವರೇ ಸೂಕ್ತ ವ್ಯಕ್ತಿ ಎಂದು ತಿಳಿದ ಕಂಬಾರರು ೧೯೯೨ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಕರೆಸಿಕೊಂಡರು. ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಸಾಹಿತ್ಯ ವಿಮರ್ಶೆ, ನಾಟಕ, ಅನುವಾದ ಕ್ಷೇತ್ರದಿಂದ ತಮ್ಮ ಒಲವನ್ನು ಸಂಶೋಧನೆ ಕಡೆಗೆ ತಿರುಗಿಸಿದರು.

ವಿದ್ಯಾರ್ಥಿಯಾದ ಇವರು, ಸ್ನಾತಕೋತ್ತರ ಪದವಿಯಲ್ಲಿ ಮತ್ತು ಆನಂತರ ಭಾಷಾ ವಿಜ್ಞಾನ ವಿಷಯವನ್ನು ಆಳವಾಗಿ ಅಧ್ಯಯನ ಮಾಡಿದ ಕೆ.ವಿ.ಎನ್ ಅವರು ಕಾವ್ಯ ಮೀಮಾಂಸೆ, ಸಂಶೋಧನೆಗಳಿಂದ ಮತ್ತೊಮ್ಮೆ ತಮ್ಮನ್ನು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡರು. ಸಾಹಿತ್ಯ, ಸಂಶೋಧನೆಯನ್ನು ಸಂಪೂರ್ಣವಾಗಿ ತ್ಯಜಿಸಿದರು ಎಂದರ್ಥವಲ್ಲ. ಹೆಚ್ಚಿನ ಪ್ರಾಶಸ್ತ್ಯ ಭಾಷಾಧ್ಯಯನಕ್ಕೆ ಮೀಸಲಾಗಿಟ್ಟರು.

ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಕೆ.ವಿ.ಎನ್. ಅವರು ಕೇವಲ ಅಧ್ಯಯನಕ್ಕೆ ಸೀಮಿತವಾಗದೆ ಹತ್ತಾರು ಬಗೆಯ ಆಡಳಿತ ಕೆಲಸಗಳನ್ನೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ, ಅಧ್ಯಯನಾಂಗದ ನಿರ್ದೇಶಕರಾಗಿ, ಭಾಷಾ ನಿಕಾಯದ ಡೀನ್ ಆಗಿ ಕೆಲಸ ನಿರ್ವಹಿಸಿದಲ್ಲದೆ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾಗಿ ಸುಮಾರು ಏಳುವರೆ ವರ್ಷ ಕಾಲ ಕೆಲಸ ನಿರ್ವಹಿಸಿದ್ದಾರೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾಗಿಯೂ ಎಲ್ಲ ಕುಲಪತಿಗಳ ಕಾಲದಲ್ಲೂ ಸೇವೆ ಸಲ್ಲಿಸಿದ್ದಾರೆ. ಕೊನೆಗೆ ಎರಡು ಸಲ ಹಂಗಾಮಿ ಕುಲಪತಿಗಳಾಗಿ ಒಟ್ಟು ಒಂದು ವರ್ಷಕ್ಕೂ ಹೆಚ್ಚಿನ ಅವಧಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆಯ ಹಿಂದೆ ಪ್ರೊ.ಕೆ.ವಿ. ನಾರಾಯಣ ಅವರ ಅಪಾರ ಶ್ರಮ ಇದೆ. ಕನ್ನಡ ವಿಶ್ವವಿದ್ಯಾಲಯದ ಉದ್ದೇಶ, ಸ್ವರೂಪ ಮತ್ತು ವಿನ್ಯಾಸ ಹೇಗಿರಬೇಕು ಎಂದು ಖಚಿತವಾಗಿ ಕಂಡುಕೊಂಡವರು ಅವರು. ಕನ್ನಡ ವಿಶ್ವವಿದ್ಯಾಲಯ ಇವತ್ತಿನ ಸ್ಥಿತಿಗೆ ಬೆಳೆಯಲು ಕೆ.ವಿ.ಎನ್. ಅವರ ಕೊಡುಗೆ ಅಪಾರವಾದುದು. ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾದ ಪ್ರೊ॥ ಚಂದ್ರಶೇಖರ ಕಂಬಾರ ಅವರ ಜೊತೆಗೆ ಅಧ್ಯಯನ ಮತ್ತು ಆಡಳಿತದಲ್ಲಿ ಕೈಗೂಡಿಸಿ ಸಂತೋಷ ದುಃಖಗಳೆರಡನ್ನೂ ಸಮಾನವಾಗಿ ಅನುಭವಿಸಿದವರು. ಕನ್ನಡ ವಿಶ್ವವಿದ್ಯಾಲಯ ಇಂದು ಹೀಗೆ ಬೆಳೆದು ನಿಲ್ಲಲು ಕಂಬಾರರ ಕನಸು ಮತ್ತು ಕೆ.ವಿ. ನಾರಾಯಣ ಅವರ ಸಹೋದ್ಯೋಗಿ ಮಿತ್ರರ ಕ್ರಿಯೆಯೇ ಕಾರಣ ಎಂದರೂ ತಪ್ಪಾಗಲಾರದು.

– ೨ –

ಪ್ರೊ॥ ಕೆ.ವಿ. ನಾರಾಯಣ ಅವರ ಬಗ್ಗೆ, ಅವರ ಸಾಹಿತ್ಯದ ಬಗ್ಗೆ ಮಾತನಾಡುವುದು ತುಂಬಾ ಕಷ್ಟದ ಕೆಲಸ ಅಂತ ಅಂದುಕೊಂಡಿದ್ದೇನೆ. ಕೆ.ವಿ ನಾರಾಯಣ ಅವರ ಸಾಹಿತ್ಯದ ಬಗ್ಗೆ ಇದುವರೆಗೂ ಗಂಭೀರವಾದ ವಿಶ್ಲೇಷಣಾತ್ಮಕ ಬರವಣಿಗೆ ಬಂದೇ ಇಲ್ಲ. ಇದು ಅವರ ಬರವಣಿಗೆಯನ್ನು ಹೊಕ್ಕು ವಿಶ್ಲೇಷಿಸುವ ಧೈರ್ಯ ಬಹುಶಃ ಇದುವರೆಗೂ ಯಾರೂ ಮಾಡಿಲ್ಲ. ಅಥವಾ ಇದರ ಹಿಂದೆ ಒಂದು ಸಾಹಿತ್ಯಕ ರಾಜಕಾರಣ ಇದೆ ಎಂದೇ ಭಾವಿಸುತ್ತೇನೆ. (ಸಾಹಿತ್ಯ ಮೀಮಾಂಸೆಯಲ್ಲಿ ಅತ್ಯುನ್ನತ ಸಂಶೋಧನೆಯಾದ ಅಭಿನವ ಗುಪ್ತನ ಧ್ವನ್ಯಾಲೋಕವನ್ನು ಕುರಿತು ನಡೆಸಿದ ಸಂಶೋಧನ ಕೃತಿ ಹೊರಬಂದರೂ ಇದುವರೆಗೂ ಒಂದೇ ಒಂದು ಬರವಣಿಗೆ ಬಂದಿಲ್ಲ. ಉಳಿದ ಬರವಣಿಗೆಗೂ ಇದೆ ಮಾತು ಅನ್ವಯವಾಗುತ್ತದೆ.)

ಕೆ.ವಿ. ನಾರಾಯಣ್ ಅವರ ಬಗೆಗೆ ಮತ್ತು ಅವರ ಬರವಣಿಗೆ ಕುರಿತು ಮಾತಾನಾಡುವ ಮೊದಲು ಸುಮಾರು ಎರಡು ದಶಕಗಳಿಗೂ ಹಿಂದೆ ಅಂದರೆ ೧೯೮೪. ಕೆ.ವಿ. ನಾರಾಯಣ ಅವರಿಗೆ ಆಗ ಕೇವಲ ೩೭ರ ಹರಯ. ಆಗ ಪ್ರಕಟವಾದ ಅವರ ಹುತ್ತವ ಬಡಿದರೆ ನಾಟಕಕ್ಕೆ ಬರೆದ ಮುನ್ನುಡಿಯಲ್ಲಿ ಶ್ರೀ ಟಿ.ಎನ್. ಸೀತಾರಾಮ್ ಅವರು ಬರೆದಿರುವ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸುವ ಮೂಲಕ ನನ್ನ ಬರವಣಿಗೆಯನ್ನು ಆರಂಭಿಸುತ್ತೇನೆ. ಟಿ.ಎನ್. ಸೀತಾರಾಮ್ ಅವರು ಹೇಳಿದ ಮಾತುಗಳು ಈಗಲೂ ಪ್ರಸ್ತುತ ಅನಿಸಿದ್ದರಿಂದ ಆ ಮಾತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

"೩೭ ವರ್ಷ ವಯಸ್ಸಾಗಿದ್ದರೂ ೩೦ರ ಸಭ್ಯ ಯುವಕನಂತೆ ಕಾಣುವ ನಾರಾಯಣ ಮಾತನಾಡುತ್ತ ಹೋದರೆ ೫೦ ವರ್ಷ ಸತತ ಜ್ಞಾನಾರ್ಜನೆ ಮಾಡಿದ ಹಿರಿಯ ಪಂಡಿತನಂತೆ ಅನಿಸತೊಡಗುತ್ತಾರೆ. ಯಾವುದೇ ಹಳಗನ್ನಡದ ಸಂಧಿ ಸಮಾಸಗಳನ್ನೊಳಗೊಂಡಂತೆ ಯಾರಿಗೂ ಅರ್ಥವಾಗದೇ ಕೂತ ವಿಚಿತ್ರ ಪದಗಳ ಅರ್ಥಗಳನ್ನು ಲೀಲಾಜಾಲವಾಗಿ ಹೇಳುವುದರಿಂದ ಹಿಡಿದು ಅತ್ಯಂತ ಸೂಕ್ಷ್ಮ ಎಲೆಕ್ಟ್ರಾನಿಕ್ ವಸ್ತುಗಳು ಹೇಗೆ ಕೆಲಸ ಮಾಡುತ್ತವೆ ಎಂಬುದರವರೆಗೂ ಎಲ್ಲವನ್ನೂ ಸರಳವಾಗಿ ಹೇಳಬಲ್ಲ, ಕೇಳುತ್ತ ಕೂತವರಿಗೆ ಬೆರಗು ಹುಟ್ಟಿಸಬಲ್ಲ ಮನುಷ್ಯ ಈತ. ಪಂಡಿತರುಗಳ ಒಳಗಾಂಭಿರ್ಯ ಮತ್ತು ಆಳದ ಸೂಕ್ಷ್ಮ ಅಹಂಕಾರಗಳಿಂದ ಅವರುಗಳನ್ನು ಭೇಟಿ

ಮಾಡಲು ಹೇಳುವ ನಾನು ಮತ್ತು ನನ್ನಂಥವರು ನಾರಾಯಣ ಬಳಿ ಗಂಟೆಗಟ್ಟಲೆ ಹರಟೆ ಹೊಡೆಯುತ್ತ, ಈತ ಹೊಡೆಯಬಲ್ಲ ವಿಚಿತ್ರ ರತಿಯ ಜೋಕುಗಳಿಂದ ಖುಷಿ ಪಡುತ್ತ ದಿನಗಳನ್ನು ಕಳೆಯಬಲ್ಲೆವು.

ಇತಿಹಾಸ, ಖಗೋಳಶಾಸ್ತ್ರ, ಭಾಷಾ ವಿಜ್ಞಾನ, ಆಂತ್ರೋಪಾಲಜಿ, ತತ್ವಶಾಸ್ತ್ರ, ಅಣುವಿಜ್ಞಾನ ಮುಂತಾದ ಅನೇಕ ವಿಭಿನ್ನ ವಿಚಾರಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಜ್ಞಾನ ಪಡೆದಿರುವ ನಾರಾಯಣನನ್ನು ನಾನು ಕರೆಯುವುದು ಬರೆಯದೇ ಕೂತಿರುವ ಕಾರಂತ ಪ್ಲಸ್ ತೇಜಸ್ವಿ ಎಂದು..."

ಟಿ.ಎನ್. ಸೀತಾರಾಮ್ ಅವರು ಹೇಳುವ ಹಾಗೆ ಭಾಷಾ ವಿಜ್ಞಾನ, ಆಂತ್ರೋಪಾಲಜಿ, ಫಿಲಾಸಫಿ, ಇತಿಹಾಸ, ಕಾವ್ಯಮೀಮಾಂಸೆ, ಸಂಸ್ಕೃತಿ ಚಿಂತನೆ, ವಿಜ್ಞಾನ, ತಂತ್ರಜ್ಞಾನ, ಎಲೆಕ್ಟ್ರಾನಿಕ್ ಹೀಗೆ ಹತ್ತಾರು ವಿಷಯಗಳಲ್ಲಿ ಅಪಾರವಾದ ಪಾಂಡಿತ್ಯ ಇರುವ ಕೆ.ವಿ. ನಾರಾಯಣ ಅವರು ಇಂದಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ತಮ್ಮದೇ ಆದ ವಿಶೇಷ ಐಡೆಂಟಿಟಿ ಪಡೆದುಕೊಂಡಿದ್ದಾರೆ. ತಮ್ಮದೇ ಆದ ಮಾರ್ಗವೊಂದನ್ನು ಹಾಕಿದ್ದಾರೆ. ಈ ಮಾರ್ಗ ಬೇರೆಯವರಿಗೆ ಅನ್ವಯಿಸುವುದಿಲ್ಲ. ಈ ಮಾರ್ಗದಲ್ಲಿ ಕೆ.ವಿ.ಎನ್ ಅವರಿಗೆ ಕೆ.ವಿ.ಎನ್ ಅವರೇ ಸಾಟಿ. ಅದ್ದರಿಂದಲೇ ಇವರನ್ನು ಕನ್ನಡದ ನೋಮ್ ಚಾಮ್‌ಸ್ಕಿ ಎಂದರೂ ತಪ್ಪಾಗಲಾರದು. ಸಾಮಾಜಿಕ ವಿಷಯಗಳನ್ನು, ರಾಜಕಾರಣದ ಪರಿಸ್ಥಿತಿಯನ್ನು, ಪ್ರಭುತ್ವವಾದವನ್ನು ಮತ್ತಿತರ ವಿಷಯಗಳನ್ನು ಸಾರ್ವಜನಿಕವಾಗಿ ನೋಮ್ ಚಾಮ್‌ಸ್ಕಿಯಂತೆ ಮಾತಾಡದೇ ಇದ್ದರೂ ಕೆ.ವಿ.ಎನ್ ಬರವಣಿಗೆ ಹಿಂದೆ ಚಾಮ್‌ಸ್ಕಿಯಂತೆ ಹತ್ತಾರು ಬಗೆಯ ಆಲೋಚನೆಗಳಿವೆ. ದೃಷ್ಟಿಕೋನ ಇದೆ. ಸಾಮಾಜಿಕ ಬದ್ಧತೆ ಇದೆ. ಆದ್ದರಿಂದಲೇ ತಾವು ನಂಬಿದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಕೊನೆವರೆಗೂ ಅದನ್ನು ಉಳಿಸಿಕೊಂಡು ಬಂದವರಾಗಿದ್ದಾರೆ.

ಕೆ.ವಿ. ನಾರಾಯಣ ಅವರು ಅನೇಕ ವರ್ಷಗಳ ಕಾಲ ಯಾವ ಕೃತಿಗಳನ್ನು ಪ್ರಕಟಪಡಿಸಲಿಲ್ಲ. ಕೃತಿ ಪ್ರಕಟಣೆ ಬಗೆಗೆ ಅವರಿಗೆ ಅಂಥ ಆಸಕ್ತಿಯೂ ಇರಲಿಲ್ಲ. ಕನ್ನಡ ವಿಶ್ವವಿದ್ಯಾಲಯದಲ್ಲಿ ತಾವು ರೂಪಿಸಿದ ಯೋಜನೆಗಳ ಪ್ರಕಟಣೆ ಸಂದರ್ಭದಲ್ಲಿ ಅವರೊಂದಿಗೆ ಯೋಜನೆಗಳಲ್ಲಿ ಕೆಲಸ ಮಾಡಿದ ಕಿರಿಯರನ್ನು ಅತ್ಯಂತ ಪ್ರೀತಿಯಿಂದ ಕಂಡಿದ್ದಲ್ಲದೆ ಅವರನ್ನು ಸಮಾನ ಲೇಖಕರೆಂದು ಪರಿಗಣಿಸಿ ಪ್ರಕಟಿಸಲು ಅನುವು ಮಾಡಿಕೊಟ್ಟಿದ್ದಾರೆ. ಇದುವರೆಗೂ ಬಂದ ಕೆ.ವಿ.ಎನ್. ಅವರ ಬಹುತೇಕ ಕೃತಿಗಳು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಯೋಜನೆಗಳಾಗಿವೆ. ಇಲ್ಲವೆ ಬೇರೆಯವರ ಒತ್ತಾಯದ ಮೇರೆಗೆ ಪ್ರಕಟಗೊಂಡಿವೆ.

– ೩ –

ಪ್ರೊ|| ಕೆ.ವಿ. ನಾರಾಯಣ ಅವರನ್ನು ಮತ್ತು ಅವರ ಬರವಣಿಗೆಯನ್ನು ವಿಶ್ಲೇಷಿಸುವುದು ಅಷ್ಟೊಂದು ಸುಲಭವಲ್ಲ. ಏಕೆಂದರೆ ಅವರ ಬರವಣಿಗೆ ಹೆಚ್ಚು ವಿವರಗಳನ್ನು ಹೊದಿರುವುದಿಲ್ಲ. ಬದಲಿಗೆ ಹೇಳುವ ವಿಷಯದ ಎಸೆನ್ಸಿನ ಹಾಗೆ ಅತ್ಯಂತ ಸಂಕ್ಷಿಪ್ತ ರೂಪವನ್ನು ಹೊಂದಿರುತ್ತದೆ. ಹಾಗಾಗಿ ಅವರ ಯಾವ ಲೇಖನವೂ ದೀರ್ಘವಾಗಿ ಇಲ್ಲ. ಕೆ.ವಿ.ಎನ್. ಅವರ ಬರವಣಿಗೆ ಅಪಾರವಾದ ಓದಿನ ಹಿನ್ನೆಲೆ ಇರುತ್ತದೆ. ಆದ್ದರಿಂದಲೇ ಬರವಣಿಗೆಗೆ ಅವಶ್ಯಕವಾದ ಅನೇಕ ಉದಾಹರಣೆಗಳನ್ನು ಬೇರೆ ಬೇರೆ ಸಿಸ್ಟುಗ

ಳಿಂದ ಎದ್ದು ಬರುತ್ತವೆ. ಈ ಉದಾಹರಣೆಗಳ ಪೂರ್ಣ ವಿವರಕ್ಕೆ ಹೋಗದೆ ಅದು ಓದಗರಿಗೆ ಗೊತ್ತಿದೆ ಎಂದು ತಿಳಿದು ಮುಂದೆ ಹೋಗುತ್ತಾರೆ. ಜೊತೆಗೆ ಸೈದ್ಧಾಂತಿಕವಾಗಿ ಕ್ಲ್ಯಾರಿಟಿ ಇರುತ್ತದೆ. ಒಟ್ಟಾರೆಯಾಗಿ ಅವರ ಬರವಣಿಗೆಯನ್ನು ಮೂರು ಕಾರಣಗಳಿಂದ ವಿವರಿಸಬಹುದು ಎನಿಸುತ್ತದೆ.

೦೧. ಅಧ್ಯಯನ ದೃಷ್ಟಿಕೋನ

೦೨. ಅಧ್ಯಯನ ವಿಶ್ಲೇಷಣೆಯ ವಿಧಾನ

೦೩. ಬರವಣಿಗೆಯ ಸ್ವರೂಪ

ಪ್ರೊ|| ಕೆ.ವಿ. ನಾರಾಯಣ ಅವರ ಬರವಣಿಗೆ ಹಿಂದೆ ಒಂದು ಸ್ಪಷ್ಟವಾದ ದೃಷ್ಟಿಕೋನ ಇರುತ್ತದೆ. ಯಾವುದೇ ವಿಷಯ ಕುರಿತು ಚರ್ಚಿಸುವಾಗ ಅದರ ಹಿಂದೆ ಅಪಾರವಾದ ಓದು ಮತ್ತು ಸ್ಪಷ್ಟವಾದ ನಿಲುವು ಇರುತ್ತದೆ. ಯಾವುದೇ ಗೊಂದಲಗಳು ಇರುವುದಿಲ್ಲ. ಉದಾಹರಣೆಗೆ ಕನ್ನಡ ಸಂಶೋಧನಾ ವಿಧಾನ ಕುರಿತು ಅವರ ಲೇಖನವನ್ನೇ ತೆಗೆದುಕೊಳ್ಳಬಹುದು. ಇದುವರೆಗಿನ ಸಂಶೋಧನಾ ವಿಧಾನದ ಹಿಂದಿನ ತಾತ್ವಿಕತೆಯನ್ನು ಪರಾಮರ್ಶಿಸುವುದರೊಂದಿಗೆ ಇನ್ನೊಂದು ಸ್ಪಷ್ಟವಾದ ದೃಷ್ಟಿಕೋನ ಇಡುತ್ತಾರೆ. ಇದುವರೆಗಿನ ಸಂಶೋಧನೆಗಳು ಯಾವುದನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತವೆ. ಅವುಗಳ ಹಿಂದಿನ ಭ್ರಮೆ ಯಾವ ಬಗೆಯದು ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಜೊತೆಗೆ ಸಂಶೋಧನೆಯ ಹೊಸ ಸಾಧ್ಯತೆಗಳ ಬಗ್ಗೆ ವಿವರಿಸುತ್ತಾರೆ. ಉದಾಹರಣೆಗೆ ಪ್ರೊ|| ಎಂ.ಎಂ. ಕಲಬುರ್ಗಿ ಅವರ ಅಭಿನಂದನಾ ಗ್ರಂಥಕ್ಕೆ ಬರೆದ ಸಂಶೋಧನೆ: ಪರಿಕಲ್ಪನೆ ಎನ್ನುವ ಲೇಖನವನ್ನು ನೋಡಬಹುದು. ಈ ಲೇಖನದಲ್ಲಿ ಸಂಶೋಧನೆ ಕುರಿತು ಕನ್ನಡದಲ್ಲಿ ಇರುವ ಸಿದ್ಧ ಮಾದರಿಯನ್ನು ಒಡೆದವರು ಕೆ.ವಿ.ಎನ್. ಸಾಹಿತ್ಯ ಮತ್ತು ಚರಿತ್ರೆಯಲ್ಲಿ ಕೇವಲ ಆಕರ ಸಂಗ್ರಹ, ಮಾಹಿತಿ ಸಂಗ್ರಹವೇ ಸಂಶೋಧನೆ ಎಂದು ನಂಬಲಾಗಿತ್ತು. ಈಗಲೂ ಕೂಡ. ಸಾಹಿತ್ಯದಲ್ಲಿ ವಿಮರ್ಶೆಗೂ ಸಂಶೋಧನೆಗೂ ಅಂಥ ವ್ಯತ್ಯಾಸ ಇಲ್ಲ. ಅದನ್ನು ತಮ್ಮ ಸಂಶೋಧನೆ: ಪರಿಕಲ್ಪನೆ ಎಂಬ ಲೇಖನದಲ್ಲಿ ಅದನ್ನು ಛಿದ್ರಗೊಳಿಸಿರುವುದನ್ನು ನೋಡಬಹುದು.

"ಸಂಶೋಧನೆ ಎಂಬ ಚಟುವಟಿಕೆಯ ಸ್ವರೂಪವನ್ನು ಈಗ ನಾವು ವಿವರಿಸಿಕೊಳ್ಳುತ್ತಿರುವ ವಿಧಾನದಲ್ಲಿ ಇರುವ ಕೆಲವು ಭ್ರಮೆಗಳನ್ನು ಪರಿಶೀಲಿಸೋಣ. ಇವು ಭ್ರಮೆಗಳು. ಏಕೆಂದರೆ ಇವನ್ನು ನಾವು ನಂಬಿದ್ದೇವೆ. ಆದರೆ ಇವು ಸತ್ಯವಲ್ಲ." (ಮಹಾ ಮಾರ್ಗ: ಪುಟ ೭, ಸಂ. ಸದಾನಂದ ಕನವಳ್ಳಿ, ವೀರಣ್ಣ ರಾಜೂರು) ಭ್ರಮೆ ೧. ಸಂಶೋಧಕರು ಸತ್ಯವನ್ನು ಶೋಧಿಸುತ್ತಾರೆ. **ಭ್ರಮೆ ೨. ಸಂಶೋಧನೆಯೆಂಬುದು ಒಂದು ವಸ್ತುನಿಷ್ಠ, ವ್ಯಕ್ತಿ ನಿರಪೇಕ್ಷವಾದ ಚಟುವಟಿಕೆ ಭ್ರಮೆ ೩. ಸಂಶೋಧನೆ ಎಂಬುದು ಮೌಲ್ಯ ನಿರಪೇಕ್ಷಿ ಚಟುವಟಿಕೆ** ಈ ಲೇಖನ ಬಂದ ಮೇಲೂ ಕರ್ನಾಟಕದಾದ್ಯಂತ ಪ್ರೊ|| ಚಿದಾನಂದ ಮೂರ್ತಿ ಅವರ ಸಂಶೋಧನೆ ಪುಸ್ತಕದಲ್ಲಿ ಇರುವ ವಿಷಯವೇ ಸಂಶೋಧನಾ ವಲಯದಲ್ಲಿ ಈಗಲೂ ಪ್ರಚಲಿತದಲ್ಲಿರುವುದನ್ನು ನೋಡಬಹುದಾಗಿದೆ. ಮೊದಲೇ ತೀರ್ಮಾನಿಸಿದ ಮಾದರಿಯೊಳಗೆ ಮಾಹಿತಿ ಸಂಗ್ರಹಿಸಿ ಕೊಡುವುದನ್ನು ಸಂಶೋಧನೆ ಎಂದು ಕರೆಯುವುದು ಕೆ.ವಿ.ಎನ್. ಸರಿಯೇ ಎನ್ನುವ ಪ್ರಶ್ನೆ ಹಾಕಿಕೊಂಡು, ಅದೊಂದು ಭ್ರಮೆ ಹೇಗೆಂದು ವಿಶ್ಲೇಷಿಸುತ್ತಾರೆ. ಜೊತೆಗೆ ಸಂಶೋಧನೆ ಎನ್ನುವುದು ಅಧ್ಯಯನಕಾರರು ಅಧ್ಯಯನ ಮಾಡುತ್ತ ಮಾಡುತ್ತ ಅದಕ್ಕೆ ತನ್ನದೇ ಆದ ಚೌಕಟ್ಟೊಂದನ್ನು ರೂಪಿಸಿಕೊಳ್ಳುವಂಥದ್ದು ಎಂದು ಪ್ರತಿಪಾದಿಸುತ್ತಾರೆ. ಅಥವಾ ಅದರ ಪ್ರಾಸಸನ್ನು ಬಿಡಿಸಿ ಹೇಳುತ್ತಾರೆ.

ಪ್ರೊ|| ಕೆ.ವಿ ನಾರಾಯಣ ಅವರ ವಿಶ್ಲೇಷಣಾ ವಿಧಾನದ ಬಗ್ಗೆ ಕೂಡ ಇದೇ ಮಾತನ್ನು ಹೇಳಲು ಸಾಧ್ಯವಿದೆ. ಒಂದು ವಸ್ತುವನ್ನು ಅಥವಾ ಒಂದು ವಿಷಯವನ್ನು ಕುರಿತು ಮಾತನಾಡುವಾಗ, ಸಾಮಾನ್ಯವಾಗಿ ಎರಡು ಬಗೆಯ ಧೋರಣೆಗಳು ಇರುತ್ತವೆ. ಅಧ್ಯಯನಕಾರರು ಅಥವಾ ಅದನ್ನು ಕುರಿತು ಮಾತನಾಡುವವರು ಒಂದರ ಪರವಾಗಿ ತಮ್ಮ ನಿಲುವನ್ನು ಮಂಡಿಸುತ್ತಾರೆ. ಈ ಬಗೆಯ ನಿಲುವು ಬಹುತೇಕ ಎಲ್ಲ ಬರಹಗಾರರಲ್ಲಿ ನೋಡಬಹುದಾಗಿದೆ. ಆದರೆ ಕೆ.ವಿ.ಎನ್. ಅವರು ಯಾವುದೇ ಒಂದು ನಿಲುವಿನ ಪರ ವಹಿಸಿ ಮಾತನಾಡುವುದಿಲ್ಲ. ಬದಲಿಗೆ ಅದನ್ನು ಇನ್ನೊಂದು ದೃಷ್ಟಿಕೋನದಿಂದ, ಮತ್ತೊಂದು ಡೈಮೆನ್ಶನ್‌ನಿಂದ ನೋಡುತ್ತಾರೆ. ಆದ್ದರಿಂದಲೇ ಕೆ.ವಿ.ಎನ್. ಅವರು ಎಲರಿಗಿಂತ ಭಿನ್ನ. ಉದಾ:– 'ಋ' ಕಾರದ ಬಗ್ಗೆ ಅವರು ಹೇಳುವ ಮಾತುಗಳು, ಕನ್ನಡ ಭಾಷೆಗೆ ಕ್ಲಾಸಿಕಲ್ ಭಾಷೆಯ ಮಾನ್ಯತೆ ಕೊಡಬೇಕು ಎನ್ನುವ ಹೋರಾಟ

ಪ್ರೊ|| ಕೆ.ವಿ. ನಾರಾಯಣ ಅವರ ಬರವಣಿಗೆ ಹಿಂದೆ ಒಂದು ಸ್ಪಷ್ಟವಾದ ದೃಷ್ಟಿಕೋನ ಇರುತ್ತದೆ. ಯಾವುದೇ ವಿಷಯ ಕುರಿತು ಚರ್ಚಿಸುವಾಗ ಅದರ ಹಿಂದೆ ಅಪಾರವಾದ ಓದು ಮತ್ತು ಸ್ಪಷ್ಟವಾದ ನಿಲುವು ಇರುತ್ತದೆ. ಯಾವುದೇ ಗೊಂದಲಗಳು ಇರುವುದಿಲ್ಲ. ಉದಾಹರಣೆಗೆ ಕನ್ನಡ ಸಂಶೋಧನಾ ವಿಧಾನ ಕುರಿತು ಅವರ ಲೇಖನವನ್ನೇ ತೆಗೆದುಕೊಳ್ಳಬಹುದು. ಇದುವರೆಗಿನ ಸಂಶೋಧನಾ ವಿಧಾನದ ಹಿಂದಿನ ತಾತ್ವಿಕತೆಯನ್ನು ಪರಾಮರ್ಶಿಸುವುದರೊಂದಿಗೆ ಇನ್ನೊಂದು ಸ್ಪಷ್ಟವಾದ ದೃಷ್ಟಿಕೋನ ಇಡುತ್ತಾರೆ.

ಅಥವಾ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಸುವ ಬಗ್ಗೆ, ಅಥವಾ ಕನ್ನಡದ ಮುಂದಿರುವ ಹೊಸ ಸವಾಲುಗಳ ಬಗ್ಗೆ ಅನೇಕ ವಿದ್ವಾಂಸರು ಹೇಳುವ ರೀತಿಗೂ ಕೆ.ವಿ.ಎನ್. ಅವರು ಅದನ್ನು ಅರ್ಥೈಸುವ ರೀತಿಗೂ ಸಾಕಷ್ಟು ಭಿನ್ನತೆ ಇರುವುದನ್ನು ಕಾಣಬಹುದು.

ಬರವಣಿಗೆಯ ಸ್ವರೂಪ ಕುರಿತು ಸಾಹಿತ್ಯ ಲೋಕದಲ್ಲಿ ಕೆ.ವಿ.ಎನ್. ಅವರ ಬರವಣಿಗೆ ಬಗ್ಗೆ ಅನೇಕ ಆಪಾದನೆಗಳಿವೆ. ಕೆ.ವಿ.ಎನ್. ಅವರ ಬರವಣಿಗೆ ಅರ್ಥವಾಗುವುದಿಲ್ಲ. ಅವರ ಮಾತು ಸರಳವಾಗಿರುತ್ತದೆ. ಬರವಣಿಗೆ ಭಾಷೆ ಕ್ಲಿಷ್ಟವಾದುದು. ಇದು ಒಂದು ಸಾಮಾನ್ಯ ಹೇಳಿಕೆ. ಅಥವಾ ಹೀಗೆ ಹೇಳಲು ಕೆಲವು ಕಾರಣಗಳಿರಬಹುದು. ಕೆ.ವಿ.ಎನ್. ಅವರು ವಿವರಣಾತ್ಮಕವಾಗಿ ಬರವಣಿಗೆ ಮಾಡುವುದಿಲ್ಲ. ತಾವು ಹೇಳುವ ವಿಷಯದ ಬಗ್ಗೆ ಗರಿಷ್ಠ ಮಟ್ಟದ ಸಂಕ್ಷಿಪ್ತೀಕರಣ ಮಾಡಿರುತ್ತಾರೆ. ಒಂದು ವಾಕ್ಯದಲ್ಲಿ ಒಂದೇ ಒಂದು ಪದ ತೆಗೆದರೂ ಆ ವಾಕ್ಯ ಅರ್ಥ ಕಳೆದುಕೊಳ್ಳುತ್ತದೆ. ಇಲ್ಲವೆ ಬೇರೊಂದು ಅರ್ಥ ಬರುತ್ತದೆ. ಹಾಗಾಗಿ ಕೆ.ವಿ.ಎನ್. ಅವರ ಭಾಷೆಗೆ ಸಂಬಂಧಿಸಿದ ಯಾವ ಲೇಖನವೂ ದೀರ್ಘವಾಗಿಲ್ಲ. ಹೀಗೆ ಸಂಕ್ಷಿಪ್ತವಾಗಿ ಇರಲು ಇನ್ನೊಂದು ಕಾರಣ ಇರಬಹುದು. ಓದುಗರಿಗೆ ವಿಷಯ ಗೊತ್ತಿದೆ ಎಂದು ಅನೇಕ ವಿಷಯಗಳು ವಿವರಿಸಲು ಹೋಗುವುದಿಲ್ಲ. ಹಾಗಾಗಿ ಪೂರಕವಾದ ಆ ವಿಷಯ ಗೊತ್ತಿಲ್ಲದೇ ಇದ್ದರೂ ಆ ಬರವಣಿಗೆ ಅರ್ಥವಾಗವುದಿಲ್ಲ. ಬಹುಶಃ ಕೆ.ವಿ.ಎನ್. ಅವರ ಬರವಣಿಗೆ ಬಗ್ಗೆ ಈ ಆಪಾದನೆ ಬರಲು ಇದೂ ಒಂದು ಕಾರಣ ಇರಬಹುದು. ಎನಿಸುತ್ತದೆ.

ಇತ್ತೀಚೆಗೆ ಮಯೂರ ಪತ್ರಿಕೆಯಲ್ಲಿ ಪ್ರೊ|| ಕೆ.ವಿ. ನಾರಾಯಣ ಅವರನ್ನು ಸಂದರ್ಶನ ಮಾಡಿದಾಗ ಭಾರತೀಯ ಕಾವ್ಯ ಮೀಮಾಂಸೆ ಬಗ್ಗೆ ಹೇಳಿರುವ ಮಾತುಗಳು ಯಾವುದೇ ಪಾರಂಪರಿಕ ವಿದ್ವಾಂಸರನ್ನು ಕೆಣಕದೇ ಇರಲಾರವು. ಏಕೆಂದರೆ ತಿನಂ. ಶ್ರೀಕಂಠಯ್ಯ ಅವರ ಭಾರತೀಯ ಕಾವ್ಯ ಮೀಮಾಂಸೆ ಕೃತಿಯನ್ನು ಕನ್ನಡ ವಿಮರ್ಶಾ ಜಗತ್ತನ್ನು ಐವತ್ತು ವರ್ಷ ಆಳಿದ ಖಳ ಕೃತಿ ಎಂದು ದಾಖಲಿಸಿರುವುದು ಸಣ್ಣ ವಿಷಯವೇನಲ್ಲ. ಆದರೆ ಒಂದು ಸಲ ಅದನ್ನು ಸ್ವಲ್ಪ ಕೂಲಂಕಶವಾಗಿ ಯೋಚಿಸಲು ಆರಂಭಿಸಿದರೆ ಹೌದು ಅದು ಸತ್ಯ ಅನಿಸುತ್ತದೆ. ಏಕೆಂದರೆ ಅದನ್ನು ಈ ವಿಧಾನದಲ್ಲಿ ನೋಡುವುದೇ ಅಪರಾಧವೆಂದು ಪರಿಗಣಿಸುವ ನಮಗೆ ಇದ್ದಕ್ಕಿದ್ದ ಹಾಗೆ ಆ ರೀತಿ ನೋಡುವುದು ಕಷ್ಟ ಸಾಧ್ಯ. ಕನ್ನಡ ಸಾಹಿತ್ಯವನ್ನು ಕಳೆದ ಸುಮಾರು ೫೦ ವರ್ಷಗಳ ಕಾಲ ಭಾರತೀಯ ಕಾವ್ಯ ಮೀಮಾಂಸೆ ಪರಿಧಿಯೊಳಗೇನೆ ಕಾವ್ಯ ಕಟ್ಟುವ ಬಗೆ, ಅದರಲ್ಲಿರುವ ಧ್ವನಿ, ರಸ ಮತ್ತಿತರ ವಿಷಯಗಳೊಳಗೇನೆ ಸುತ್ತುತ್ತಿದ್ದ ಕನ್ನಡ ಸಾಹಿತ್ಯ ಮೀಮಾಂಸಕರು ಅದರಾಚೆಗೆ ಸಾಹಿತ್ಯ ಕೃತಿಯೊಂದನ್ನು ಪರಾಮರ್ಶಿಸುವ ಬಗೆಯೊಂದು ಇದೆ ಎಂದು ಕೂಡ ಮನಗಂಡಿರಲಿಲ್ಲ. ಆದರೆ ಈಗ ಅದು ಸತ್ಯ ಎನಿಸುತ್ತದೆ. ಆದರೆ ಇದನ್ನು ಅನೇಕ ವಿದ್ವಾಂಸರು ಭಾರತೀಯ ಕಾವ್ಯ ಮೀಮಾಂಸೆ ನಮಗೆ ಬೇಕೆ ಬೇಕು. ಅದೊಂದು ಆಚಾರ್ಯ ಕೃತಿ ಎಂದು ಹೇಳುವವರನ್ನು ನೋಡಿದ್ದೇವೆ. ಇನ್ನು ಕೆಲವರು ಭಾರತೀಯ ಕಾವ್ಯ ಮೀಮಾಂಸೆ ಕೃತಿಯನ್ನು ಗಮನಿಸದೇ ನಮಗೆ ಬೇಕಾಗಿಲ್ಲ ಎಂದಷ್ಟೇ ಹೇಳುವುದನ್ನು ನೋಡುತ್ತೇವೆ. ಆದರೆ ಕೆ.ವಿ.ಎನ್. ಅವರು ಅದು ಕನ್ನಡ ಸಾಹಿತ್ಯ ವಿಮರ್ಶೆಯನ್ನು ಬೇರೆ ದೃಷ್ಟಿಕೊನದಿಂದ ನೋಡಲು ಹೇಗೆ

ಇತ್ತೀಚೆಗೆ ಮಯೂರ ಪತ್ರಿಕೆಯಲ್ಲಿ ಪ್ರೊ|| ಕೆ.ವಿ. ನಾರಾಯಣ ಅವರನ್ನು ಸಂದರ್ಶನ ಮಾಡಿದಾಗ ಭಾರತೀಯ ಕಾವ್ಯ ಮೀಮಾಂಸೆ ಬಗ್ಗೆ ಹೇಳಿರುವ ಮಾತುಗಳು ಯಾವುದೇ ಪಾರಂಪರಿಕ ವಿದ್ವಾಂಸರನ್ನು ಕೆಣಕದೇ ಇರಲಾರವು. ಏಕೆಂದರೆ ತಿನಂ. ಶ್ರೀಕಂಠಯ್ಯ ಅವರ ಭಾರತೀಯ ಕಾವ್ಯ ಮೀಮಾಂಸೆ ಕೃತಿಯನ್ನು ಕನ್ನಡ ವಿಮರ್ಶಾ ಜಗತ್ತನ್ನು ಐವತ್ತು ವರ್ಷ ಆಳಿದ ಖಳ ಕೃತಿ ಎಂದು ದಾಖಲಿಸಿರುವುದು ಸಣ್ಣ ವಿಷಯವೇನಲ್ಲ. ಆದರೆ ಒಂದು ಸಲ ಅದನ್ನು ಸ್ವಲ್ಪ ಕೂಲಂಕಶವಾಗಿ ಯೋಚಿಸಲು ಆರಂಭಿಸಿದರೆ ಹೌದು ಅದು ಸತ್ಯ ಅನಿಸುತ್ತದೆ. ಏಕೆಂದರೆ ಅದನ್ನು ಈ ವಿಧಾನದಲ್ಲಿ ನೋಡುವುದೇ ಅಪರಾಧವೆಂದು ಪರಿಗಣಿಸುವ ನಮಗೆ ಇದ್ದಕ್ಕಿದ್ದ ಹಾಗೆ ಆ ರೀತಿ ನೋಡುವುದು ಕಷ್ಟ ಸಾಧ್ಯ.

ಬಿಡಲಿಲ್ಲ ಎನ್ನುವುದನ್ನು ವಿವರಿಸುತ್ತಾರೆ. ಆದ್ದರಿಂದಲೇ ಅದನ್ನು ಖಳ ಕೃತಿ ಎಂದು ಕರೆಯಲು ಸಾಧ್ಯವಾದದ್ದು.

ತಿನಂ.ಶ್ರೀ ಅವರ ಭಾರತೀಯ ಕಾವ್ಯ ಮೀಮಾಂಸೆ ಕುರಿತು ಹೇಳಿರುವ ಕೆ.ವಿ.ಎನ್. ಅವರ ಮಾತು ಒಂದು ಕ್ಷಣ ಯಾರನ್ನಾದರೂ ದಿಗಿಲುಗೊಳಿಸದೇ ಇರಲಾರದು. ಯಾಕೆಂದರೆ ಭಾರತೀಯ ಕಾವ್ಯ ಮೀಮಾಂಸೆ ಕನ್ನಡ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಲು ಇರುವ ಏಕೈಕ ಮೂಲ ಪಠ್ಯ ಎಂದು ನಂಬಿದ್ದೇವೆ. ಭಾರತೀಯ ಕಾವ್ಯ ಮೀಮಾಂಸೆ ಬಿಟ್ಟು ಸಾಹಿತ್ಯದ ಅಧ್ಯಯನ ಅಸಾಧ್ಯ ಎಂದು ನಂಬಿದ್ದೇವೆ. ಈ ನಂಬಿಕೆಗೆ ಕಾರಣಗಳು ಏನೇ ಇರಬಹುದು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಹೀಗೆ ನಂಬಿಸಿರುವುದಂತೂ ಸತ್ಯ. ಆದ್ದರಿಂದಲೇ ಈ ನಂಬಿಕೆಗೆ ದಿಢೀರ ಧಕ್ಕೆ ಬಂದಾಗ ಕೆ.ವಿ.ಎನ್. ಅವರೇ ಖಳನಾಯಕರಂತೆ ಕಾಣುತ್ತಾರೆ. ಈಗಾಗಲೇ ಱ ಕಾರದ ಬಗೆಗಿನ ವಾದ, ಕ್ಲಾಸಿಕಲ್ ಲಾಂಗ್ವೇಜ್ ಬಗೆಗಿನ ವಾದ ಅನೇಕರನ್ನು ಈ ರೀತಿ ಪ್ರೇರೇಪಿಸಿದೆ. ಅನೇಕ ವಿದ್ವಾಂಸರು ತಮ್ಮ ಸ್ವನಿಲುವುಗಳಿಗಿಂತ ಇನ್ನಿತರ ಹಿರಿಯ ವಿದ್ವಾಂಸರ ಹೇಳಿಕೆ ಮೇಲೆ ಅವಲಂಬನೆ ಆಗಿರುವುದೇ ಇದಕ್ಕೆ ಕಾರಣ ಎನಿಸುತ್ತದೆ.

ನನ್ನ ಈ ಲೇಖನದಲ್ಲಿ ಪ್ರೊ|| ಕೆ.ವಿ. ನಾರಾಯಣ ಅವರ ಯಾವುದೇ ಕೃತಿಯನ್ನು ಇಟ್ಟು ಪರಿಶೀಲನೆ ಮಾಡುತ್ತಿಲ್ಲ. ಅದು ಇಲ್ಲಿ ಮುಖ್ಯವೂ ಅಲ್ಲ ಎಂದು ಭಾವಿಸಿದ್ದೇನೆ. ಕೆ.ವಿ.ಎನ್. ಅವರ ಒಟ್ಟು ಬರವಣಿಗೆ ಹಿಂದೆ ಇರುವ ದೃಷ್ಟಿಕೋನ, ವಿಶ್ಲೇಷಣೆಯ ವಿಧಾನ ಮತ್ತು ಬರವಣಿಗೆಯ ಸ್ವರೂಪ ಯಾವ ಬಗೆಯದು ಎನ್ನುವುದನ್ನು ಕುರಿತು ಮಾತ್ರ ಇಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ. ಈ ಚರ್ಚೆಗೆ ಪೂರಕವಾಗಿ ಕೆಲವು ಲೇಖನಗಳನ್ನು ಪ್ರಸ್ತಾಪಿಸಿದ್ದೇನೆ. ಜೊತೆಗೆ ಕೊನೆಯಲ್ಲಿ ಪ್ರೊ|| ಕೆ.ವಿ. ನಾರಾಯಣ ಅವರ ಒಟ್ಟು ಸಾಹಿತ್ಯ ಕೃಷಿಯ ವಿವರಗಳನ್ನು ನೀಡಿದ್ದೇನೆ.

ಈಗಲೂ ಪ್ರಸ್ತುತ ರಾಜ್ಯ ರಾಜಕಾರಣ ಮತ್ತು ಸಾಂತ್ಯ ವಲಯದಲ್ಲಿ ಕನ್ನಡ ಕ್ಲಾಸಿಕಲ್ ಲಾಂಗ್ವೇಜ್ ಆಗಬೇಕೊ ಬೇಡವ್ರೋ ಎನ್ನುವ ಪರ ವಿರೋಧದ ಚರ್ಚೆಗೆ ಹೋಗದೆ ಅದರ ಹಿಂದಿನ ದೃಷ್ಟಿಕೋನ ಯಾವುದು? ಅದರ ಹಿಂದೆ ನಡೆಯುತ್ತಿರುವ ರಾಜಕಾರಣದ ಸ್ವರೂಪ ಎಂಥದ್ದು ಎನ್ನುವುದನ್ನು ವಿವರಿಸಿ ಹೇಳುತ್ತಾರೆ. ತೀರ್ಮಾನವನ್ನು ಓದುಗರಿಗೆ ಬಿಡುತ್ತಾರೆ. ಅಥವಾ ಱ ಕಾರದ ಚರ್ಚೆಯನ್ನೇ ತೆಗೆದುಕೊಳ್ಳೋಣ. ಱ ಕಾರದ ಚರ್ಚೆಯಲ್ಲಿ ಮುಖ್ಯವಾಗಿ ನಡೆದ ಚರ್ಚೆ ಎಂದರೆ ಕೆಲವು ವಿದ್ವಾಂಸರು ಱ ಕಾರ ಕನ್ನಡಕ್ಕೆ ಬೇಕು ಎಂತಲು ಅದಕ್ಕೆ ಕೆಲವು ಸಿದ್ಧ ಮಾದರಿಯ ಕಾರಣಗಳನ್ನು ನೀಡಿರುವುದು. ಇದಕ್ಕೆ ವಿರೋಧವಾಗಿರುವ ಗುಂಪು ಱ ಕಾರ ಕನ್ನಡಕ್ಕೆ ಬೇಕಾಗಿಲ್ಲ ಎಂತಲೂ ಅದರಿಂದ ಕನ್ನಡಕ್ಕೆ ಏನೂ ಪ್ರಯೋಜನ ಇಲ್ಲವೆಂತಲೂ ವಾದ ಮಾಡಿರುವುದನ್ನು ನೋಡಿದ್ದೇವೆ. ಕೆ.ವಿ.ಎನ್. ಅವರ ವಾದ ಈ ಎರಡೂ ನಿಲುವಿನವರಂತಿರದೆ ಱ ಕಾರ ಕನ್ನಡದಲ್ಲಿ ಬೆಳೆದು ಬಂದ ಬಗೆಯನ್ನು ಮತ್ತು ಕನ್ನಡದಲ್ಲಿ ಱ ಕಾರದ ಹಾಗೆಯೇ ಎದುರಿಸಿದ ಅನೇಕ ಅಕ್ಷರಗಳ ಚರಿತ್ರೆಯನ್ನು ಓದುಗರ ಮುಂದಿಡುತ್ತಾರೆ.

ಕಾಲಾಂತರದಲ್ಲಿ ಜನಸಾಮಾನ್ಯರು ತಮಗೆ ಬೇಕಾದದ್ದನ್ನು ಮಾತ್ರ ಉಳಿಸಿಕೊಳ್ಳುತ್ತಾರೆ. ಅವರು ಯಾವ ಪರ ವಿರೋಧದ ವಿದ್ವಾಂಸರನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಜೊತೆಗೆ ಅಕ್ಷರಗಳು ಹೀಗೆ ಕೈ ಬಿಡಲು ಕಾರಣವನ್ನು ಸ್ಪಷ್ಟವಾಗಿ ಕೊಡುತ್ತಾರೆ. ಗಳ ಉಚ್ಚಾರಣೆ ರ ಳ ಗಳ ಉಚ್ಚಾರಣೆಗೆ ತೀರ ಹತ್ತಿರವಾದವು. ಸಾಮಾನ್ಯವಾಗಿ ಯಾವುದೇ ಭಾಷೆಯಲ್ಲಿ ಹೀಗೆ ಆಡು ಮಾತು ಮತ್ತು ಬರವಣಿಗೆಯಲ್ಲಿ ಬದಲಾವಣೆ ಅನಿವಾರ್ಯವಾದರೂ ಸುಮ್ಮ ಸುಮ್ಮನೆ ಬದಲಾವಣೆ ಆಗುವುದಿಲ್ಲ. ಅದು ಒಂದು ನಿಯಮಾನುಸಾರ ನಡೆಯುತ್ತದೆ. ಒಂದು ಪದಕ್ಕೆ ಅಥವಾ ಒಂದು ಅಕ್ಷರಕ್ಕೆ ಇರುವ ಉಚ್ಚಾರಣೆ ಧ್ವನಿಗಳ ಮೊತ್ತದಲ್ಲ ಯಾವುದೋ ಒಂದು ಧ್ವನಿಯನ್ನು ಬಿಡುವುದು ಭಾಷೆಯಲ್ಲಿ ಸರ್ವೆಸಾಮಾನ್ಯ. ಈಗ ಱ ಮತ್ತು ರು ನಡುವಿನ ವ್ಯತ್ಯಾಸದ ಉಚ್ಚಾರಣೆಯಲ್ಲಿ ಉಳಿದಿಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಱ ಕಾರ ಉಳಿಯಲಾರದು ಎನ್ನುವುದು ಕೆ.ವಿ.ಎನ್ ಅವರ ವಾದ. ಈ ವಾದದ ಹಿಂದೆ ಭಾವನಾತ್ಮಕ ಸಂಬಂಧವಾಗಲಿ, ರಾಜಕೀಯವಾಗಲೀ ಇರದೇ ಇರುವುದೇ ಈ ದೃಷ್ಟಿಕೋನದ ಮುಖ್ಯ ಜೀವಾಳ ಎಂದರೂ ತಪ್ಪಾಗಲಾರದು.

ಪ್ರೊ|| ಕೆ.ವಿ. ನಾರಾಯಣ ಅವರ ಭಾಷೆಗೆ ಸಂಬಂಧಿಸಿದ ಬರವಣಿಗೆ ಮುಖ್ಯವಾಗಿ ಮೂರು ಹಂತದಲ್ಲಿ ರಚನೆಯಾದವುಗಳಾಗಿವೆ ಒಂದು. ಕನ್ನಡ ಭಾಷೆಯ ರಚನೆಗೆ ಸಂಬಂಧಿಸಿದವು. ಎರಡು. ಕನ್ನಡ ಭಾಷೆಯ ಬಳಕೆಗೆ ಸಂಬಂಧಿಸಿದವುಗಳು. ಮೂರು. ರಚನೆಯಿಂದ ಬಳಕೆಯಾಗುವ ನಡುವೆ ನಡೆವ ಪ್ರಾಸಸ್ ಬಗ್ಗೆ ಕುರಿತವುಗಳು. ಹಾಗಾಗಿ ಇವುಗಳಲ್ಲಿ ಭಾವುಕತೆ ಕಡಿಮೆ. ಆದ್ದರಿಂದಲೇ ಅನೇಕರು ಕೆ.ವಿ.ಎನ್ ಅವರ ಬರವಣಿಗೆ ಭಾವನೆಗಳಿಂದ ಹುಟ್ಟಿರುವುದಿಲ್ಲ. ಬುದ್ಧಿಯಿಂದ ಸೃಷ್ಟಿಯಾದದ್ದು ಎನ್ನುವ ಅನೇಕರ ಮಾತುಗಳನ್ನು ನಾನೇ ಸ್ವತಃ ಕೇಳಿಸಿಕೊಂಡಿದ್ದೇನೆ. ಈ ಕಾರಣದಿಂದಲೇ ಅಂಥವರಿಗೆ ಈ ಬರವಣಿಗೆ ನೀರಸವಾದುದು, ನಿರಾಕ್ಷೇಪಣಾವಾದುದು, ಭಾವನಾತ್ಮಕವಾದುದಲ್ಲ ಎನ್ನುವ ಮಾತುಗಳು ಬಂದಿರು

ನ್ನಾ ಸಾಮಾನ್ಯವೇ ಆಗಿದೆ.

ಇಲ್ಲಿನ ಎಲ್ಲ ಲೇಖನಗಳು ಮುಖ್ಯವಾಗಿ ಕನ್ನಡ ಭಾಷೆಯು ರಚನೆ ಇಲ್ಲವ ಬಳಕ ಅಥವಾ ರಚನೆ ಮತ್ತು ಬಳಕೆಯ ಹಿಂದಿನ ರಾಜಕೀಯ ಸಾಮಾಜಿಕ ಒತ್ತಡ, ಕಾಳಜಿಗೆ ಸಂಬಂಧಿಸಿದಂತೆ ಚರ್ಚೆಯನ್ನು ಒಳಗೊಂಡಿವೆ. ಬಿಡಿ ಬಿಡಿ ಲೇಖನಗಳು ಸ್ವತಂತ್ರವಾಗಿ ತಮ್ಮದೇ ಆದ ಅಸ್ತಿತ್ವವನ್ನು ಹೊಂದಿದವುಗಳಾಗಿವೆ. ಹಾಗಾಗಿಯೇ ಇವುಗಳೆಲ್ಲದರ ಹಿಂದೆ ಒಂದು ಗಾಢವಾದ ದೃಷ್ಟಿಕೋನ ಇರುವುದನ್ನು ಗಮನಿಸಬಹುದಾಗಿದೆ. ಕೆ.ವಿ.ಎನ್. ಅವರ ಮೇಲೆ ಇನ್ನೊಂದು ಅಪವಾದ ಇರುವುದು ಅವರು ಪಠ್ಯಕೇಂದ್ರಿತವಾಗಿ ಮಾತ್ರ ಚರ್ಚಿಸುತ್ತಾರೆ. ಅದರಾಚೆಗೆ ಅದಕ್ಕೂ ಮತ್ತು ಸಮಾಜಕ್ಕೂ ಇರುವ ಅಸ್ಮಿತೆಯನ್ನು ಕುರಿತು ಚರ್ಚಿಸುವುದಿಲ್ಲ. ಆ ಮಾತು ಒಪ್ಪಲು ಬರುವುದಿಲ್ಲ. ಏಕೆಂದರೆ ಅವರ ಎಲ್ಲ ಬರವಣಿಗೆಗಳ ಹಿಂದೆ ಅಂಥ ಒಂದು ಸಂಬಂಧ ಇದ್ದೇ ಇರುತ್ತದೆ. ಉದಾಹರಣೆಗೆ ಪದಗಳು ನೋಟುಗಳಂತೆ ಎನ್ನುವ ಅವರ ಲೇಖನದ ಈ ಭಾಗವನ್ನು ಗಮನಿಸಿ "ಕಾಗದದ ನೋಟುಗಳಿಗೂ ಭಾಷೆಯ ಪದಗಳಿಗೂ ಕೆಲವು ಸಮಾನ ಲಕ್ಷಣಗಳಿವೆ. ನೋಟುಗಳಿಗೆ ಏನು ಬೆಲೆ? ಅದರ ಮೇಲೆ ನೂರು ರೂಪಾಯಿ ಎಂದು ಬರೆದಿದ್ದರೆ ಅದು ನೂರು ರೂಪಾಯಿ ಬೆಲೆಯುಳ್ಳದ್ದು ಎಂದುಕೊಳ್ಳುತ್ತೇವೆ.

ಇದು ಸಾಂಕೇತಿಕ. ಆ ನೋಟಿನ ಬೆಲೆಗೆ ಸಾಟಿಯಾಗುವ ಯಾವ ಸಂಗತಿಯೂ ಆ ಕಾಗದದ ತುಂಡಿನಲ್ಲಿ ಇಲ್ಲ. (ಕುಸುಮಬಾಲೆಯಲ್ಲಿ ಟೀ ಕಾಯಿಸಿಕೊಳ್ಳಲು ರಾಣಿ ನೋಟುಗಳನ್ನು ಸುಡುವುದು ನೆನಪಿಸಿಕೊಳ್ಳಿ) ಪದಗಳೂ ಹಾಗೆಯೇ ಅವು ಪ್ರತಿನಿಧಿಸುವ ಅರ್ಥಕ್ಕೂ ಆ ಪದದಲ್ಲಿರುವ ಧ್ವನಿಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಹಾಗೆ ಇದೆಯೆಂದು ನಂಬಿರುತ್ತೇವೆ. ನೋಟುಗಳಿಗೆ ಇರುವ ಮೌಲ್ಯ ವ್ಯಾವಹಾರಿಕವಾಗಿ ನಿಗದಿಗೊಂಡಂತೆ ತೋರಿದರೂ ಜೀವನ ಕ್ರಮದಲ್ಲಿ ಹಾಗಿರುವುದಿಲ್ಲ. ಸುಮ್ಮನೆ ಒಂದು ಸಹಿ ಹಾಕಿದರೆ ಸಾಕಾಗಬಹುದು. ಅದರಿಂದ ಏನುಕೊಳ್ಳಬಹುದು? ಒಬ್ಬ ವ್ಯಕ್ತಿ ವಾರಕ್ಕಾಗುವ ದಿನಸಿಯನ್ನು ಕೊಂಡರೆ ಮತ್ತೊಬ್ಬ ವ್ಯಕ್ತಿ ಬೆಳಗಿನ ಉಪಹಾರಕ್ಕೆ ಬಳಸಬಹುದು. ಪದಗಳೂ ಹೀಗೆಯೇ? ನಾವು ತಿಳಿದಂತೆ ಅವು ಎಲ್ಲರಿಗೂ ಎಲ್ಲ ಸಂದರ್ಭದಲ್ಲಿಯೂ ಒಂದೇ ಸಮನಾದ ಅರ್ಥವ್ಯವಸ್ಥೆಯನ್ನು ಕಾಯ್ದಿರಿಸಿಕೊಳ್ಳುವುದಿಲ್ಲ. ನಾವು ಪದಗಳನ್ನು ಏನನ್ನಾದರೂ ಹೇಳಲು ಬಳಸುವಂತೆ, ಕೇಳುವಾಗಲೂ ಬಳಸುತ್ತೇವೆ. ನೋಟುಗಳೂ ಹೀಗೆಯೇ. ನಮ್ಮಲ್ಲಿರುವುದನ್ನು ಮಾರಿದಾಗ ನಮ್ಮ ಬಳಿ ಬರುತ್ತೇವೆ. ಅಥವಾ ನಮ್ಮಲ್ಲಿರುವುದನ್ನು ಪಡೆಯಬೇಕಾದರೆ ನಮ್ಮನ್ನು ಬಿಟ್ಟು ಹೋಗುತ್ತವೆ. (ನಮ್ಮ ಕನ್ನಡ: ಓಶಿನೇ ಸಂಚಿಕೆ: ಪುಟ ೦೧. ಸಂಪಾದನೆ: ಅಶೋಕ ಕುಮಾರ ರಂಜೇರೆ)

ಪ್ರೊ॥ ಕೆ.ವಿ. ನಾರಾಯಣ ಅವರು ಕನ್ನಡ ಭಾಷೆಯನ್ನು ಕುರಿತು ಮಾಡಿರುವ ಬರವಣಿಗೆ ನಾನು ಈಗಾಗಲೇ ಪ್ರಸ್ತಾಪಿಸಿದಂತೆ ಮುಖ್ಯವಾಗಿ ಮೂರು ನೆಲೆಯಲ್ಲಿ ರೂಪುಗೊಂಡಿವೆ. ೧. ಕನ್ನಡ ಭಾಷೆಯ ರಚನೆಯ ಸ್ವರೂಪಕ್ಕೆ ಸಂಬಂಧಿಸಿದ್ದು ೨. ಕನ್ನಡ ಭಾಷಾ ಬಳಕೆಯ ಸ್ವರೂಪಕ್ಕೆ ಸಂಬಂಧಿಸಿದ್ದು ೩. ಕನ್ನಡ ಭಾಷೆಯ ರಚನೆ ಮತ್ತು ಬಳಕೆಯ ನಡುವೆ ನಡೆಯುವ ಪ್ರಕ್ರಿಯೆಗೆ ಸಂಬಂಧಿಸಿದ್ದು. ಈ ಹಿನ್ನೆಲೆಯಲ್ಲಿಯೇ ಅವರ ಇತ್ತೀಚಿನ ಕೃತಿಗಳಾದ ಭಾಷೆಯ ಸುತ್ತ ಮುತ್ತ, ಮತ್ತೆ ಭಾಷೆಯ ಸುತ್ತ ಮುತ್ತ, ನಮ್ಮೊಡನೆ ನಮ್ಮ ನುಡಿ ಕೃತಿಗಳು ರಚನೆಯಾಗಿವೆ. ಕನ್ನಡ ಜಗತ್ತು: ಅರ್ಧ ಶತಮಾನ ಕೃತಿ ಇತ್ತೀಚೆಗೆ ರಚನೆಯಾದ ಮತ್ತೊಂದು ಮಹತ್ವದ ಕೃತಿ. ಸುಮಾರು ಎರಡು ಸಾವಿರ ವರ್ಷಗಳಿಂದ ಬೆಳೆದು ಬಂದ ಕನ್ನಡ ಭಾಷೆಯಲ್ಲಿ ರಚನೆಯ ದೃಷ್ಟಿಯಿಂದ ಮತ್ತು ಬಳಕೆಯ ದೃಷ್ಟಿಯಿಂದ ಅನೇಕ ಬದಲಾವಣೆಗಳು ನಡೆದಿವೆ.

ಈ ಬದಲಾವಣೆ ಕಳೆದ ಐವತ್ತು ವರ್ಷಗಳಲ್ಲಿ ಹೇಗೆ ನಡೆದಿದೆ, ಯಾಕೆ ನಡೆದಿದೆ ಅದರ ಹಿಂದಿನ ಒತ್ತಡಗಳು ಯಾವುವು ಎನ್ನುವುದನ್ನು ಈ ಕೃತಿ ವಿವರಿಸುತ್ತದೆ. ಈ ಕೃತಿ ರಚನೆಯ ಹಿಂದಿನ ಸ್ವರೂಪ ಯಾವ ಬಗೆಯದು ಎನ್ನುವುದನ್ನು ಕೆ.ವಿ.ಎನ್ ಅವರೇ ಮೊದಲಲ್ಲಿ ಹೀಗೆ ವಿವರಿಸುತ್ತಾರೆ. "ಕನ್ನಡ ನಮಗೆಲ್ಲಾ ತಿಳಿದಂತೆ ಸರಿಸುಮಾರು ೨೦ ಶತಮಾನಗಳ ಬಳಕೆಯನ್ನು ಕಂಡಿರುವ ಭಾಷೆ. ಈ ಭಾಷೆಯಲ್ಲಿ ನಡೆದಿರುವ ಪರಿವರ್ತನೆಗಳು ಅಪಾರ. ಬಳಕೆ ಮತ್ತು ರಚನೆ ಈ ಎರಡು ನೆಲೆಗಳಲ್ಲಿ ಈ ಪರಿವರ್ತನೆಗಳು ನಡೆದಿವೆ. ಈ ದೀರ್ಘಾವಧಿಯ ಪರಿವರ್ತನೆಗಳ ಅಧ್ಯಯನ ಈಗಾಗಲೆ ಸಾಕಷ್ಟು ಪ್ರಮಾಣದಲ್ಲಿ ನಡೆದಿದೆ. ಈ ಹಿನ್ನೆಲೆಯಲ್ಲಿ ಐವತ್ತು ವರ್ಷಗಳ ಕಿರು ಅವಧಿಯ ಪರಿವರ್ತನೆಗಳನ್ನು ಅಧ್ಯಯನ ಮಾಡಲು ಸಾಕಷ್ಟು ಬಲವಾದ ಸಮರ್ಥನೆಗಳು ಅಗತ್ಯ ಅಂತಹ ಎರಡು ಸಮರ್ಥನೆಗಳನ್ನು ಮೊದಲು ಮಂಡಿಸುತ್ತೇನೆ.

೦೧. ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಮತ್ತು ಆಧುನಿಕ ಜಗತ್ತಿನ ಒತ್ತಡಗಳಿಂದಾಗಿ ಈ ಭಾಷೆಯಲ್ಲಿ ಹಿಂದೆಂದೂ ಇಲ್ಲದಷ್ಟು ಪ್ರಮಾಣ ಮತ್ತು ವೇಗದಲ್ಲಿ ಬದಲಾವಣೆಗಳು ನಡೆಯುತ್ತಿವೆ. ಕಳೆದ ಐವತ್ತು ವರ್ಷಗಳು ಈ ಬಗೆಯ ಬದಲಾವಣೆಗೆ ಸಾಕ್ಷಿಯಾಗಿದೆ.

೦೨ ಎರಡನೆಯ ಕಾರಣ ಇನ್ನೂ ಪ್ರಮುಖವಾದದ್ದು. ಕಳೆದ ೨೦ ಶತಮಾನಗಳಲ್ಲಿ ಕನ್ನಡ ಭಾಷೆಯಲ್ಲಿ ಆಗಿರುವ ಪರಿಣಾಮಗಳನ್ನು ಯೋಜಿತ ನೆಲೆಯ ಬದಲಾವಣೆಗಳು ಎಂದು ಹೇಳಲಾಗುವುದಿಲ್ಲ. ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಈ ಬದಲಾವಣೆಗಳು ಆ ಭಾಷೆಯಲ್ಲಿ ತಂತಾನೆ ಸಂಭವಿಸಿವೆ. ಅವುಗಳ ಮೇಲೆ ಭಾಷಿಕರಿಗೆ ಯಾವುದೇ ನಿಯಂತ್ರಣ ಇರಲಿಲ್ಲ. ಆದರೆ ಕರ್ನಾಟಕ ರಾಜ್ಯ ನಿರ್ಮಾಣಗೊಂಡ ಮೇಲೆ ಈ ಭಾಷೆಯಲ್ಲಿ ಯಾವ ಬಗೆಯ ಬೆಳವಣಿಗೆಗಳು ಆಗಬೇಕು ಎಂಬುದನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ವ್ಯವಸ್ಥೆಯೊಂದು ಇದೆ. ಸಾಮಾನ್ಯವಾಗಿ ಈ ವ್ಯವಸ್ಥೆಯನ್ನು ಸರಕಾರ ಎನ್ನಬಹುದಾದರೂ ಸರ್ಕಾರವೇ ನೇರವಾಗಿ ಬೆಳವಣಿಗೆಗಳಿಗೆ ತಕ್ಕ ನಿರೂಪಗಳನ್ನು ಸಿದ್ಧ ಮಾಡುತ್ತದೆ ಎಂದಲ್ಲ. ಆದರೆ ತನ್ನ ಭಾಷಾ ನೀತಿಯಿಂದಾಗಿ ಮತ್ತು ಆ ನೀತಿಯನ್ನು ಜಾರಿಗೊಳಿಸಲು ಸರಕಾರವೇ ರೂಪಿಸಿದ ಸಾಂಸ್ಥಿಕ ವ್ಯವಸ್ಥೆಯಿಂದಾಗಲಿ, ಈ ಬದಲಾವಣೆಗಳು ಜಾರಿಗೆ ಬರುತ್ತಿರುತ್ತವೆ. ಈ ಐವತ್ತು ವರ್ಷಗಳಲ್ಲಿ ಹೀಗೆ ಯೋಜಿತ ರೀತಿಯಲ್ಲಿ ಬದಲಾವಣೆ ನಡೆದಿದೆ. ಆದ್ದರಿಂದ ಈ ಬದಲಾವಣೆಗಳನ್ನು ಈ ಹಿಂದಿನ ಬದಲಾವಣೆಗಳಿಗಿಂತ ಬೇರೆಯಾಗಿಯೇ ನೋಡಬೇಕಾಗುತ್ತದೆ. ಈ ಎರಡು ಸಮರ್ಥನೆಗಳ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕಟ್ಟಲಾಗಿದೆ. "(ಕನ್ನಡ ಜಗತ್ತು: ಅರ್ಧ ಶತಮಾನ–ಪುಟ೭,೮, ಕೆ.ವಿ ನಾರಾಯಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಯಾವುದೇ ವಿಷಯವನ್ನು ಕುರಿತು ಬರೆಯುವಾಗ ಕೆ.ವಿ. ನಾರಾಯಣ ಅವರು ಆ ಸಂದರ್ಭದ ತಾತ್ಕಾಲಿಕ

ಗೋದಿ ಕೊಡುತ್ತಾರೆ
ಬಾಂಬು ಹಾಕುತ್ತಾರೆ
ಗೋದಿ ಮಾನವೀಯತೆಗೆ!
ಬಾಂಬು ಭಯೋತ್ಪಾದನೆ ನಿಲುಗಡೆಗೆ!!

○ ಅಲ್ಲಮಪ್ರಭು ಬೆಟ್ಟದೂರು

ಯಾವುದೇ ವಿಷಯವನ್ನು ಕುರಿತು ಬರೆಯುವಾಗ ಕೆ.ವಿ. ನಾರಾಯಣ ಅವರು ಆ ಸಂದರ್ಭದ ತಾತ್ಕಾಲಿಕ ಅವಶ್ಯಕತೆಗನುಗುಣವಾಗಿ ತಮ್ಮ ವಾದವನ್ನು ಮಂಡಿಸುವುದಿಲ್ಲ. ಬದಲಿಗೆ ಅದರ ಹಿಂದೆ ಇರುವ ಜೀವ ನಾಡಿಯನ್ನು ಕುರಿತು ಪರಿಶೀಲಿಸುತ್ತಾರೆ. ಆದ್ದರಿಂದಲೇ ಆ ಸಂದರ್ಭದಲ್ಲಿ ಚರ್ಚಿಸುವ ಇತರರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಅದೇ ಕಾರಣಕ್ಕೆ ಕೆಲವು ಸಲ ಇವರ ವಾದ ಭಾವನಾತ್ಮಕವಾಗಿರುವುದಿಲ್ಲ ಎಂದು ಕೆಲವರು ಹೇಳುವುದನ್ನು ಗಮನಿಸಬಹುದಾಗಿದೆ. ಆದರೆ ಕೆ.ವಿ. ಎನ್. ಅವರ ವಾದ ಉಳಿದ ಅನೇಕರಂತೆ ಆ ಸಂದರ್ಭದ ಅವಶ್ಯಕತೆಗೆ ಅನುಗುಣವಾಗಿ ಒಪ್ಪಿತವಾಗದಿದ್ದರೂ ನಿರಂತರವಾಗಿ, ಕಾಲಾತೀತವಾಗಿ ಆ ವಿಷಯದ ಬಗ್ಗೆ ಸಂವಾದಿಸಬಲ್ಲದು. ಆ ಸಂದರ್ಭದ ಅನೇಕರ ವಾದ ಬೀದಿ ನಾಟಕದಂತೆ ಆ ತತ್ಕಾಲದ ಅವಶ್ಯಕತೆಯನ್ನಷ್ಟೇ ಪೂರೈಸಿ ಮರೆಯಾಗುವ ಸಾಧ್ಯತೆಯಿದೆ.

ಅವಶ್ಯಕತೆಗನುಗುಣವಾಗಿ ತಮ್ಮ ವಾದವನ್ನು ಮಂಡಿಸುವುದಿಲ್ಲ. ಬದಲಿಗೆ ಅದರ ಹಿಂದೆ ಇರುವ ಜೀವ ನಾಡಿಯನ್ನು ಕುರಿತು ಪರಿಶೀಲಿಸುತ್ತಾರೆ. ಆದ್ದರಿಂದಲೇ ಆ ಸಂದರ್ಭದಲ್ಲಿ ಚರ್ಚಿಸುವ ಇತರರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಅದೇ ಕಾರಣಕ್ಕೆ ಕೆಲವು ಸಲ ಇವರ ವಾದ ಭಾವನಾತ್ಮಕವಾಗಿರುವುದಿಲ್ಲ ಎಂದು ಕೆಲವರು ಹೇಳುವುದನ್ನು ಗಮನಿಸಬಹುದಾಗಿದೆ. ಆದರೆ ಕೆ.ವಿ.ಎನ್. ಅವರ ವಾದ ಉಳಿದ ಅನೇಕರಂತೆ ಆ ಸಂದರ್ಭದ ಅವಶ್ಯಕತೆಗೆ ಅನುಗುಣವಾಗಿ ಒಪ್ಪಿತವಾಗದಿದ್ದರೂ ನಿರಂತರವಾಗಿ, ಕಾಲಾತೀತವಾಗಿ ಆ ವಿಷಯದ ಬಗ್ಗೆ ಸಂವಾದಿಸಬಲ್ಲದು. ಆ ಸಂದರ್ಭದ ಅನೇಕರ ವಾದ ಬೀದಿ ನಾಟಕದಂತೆ ಆ ತತ್ಕಾಲದ ಅವಶ್ಯಕತೆಯನ್ನಷ್ಟೇ ಪೂರೈಸಿ ಮರೆಯಾಗುವ ಸಾಧ್ಯತೆಯಿದೆ. ಕೆ.ವಿ.ಎನ್ ಅವರ ಬರವಣಿಗೆ ಕಾಲಾಂತರದಲ್ಲಿ ಸಂವಾದ ಮಾಡಬಲ್ಲದಾದರಿಂದ ಕಾಲಾತೀತವಾಗಿ ಉಳಿದು ಬರಲು ಸಾಧ್ಯವಾಗುತ್ತದೆ. ಉದಾಹರಣೆಗೆ 'ಋ' ಕಾರದ ಚರ್ಚೆಯನ್ನೇ ತೆಗೆದುಕೊಳ್ಳೋಣ.

ಕೆ.ವಿ. ಸುಬ್ಬಣ್ಣ ಮುಂತಾದ ಹಿರಿಯ ಚಿಂತಕರು ಕೂಡ ಋ ಕಾರಕ್ಕೆ ಕನ್ನಡದೊಂದಿಗಿನ ಭಾವನಾತ್ಮಕ ಸಂಬಂಧವನ್ನಷ್ಟೇ ಮುಖ್ಯಮಾಡಿಕೊಂಡು ಮಾತನಾಡುತ್ತಾರೆ. ಆದರೆ ಅದರ ಹಿಂದಿನ ಪ್ರಕ್ರಿಯೆ ಮತ್ತು ಪರಿಣಾಮ ಕುರಿತು ಮಾತನಾಡುವುದಿಲ್ಲ. ಹಾಗಾಗಿ ಋ ಕಾರ ಕನ್ನಡಕ್ಕೆ ಏಕೆ ಬೇಕು ಎನ್ನುವುದನ್ನು ಮುಂದು ಮಾಡುತ್ತಾರೆ. ಋ ಕಾರ ಬೇಕು ಬೇಡ ಎನ್ನುವ ಎರಡೂ ವಾದಗಳೂ ಆ ಸಂದರ್ಭದ ಅವಶ್ಯಕತೆಯನ್ನು ಪೂರೈಸುವ ಉತ್ಕಟ ಸ್ಥಿತಿಗಳಾಗಿ ಬಿಡುತ್ತವೆ. ಕೆ.ವಿ.ಎನ್ ಅವರು ಹೇಳುವಂತೆ ಋ ಕಾರದ ಬಗ್ಗೆ ಚರಿತ್ರೆಯುದ್ದಕ್ಕೂ ನಡೆದ ಪ್ರಕ್ರಿಯೆ ಮತ್ತು ಪರಿಣಾಮವನ್ನು ಅವಲಂಬಿಸಿದೆ. ಹಾಗಾಗಿ ಋ ಕಾರವನ್ನು ಬಳಸುವ ಬಿಡುವ ಪ್ರಶ್ನೆ ಈಗ ಗಂಭೀರವಾಗಿ ಚರ್ಚಿಸುವ ವಿದ್ವಾಂಸರ ಕೈಯಲ್ಲಿಲ್ಲ. ಆಯಾ ಕಾಲಕ್ಕನುಗುಣವಾಗಿ ಭಾಷಿಕರು ಅನೇಕ ಅಕ್ಷರಗಳನ್ನು, ಪದಗಳನ್ನು ಬಳಸುವ ಬಿಡುವ ಮತ್ತು ಹೊಸದನ್ನು ಸೇರಿಸಿಕೊಳ್ಳುವ ಕೆಲಸವನ್ನು ಮಾಡುತ್ತಿರುತ್ತಾರೆ.

ಹಾಗಾಗಿ ಇದು ಸರಿ ಇದು ತಪ್ಪು ಎಂದು ತೀರ್ಮಾನ ನೀಡುವುದು ಸರಿಯಲ್ಲ ಎನ್ನುವುದು ಕೆ.ವಿ.ಎನ್. ಅವರ ವಾದ. ಏಕೆಂದರೆ ಕೇಶಿರಾಜ ಕೂಡ ಯಾವುದು ಸರಿ ಯಾವುದನ್ನು ಬಳಸಬೇಕು ಎಂದೆಲ್ಲ ಬರೆದ, ಆದರೆ ಆತನನ್ನು ಯಾರೂ ಪರಿಗಣಿಸಲಿಲ್ಲ. ಆದರೆ ಭಾಷೆಯಲ್ಲಿ ಆದ, ಆಗುವ ಬದಲಾವಣೆಯ ಪ್ರಕ್ರಿಯೆ ಕುರಿತು ಮತ್ತು ಅದು ಬಳಕೆಯಲ್ಲಿ ಸೃಷ್ಟಿಸುವ ಪರಿಣಾಮ ಕುರಿತು ಮಾತ್ರ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾರೆ. ಈ ಮಾತು ಕೆ.ವಿ.ಎನ್ ಅವರ ಭಾಷೆಗೆ ಸಂಬಂಧಿಸಿದ ಬರವಣಿಗೆಗೆ ಅಷ್ಟೇ ಅಲ್ಲ ಅವರ ಉಳಿದ ಬರವಣಿಗೆಗೂ ಅನ್ವಯಿಸಿಸಲು ಸಾಧ್ಯವಿದೆ. ಈ ಕಾರಣದಿಂದಲೇ ಕೆ.ವಿ.ಎನ್ ಕನ್ನಡ ಸಾಹಿತ್ಯ ಲೋಕದಲ್ಲಿ ಉಳಿದವರಿಗಿಂತ ಭಿನ್ನ ಮತ್ತು ವಿಶಿಷ್ಟವಾಗಿ ನಿಲ್ಲುತ್ತಾರೆ ಎಂದು ಹೇಳಿದರೂ ತಪ್ಪಾಗಲಾರದು.

ಈ ಮೇಲಿನ ಮಾತುಗಳನ್ನು ಗಮನಿಸುವುದಾದರೆ ಇದೇ ಮಾತು ಅವರ ಇತರೆ ಭಾಷಿಕ ಅಧ್ಯಯನ ಬರವಣಿಗೆಗೂ ಅನ್ವಯಿಸಬಹುದಾಗಿದೆ. ಭಾಷೆಯ ಸುತ್ತ ಮುತ್ತ, ಮತ್ತೆ ಭಾಷೆಯ ಸುತ್ತ ಮುತ್ತ, ನಮ್ಮೊಡನೆ ನಮ್ಮ ನುಡಿ ಕೃತಿಗಳಲ್ಲಿ ಇದು ಬಿಡಿ ಬಿಡಿಯಾಗಿ ರೂಪುಗೊಂಡರೆ ಕನ್ನಡ ಜಗತ್ತು: ಅರ್ಧ ಶತಮಾನ ಕೃತಿಯಲ್ಲಿ

ಕೆ.ವಿ. ಸುಬ್ಬಣ್ಣ ಮುಂತಾದ ಹಿರಿಯ ಚಿಂತಕರು ಕೂಡ ಋ ಕಾರಕ್ಕೆ ಕನ್ನಡದೊಂದಿಗಿನ ಭಾವನಾತ್ಮಕ ಸಂಬಂಧವನ್ನಷ್ಟೇ ಮುಖ್ಯಮಾಡಿಕೊಂಡು ಮಾತನಾಡುತ್ತಾರೆ. ಆದರೆ ಅದರ ಹಿಂದಿನ ಪ್ರಕ್ರಿಯೆ ಮತ್ತು ಪರಿಣಾಮ ಕುರಿತು ಮಾತನಾಡುವುದಿಲ್ಲ. ಹಾಗಾಗಿ ಋ ಕಾರ ಕನ್ನಡಕ್ಕೆ ಏಕೆ ಬೇಕು ಎನ್ನುವುದನ್ನು ಮುಂದು ಮಾಡುತ್ತಾರೆ. ಋ ಕಾರ ಬೇಕು ಬೇಡ ಎನ್ನುವ ಎರಡೂ ವಾದಗಳೂ ಆ ಸಂದರ್ಭದ ಅವಶ್ಯಕತೆಯನ್ನು ಪೂರೈಸುವ ಉತ್ಕಟ ಸ್ಥಿತಿಗಳಾಗಿ ಬಿಡುತ್ತವೆ. ಕೆ.ವಿ.ಎನ್ ಅವರು ಹೇಳುವಂತೆ ಋ ಕಾರದ ಬಗ್ಗೆ ಚರಿತ್ರೆಯುದ್ದಕ್ಕೂ ನಡೆದ ಪ್ರಕ್ರಿಯೆ ಮತ್ತು ಪರಿಣಾಮವನ್ನು ಅವಲಂಬಿಸಿದೆ. ಹಾಗಾಗಿ ಋ ಕಾರವನ್ನು ಬಳಸುವ ಬಿಡುವ ಪ್ರಶ್ನೆ ಈಗ ಗಂಭೀರವಾಗಿ ಚರ್ಚಿಸುವ ವಿದ್ವಾಂಸರ ಕೈಯಲ್ಲಿಲ್ಲ.

ಅದು ಹಿಡಿಯಾಗಿ ರೂಪಗೊಂಡಿದೆ. ಕೆ.ವಿ.ಎನ್ ಅವರ ಬರವಣಿಗೆ ಒಂದೇ ಓದಿಗೆ ದಕ್ಕದು. ಮತ್ತೆ ಮತ್ತೆ ಓದಬೇಕು. ಅಂಥ ಒಂದು ಸಣ್ಣ ಪ್ರಯತ್ನ ಇಲ್ಲಿ ಮಾಡಲಾಗಿದೆ.

– ೪ –

ಕೆ.ವಿ. ನಾರಾಯಣ ಅವರ ಒಟ್ಟು ಸಾಹಿತ್ಯ ಕೃಷಿಯನ್ನು ಹೀಗೆ ವಿಂಗಡಿಸಿ ನೋಡಬಹುದಾಗಿದೆ.

೦೧. ಸಾಹಿತ್ಯ ವಿಮರ್ಶೆ/ಮೀಮಾಂಸೆ
೦೨. ಸಂಶೋಧನೆ
೦೩. ಭಾಷಾಧ್ಯಯನ ಕೃತಿಗಳು
೦೪. ಅನುವಾದ ಬರವಣಿಗೆ
೦೧. ಸಾಹಿತ್ಯ ವಿಮರ್ಶೆ/ಮೀಮಾಂಸೆ
೦೧. ಶೈಲಿಶಾಸ್ತ್ರ
೦೨. ಬೇರು ಕಾಂಡ ಚಿಗುರು
೦೨. ಸಂಶೋಧನೆ
೦೧. ಧ್ವನ್ಯಾಲೋಕ
೦೨. ಕೃಷಿಪದ ಕೋಶ
೦೩. ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಯೋಜನೆಗಳು
೦೩. ಭಾಷಾಧ್ಯಯನ
೦೧. ದಿನ ದಿನ
೦೨. ಕೃಷಿಪದ ಕೋಶ
೦೩. ದ್ವಿಭಾಷಿಕತೆ
೦೪. ಮತ್ತೆ ಭಾಷೆಯ ಸುತ್ತ ಮುತ್ತ
೦೬. ನಮ್ಮೊಡನೆ ನಮ್ಮ ನುಡಿ
೦೭. ಕನ್ನಡ ಜಗತ್ತು ಅರ್ಧ ಶತಮಾನ ಸಂಪಾದನೆ
೦೧. ಕನ್ನಡ ಶೈಲಿ ಕೈಪಿಡಿ
೦೨. ಭಾಷೆ: ವಿಶ್ವಕೋಶ
೦೩. ಕನ್ನಡ ಭಾಷಾಭಿವೃದ್ಧಿ ಮುನ್ನೋಟ
೦೪. ಸ್ಥಳನಾಮಗಳು: ಸ್ವರೂಪ ಮತ್ತು ವಿಶ್ಲೇಷಣೆ
೦೫. ವ್ಯಕ್ತಿನಾಮಗಳು: ಸ್ವರೂಪ ಮತ್ತು ವಿಶ್ಲೇಷಣೆ

ಅನುವಾದ

೦೧. ದ್ರವಿಡ್‌ಯನ್ ಎಟಿಮಲಾಜಿಕಲ್ ಡಿಕ್ಷನರಿ (ಪ್ರಕಟಣೆಗೆ ಸಿದ್ಧವಾಗಿದೆ)
೦೨. ಪ್ರೀತಿಸುವುದೆಂದರೆ... (ಎರಿಕ್ ಫ್ರಮ್‌ನ ಕೃತಿ)
೦೩. ಅಂಕೆ ತಪ್ಪಿದ ಶಂಕರಲಾಲ್ (ಬ್ರೆಕ್ಟ್)
೦೪. ಇತರೆ
೦೧. ಸೃಜನಶೀಲ ಬರವಣಿಗೆ
೦೧. ಹುತ್ತವ ಬಡಿದರೆ (ನಾಟಕ)
ಜೆನ್ ಕತೆಗಳು ಸಂಪಾದನೆ
೦೧ ದಶ ವಾರ್ಷಿಕ ಕನ್ನಡ ಸಾಹಿತ್ಯ
ಅನ್ಯ ಜ್ಞಾನ ಶಿಸ್ತುಗಳು ಮತ್ತು ಕನ್ನಡ ಸಾಹಿತ್ಯ
ಅಭಿನಂದನಾ ಗ್ರಂಥಗಳ ಸಂಪಾದನೆ
೦೧. ಬಹುರೂಪಿ: ಬಿ. ಚಂದ್ರಶೇಖರ ಅವರ ಅಭಿನಂದನಾ ಗ್ರಂಥ
೦೨. ಗೌರವ: ರಾಷ್ಟ್ರ ಕವಿ ಜಿ.ಎಸ್.ಎಸ್. ಅವರ ಅಭಿನಂದನಾ ಗ್ರಂಥ

ಅನುವಾದ

೦೧. ಇಬ್ಬರು ಗೆಳೆಯರು (ಕತೆಗಳು)
೦೨. ಪ್ರೀತಿಸುವುದೆಂದರೆ: ಮೂಲ: ಎರಿಕ್ ಫ್ರಮ್
೦೩. ಪಥ: ಮೂಲ: ಅಲ್ಬರ್ಟ್ ಕಾಮು
೦೪. ಅಂಕೆ ತಪ್ಪಿದ ಶಂಕರ ಲಾಲ್ (ನಾಟಕ ಬರ್ಟೋಲ್ಡ್ ಬ್ರೆಕ್ಟ್ (ಪ್ರಕಟಣೆಗೆ ಸಿದ್ಧವಾಗಿದೆ)

ಆಕರ ಗ್ರಂಥಗಳು:

೦೧. ಧ್ವನ್ಯಾಲೋಕ: ೧೯೮೯, ಕನ್ನಡ ಸಾಹಿತ್ಯ ಪರಿಷತ್, ರನ್ನ ಮಾಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು
೦೨. ಶೈಲಿಶಾಸ್ತ್ರ, ೧೯೮೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೦೧
೦೩. ಬೇರು ಕಾಂಡ ಚಿಗುರು, ೧೯೯೭ ವಿಕಾಸ ಪ್ರಕಾಶನ, ಬೆಂಗಳೂರು
೦೪. ದ್ವಿಭಾಷಿಕತೆ, ೧೯೯೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೦೫. ಭಾಷೆಯ ಸುತ್ತ ಮುತ್ತ: ೧೯೯೬, ಕನ್ನಡ ಸಂಘ, ಕ್ರೈಸ್ತ ಕಾಲೇಜು, ಬೆಂಗಳೂರು
೦೬. ಮತ್ತೆ ಭಾಷೆಯ ಸುತ್ತ ಮುತ್ತ, ೨೦೦೧, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂ
೦೭. ನಮ್ಮೊಡನೆ ನಮ್ಮ ನುಡಿ, ೨೦೦೫, ಲೋಹಿಯಾ ಪ್ರಕಾಶನ, ಬಳ್ಳಾರಿ
೦೮. ಕನ್ನಡ ಜಗತ್ತು ಅರ್ಧ ಶತಮಾನ: ೨೦೦೭, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ
೦೯. ಹುತ್ತವ ಬಡಿದರೆ, ೧೯೮೯, ಬೆಂಗಳೂರು

ಪರಾಮರ್ಶನ ಗ್ರಂಥಗಳು

೦೧. ಭಾಷಾ ಸಂಗಮ: ಡಾ॥ ಸಂಗಮೇಶ ಸವದತ್ತಿಮಠ ಅವರ ಅಭಿನಂದನಾ ಗ್ರಂಥ, ಸಂ: ಪೊಲೀಸ್ ಪಾಟೀಲ್, ಗುಲಬರ್ಗಾ
೦೨. ಮಯೂರ ಪತ್ರಿಕೆ: ಕೆ.ವಿ. ನಾರಾಯಣ ಅವರ ಸಂದರ್ಶನ
೦೩. ಮಯೂರ ಪತ್ರಿಕೆ: ಡಾ॥ ಡಿ.ಎಸ್. ನಾಗಭೂಷಣ ಅವರ ಲೇಖನ

ಅಂಬೇಡ್ಕರ್ ಮನುಸ್ಮೃತಿ ದಹಿಸಿದ ರೂಪಕ ಹಾಗೂ ಈ ಕ್ಷಣದ ಪ್ರಶ್ನೆಗಳು

ಜಾತಿವಿನಾಶಕ್ಕೆ ಅಂತರ್ಜಾತಿ ವಿವಾಹದಷ್ಟೇ ಪ್ರಾಮುಖ್ಯತೆಯನ್ನು ಅಂತರ್ಜಾತಿ ಸಹಪಂಕ್ತಿ ಭೋಜನಕ್ಕೂ ಅಂಬೇಡ್ಕರ್ ಅವರು ನೀಡುತ್ತಾರೆ. ಆದರೆ ಇಂದಿಗೂ ಆಹಾರದ ಬಗೆಗೆ ಪಾವಿತ್ರ್ಯ-ಅಪಾವಿತ್ರ್ಯ ನಂಬಿಕೆ ಹಿಂದೂಗಳಲ್ಲಿ ಕಡಿಮೆಯಾಗಿಲ್ಲದ ಕಾರಣ ಇದು ಸಾಧ್ಯವಾಗುತ್ತಿಲ್ಲ. ಎಸ್.ಎಂ. ಕೃಷ್ಣ ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಜಾರಿಗೆ ತಂದ ಬಿಸಿ ಯೂಟ ಯೋಜನೆ ಇದಕ್ಕೆ ಅತ್ಯುತ್ತಮ ಉದಾಹರಣೆ. ಇಡೀ ಕರ್ನಾಟಕದಾದ್ಯಂತ ಗ್ರಾಮ ಜಗತ್ತು ಇದರಿಂದ ತಲ್ಲಣಗೊಂಡಿತು. ದಲಿತ ಮಹಿಳೆ ಅಡುಗೆ ಮಾಡುತ್ತಾಳೆಂಬುದೇ ಇದಕ್ಕೆ ಬಹುಮುಖ್ಯ ಕಾರಣ.

ಡಾ|| ಎಸ್. ನರೇಂದ್ರ ಕುಮಾರ್

ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟು ಈಗ ಎಂಭತ್ತು ವರ್ಷಗಳು ಮುಗಿದಿವೆ. ೧೯೨೭ರ ಡಿಸೆಂಬರ್ ೨೦ರಂದು ಮುಂಬೈನ ಮಹಾಡ್‌ನಲ್ಲಿ ನಡೆದ ದಲಿತರ ಹಕ್ಕೊತ್ತಾಯದ ಸಾರ್ವಜನಿಕ ಸಮಾರಂಭದಲ್ಲಿ ಮನುಸ್ಮೃತಿಯನ್ನ ದಹಿಸಿದರು. (ಕೆಲವು ಕಡೆ ಇದು ೧೯೨೭ರ ಡಿಸೆಂಬರ್ ೨೭ ಎಂದೂ ಉಲ್ಲೇಖಿತವಾಗಿದೆ.) ಈ ಗ್ರಂಥಕ್ಕೆ ಅಗ್ನಿಸ್ಪರ್ಶಗೊಳಿಸುವುದರ ಹಿಂದೆ ಅಂಬೇಡ್ಕರ್ ಅವರಿಗಿದ್ದ ಜೀವಪರ ಸಮಾನತಾ ಸಮಾಜ ಸ್ಥಾಪಿಸುವ ಅಪರಿಮಿತ ಕಳಕಳಿ ಹಾಗೂ ಚರಿತ್ರೆಯ ಪುನರ್ನಿರ್ಮಾಣದ ಹೆಬ್ಬಯಕೆಯನ್ನು ಕಾಣಬಹುದು. ಹಾಗೆ ನೋಡಿದರೆ ಅಂಬೇಡ್ಕರ್ ಅವರ ನಿರಂತರ ಅಧ್ಯಯನ, ಸಂಶೋಧನೆ ಮತ್ತು ಹೋರಾಟಗಳು ಚರಿತ್ರೆಯ ಒಳಗಿನ ಮೌನದ ಹುಡುಕಾಟವೇ ಆಗಿದೆ. ಆ ಹುಡುಕಾಟದಲ್ಲಿ; ಈ ನೆಲದಿ ಧಾರ್ಮಿಕತೆಯ ಹೆಸರಿನಲ್ಲಿ ಶತಶತಮಾನಗಳಿಂದ ದಿವ್ಯ ನಿರ್ಲಕ್ಷ್ಯಕ್ಕೆ ಹಾಗೂ ಕ್ರೌರ್ಯಗಳಿಗೆ ಒಳಗಾದವರ ಸಾಮಾಜಿಕ-ಆರ್ಥಿಕ ಬದುಕನ್ನು ಅರಿವ ಪ್ರಜ್ಞೆಯಿದೆ. ಈ ಮೂಲಕ ಮನುಸ್ಮೃತಿ ಪ್ರಣೀತ ಬದುಕಿನ ಕ್ರಮದ ಸಂಸ್ಕೃತಿಗೆ ಭಿನ್ನವಾದ 'ಬಹುಜನ ಹಿತಾಯ: ಬಹುಜನ ಸುಖಾಯ' ಪರಿಕಲ್ಪನೆಯ ಪರ್ಯಾಯ ಸಂಸ್ಕೃತಿಯನ್ನು ಚಿಗುರೊಡೆಸುವ ತುರ್ತನ್ನು ಕಾಣಬಹುದಾಗಿದೆ.

ಅಂಬೇಡ್ಕರ್ ಅವರು ಗುರುತಿಸುವಂತೆ ಮನುಸ್ಮೃತಿಯ ಹೇಳಿಕೆಗಳು ಕೇವಲ ಸಡಿಲಿತ ನಿಬಂಧನೆಗಳಲ್ಲ, ಬದಲಿಗೆ ಇಲ್ಲಿ ನೆಲೆಗೊಂಡಿರುವ ಪ್ರತಿಯೊಬ್ಬರೂ ನಿರಂತರವಾಗಿ ಅನುಸರಿಸಲೇಬೇಕಾದ ಕಡ್ಡಾಯ ಕಾನೂನುಗಳು. ಆದರೆ ಅವು ದೈವ ಹಾಗೂ ಧಾರ್ಮಿಕತೆಯ ಹೆಸರಿನಲ್ಲಿ ಪವಿತ್ರಗೊಳಿಸಿದ, ಶೋಷಣೆಯನ್ನೆ ಮೌಲ್ಯಗಳೆಂದು ನಂಬಿಸಲ್ಪಟ್ಟ ಅವೈಜ್ಞಾನಿಕ, ಅವೈಚಾರಿಕ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಕಟ್ಟಳೆಗಳು. ಈ ಕಾನೂನು-ಕಟ್ಟಳೆಗಳು ಅಂಬೇಡ್ಕರ್ ಅವರು ಸಂಶೋಧಿಸಿರುವಂತೆ; ಎಲ್ಲ ಬಗೆಯ ಅವಿವೇಕಗಳನ್ನು ಧಿಕ್ಕರಿಸಿ ಜೀವಚೈತನ್ಯದಿಂದ ಮಿಡಿದ ಬುದ್ಧಧಮ್ಮದ ವಿಚಾರಗಳನ್ನು ಕೊನೆಗಾಣಿಸಲು ಹುಟ್ಟಿಕೊಂಡವಾಗಿವೆ. ಅವರೇ ಹೇಳುವಂತೆ- "ಒಂದು ಕಾಲಕ್ಕೆ ಬುದ್ಧತತ್ವಗಳ ಆಶಯದಲ್ಲಿ ಬಹುದೊಡ್ಡ ಸಾಮ್ರಾಜ್ಯ ಸ್ಥಾಪಿಸಿ ಸುಮಾರು ೧೪೦ ವರ್ಷಗಳ ಕಾಲ ಆಳಿದ ಮೌರ್ಯ ಸಾಮ್ರಾಜ್ಯದ ದೊರೆಗಳಲ್ಲಿ ಒಬ್ಬನಾದ ಬೃಹದ್ರತ. ಮೌರ್ಯನನ್ನು, ಪುಷ್ಯಮಿತ್ರ ಶುಂಗನೆಂಬ ಸಾಮವೇಧಿ ವೈದಿಕನು ಕೊಂದು ಪ್ರಜಾತಂತ್ರ ವ್ಯವಸ್ಥೆಯನ್ನೆ ಧ್ವಂಸಗೊಳಿಸಿದನು. ನಂತರ ಸುಮತಿ ಭಾರ್ಗವನೆಂಬ ಸಂಪ್ರದಾಯವಾದಿ ವೈದಿಕನಿಂದ ಈ ಕಾನೂನುಗಳು ಸುಮಾರು ಕ್ರಿಪೂ ೧೭೦ ರಿಂದ ಕ್ರಿಪೂ. ೧೫೦ರ ಅವಧಿಯಲ್ಲಿ ಬರೆಯಿಸಲ್ಪಟ್ಟಿತು.

ಅವುಗಳನ್ನು ಪುರಾತನಗೊಳಿಸಲು ಈ ಹಿಂದೆಯೇ ಪ್ರಖ್ಯಾತನಾಗಿದ್ದ ವೈದಿಕ ಋಷಿ ಮನುವಿನ ಹೆಸರನ್ನು ಸೇರಿಸಿ ಮನುಸ್ಮೃತಿ ಎಂದು ಕರೆಯಲಾಯಿತು. ನಂತರ ರಾಜ್ಯವನ್ನಾಳುವ ಎಲ್ಲಾ ರಾಜರುಗಳು ತಮ್ಮ ಆಡಳಿತಾವಧಿಯಲ್ಲಿ ಕಡ್ಡಾಯವಾಗಿ ಇದನ್ನು ಜನ ಪರಿಪಾಲನಾ ಕಾನೂನುಗಳಾಗಿ ಪ್ರತಿಪಾದಿಸುವಂತೆ ನಿಬಂಧನೆಗಳನ್ನು ಹೇರಲಾಯಿತು. ಅಲ್ಲದೆ ಇದನ್ನೆ ಆಧರಿಸಿ ಕಾಲಕಾಲಕ್ಕೆ ಬಹುತೇಕ ವೇದ, ಆಗಮ, ಸ್ಮೃತಿ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಶಾಸ್ತ್ರಗ್ರಂಥ ಮೊದಲಾದವು ಪುನರ್‌ರಚಿಸಲ್ಪಟ್ಟು ಮನುನಿರ್ಮಿತ ಅಸಮಾನತೆಗಳನ್ನು ಪವಿತ್ರೀಕರಿಸಲಾಯಿತು" ಅಂಬೇಡ್ಕರ್ ಅವರಂತೆಯೇ ಇನ್ನೂ ಅನೇಕ ವಿದ್ವಾಂಸರು ಇದನ್ನು ಸಮರ್ಥಿಸಿದ್ದಾರೆ. ಇಂತಹ ಅಮಾನವೀಯ ಮನುಸ್ಮೃತಿಯಿಂದ ಇಡೀ ಭಾರತ ಸಮಾಜದ ಸಕಲ ಜನಸಮುದಾಯವೇ ಚಾತುರ್ವರ್ಣ ಹಾಗೂ ಜಾತಿಕುಲಗಳ ಶ್ರೇಣೀಕರಣದಲ್ಲಿ ಬದುಕುವಂತಾಗಿ, ಈ ಕಾರಣಗಳಿಂದಲೆ ಬಗೆಬಗೆಯ ಶೋಷಣೆಗಳಲ್ಲಿ ನಲುಗಿ ಹೋಗಿರುವುದು ಮಾತ್ರ ಮಾನವೀಯತೆಗೆ ಹಪಹಪಿಸುವ ಯಾವೊಂದು ಮನಸ್ಸೂ ಎಂದಿಗೂ ಕ್ಷಮಿಸಲಾಗದ ಮಹಾಪರಾಧವಾಗಿದೆ.

ತಮ್ಮ ಆಯ್ಕೆಯಲ್ಲದ ಇಂತಹ ಸಾಮಾಜಿಕ ಕಾನೂನುಗಳು ಈ ದೇಶದಲ್ಲಿ ಬದುಕುವ ಕ್ರಮವೇ ಆದ ದಿನದಿಂದ, ಕೆಲವರಿಗೆ ಮಾತ್ರ ಸಕಲ ಅನುಕೂಲ-ಭದ್ರತೆಗಳನ್ನು ಒದಗಿಸಿದರೆ, ಇನ್ನುಳಿದ ಬಹುಸಂಖ್ಯಾತ ಅಸ್ಪೃಶ್ಯ ಶೂದ್ರ ಹಾಗೂ ಮಹಿಳೆಯರಿಗೆ ಮೂಲಭೂತ ಹಕ್ಕುಗಳನ್ನೆ ಇಲ್ಲವಾಗಿಸಿ ನಿರಂತರವಾದ ಮಾನವಸಿಕ-ದೈಹಿಕ ಹಿಂಸೆಗೂ ಕಾರಣವಾಗಿದೆ. ಚಾತುರ್ವರ್ಣ ವ್ಯವಸ್ಥೆ, ಜಾತಿಪದ್ಧತಿ, ಅಸ್ಪೃಶ್ಯತೆ; ಮಹಿಳಾ ಶೋಷಣೆಗೆ ಕಾರಣವಾಗಿರುವ ಬಾಲ್ಯವಿವಾಹ, ಸತಿಸಹಗಮನ, ವಿಧವಾ ಪದ್ಧತಿ, ಬೆತ್ತಲೆ ಸೇವೆ, ದೇವದಾಸಿ ಆಚರಣೆ ಮುಂತಾದವು ಹಾಗೂ ಶೂದ್ರರಿಗೆ-ಅಸ್ಪೃಶ್ಯರಿಗೆ-ಮಹಿಳೆಯರಿಗೆ ಅಕ್ಷರ-ಆಸ್ತಿ-ಅಧಿಕಾರ-ದೇವಾಲಯ ಪ್ರವೇಶದಂತಹ ಹಕ್ಕುಗಳ ನಿರಾಕರಣೆ, ಅಂತರ್ಜಾತಿ ವಿವಾಹ-ಅಂತರ್‌ಜಾತಿ ಸಾಮೂಹಿಕ ಭೋಜನ ನಿಷೇಧ, ಕರ್ಮಸಿದ್ಧಾಂತ, ದೇವರು... ಇವೆಲ್ಲವೂ ಯಾವ ಯಾವ ಬಗೆಯಲ್ಲಿ ಇಂಡಿಯಾದ ಸಾಮಾಜಿಕ-ಆರ್ಥಿಕ-ರಾಜಕೀಯ ಅಸಮಾನತೆಗಳಿಗೆ ಕಾರಣವಾಗಿವೆ ಎಂಬುದನ್ನು ಆಮೂಲಾಗ್ರವಾಗಿ

ವಿಶ್ಲೇಷಿಸಿದ ಅಂಬೇಡ್ಕರ್ ಅವರು; ಮನುಪ್ರಣೀತ ವಿಚಾರಗಳನ್ನು ದಲಿತರು ಮಾತ್ರವೇ ಅಲ್ಲ ಭಾರತದ ಪ್ರತಿಯೊಬ್ಬರೂ ಮಾನಸಿಕವಾಗಿ ಕಿತ್ತೊಗೆದು ವಿಕಾಸ ಹೊಂದಬೇಕಾದ ಅನಿವಾರ್ಯತೆಯನ್ನು ಪ್ರಬಲವಾಗಿ ಪ್ರತಿಪಾದಿಸಿ ಮನುಸ್ಮೃತಿಯನ್ನು ಸುಡುತ್ತಾರೆ. ಇದನ್ನವರು ದಹಿಸುವ ಸಂದರ್ಭವೂ ಚರಿತ್ರೆಯಲ್ಲಿ ಬಹುಮುಖ್ಯವಾದ ಸಂಗತಿಯಾಗಿದೆ. ಇದು ದಲಿತರು ಕೆರೆಯ ನೀರನ್ನು ಮುಟ್ಟುವ ಮಾನವ ಹಕ್ಕಿನ ಚಳವಳಿ. ಚೌಡರ್ ಕೆರೆ ಚಳವಳಿ ಎಂದೇ ಇದು ಸುಪ್ರಸಿದ್ಧ. ದಲಿತರಿಗೆ ಕುಡಿವ ನೀರನ್ನು ದಕ್ಕಿಸಿಕೊಡುವ ಈ ಸಂದರ್ಭ ದಲಿತರ ಬದುಕುವ ಹಕ್ಕನ್ನೂ ಕುರಿತದ್ದು. ಹಾಗಾಗೇ ಇದು ಸಹ ಗಾಂಧೀಜಿ ಆರಂಭಿಸಿದ 'ಉಪ್ಪಿನ ಸತ್ಯಾಗ್ರಹ'ದಷ್ಟೆ ಪವಿತ್ರ ಹಾಗೂ ದಾಖಲಾರ್ಹ. ಆದರೆ ವಿಚಿತ್ರವೆಂದರೆ ಸ್ವತಂತ್ರ ಭಾರತದಲ್ಲಿ ಇಂದು ಕೂಡ ದಲಿತರು ಅಲ್ಲಲ್ಲಿ ನೀರು ಮುಟ್ಟಿದ ಕಾರಣಕ್ಕೇ ಹಲ್ಲೆಗೆ, ಬಹಿಷ್ಕಾರಕ್ಕೆ ಒಳಗಾಗುತ್ತಿರುವುದನ್ನು ಕಾಣಬಹುದು.

ಅಂಬೇಡ್ಕರ್ ಅವರು ಮನುಸ್ಮೃತಿ ದಹಿಸುವ ಪ್ರಕ್ರಿಯೆ ಎಲ್ಲರೂ ಸ್ವಯಂ ವಿಮೋಚನೆಗೊಳ್ಳುವ ನೆಲೆಯದು. ೧೯೭೦ರ ಅವಧಿಯಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ದ ಉದ್ಘಾಟನಾ ಭಾಷಣದಲ್ಲಿ ಕುವೆಂಪು ಅವರು ಇದೇ ಅರ್ಥದಲ್ಲಿಯೆ; "ಪುರೋಹಿತಶಾಹಿಯನ್ನು ಕೊಲ್ಲಬೇಕಾದರೆ ಮೊದಲು ನಮ್ಮ ನಮ್ಮ ತಲೆಗೆ ಗುಂಡನ್ನು ಹೊಡೆದುಕೊಳ್ಳಬೇಕು" ಎಂದು ಹೇಳಿದ್ದು. ಹಾಗಾಗೇ ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಸುಟ್ಟಿದ್ದು ಕೇವಲ ಒಂದು ಕೃತಿ ದಹನವಲ್ಲ. ಬದಲಿಗೆ ಸಾಂಕೇತಿಕವಾದ ರೂಪಕದಂತೆ ನನಗೆ ಕಂಡುಬರುತ್ತದೆ. ಯಾಗಯಜ್ಞಗಳಲ್ಲಿ ಪುರೋಹಿತರು ಅವಶ್ಯಕ ವಸ್ತುಗಳನ್ನು ಅಗ್ನಿಗೆ ಹಾಕಿ ಸುಡುವ ನಾಶದ ಸಂಪ್ರದಾಯವಿದ್ದರೆ; ಅಂಬೇಡ್ಕರ್ ಅವರು ಅದೇ ಅಗ್ನಿಯಲ್ಲಿ ಅವಶ್ಯಕತೆಗಳನ್ನೆ ಉಲ್ಲಂಘಿಸಿರುವ ಹಾಗೂ ನಿಷೇಧಿಸಿರುವ ಮನುಸ್ಮೃತಿಯನ್ನು ಹಾಕಿ ದಹಿಸುತ್ತಾರೆ.

ಹಿಂದೂಧರ್ಮದ ಒಳಗಿನ ಎಲ್ಲ ವಿಕಾರಗಳನ್ನೂ ಸರ್ವನಾಶ ಮಾಡಿ ಭಾರತವನ್ನು ಸರ್ವಜನಾಂಗದ ಶಾಂತಿಯ ತೋಟವನ್ನಾಗಿಸಿ, ಸರ್ವರಿಗು ಸಮಪಾಲು; ಸರ್ವರಿಗೂ ಸಮಬಾಳು ಒದಗಿಸುವ ಅಪರಿಮಿತ ಧ್ಯಾನ ಅಂಬೇಡ್ಕರ್ ಅವರದು. ಈ ತುಡಿತದಲ್ಲೆ ಅವರು ಬುದ್ಧನತ್ತ ಸಾಗಿದ್ದು. ನಮ್ಮ ದೇಶಕ್ಕೆ ಜಾತ್ಯತೀತ, ಧರ್ಮಾತೀತವಾದ ಹಾಗೂ ಸ್ವಾತಂತ್ರ್ಯ, ಸಮಾನತೆ, ಸೋದರತೆಯನ್ನು ಸಾಕಾರಗೊಳಿಸುವ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಸಂವಿಧಾನವನ್ನು ಕೊಟ್ಟಿದ್ದು. ಆ ನಂತರದ ಕಾಲದ ಉರುಳುವಿಕೆಯಲ್ಲಿ ಅಂಬೇಡ್ಕರ್‌ರವರ ಚಿಂತನೆಗಳಿಂದ ಉಂಟಾದ ಸಾಮಾಜಿಕ ಪರಿವರ್ತನೆ ಕಡಿಮೆಯದಲ್ಲ. ಈ ಎಲ್ಲ ಪ್ರಭಾವಳಿಯ ನಡುವೆಯೂ ಇಂದು ನಮ್ಮ ಸುತ್ತ ಮುತ್ತಲಿನ ಸಮಾಜವನ್ನು ತೆರೆದ ಕಣ್ಣುಗಳಿಂದ ಗಮನಿಸಿದರೆ ಜೀವಪರ ಕಾಳಜಿಯುಳ್ಳವರಿಗೆ ಮತ್ತೆ ನಮ್ಮ ಸಮಾಜ ಎತ್ತ ಸಾಗುತ್ತಿದೆ ಎಂಬ ದಿಗಿಲಾಗುವುದು ಸಹಜ.

ಈ ಕಾಲಸಂದರ್ಭದಲ್ಲಿ ಅಂಬೇಡ್ಕರ್ ಅವರ ಚಿಂತನೆಗಳಿಗೆ ಧಕ್ಕೆ ತರಲಾಗುತ್ತಿದೆಯೆ ಎಂಬ ಅನುಮಾನ ಮೂಡುತ್ತದೆ. ಹಾಗೆ ನೋಡಿದರೆ ಅಂಬೇಡ್ಕರ್ ಅವರನ್ನು ಮಾತ್ರವೇ ಅಲ್ಲ, ಹಿಂದೂ ಮೌಢ್ಯಗಳಿಂದ ಉಂಟಾಗಬಹುದಾದ ಅನಾಹುತಗಳನ್ನು ಧಿಕ್ಕರಿಸಿ ಹೊಸ ಸಮಾಜದ ನಿರ್ಮಾಣಕ್ಕೆ ಕ್ಷಣಕ್ಷಣವೂ ಹಾತೊರೆದ ಬುದ್ಧ, ಬಸವಣ್ಣ,

ಬಾಲ್ಯವಿವಾಹ, ಸತಿಸಹಗಮನ, ವಿಧವಾ ಪದ್ಧತಿ, ಬೆತ್ತಲೆ ಸೇವೆ, ದೇವದಾಸಿ ಆಚರಣೆ ಮುಂತಾದವು ಹಾಗೂ ಶೂದ್ರರಿಗೆ–ಅಸ್ಪೃಶ್ಯರಿಗೆ–ಮಹಿಳೆಯರಿಗೆ ಅಕ್ಷರ–ಆಸ್ತಿ–ಅಧಿಕಾರ–ದೇವಾಲಯ ಪ್ರವೇಶದಂತಹ ಹಕ್ಕುಗಳ ನಿರಾಕರಣೆ, ಅಂತರ್ಜಾತಿ ವಿವಾಹ–ಅಂತರ್‌ಜಾತಿ ಸಾಮೂಹಿಕ ಭೋಜನ ನಿಷೇಧ, ಕರ್ಮಸಿದ್ಧಾಂತ, ದೇವರು... ಇವೆಲ್ಲವೂ ಯಾವಯಾವ ಬಗೆಯಲ್ಲಿ ಇಂಡಿಯಾದ ಸಾಮಾಜಿಕ–ಆರ್ಥಿಕ–ರಾಜಕೀಯ ಅಸಮಾನತೆಗಳಿಗೆ ಕಾರಣವಾಗಿವೆ ಎಂಬುದನ್ನು ಆಮೂಲಾಗ್ರವಾಗಿ ವಿಶ್ಲೇಷಿಸಿದ ಅಂಬೇಡ್ಕರ್ ಅವರು, ಮನುಪ್ರಣೀತ ವಿಚಾರಗಳನ್ನು ದಲಿತರು ಮಾತ್ರವೇ ಅಲ್ಲ ಭಾರತದ ಪ್ರತಿಯೊಬ್ಬರೂ ಮಾನಸಿಕವಾಗಿ ಕಿತ್ತೊಗೆದು ವಿಕಾಸ ಹೊಂದಬೇಕಾದ ಅನಿವಾರ್ಯತೆಯನ್ನು ಪ್ರಬಲವಾಗಿ ಪ್ರತಿಪಾದಿಸಿ ಮನುಸ್ಮೃತಿಯನ್ನು ಸುಡುತ್ತಾರೆ.

ಕುವೆಂಪು ಅವರ ಚಿಂತನೆಗಳನ್ನು ಈ ದಿನಮಾನದಲ್ಲಿ ಅಪಮೌಲ್ಯೀಕರಿಸಲಾಗುತ್ತಿದೆ. ಈ ಎಲ್ಲ ಮಹಾಚೇತನಗಳೂ ತಾಯಿ ಮಮತೆಯ ಮನುಷ್ಯ ಪ್ರೇಮದ ವೈಚಾರಿಕತೆಯನ್ನು ಈ ನೆಲದಲ್ಲಿ ಬಿತ್ತಿದವರು. ಆದರೆ ಇಂದು ಬುದ್ಧ, ಬಸವಣ್ಣ, ಅಂಬೇಡ್ಕರ್, ಕುವೆಂಪು ಅವರ ಚಿಂತನೆಗಳನ್ನು ಅನೇಕರು ಹೆಚ್ಚಾಗಿ ಆರಾಧನೆಯ ನೆಲೆಯಲ್ಲಿ ಅಥವಾ ಒಂದು ಕೋಮಿನ–ಜಾತಿಯ ಪ್ರತಿನಿಧಿಗಳನ್ನಾಗಿ ಮಾತ್ರ ಗುರುತಿಸುತ್ತಿರುವುದು ಹೆಚ್ಚುತ್ತಿದ್ದು ಈ ಸಮಾಜದ ಬಹುಪಾಲು ಮಂದಿ ಮನುಪ್ರಣೀತ ವಿಷಯಗಳಿಗೇ ತಗುಲಿಕೊಂಡಿರುವಂತಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕದಲ್ಲಿ ನಡೆಯುತ್ತಿರುವ ಕೆಲವು ಪ್ರಚಲಿತ ಅಂಶಗಳನ್ನು ಇಲ್ಲಿ ಮುಕ್ತವಾಗಿ ಚರ್ಚಿಸಬಹುದು.

ಶಾಸ್ತ್ರಗಳೆಂಬ ಹಿಂಸಾರಭಸಮತಿ:

ಧರ್ಮವು ಜೀವಪರ ವೈಚಾರಿಕತೆ ಹಾಗೂ ನೈತಿಕತೆಯನ್ನು ಮುಖ್ಯವಾಗಿರಿಸಿಕೊಂಡು ಕಾಲಕಾಲಕ್ಕೆ ಪರಿವರ್ತನೆಯಾಗಿ ವಿಕಾಸಗೊಳ್ಳುತ್ತ ಹೋಗಬೇಕೆಂಬುದು ಬುದ್ಧ, ಬಸವ, ಅಂಬೇಡ್ಕರ್ ಅವರ ಖಚಿತ ನಿಲುವು. ವಿಚಿತ್ರವೆಂದರೆ ಪುರೋಹಿತಶಾಹಿಯ ಬಿಗಿಹಿಡಿತಕ್ಕೆ ಸಿಕ್ಕಿರುವ ಜನ ಮತ್ತು ಮಠಮಾನ್ಯಗಳು ಇಂದಿಗೂ ಮನುಸ್ಮೃತಿಯ ಬಿಗಿಹಿಡಿತದಿಂದ ಪಾರಾಗಿಲ್ಲವೆನಿಸುತ್ತದೆ. ಹಿಂದೂ ಧರ್ಮೀಯರು ವಿದೇಶಿ ಪ್ರವಾಸ ಮಾಡುವಂತಿಲ್ಲ ಎಂಬುದೂ ಮನು ನಿಯಮವೆ? ಉಡುಪಿಯ ಅಷ್ಟಾಂಗ ಮಠಗಳು ತನ್ನೆಲ್ಲಾ ಖಾಸಗಿ ಮೌಢ್ಯಗಳ ಜೊತೆಗೆ ಈಗ ಇದನ್ನೂ ಸಾರ್ವಜನಿಕ ಚರ್ಚಾವಿಷಯವನ್ನಾಗಿಸಿ ಅದಕ್ಕೆ ಪುರಾತನ ಸಂಪ್ರದಾಯದ ಆಧಾರಗಳನ್ನೆ ಸಮರ್ಥಿಸುತ್ತಿರುವುದು ಇದನ್ನು ಇನ್ನಷ್ಟು ಸಾಬೀತು ಪಡಿಸುತ್ತದೆ. ಗಾಂಧೀಜಿ ಬ್ಯಾರಿಸ್ಟರ್ ಪದವಿಯನ್ನು ಅಧ್ಯಯನ ಮಾಡಲು ಇಂಗ್ಲೆಂಡಿಗೆ ಹೋಗಬಯಸಿದ ಸಂದರ್ಭದಲ್ಲಿ ಅವರ ಇಡೀ ಕುಟುಂಬವನ್ನೇ ಸಂಪ್ರದಾಯವಾದಿಗಳು ಬಹಿಷ್ಕರಿಸುತ್ತಾರೆ. ನಮ್ಮ ದೇಶವನ್ನು ಒಳಗೊಂಡಂತೆ ವಿವಿಧ ದೇಶಗಳಲ್ಲಿ ಪಡೆದ ಓದು–ಅನುಭವಗಳು ಗಾಂಧೀಜಿ ಮಾತ್ರವಲ್ಲದೆ ಅಂಬೇಡ್ಕರ್ ಅವರೂ ಈ ದೇಶದ ಬಿಡುಗಡೆಯ ನೇತಾರರಾಗಲು ನೆರವಾದವು ಎಂಬುದನ್ನು ಅನುಮಾನಿಸಲು ಸಾಧ್ಯವೇ?

ವಿಚಿತ್ರವೆಂದರೆ ಆಧುನಿಕ ತಂತ್ರಜ್ಞಾನದ ಎಲ್ಲ ಆವಿಷ್ಕಾರಗಳ ಉಪಯೋಗ ಸಂಪ್ರದಾಯವಾದಿಗಳಿಗೆ ಬೇಕಿವೆ. ಆದರೆ ಧರ್ಮ, ಸಂಪ್ರದಾಯ, ಶಾಸ್ತ್ರಗ್ರಂಥಗಳೊಳಗಿನ ಮೌಢ್ಯಗಳನ್ನು ಮೀರುವ ಪ್ರಯತ್ನಗಳನ್ನು ಮಾತ್ರ ಮಾಡುತ್ತಿಲ್ಲವೆಂಬುದು ದುರಂತ. ಈ ಹಿಂದೆ ಚಿತ್ರನಟಿ ಜಯಮಾಲಾ ಅವರು ಅಯ್ಯಪ್ಪನ ದೇವಾಲಯಕ್ಕೆ ಪ್ರವೇಶಿಸಿದ ವಿಷಯವೇ ದೊಡ್ಡ ಚರ್ಚೆಯನ್ನುಂಟು ಮಾಡಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಸಂಪ್ರದಾಯದ ಹೆಸರಿನಲ್ಲಿ ಕೆಲವು ಮಠಗಳ ಸ್ವಾಮೀಜಿಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಮನುಷ್ಯರೇ ಹೊರುವ ಪದ್ಧತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇನ್ನೂ ಇರುವುದು ವಿಷಾದನೀಯ.

ಶಾಸ್ತ್ರಗ್ರಂಥಗಳನ್ನು, ಹಳೆಯ ಸಂಪ್ರದಾಯಗಳನ್ನು ಕಿಂಚಿತ್ತೂ ಪ್ರಶ್ನಿಸದೆ ಒಪ್ಪಬೇಕು. ಅದನ್ನು ವಿಮರ್ಶಿಸದೆ ಆರಾಧಿಸಬೇಕು. ಪೂಜಿಸಿ ಅನುಸರಿಸಬೇಕೆಂಬುದೆ ಕೂಪಮಂಡೂಕ ಮನಸ್ಥಿತಿಯದಾಗಿದೆ. ಇದೇ ಜಾಡನ್ನು ಹಿಡಿದು ಹೊರಟರೆ ಇಂದಿಗೂ ಅಸ್ಪೃಶ್ಯತೆ, ಜಾತಿಪದ್ಧತಿ, ಮಹಿಳಾಶೋಷಣೆ ಹಾಗೂ ಚಾತುರ್ವರ್ಣ ಪದ್ಧತಿಯ ವಿಕಾರಗಳನ್ನು ಯಾಕೆ ಸಮರ್ಥಿಸುತ್ತಾರೆ. ಮತ್ತು ಯಾಕಿನ್ನೂ ಇವು ಉಳಿದಿವೆ ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದಾಗಿಯೇ ೨, ೬೦೦ ವರ್ಷಗಳ ಹಿಂದೆಯೇ ಬುದ್ಧಗುರು" "ಶಾಸ್ತ್ರಗ್ರಂಥಗಳು ಹೇಳಿದೆ ಎಂದೊ, ಹಿರಿಯರು ಅನುಸರಿಸಿಕೊಂಡು ಬಂದಿದ್ದಾರೆ. ಎಂದೋ ನಿನಗೇ ಅರ್ಥವಾಗದೆ, ಜೀವಪರವಲ್ಲದಿದ್ದರೆ, ಇನ್ನೊಬ್ಬರಿಗೆ ಕೇಡೆನಿಸುವುದಾದರೆ, ಮೂಢನಂಬಿಕೆಯ ಆಧಾರಿತವಾಗಿದ್ದರೆ ಯಾವುದೇ ಕಾರಣಕ್ಕೂ, ಎಂದಿಗೂ ಒಪ್ಪಬೇಡ. ನಿನಗೆ ನೀನೆ ಬೆಳಕು" ಎಂದಿರುವುದು.

ಕನ್ನಡ ಪರಂಪರೆಯಲ್ಲಿ ವಚನ ಚಳವಳಿಯ ಸಂದರ್ಭವಂತು ಇಂತಹ ಅವಿವೇಕಗಳನ್ನು ಅತ್ಯಂತ ದಿಟ್ಟತೆಯಿಂದ ವಿರೋಧಿಸಿತು. 'ದಯೆಯೇ ಧರ್ಮದ ಮೂಲವಯ್ಯ ಎನ್ನುವ ಬಸವಾದಿ ವಚನಕಾರರು ವೇದಶಾಸ್ತ್ರಗಳು ಪವಿತ್ರ, ಪರಮಪೂಜ್ಯ ಎಂಬ ಮನುವಾದಿ ನಂಬಿಕೆಗಳನ್ನೆ ಬುಡಮೇಲು ಮಾಡಿದ್ದಾರೆ. ಬಸವಣ್ಣ–ವೇದಕ್ಕೆ ಬರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವ ನಿಕ್ಕುವೆ/ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯ್ವೆ' ಎಂದರೆ, ಘನ ಶರಣ ಅಲ್ಲಮ–ವೇದವೆಂಬುದು ಓದಿನ ಮಾತು/ಶಾಸ್ತ್ರವೆಂಬುದು ಸಂತೆಯ ಸುದ್ದಿ/ಪುರಾಣವೆಂಬುದು ಪುಂಡರ ಗೋಷ್ಠಿ' ಎನ್ನುತ್ತಾನೆ. ಪುರುಷಪ್ರಧಾನ ಸಮಾಜದೊಟ್ಟಿಗೆ ಸತತವಾಗಿ ಸಂಘರ್ಷಿಸಿದ ಅಕ್ಕಮಹಾದೇವಿ ಕೂಡ 'ವೇದ ಶಾಸ್ತ್ರ ಪುರಾಣ ಆಗಮಗಳೆಂಬ ಕೊಟ್ಟಣವ ಕುಟ್ಟುತ್ತ ಬರಿ ನುಚ್ಚು ತೌಡು ಕಾಣಿಭೋ, ಬರಿದೆ ಇವ ಕುಟ್ಟಲೇಕೆ' ಎಂದು ಕಟುಟೀಕೆಗೆ ಗುರಿ ಪಡಿಸಿದ್ದಾಳೆ. ಆಧುನಿಕ ಸಂದರ್ಭದಲ್ಲಿ ವಿಶ್ವಮಾನವ ಪ್ರಜ್ಞೆಯನ್ನು ಧ್ಯಾನಿಸಿದ ಮಹಾಕವಿ ಕುವೆಂಪು ಅವರೂ ತಮ್ಮ ಕವನವೊಂದರಲ್ಲಿ 'ಯಾವ

[illegible]
[illegible] ನೀಡು' ಎಂದಿದ್ದಾರೆ. ಇಲ್ಲೆಲ್ಲಾ ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟ ಆಶಯದ ತುಡಿತ ಹಾಗೂ ವಿಮರ್ಶೆಯೇ ಇದೆ ಎಂಬುದನ್ನು ಅರಿಯಬಹುದು. ಆದರೆ ಬಹುತೇಕ ಹಿಂದೂ ಮನಸ್ಸುಗಳಿಗೆ ಇಂದಿಗೂ ಧರ್ಮ ಶಾಸ್ತ್ರಗಳು ಬದುಕಿನ ಮೇಲೆ ನಿರ್ಣಾಯಕ ಪ್ರಭಾವ ಬೀರುತ್ತಿವೆ. 'ಧರ್ಮೋ ರಕ್ಷತಿ ರಕ್ಷಿತ:" ಎಂಬ ಮಾತು ಈ ಹಿನ್ನೆಲೆಯದೆ ಆಗಿದೆ.

ಆಹಾರದ ಬಗೆಗಿನ ಪಾವಿತ್ರ್ಯ ಮತ್ತು ಅಪಾವಿತ್ರ್ಯ ಕಲ್ಪನೆ:

ಅಂಬೇಡ್ಕರ್ ಅವರು ಜಾತಿವಿನಾಶಕ್ಕೆ ಅಂತರ್ಜಾತಿ ವಿವಾಹದಷ್ಟೇ ಪ್ರಾಮುಖ್ಯತೆಯನ್ನು ಅಂತರ್ಜಾತಿ ಸಹ ಪಂಕ್ತಿ ಭೋಜನಕ್ಕೂ ನೀಡುತ್ತಾರೆ. ಆದರೆ ಇಂದಿಗೂ ಆಹಾರದ ಬಗೆಗೆ ಪಾವಿತ್ರ್ಯ-ಅಪಾವಿತ್ರ್ಯ ನಂಬಿಕೆ ಹಿಂದೂಗಳಲ್ಲಿ ಕಡಿಮೆಯಾಗಿಲ್ಲದ ಕಾರಣ ಇದು ಸಾಧ್ಯವಾಗುತ್ತಿಲ್ಲ. ಎಸ್.ಎಂ. ಕೃಷ್ಣ ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಜಾರಿಗೆ ತಂದ ಬಿಸಿಯೂಟ ಯೋಜನೆ ಇದಕ್ಕೆ ಅತ್ಯುತ್ತಮ ಉದಾಹರಣೆ. ಇಡೀ ಕರ್ನಾಟಕದಾದ್ಯಂತ ಗ್ರಾಮ ಜಗತ್ತು ಇದರಿಂದ ತಲ್ಲಣಗೊಂಡಿತು. ದಲಿತ ಮಹಿಳೆ ಅಡುಗೆ ಮಾಡುತ್ತಾಳೆಂಬುದೇ ಇದಕ್ಕೆ ಬಹುಮುಖ್ಯ ಕಾರಣ. ಮೇಲ್ಜಾತಿ ಭ್ರಮೆಯ ಜನರು; ತಾವು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದೇ ಇದ್ದರು ಪರವಾಗಿಲ್ಲ, ಶಾಲೆಯಲ್ಲಿ ಮಾತ್ರ ಅವರು ಊಟ ಮಾಡಬಾರದು ಎಂದೂ, ದಲಿತ ಮಹಿಳೆ ಅಡುಗೆ ಮಾಡಬಾರದು ಎಂಬುದಾಗಿ ಆಗ್ರಹಿಸಿದ್ದು ಅತ್ಯಂತ ಕ್ರೂರ ಹಾಗು ಅಮಾನವೀಯ. ಸಂವಿಧಾನಾತ್ಮಕವಾಗಿ ಅಸ್ಪೃಶ್ಯತೆ ನಿಷೇಧಿಸಲ್ಪಟ್ಟಿದ್ದರು ಜನಜೀವನದಲ್ಲಿ ಇನ್ನು ಹೇಗೆ ಹಾಸುಹೊಕ್ಕಾಗಿದೆ ಎಂಬುದು ಇದರಿಂದ ಸ್ಫೋಟಗೊಂಡಿತು. ಅಲ್ಲದೆ ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಲ್ಲೆ ಹೇಗೆ ಜಾತಿಪ್ರಜ್ಞೆಯ ಮನಸನ್ನು ಉದ್ದೀಪನಗೊಳಿಸುತ್ತಾರೆ ಎಂಬುದೂ ವ್ಯಕ್ತಗೊಂಡಿತು. ಸಾಮಾಜಿಕ ಅಸಮಾನತೆಯನ್ನು ಉಣ್ಣುವ ಆಹಾರದ ಮೇಲೂ ಆರೋಪಿಸಿರುವುದು ಈ ಮನುಸ್ಮೃತಿಯೆ.

ಜಾತಿವ್ಯವಸ್ಥೆಯ ಇಂಡಿಯಾದಲ್ಲಿ ತನಗಿಂತ ಕೆಳ ಜಾತಿಯ ಜನಾಂಗ ಬಳಸುವ ಯಾವುದೇ ಬಗೆಯ ಆಹಾರ ಹಾಗೂ ಅವರು ತಯಾರಿಸಿದ ಆಹಾರ ಅಪವಿತ್ರ, ಅದನ್ನು ಸೇವಿಸಬಾರದೆಂಬ ನಂಬಿಕೆ ಬಹುಪಾಲು ಇನ್ನೂ ಇದೆ. ಆಹಾರ ಪದ್ಧತಿ ಒಂದು ಸಂಸ್ಕೃತಿಯ ಅಂಗವಾಗಿದ್ದು ಆಯಾ ಪ್ರದೇಶ-ಪರಿಸರ-ಹವಾಗುಣಕ್ಕೆ ಅನುಗುಣವಾಗಿ ಅವರವರ ಅನುಕೂಲಕ್ಕೆ ತಕ್ಕಂತೆ, ಅವರವರ ದೇಹ ಹಾಗು ಶ್ರಮಕ್ಕೆ ಅನುಸಾರವಾಗಿ ಇರುತ್ತದೆ. ಆಹಾರದ ಬಗೆಗಿನ ಅಸ್ಪೃಶ್ಯತೆಯ ತಲ್ಲಣವನ್ನು ಬಸವಣ್ಣ ಎಂಟು ನೂರು ವರ್ಷಗಳ ಹಿಂದೆಯೇ ಕಟ್ಟಿಕೊಟ್ಟಿರುವುದು ಹೀಗೆ:

ವೇದ ನಡನಡುಗಿತ್ತು, ಶಾಸ್ತ್ರವಾಗಲಿ ಕೆಲಕ್ಕೆ ಸಾರಿದ್ದಿತಯ್ಯಾ
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ
ಆಗಮ ಹೆರತೊಲಗಿ ಅಗಲಿದ್ದಿತಯ್ಯಾ
ನಮ್ಮ ಕೂಡಲ ಸಂಗಯ್ಯನು
ಮಾದರ ಚೆನ್ನಯ್ಯನ ಮನೆಯಲುಂಡ ಕಾರಣ!

ಸಸ್ಯಹಾರದಂತೆ ಮಾಂಸಹಾರದ ಸಂದರ್ಭದಲ್ಲಿಯೂ ಇಂತಹುದೇ ಅಸಮಾನತೆ ಇರುವುದನ್ನು ಕಾಣಬಹುದು.

ಇದೇ ಕಾಲಘಟ್ಟದ ಶರಣ ಅಂಬಿಗರ ಚೌಡಯ್ಯ ಮಾಂಸ ಹಾರಿಗಳಲ್ಲಿ ಇರುವ ತಾರತಮ್ಯ ಕುರಿತು ಕಠೋರವಾಗಿ ವಿರೋಧಿಸಿರುವುದು ಹೀಗೆ:

ಕುರಿಕೋಳಿ ಕರುಮೀನು ತಿಂಬವರ ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ ಊರಿಂದ ಹೊರಗಿರು ಎಂಬರು
ಆತನು ಹರಿಗೋಲಾಯಿತ್ತು. ಬೊಕ್ಕಣ್, ಸಿದಿಕೆ, ಬಾರುಕೋಲು ಪಾದರಕ್ಷೆಯಾಗಿತ್ತು.
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಗಿತ್ತು
ಈ ಬದ್ದಲಿಕೆಯೊಳಗಣ ತುಪ್ಪದ ಶುದ್ಧ ಮಾಡಿ ತಿಂಬವರ ಕಂಡಡೆ
ಉದ್ದನೆಯ ಚೆಮ್ಮಾಳಿಕೆಯ ತೆಕ್ಕೊಂಡು ಬಾಯ ಕೊಯ್ಯುವೆನು ಅಂಬಿಗರ ಚೌಡಯ್ಯ

ಅಂಬೇಡ್ಕರ್ ಅವರು 'ಅಸ್ಪೃಶ್ಯರು ಯಾರು? ಎಂಬ ತಮ್ಮ ಸಂಶೋಧನ ಗ್ರಂಥದಲ್ಲಿ; ಅಸ್ಪೃಶ್ಯರು ಬೌದ್ಧರಾಗಿದ್ದರೆಂಬ ಸಿದ್ಧಾಂತವನ್ನು ಮಂಡಿಸುತ್ತ, ಬೌದ್ಧಧಮ್ಮದಲ್ಲಿನ ಜೀವಿಗಳನ್ನು ಕೊಲ್ಲಬಾರದೆಂಬ ನಂಬುಗೆಯ ಹಿನ್ನೆಲೆಯಲ್ಲಿ ಸತ್ತದನದ ಮಾಂಸ ತಿನ್ನುವ ಪದ್ಧತಿ ರೂಢಿಗೆ ಬಂದಿರಬಹುದೆಂಬ ಸಾಧ್ಯತೆಯನ್ನು ಊಹಿಸುತ್ತಾರೆ. ಅಲ್ಲದೆ ಬುದ್ಧ ಗುರುವಿಗೂ ಹಿಂದೆ ವೈದಿಕ ಪುರೋಹಿತ ಶಾಹಿಗಳು ಯಾಗಯಜ್ಞಗಳ ಹೆಸರಿನಲ್ಲಿ ಅನೇಕ ಪ್ರಾಣಿಗ ಳನ್ನು, ಅವುಗಳಲ್ಲಿ ಗೋವುಗಳನ್ನು ವಧೆ ಮಾಡುತ್ತಿದ್ದರು ಮತ್ತು ಆಹಾರವಾಗಿ ಬಳಸುತ್ತಿದ್ದರೆಂಬುದಕ್ಕೆ ಪುರಾವೆಗ ಳನ್ನು ನೀಡುತ್ತಾರೆ. (ಬಸವಣ್ಣ ತನ್ನ ವಚನವೊಂದರಲ್ಲಿ: 'ಶಾಸ್ತ್ರ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತದೆ' ಎಂದಿರುವುದೂ ಇದನ್ನು ಸಮರ್ಥಿಸುತ್ತದೆ.) ವಿಚಿತ್ರ ವೆಂದರೆ ಕೋಮುವಾದಿ ಮನಸ್ಸುಗಳು ಕರ್ನಾಟಕದ ದಕ್ಷಿಣ ಕನ್ನಡ, ಮಂಗಳೂರು ಮುಂತಾದ ಕಡೆಗಳಲ್ಲೆಲ್ಲ ಗೋಮಾಂಸದ ವಿಚಾರವಾಗಿ ಅಲ್ಪಸಂಖ್ಯಾತರ ಮೇಲೆ ಅಮಾನವೀಯವಾಗಿ ದೌರ್ಜನ್ಯ ಎಸಗಿರುವುದನ್ನು, ಈ ಕ್ಷಣಕ್ಕೂ ಎಸಗುತ್ತಿರುವುದನ್ನು ಕಾಣಬಹುದು.

ದಲಿತರಿಗೆ ಉತ್ತಮ ಆಹಾರ ಸೇವನೆಯನ್ನು ಮನಸ್ಮೃತಿ ನಿಷೇಧಿಸಿದ್ದಂತ ಕಾಲಮಾನದಲ್ಲಿ ಇಂತಹ ಆಹಾರ ತಿಂದಾದರೂ ಅವರು ಬದುಕುಳಿದಿದ್ದಾರೆ ಎಂದರೆ ಸುಳ್ಳಲ್ಲ. ಇಂದಿಗೂ ಪರಿಶಿಷ್ಟ ಜಾತಿಯಲ್ಲಿ ದಿವ್ಯನಿರ್ಲಕ್ಷ್ಯಕ್ಕೆ ಒಳಗಾಗಿರುವ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕರ್ನಾಟಕ-ತಮಿಳುನಾಡಿನ ಗಡಿಭಾಗಗಳಲ್ಲಿ ವಾಸಿಸುವ ಕಡುಶ್ರಮಜೀವಿಗಳಾದ ಕಪ್ಪೆ ಹೊಲಯ ಜನಸಮುದಾಯದ ಬಹುಪಾಲು ಮಹಿಳೆ ಮತ್ತು ಪುರುಷರು- 'ದನದ ಮಾಂಸವಿಲ್ಲದಿದ್ದರೆ ತಾವು ಎಂದೋ ಸತ್ತೆಹೋಗುತ್ತಿದ್ದೇವೆಂದು ಸಂದರ್ಶನದಲ್ಲಿ ಹೇಳಿದ್ದಾರೆ. ಗೋವು ದೇವರ ಅವತಾರವೆಂದು ಪ್ರಬಲವಾಗಿ ಪ್ರತಿಪಾದಿಸುವ ಹಿಂದುತ್ವವಾದಿಗಳು, ಹಂದಿ ಹಾಗೂ ಮೀನುಗಳನ್ನು ಆಹಾರವಾಗಿ ಬಳಸುವುದನ್ನೂ ನಿಷೇಧಿಸಬೇಕಿದೆ. ಯಾಕೆಂದರೆ ವಿಷ್ಣುವಿನ ದಶಾವತಾರಗಳಲ್ಲಿ ಮತ್ಸ್ಯಾವತಾರ ಹಾಗೂ ವರಹಾವತಾರಗಳು ಇವೆ. ಇದನ್ನು ಯಾಕೆ ಹಿಂದುವಾರಸುದಾರರು ಬುದ್ಧಿಪೂರ್ವಕವಾಗಿ ಮರೆಮಾಚುತ್ತಾರೆ. ಪಾವಗಡ ತಾಲ್ಲೂಕಿನ ನಾಗಲಮಡಿಕೆ ಗ್ರಾಮದ ದೇವಾಲಯವೊಂದರ ಬಳಿ ಬ್ರಾಹ್ಮಣರು ಸಾಲಾಗಿ ಕುಳಿತು ಊಟ ಮಾಡಿದ ಎಂಜಲೆಲೆಯನ್ನು ಬ್ರಾಹ್ಮಣೇತರ ಜಾತಿಗಳ ಜನರು ಪೈಪೋಟಿಯಲ್ಲಿ ಗುಂಪುಗುಂಪಾಗಿ ಬಂದು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಬಿಸಾಡಿ ನಂತರ ಪಿನಾಕಿನ ನದಿಯಲ್ಲಿ ಸ್ನಾನ ಮಾಡಿದರೆ ಪುಣ್ಯ ಬರುತ್ತದೆಂಬ ಹುಸಿನಂಬಿಕೆ ಇದೆ. ಈ ಅನಿಷ್ಟ ಪದ್ಧತಿ ಪ್ರತೀ ವರ್ಷದ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಆಗಿನಿಂದಲೂ ನಡೆದುಕೊಂಡು ಬರುತ್ತಿದೆ. ಇದನ್ನು ಯಾಕೆ ಹಿಂದೂವಾರಸುದಾರರು ವಿರೋಧಿಸುತ್ತಿಲ್ಲ. ಆಹಾರದ ವಿಚಾರದಲ್ಲೂ ಶ್ರೇಷ್ಠ-ಕನಿಷ್ಠವೆಂಬ ಈ ಬಗೆಯ ನೀಚತನ ಹಾಗೂ ಅವೈಜ್ಞಾನಿಕತೆ ಮುಂದುವರೆದಿರುವುದು ಭಾರತದಲ್ಲಿ ಮಾತ್ರವೆ ಎನಿಸುತ್ತದೆ.

ಕರ್ನಾಟಕ ನೆಲದಿ ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ದಲಿತ, ರೈತ, ವಿಜ್ಞಾನ ಹಾಗೂ ಪ್ರಗತಿಪರ ಚಳವಳಿಗಳು, ಜಾತಿ ವಿನಾಶ ಸಮ್ಮೇಳನ, ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ಬೂಸಾ ವಿರೋಧಿ ಆಂದೋಲನ, ದಲಿತ-ಬಂಡಾಯ ಸಾಹಿತ್ಯ, ಕ್ರಾಂತಿಗೀತೆಗಳು, ಬೀದಿನಾಟಕ, ರಂಗಭೂಮಿ ಇವೇ ಮುಂತಾದ ಸಮಾಜೋ-ಸಾಂಸ್ಕೃತಿಕ ಚಳವಳಿಗಳು ಈ ಪರಿಸರದಲ್ಲಿ ಅನೇಕ ಗುಣಾತ್ಮಕ ಬದಲಾವಣೆಗಳನ್ನು ತಂದುವು. ಚಳವಳಿಗಳು ಕಾಲಕಾಲಕ್ಕೆ ನಡೆಸಿದ ಅಧ್ಯಯನ ಶಿಬಿರಗಳು, ಚಿಂತನಾ ಕಾರ್ಯಗಾರಗಳ ಪ್ರಭಾವದ ಕಾರಣಗಳಿಂದಲೆ ಜೀವನ್ಮುಖಿ ವೈಚಾರಿಕತೆ ಪ್ರಜ್ವಲಿಸಲು ಸಾಧ್ಯವಾಯಿತು. ಅನೇಕ ತರುಣರು. ಅಂತರ್ಜಾತಿ ಹಾಗೂ ಸರಳ ವಿವಾಹವಾಗಿದ್ದಾರೆ. ಆಹಾರದ ಬಗೆಗಿನ ನಿರ್ಬಂಧಗಳನ್ನು ಮೀರಿ ಧರ್ಮಾತೀತವಾಗಿ ಜಾತ್ಯತೀತವಾಗಿ ಬೆರೆಯುವಿಕೆಗೂ ಇದು ಕಾರಣವಾಯಿತು.

ಆದರೆ ಚಳವಳಿಗಳು ದಣಿವಾರಿಸಿಕೊಳ್ಳುತ್ತಿರುವ ಈಗಿನ ಸಂದರ್ಭದಲ್ಲಿ ವಿಚಿತ್ರವಾದ ತಿರುವು ತಲ್ಲಣಗಳು ಈ ನೆಲದಲ್ಲಿ ಉಂಟಾಗತೊಡಗಿವೆ. ಹಾಗಾಗೇ ರೈತ ಚಳವಳಿ, ದಲಿತ ಚಳವಳಿಗಳಲ್ಲಿ ಗುರುತಿಸಿಕೊಂಡ ಕೆಲವರು ಬಿಜೆಪಿ ಜನತಾದಳ(ಎಸ್) ಅಧಿಕಾರದಲಿದ್ದ ಅವಧಿಯಲ್ಲಿ ನಡೆದ ಹಿಂದೂ ವಿರಾಟ್ ಸಮಾವೇಶಗಳಲ್ಲಿ ಭಾಗವಹಿಸಿದ ದುರಂತವನ್ನು ಕಾಣಬೇಕಾಯಿತು. ಬದಲಾದ ಇಂದಿನ ಸಂದರ್ಭದಲ್ಲಿ ಚಳವಳಿಗಳು ತನ್ನನ್ನು ಮರುವಿಮರ್ಶೆಗೆ ಒಳಪಡಿಸಿಕೊಂಡು ಕ್ರಿಯಾಶೀಲವಾಗಬೇಕಾದ ಅಗತ್ಯ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ.

ಬಿಡುಗಡೆಯ ಸಾಧನವಾಗದ ಶಿಕ್ಷಣ:

ಇಂದು ಶಿಕ್ಷಣ ವ್ಯವಸ್ಥೆ ಬಂಡವಾಳಶಾಹಿಗಳ ಹಿಡಿತಕ್ಕೆ ಸಿಕ್ಕಿಕೊಂಡು ಪದವೀಧರರನ್ನು ಮಾತ್ರವೇ ಉತ್ಪಾದಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ಸ್ವಾತಂತ್ರ್ಯನಂತರದ ಭಾರತದಲ್ಲಿ ಶಿಕ್ಷಿತರ ಪ್ರಮಾಣ ಹೆಚ್ಚಾಗಿದೆ ಅದರಲ್ಲೂ ಅಂಬೇಡ್ಕರ್ ಅವರ ಸಂವಿಧಾನಾತ್ಮಕ ಮೀಸಲಾತಿಯ, ಶೈಕ್ಷಣಿಕ ಸೌಲಭ್ಯಗಳ ಕಾರಣದಿಂದ ದಲಿತರು, ಹಿಂದುಳಿದ ವರ್ಗದವರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಕ್ಷೇತ್ರದಿಂದ ಮುಂದೆ ಬರುತ್ತಿದ್ದಾರೆ. ಆದರೆ ಬಹುಪಾಲು ವಿದ್ಯಾವಂತ ಸಮೂಹ ವೈಜ್ಞಾನಿಕ ಹಾಗೂ ಜೀವಪರ ವೈಚಾರಿಕತೆಯಿಂದ ಬಹುದೂರವೇ ಉಳಿದಿದ್ದಾರೆ ಎಂಬುದು ಮಾತ್ರ ದುರಂತ. ಉದಾಹರಣೆಗೆ ಪ್ರಜಾವಾಣಿಯಲ್ಲಿ ಪ್ರತಿವಾರ ಯುವವಾಣಿ ಎಂಬ ಪ್ರತ್ಯೇಕ ವಿಶೇಷ ಪುರವಣಿಯಲ್ಲಿ ಬರುವ ಜ್ಯೋತಿಷ್ಯ ವಿಭಾಗದಲ್ಲಿ ಅನೇಕ ತರುಣರು ತಮ್ಮ ಬಗ್ಗೆ ತಾವೇ ನಂಬಿಕೆ ಕಳೆದುಕೊಂಡು, ತಮ್ಮ ಭವಿಷ್ಯವನ್ನು ಕುರಿತು ಜ್ಯೋತಿಷಿಯ ಮೊರೆ ಹೋಗುತ್ತಿರುವುದು ಹೆಚ್ಚುತ್ತಿದೆ. ಇವರು ತಮ್ಮ ಜನ್ಮ ದಿನಾಂಕ, ಹುಟ್ಟಿದ ಸ್ಥಳ-ಸಮಯ ಇತ್ಯಾದಿ ವಿವರಗಳನ್ನು ನೀಡಿ ಪರಿಹಾರ ಕೇಳುತ್ತಿರುವುದು ದುರಂತ. ಕುತೂಹಲಕ್ಕೆ ದಿನಾಂಕ ೨೬-೧೨-೨೦೦೭ರಂದು ಈ ವಿಭಾಗದಲ್ಲಿ ಪರಿಹಾರ ಕೋರಿರುವ ಒಂದೆರಡನ್ನು ಇಲ್ಲಿ ಉಲ್ಲೇಖಿಸಬಹುದು: ೧. "ನಾನು ಒಬ್ಬ ಇಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿ, ಮನೆಯಲ್ಲಿ ಓದಿಸಲು ಪ್ರೋತ್ಸಾಹವಿದೆ. ನನಗೆ ಓದಲು ಮನಸ್ಸಾಗುತ್ತಿಲ್ಲ.

ಓದಿನಲ್ಲಿ ಏಕಾಗ್ರತೆ ಇಲ್ಲ, ನನ್ನ, ಭವಿಷ್ಯದ ಬಗ್ಗೆ ತುಂಬಾ ಯೋಚಿಸುತ್ತೇನೆ. ನಿಮ್ಮ ಪರಿಹಾರ ತಿಳಿಸಿ" ಎಂದು ಕೇಳಿದ್ದರೆ, ಇನ್ನೊಬ್ಬ ವಿದ್ಯಾರ್ಥಿ, "ನನ್ನ ವಿದ್ಯಾಭ್ಯಾಸ ಹೇಗಿದೆ? ಉದ್ಯೋಗ ಸಿಗುತ್ತದೆಯೇ? ಮುಂದಿನ ಜೀವನದ ಬಗ್ಗೆ ತಿಳಿಸಿ" ಎಂದು ಕೇಳಿದ್ದಾನೆ. ಇದಕ್ಕೆ ಜ್ಯೋತಿಷಿ ನೀಡಿರುವ ಪರಿಹಾರ: "ಉದ್ದಿನ ಕಾಳು ದಾನ ಮಾಡಿ, ದೇವೀಸ್ತೋತ್ರ ಪಠಿಸಿ, ನೀಲಮಣಿ ಮತ್ತು ಪಚ್ಚೆಯ ಕಲ್ಲನ್ನು ತಲಾ ಮೂರು ಕ್ಯಾರೆಟ್ ಧರಿಸಿ ಹವಳ ಧರಿಸಿ, ಗಣಪತಿಗೆ ಪಂಚಕಜ್ಜಾಯ ನೈವೇದ್ಯ ನೀಡಿ" ಇವೇ ಮುಂತಾದ ನಗೆಪಾಟಲಿಗೆ ಈಡಾಗುವ ಪರಿಹಾರ ಸೂಚಿಸಿದ್ದಾನೆ. ಇವು ಇಂದಿನ ಶಿಕ್ಷಣ ಎಂತಹವರನ್ನು ಉತ್ಪಾದಿಸುತ್ತಿದೆ ಎಂಬುದಕ್ಕೆ ಒಂದೆರಡು ಉದಾಹರಣೆಯಷ್ಟೆ. ಮನೋವೈದ್ಯರ ಬಳಿ ಕೇಳಬೇಕಾದ ಪ್ರಶ್ನೆಗಳನ್ನಲ್ಲ ಜ್ಯೋತಿಷಿಯಲ್ಲಿ ಕೇಳುತ್ತಿರುವುದು ಕ್ರಮೇಣ ಯುವ ಜನಾಂಗ ಮಾನಸಿಕ ಗುಲಾಮಗಿರಿಗೆ ಸಿಲುಕುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ.

ಇನ್ನು ಯುವವೈದ್ಯರನ್ನು ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಒಂದೆರಡು ವರ್ಷ ಸೇವೆ ಸಲ್ಲಿಸಿ ಎಂದು ಹೇಳಿದರೆ ಬಹುಪಾಲು ಯುವ ವೈದ್ಯರು ಇದನ್ನು ನಿರಾಕರಿಸುತ್ತಿದ್ದಾರೆ. ಇಂತಹ ವಿಕೃತ ಮನಸ್ಸುಗಳು ನಮ್ಮ ನಿರ್ಲಕ್ಷಿತ ಹಳ್ಳಿಗಾಡುಗಳನ್ನು ಅಲ್ಲಿನ ಕಡುಬಡವರನ್ನು ಹೇಗೆ ಕಾಣಬಹುದೆಂಬ ಆತಂಕ ಉಂಟಾಗುತ್ತದೆ. ಕಲಿತವರು ಇಂದು ನಿಸ್ವಾರ್ಥ ಸೇವೆ ಮತ್ತು ಸಾಮಾಜಿಕ ಬದ್ಧತೆಯಿಂದ ದೂರ ಸರಿಯುತ್ತ ಮನುಪ್ರಣೀತ ತಮ್ಮದೇಯಾದ ಪರಿಧಿಯನ್ನು ಕಟ್ಟಿಕೊಂಡು ಮಾನಸಿಕವಾಗಿ ಭ್ರಷ್ಟರಾಗುತ್ತಿದ್ದಾರೆ. ಹದಿನಾರನೇ ಶತಮಾನದಲ್ಲೆ ಸರ್ವಜ್ಞ ಕವಿ: "ಅಕ್ಕರವ ಕಲಿತವನು ಒಕ್ಕಲನು ತಿನಕಲಿತ/ಲೆಕ್ಕವನು ಕಲಿತ ಕರಣಿಕನು ನರಕದಲಿ ಹೊಕ್ಕಾಡ ಕಲಿತ" ಎಂದಿರುವುದು ಈ ಕ್ಷಣಕ್ಕೆ ಇನ್ನಷ್ಟು ನಿಜವಾಗುತ್ತಿದೆ.

> **ಪಾವಗಡ ತಾಲ್ಲೂಕಿನ ನಾಗಲಮಡಿಕೆ ಗ್ರಾಮದ ದೇವಾಲಯವೊಂದರ ಬಳಿ ಬ್ರಾಹ್ಮಣರು ಸಾಲಾಗಿ ಕುಳಿತು ಊಟ ಮಾಡಿದ ಎಂಜಲೆಲೆಯನ್ನು ಬ್ರಾಹ್ಮಣೇತರ ಜಾತಿಗಳ ಜನರು ಪೈಪೋಟಿಯಲ್ಲಿ ಗುಂಪುಗುಂಪಾಗಿ ಬಂದು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಬಿಸಾಡಿ ನಂತರ ಪಿನಾಕಿನ ನದಿಯಲ್ಲಿ ಸ್ನಾನ ಮಾಡಿದರೆ ಪುಣ್ಯ ಬರುತ್ತದೆಂಬ ಹುಸಿ ನಂಬಿಕೆ ಇದೆ. ಈ ಅನಿಷ್ಟ ಪದ್ಧತಿ ಪ್ರತೀ ವರ್ಷದ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಆಗಿನಿಂದಲೂ ನಡೆದುಕೊಂಡು ಬರುತ್ತಿದೆ. ಇದನ್ನು ಯಾಕೆ ಹಿಂದೂವಾರಸುದಾರರು ವಿರೋಧಿಸುತ್ತಿಲ್ಲ. ಆಹಾರದ ವಿಚಾರದಲ್ಲೂ ಶ್ರೇಷ್ಠ-ಕನಿಷ್ಠವೆಂಬ ಈ ಬಗೆಯ ನೀಚತನ ಹಾಗೂ ಅವೈಜ್ಞಾನಿಕತೆ ಮುಂದುವರೆದಿರುವುದು ಭಾರತದಲ್ಲಿ ಮಾತ್ರವೇ ಎನಿಸುತ್ತದೆ.**

ಪ್ರಜ್ಞಾಪೂರ್ವಕವಾದ ವೈಚಾರಿಕ-ವೈಜ್ಞಾನಿಕ ಮನೋಭಾವನೆಯೊಂದಿಗೆ ಸಾಮಾಜಿಕ-ಆರ್ಥಿಕವಾಗಿ ಸಾಮೂಹಿಕ ಅಭಿವೃದ್ಧಿ ಹೊಂದಬೇಕಾದ ನಡಿಗೆ ನಮಗಿನ್ನೂ ಕರಗತವಾಗಿಲ್ಲ. ಭಾರತೀಯರಾದ ನಮಗೆ ಸಂಘದ ಪರಿಕಲ್ಪನೆ ಹಾಗೂ ಜ್ಞಾನ ಪರಂಪರೆ ಬುದ್ಧ ಗುರುವಿನಿಂದ ಬಂದದ್ದು. ಬುದ್ಧ ಎಂದರೇ ಜ್ಞಾನಿ ಎಂದರ್ಥ. ಜ್ಞಾನವೆಂದರೆ ಎಲ್ಲಾ ಬಗೆಯ ಅಮಾನುಷ ತಡೆಗೋಡೆಗಳಿಂದ ಬಿಡುಗಡೆಗೊಂಡು ಜೀವನ್ಮುಖಿಯಾಗುವುದು. ಈ ಅರ್ಥದಲ್ಲೆ ಬಸವಣ್ಣ 'ಅರಿವೇ ಗುರು' ಎಂದೂ 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂದು ಹೇಳಿರುವುದು. ಅಂಬೇಡ್ಕರ್ ಅವರಂತು 'ನಮ್ಮ ಸಕಲ ಅಂಧಕಾರಗಳನ್ನು ಹೋಗಲಾಡಿಸುವುದೇ ನಿಜವಾದ ಶಿಕ್ಷಣ' ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅವರು ಹೇಳುವ "ಶಿಕ್ಷಣ, ಸಂಘಟನೆ, ಹೋರಾಟ" ಎಂಬ ಧ್ಯೇಯ ಎಲ್ಲೆಡೆ, ಎಲ್ಲರಿಗೂ ಸಲ್ಲುವಂತದ್ದು. ವಿಚಿತ್ರವೆಂದರೆ ಅಕ್ಷರವಂಚಿತ ಜನಸಮೂಹ ಸಂಪ್ರದಾಯದ ನಂಬಿಕೆಗಳನ್ನು ಮುಗ್ಧವಾಗಿ ಒಪ್ಪಿಕೊಂಡಿದ್ದರೆ, ಅಕ್ಷರಸ್ಥರು ಪ್ರಜ್ಞಾಪೂರ್ವಕವಾಗೇ ಇವುಗಳನ್ನು ಆಚರಿಸುತ್ತಿರುವುದು ಕಂಡು ಬರುತ್ತಿದೆ.



ನಮ್ಮ ಜನಪ್ರತಿನಿಧಿಗಳ ಉದಾರಹಣೆಗಳನ್ನೆ ತೆಗೆದುಕೊಂಡರೆ ಜನತೆಯಿಂದ ಆಯ್ಕೆಗೊಂಡ ಯಡಿಯೂರಪ್ಪನವರು ಮುಖ್ಯಮಂತ್ರಿ ಗಾದಿಗಾಗಿ ತಮ್ಮ ಹೆಸರನ್ನು ಯಡ್ಯೂರಪ್ಪ ಎಂದು ಬದಲಾಯಿಸಿಕೊಂಡರಲ್ಲದೆ, ತಾವು ಕೂರುವ 'ಮುಖ್ಯಮಂತ್ರಿ ಕುರ್ಚಿ'ಗೆ ಪುರೋಹಿತರಿಂದ ಪೂಜೆ ಮಾಡಿಸಿದರು. ಈಗಿದ್ದೂ ಅವರು ಅಧಿಕಾರದಲ್ಲಿ ಉಳಿದದ್ದು ಮಾತ್ರ ಏಳೇ ದಿನ. ನಮ್ಮ ದೇಶದ ಪ್ರಧಾನಿಗಳಾಗಿದ್ದ ದೇವೇಗೌಡರಂತು ಯಾಗಯಜ್ಞ, ಪೂಜೆ ಹವನಗಳಲ್ಲಿ ತಲ್ಲೀನರಾಗಿದ್ದಾರೆ. ಇವರು ತಮ್ಮ ಮಗ ಕುಮಾರಸ್ವಾಮಿ ಹೃದಯಾಘಾತಕ್ಕೆ ಒಳಗಾಗಿ ಆಪರೇಷನ್ ಮಾಡಿಸಿದ ಗಳಿಗೆ ಹಾಗು ಆಸ್ಪತ್ರೆಯಿಂದ ಬಿಡುಗಡೆ ಮಾಡುವಾಗಲೂ ಜ್ಯೋತಿಷಿಗಳ ಮೊರೆ ಹೋದದ್ದು ದುರಂತ. ಈ ಹಿನ್ನೆಲೆಯಲ್ಲಿ ಕೆಲವರ ನಡವಳಿಕೆಗಳಂತು ವಿಚಿತ್ರ ನಂಬಿಕೆಗಳಿಂದ ಕೂಡಿದೆ. ಇನ್ನು ಈಗೀಗ ಹಿಂದುಳಿದ ವರ್ಗ ಮತ್ತು ದಲಿತರ ಕಲಿತ ಕೆಲವು ಜನ ತಮ್ಮ ಸಂಸ್ಕೃತಿಯಲ್ಲದ ಸತ್ಯನಾರಾಯಣ ಪೂಜೆಯನ್ನು ಮಾಡಿಸುವ, ತಮ್ಮ ಖಾಸಗಿ ಸಮಾರಂಭಗಳಿಗೂ ಪುರೋಹಿತರನ್ನೆ ಅವಲಂಬಿಸುವ ಮತ್ತೊಂದು ಮೌಢ್ಯದ ಅನುಕರಣೆಯಲ್ಲಿ ಮುಳುಗುತ್ತಿದ್ದಾರೆ. ಹಾಗಾಗೇ ಈ ದೇಶದಲ್ಲಿ ಧರ್ಮ, ಜಾತಿ, ಭಾಷೆ, ಕೋಮು ಸಂಬಂಧಿ ಸೂಕ್ಷ್ಮ ವಿಚಾರಗಳೆಲ್ಲವೂ ಮುಕ್ತ ಚರ್ಚೆಗೆ ಆ ಮೂಲಕ ನಮ್ಮೆಲ್ಲರ ಅಭಿವೃದ್ಧಿಗೆ ಕಾರಣವಾಗದೆ ಭಾವುಕನೆಲೆಯ ತಿಕ್ಕಲುತನದಲ್ಲೆ ಕೊನೆಗೊಳ್ಳುತ್ತಿವೆ.

ಇನ್ನು ಶಿಕ್ಷಣ ಹಾಗೂ ಉದ್ಯೋಗದ ವಿಚಾರದಲ್ಲಿ ನಮ್ಮ ನಡುವೆ ಆಧುನಿಕ ದ್ರೋಣರು ಇಂದಿಗೂ ಜೀವಂತವಿರುವುದು ಕಾಣಬರುತ್ತಿದೆ. ಪ್ರತಿಭೆ-ಅರ್ಹತೆಗಳಿದ್ದರೂ ದಲಿತ-ಹಿಂದುಳಿದ ವರ್ಗದ ಜನಸಮುದಾಯಗಳು ಅವಕಾಶ ವಂಚಿತರಾಗಿ ಆಧುನಿಕ ಶಂಭೂಕ, ಏಕಲವ್ಯರಾಗುತ್ತಿದ್ದಾರೆ. ಈ ವಿಚಿತ್ರಗಳ ನಡುವೆ ಈ ವರ್ಗಗಳಿಗೆ ದಕ್ಕಬೇಕಾದ ನ್ಯಾಯಬದ್ಧ ಮೀಸಲಾತಿಯ ಫಲಾನುಭವದ ಹಂಚಿಕೆ ಈ ಕ್ಷಣಕ್ಕೂ ಸರಿಯಾಗಿ ಆಗಿಲ್ಲ. ಪ್ರತಿಭೆಯೊಂದೇ ಮಾನದಂಡ ಎನ್ನುವ ಖಾಸಗಿ ಕ್ಷೇತ್ರದ ಉದ್ಯಮಿಗಳು ನೇಮಕಾತಿಯಲ್ಲಿ ಸಮಾನ ಅರ್ಹತೆ ಹೊಂದಿರುವ ದಲಿತ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಹೇಗೆ ವಂಚಿಸುತ್ತಿದ್ದಾರೆ ಎಂಬುದನ್ನು ದಿನಾಂಕ ೩೦-೧೧-೨೦೦೭ರ ಪ್ರಜಾವಾಣಿ ದಿನಪತ್ರಿಕೆಯ ಆರನೇ ಪುಟದಲ್ಲಿ ಪ್ರಕಟಗೊಂಡಿರುವ "ಉದ್ಯಮಿಗಳು ಮತ್ತು ಜಾತಿ ಆಧಾರಿತ ತಾರತಮ್ಯ" ಎಂಬ, ಶಿವಸುಂದರ್ ಅವರ ಲೇಖನ ಸತ್ಯದಾಖಲೆಗಳ ಸಮೇತ ವಿವರಿಸಿದೆ.

"ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ದಲಿತ್ ಸ್ಟಡೀಸ್ (ಐ.ಐ.ಡಿ.ಎಸ್) ಸಂಸ್ಥೆಯು ಖಾಸಗಿ ಕ್ಷೇತ್ರಗಳಲ್ಲಿ ಜಾತಿ ಹಿನ್ನೆಲೆಯ ಬಗ್ಗೆ ಯಾವುದೇ ಪೂರ್ವಾಗ್ರಹಗಳಿಲ್ಲದೆ ಅರ್ಹತೆಯುಳ್ಳ ದಲಿತ-ಹಿಂದುಳಿದ ವರ್ಗದವರಿಗೆ

(ಆಚಿನೇ ಪುಟಕ್ಕೆ)

ಮತಾಂತರ ತಡೆ ಕಾಯ್ದೆ, ಜಾತ್ಯತೀತತೆ ಮತ್ತು ಮೂಲಭೂತ ಹಕ್ಕುಗಳು

ಸಂವಿಧಾನದ ಕರ್ತೃಗಳು ಧರ್ಮಪ್ರಚಾರ, ಮತಾಂತರ ಕುರಿತು ವಿಶಾಲವಾದ ಧೋರಣೆ ಹೊಂದಿದ್ದರೂ, ಸುಪ್ರೀಂ ಕೋರ್ಟ್ "ಧರ್ಮಪ್ರಚಾರ"ದ ವ್ಯಾಪ್ತಿಯನ್ನು ಅಳೆಯುವಲ್ಲಿ ಸಂವಿಧಾನ ಸಭೆಯ ಚರ್ಚೆಯನ್ನು ಉಲ್ಲೇಖಿಸದಿರುವುದು ನಿರಾಶಾದಾಯಕವಾದ ವಿಚಾರ. ಸಂವಿಧಾನದ ೨೫ನೇ ವಿಧಿಯಡಿ ಮತಾಂತರ ನಡೆಸುವ ಹಕ್ಕು ಲಭಿಸುವುದಿಲ್ಲ ಎಂಬ ಸುಪ್ರೀಂಕೋರ್ಟ್ ತೀರ್ಪು ಅನವಶ್ಯಕವಾಗಿ ನಿಷೇಧಾತ್ಮಕವಾಗಿದೆ. ೨೫ನೇ ವಿಧಿಯಲ್ಲಿಯೇ ಇರುವ ನಿಬಂಧನೆಗಳಡಿ ಯಾವುದಾದರೂ ಒಂದು ನಿಬಂಧನೆಯನ್ನು ಉಲ್ಲಂಘಿದರೆ ಸರ್ಕಾರ ಮತಾಂತರದ ಹಕ್ಕನ್ನು ತಡೆಹಿಡಿಯಬಹುದು ಎಂದಿದೆ. ಸುಪ್ರೀಂ ಕೋರ್ಟ್ ಸಾರ್ವಜನಿಕ ಶಾಂತಿಯ ತಳಹದಿಯ ಮೇಲೆ ತೀರ್ಪು ನೀಡಿದೆ. ಆದರೆ, ಈ ಮುಂದಿನ ಭಾಗದಲ್ಲಿ ಸಾರ್ವಜನಿಕ ಶಾಂತಿಯ ಮೇಲೆ ನ್ಯಾಯಾಲಯದ ಅವಲಂಬನೆ, ಅಸಮಂಜಸ ಮತ್ತು ಅಸಮರ್ಥನೀಯ ಎಂಬುದನ್ನು ಸಾಬೀತುಪಡಿಸುವ ಪ್ರಯತ್ನ ಮಾಡಲಾಗುವುದು.

ಸತ್ಯಪ್ರಕಾಶ್ ಎಂ. ಆರ್

ಭಾಗ–೨

೪. ಸ್ಟೇನಿಸ್ಲಾಸ್ ಮೊಕದ್ದಮೆಯ ವಿಶ್ಲೇಷಣೆ

ಮತಾಂತರ, ಕ್ರೈಸ್ತಧರ್ಮದ ಅವಿಭಾಜ್ಯ ಅಂಗವೇ ಎಂಬ ಪ್ರಾಥಮಿಕ ವಿಚಾರ ಸ್ಟೇನಿಸ್ಲಾಸ್ ಮೊಕದ್ದಮೆಯಲ್ಲಿ ಇತ್ಯರ್ಥವಾಗಲೇ ಇಲ್ಲ. ಹಾಗೇನಾದರೂ ಆಗಿದ್ದರೆ, ಯುಲಿಥಾ ಮೊಕದ್ದಮೆಯಲ್ಲಿ ಒರಿಸ್ಸಾ ಹೈಕೋರ್ಟ್ ತೀರ್ಪು ನೀಡಿದ ಹಾಗೆ, ಮತಾಂತರ ಚಟುವಟಿಕೆಗೆ ಸಂವಿಧಾನದ ೨೫ನೇ ವಿಧಿ ಕಲಂ (೧)ರ ಅನ್ವಯ ರಕ್ಷಣೆ ಸಿಗುತ್ತಿತ್ತು.

೪.೧ ಮತಾಂತರ ಮತ್ತು ಧರ್ಮದ ವ್ಯಾಖ್ಯೆ

"ಧರ್ಮ" ಪದಕ್ಕೆ ಸಂವಿಧಾನದಲ್ಲಿ ವ್ಯಾಖ್ಯಾನ ಇಲ್ಲದಿರುವುದರಿಂದ, ಸಂವಿಧಾನದ ೨೫ ಮತ್ತು ೨೬ನೇ ವಿಧಿಗೆ ಸಂಬಂಧಿಸಿದಂತೆ, ಯಾವುದಾದರೂ ಚಟುವಟಿಕೆ ಧಾರ್ಮಿಕ ಅಥವಾ ಅಧಾರ್ಮಿಕ ಎಂದು ನಿರ್ಧರಿಸುವ ನಿಟ್ಟಿನಲ್ಲಿ, ಅಂತಹ ಚಟುವಟಿಕೆ, ಆ ಧರ್ಮದ ಅವಿಭಾಜ್ಯ ಅಂಗವೇ ಎಂಬ ಅಂಶವನ್ನು ಅವಲಂಬಿಸಿರುತ್ತದೆ ಎಂದು ಸುಪ್ರೀಂಕೋರ್ಟ್ ವ್ಯಾಖ್ಯಾನಿಸಿದೆ. ಇದಕ್ಕೆ ಸಂಬಂಧಿಸಿದ ಮತ್ತೊಂದು ಮೊಕದ್ದಮೆಯಲ್ಲಿ ಈ ವಿವರಣೆಯನ್ನು ವಿಸ್ತರಿಸಿರುವ ಸರ್ವೋಚ್ಚ ನ್ಯಾಯಾಲಯ, "...ಒಂದು ಧರ್ಮದ ಅವಿಭಾಜ್ಯ ಅಂಗ ಯಾವುದೆಂಬುದನ್ನು ನಿರ್ಧರಿಸಲು ಆ ಧರ್ಮದ ಮೂಲ ತತ್ವಗಳನ್ನು ಪ್ರಾಥಮಿಕವಾಗಿ ಅವಲಂಬಿಸಬೇಕಾಗುತ್ತದೆ" ಎಂದು ಅಭಿಪ್ರಾಯಪಟ್ಟಿದೆ. ಟಿಕಾಯತ್ ಶ್ರೀ ಗೋವಿಂದ್‌ಲಾಜಿ ಹಾಗೂ ರಾಜಸ್ಥಾನ ಸರ್ಕಾರದ ಮೊಕದ್ದಮೆಯಲ್ಲಿ, "... ಕೆಲವೊಂದು ಧಾರ್ಮಿಕ ಆಚರಣೆಗಳು, ಆಯಾ ಧರ್ಮಗಳ ಅವಿಭಾಜ್ಯ ಅಂಗಗಳೇ ಎಂಬುದು ಆ ಧರ್ಮಗಳನ್ನು ಅನುಸರಿಸುವವರ ಸಮ್ಮತಿಯನ್ನು ಅವಲಂಬಿಸಿರುತ್ತದೆ" ಎಂದು ನ್ಯಾಯಾಲಯ ವಿಶ್ಲೇಷಣೆ ಮಾಡಿದೆ. ಬಹಳಷ್ಟು ಮೊಕದ್ದಮೆಗಳಲ್ಲಿ ಈ ಮೂಲಭೂತ ಸೂತ್ರವನ್ನು ಆಧರಿಸಿ, ಕೆಲವು ಧಾರ್ಮಿಕ ಆಚರಣೆಗಳು ಸಂವಿಧಾನದ ೨೫ನೇ ವಿಧಿಯ ರಕ್ಷಣೆಗೆ ಒಳಪಟ್ಟಿವೆಯೇ ಅಥವಾ ಆಯಾ ರಾಜ್ಯಗಳ ಶಾಸನಾತ್ಮಕ ನಿಬಂಧನೆಗಳಿಗೆ ಒಳಪಟ್ಟಿವೆಯೇ ಎಂಬುದನ್ನು ನಿರ್ಧರಿಸಲಾಗಿದೆ.

ಮತಾಂತರ, ಕ್ರೈಸ್ತ ಧರ್ಮದ ಅವಿಭಾಜ್ಯ ಅಂಗವೇ ಎಂಬ ವಿಚಾರ ಒರಿಸ್ಸಾ ಹೈಕೋರ್ಟ್‌ನ ತೀರ್ಪಿನ ತಳಹದಿಯಾಗಿತ್ತು. ಆದರೆ, ಸಂವಿಧಾನದ ೨೫ನೇ ವಿಧಿಯಡಿ "ಧರ್ಮಪ್ರಚಾರ"ದ ಅರ್ಥ ವ್ಯಾಪ್ತಿಯನ್ನು ವಿಶ್ಲೇಷಿಸುವಾಗ ಸುಪ್ರೀಂಕೋರ್ಟ್, ಒರಿಸ್ಸಾ ಹೈಕೋರ್ಟ್‌ನ ವಿಚಾರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ದುರದೃಷ್ಟಕರ.

೪.೨ ಧರ್ಮ ಪ್ರಚಾರದ ಪರಿಕಲ್ಪನೆ

ಧರ್ಮ ಪ್ರಚಾರದ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಗುರುತಿಸುವ ನಿಟ್ಟಿನಲ್ಲಿ ಸ್ಟೇನಿಸ್ಲಾಸ್ ಮೊಕದ್ದಮೆಯ ತೀರ್ಪು, ಸಂವಿಧಾನದ ೨೫ನೇ ವಿಧಿಯ ಹರವನ್ನು ಕುರಿತ ಸಂವಿಧಾನ ಸಭೆಯ ಚರ್ಚೆಯನ್ನು ಗಮನಿಸಲು ವಿಫಲವಾಗಿದೆ. ಧಾರ್ಮಿಕ ಪ್ರಚಾರ ಸ್ವಾತಂತ್ರ್ಯವನ್ನು ಕುರಿತ ೧೯ನೇ ಕರಡು ವಿಧಿ (ಪ್ರಸ್ತುತ ೨೫ನೇ ವಿಧಿ)ಯು ೧೯೪೮ರ ಡಿಸೆಂಬರ್ ೩ರಿಂದ ೬ರವರೆಗೆ ಸಂವಿಧಾನ ಸಭೆಯಲ್ಲಿ ಚರ್ಚೆಗೆ ಬಂದಿತ್ತು.

ಧಾರ್ಮಿಕ ಪ್ರಚಾರವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಬೇಕೆಂಬ ಪ್ರಸ್ತಾವನೆಗೆ ಸಭೆಯಲ್ಲಿ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಎಲ್. ಕೃಷ್ಣಸ್ವಾಮಿ ಭಾರತಿ, ಧರ್ಮ ಪ್ರಚಾರ ಎಂಬ ಪದದ ಸೇರ್ಪಡೆ ಕೇವಲ ಕ್ರೈಸ್ತ ಸಮುದಾಯದ ಹಿತದೃಷ್ಟಿಯಿಂದ ಮಾತ್ರವಲ್ಲ, "ಧಾರ್ಮಿಕ ವಿಚಾರಗಳು, ತತ್ವಗಳನ್ನು ಕುರಿತು ನಮ್ಮ ಜನರಿಗೆ ತಿಳಿಸಿ ಹೇಳುವ" ಗುರುತರವಾದ ಕಾರ್ಯಕ್ಕೂ ಬಳಸಿಕೊಳ್ಳಬಹುದು ಎಂದು ಸ್ಪಷ್ಟಪಡಿಸಿದ್ದಾರೆ.

ಅಲ್ಪಸಂಖ್ಯಾತರ ಸಮಿತಿಯ ಎಲ್ಲ ಹಂತಗಳಲ್ಲೂ ಚರ್ಚೆಗೆ ಬಂದ ಈ ವಿಷಯವನ್ನು ಪರಿಗಣಿಸಿದ ಸಮಿತಿಯ ಸದಸ್ಯರು, ಯಾವುದೇ ರೀತಿಯ ಮೀಸಲಾತಿ ಅಥವಾ ಇನ್ನಿತರ ವಿಶೇಷ ಸೌಕರ್ಯವನ್ನು ಬಯಸದ ಕ್ರೈಸ್ತರು ಇತರ ಸಮುದಾಯದವರೊಂದಿಗೆ ಬೆರೆತು ಬಾಳಲು ಸಿದ್ಧರಿರುವ ಹಿನ್ನೆಲೆ ಯಲ್ಲಿ, ಇತರ



ಧಾರ್ಮಿಕ ಸಮುದಾಯಗಳೊಂದಿಗೆ ಕ್ರೈಸ್ತ ರಿಗೂ ಧಾರ್ಮಿಕ ಪ್ರಚಾರ ಕೈಗೊಳ್ಳಲು ಅವಕಾಶ ಕಲ್ಪಿಸಬಹುದೆಂಬ ನಿರ್ಧಾರಕ್ಕೆ ಬಂದಿದ್ದಾರೆ.

ಟಿ. ಟಿ. ಕೃಷ್ಣಮಚಾರಿ ಸಮ್ಮತಿಸಿದರು:

...ಧರ್ಮ ಪ್ರಚಾರದ ಹಕ್ಕನ್ನು ಕೇವಲ ಯಾವುದೇ ಒಂದು ಸಮುದಾಯ ಅಥವಾ ಯಾವುದೇ ಒಂದು ಧರ್ಮವನ್ನು ಅನುಸರಿಸುವ ಸಮುದಾಯದವರಿಗೆ ಮಾತ್ರ ನೀಡಲಾಗುತ್ತಿದೆ ಎಂದು ಇದರರ್ಥವಲ್ಲ. ಕ್ರೈಸ್ತ ಧರ್ಮೀಯರಿಗೆ ಅವಕಾಶವಿರುವಂತೆ, ಹಿಂದೂಗಳು ಮತ್ತು ಆರ್ಯಸಮಾಜದವರು, ಮುಸ್ಲಿಮರು, ಜೈನರು, ಬೌದ್ಧರು ಹಾಗೂ ಇನ್ನಿತರ ಯಾವುದೇ ಧರ್ಮದವರು ಸಾರ್ವಜನಿಕ ಶಾಂತಿ ಸುವ್ಯವಸ್ಥೆ, ನೈತಿಕತೆ ಮತ್ತು ಒಂದು ನಾಗರಿಕ ಸರ್ಕಾರದಡಿ ಅನುಸರಿಸಬೇಕಾದ ಇನ್ನಿತರ ನಿಬಂಧನೆಗಳಿಗೆ ಧಕ್ಕೆಯಾಗದಂತೆ, ಧರ್ಮ ಪ್ರಚಾರವನ್ನು ಕೈಗೊಳ್ಳಬಹುದು. ಆದ್ದರಿಂದ, ಯಾರ ಹಕ್ಕುಗಳನ್ನೂ ಕಸಿದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆ. ಎಂ. ಮುನ್ಷಿಯವರು ಗಮನಿಸಿದಂತೆ, ಧರ್ಮಪ್ರಚಾರ ಪದದ ಬಗ್ಗೆ ಕ್ರೈಸ್ತ ಧರ್ಮೀಯರು ವಿಶೇಷವಾದ ಒಲವನ್ನು ತೋರಿಸಿರುವುದು, ಇತರ ಧರ್ಮದವರನ್ನು ತಮ್ಮ ಧರ್ಮಕ್ಕೆ ಒತ್ತಾಯಪೂರ್ವಕವಾಗಿ ಮತಾಂತರಕ್ಕೊಳಪಡಿಸುವ ಉದ್ದೇಶದಿಂದಲ್ಲ. ಬದಲಿಗೆ, ಧರ್ಮಪ್ರಚಾರ ಕ್ರೈಸ್ತ ಧರ್ಮದ ಮೂಲಭೂತ ಅಂಶವಾಗಿರುವುದು ಸರಿಯಷ್ಟೆ. ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಯೊಳಗೇ ಮತಾಂತರಗೊಳಿಸುವ ಹಕ್ಕು ಕೂಡ ಸಂವಿಧಾನದ ಜಾತ್ಯತೀತ ಆಶಯಕ್ಕೆ ಪೂರಕವಾಗಿದೆ ಎಂದು ಗುರುತಿಸಿದ ಮುನ್ಷಿಯವರು, ಒಂದು ಜಾತ್ಯತೀತ ರಾಷ್ಟ್ರದಲ್ಲಿ: "ಯಾವುದೇ ಒಂದು ಸಮುದಾಯದ ವ್ಯಕ್ತಿಗೆ ಇನ್ನೊಂದು ಸಮುದಾಯದ ವ್ಯಕ್ತಿಗಿಂತ ಹೆಚ್ಚಿನ ಸವಲತ್ತುಗಳು ಇರುವುದಿಲ್ಲ; ಒಂದು ಸಮುದಾಯದ ಜನಸಂಖ್ಯೆ ಹೆಚ್ಚಾದರೆ ರಾಜಕೀಯವಾಗಿ ಲಾಭವೂ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ, "ಧರ್ಮಪ್ರಚಾರ" ಪದಕ್ಕೆ ಅಪಾಯಕಾರಿ ಆಯಾಮಗಳಿರುವುದಿಲ್ಲ..." ಎಂದಿದ್ದಾರೆ.

"ಇತರ ಧರ್ಮದ ಮೇಲೆ ಮಣ್ಣೆರಚಿ" ಧರ್ಮಪ್ರಚಾರ ಕೈಗೊಳ್ಳುವುದನ್ನು ನಿಷೇಧಿಸಬೇಕು ಎಂದು ಭಾವನಾತ್ಮಕವಾಗಿ ವಾದಿಸಿದ ರೋಹಿಣಿ ಕುಮಾರ್ ಚೌಧರಿ; "ಯಾವುದೇ ಧರ್ಮದ ಪ್ರಚಾರಕ್ಕೆ ನನ್ನ ಆಕ್ಷೇಪವಿಲ್ಲ. ತನ್ನ ಧರ್ಮ ಸರ್ವರ ಒಳಿತನ್ನು ಬಯಸುತ್ತದೆ. ಹೀಗಾಗಿ, ಆ ಧರ್ಮವನ್ನು ಅನುಸರಿಸಲು ಇತರರಿಗೆ ತಿಳಿಸಿ ಹೇಳುವುದು ತನ್ನ ಕರ್ತವ್ಯ ಎಂದು ಯಾವುದೇ ವ್ಯಕ್ತಿಗೆ ಅನಿಸಿದರೆ, ಆತ ಧರ್ಮಪ್ರಚಾರ ಕೈಗೊಳ್ಳಲು ಸ್ವಾಗತಾರ್ಹ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಂಡಿತ್ ಲಕ್ಷ್ಮಿಕಾಂತ ಮೈತ್ರ ಈ ರೀತಿ ವಾದ ಮಂಡಿಸಿದ್ದಾರೆ:

"ನಾವು ಸಹಜವಾಗಿ ನಂಬುವ ವಿಚಾರವನ್ನು ಪ್ರಚಾರ ಮಾಡುವಂತಾಗುವುದು ಅತಿ ಮುಖ್ಯ. ಇದು ನಾವು ಪ್ರೀತಿಯಿಂದ ಅನುಸರಿಸಿಕೊಂಡು ಬಂದ ಮೌಲ್ಯಗಳಿಗೆ ಹತ್ತಿರವಾದುದು. ಮತಾಂತರ ಎಂದರೆ ಬಲವಂತವಾಗಿ, ಶಸ್ತ್ರಾಸ್ತ್ರಗಳ ಮೂಲಕ ಕೈಗೊಳ್ಳುವ ಪ್ರಕ್ರಿಯೆಯಲ್ಲ. (ಆದ್ದರಿಂದ) ನಿಮ್ಮ ಧಾರ್ಮಿಕ ನಂಬಿಕೆಗಳನ್ನು ಇತರರಿಗೆ ಪ್ರಚಾರ ಮಾಡಲು ತೊಡಕುಗಳೇಕೆ ಬರಬೇಕು?" ಎಂದಿದ್ದಾರೆ.

ಮತಾಂತರ ನಡೆಸುವ ಯಾವುದೇ ಹಕ್ಕು ಕರಡು

ಧರ್ಮ ಪ್ರಚಾರದ ಹಕ್ಕನ್ನು ಕೇವಲ ಯಾವುದೇ ಒಂದು ಸಮುದಾಯ ಅಥವಾ ಯಾವುದೇ ಒಂದು ಧರ್ಮವನ್ನು ಅನುಸರಿಸುವ ಸಮುದಾಯದವರಿಗೆ ಮಾತ್ರ ನೀಡಲಾಗುತ್ತಿದೆ ಎಂದು ಇದರರ್ಥವಲ್ಲ. ಕ್ರೈಸ್ತ ಧರ್ಮೀಯರಿಗೆ ಅವಕಾಶವಿರುವಂತೆ, ಹಿಂದೂಗಳು ಮತ್ತು ಆರ್ಯಸಮಾಜದವರು, ಮುಸ್ಲಿಮರು, ಜೈನರು, ಬೌದ್ಧರು ಹಾಗೂ ಇನ್ನಿತರ ಯಾವುದೇ ಧರ್ಮದವರು ಸಾರ್ವಜನಿಕ ಶಾಂತಿ ಸುವ್ಯವಸ್ಥೆ, ನೈತಿಕತೆ ಮತ್ತು ಒಂದು ನಾಗರಿಕ ಸರ್ಕಾರದಡಿ ಅನುಸರಿಸಬೇಕಾದ ಇನ್ನಿತರ ನಿಬಂಧನೆಗಳಿಗೆ ಧಕ್ಕೆಯಾಗದಂತೆ, ಧರ್ಮ ಪ್ರಚಾರವನ್ನು ಕೈಗೊಳ್ಳಬಹುದು. ಆದ್ದರಿಂದ, ಯಾರ ಹಕ್ಕುಗಳನ್ನೂ ಕಸಿದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರತಿಯ ೧೯ನೇ ವಿಧಿಯಿಂದ ನಿಯಂತ್ರಿಸಲ್ಪಡದೆ ಇಲ್ಲ, ಎನ್ನುವ ಬಹುತೇಕ ಸದಸ್ಯರ ಅಭಿಪ್ರಾಯ ಕೂಡ ಇಲ್ಲಿ ಮುಖ್ಯವಾಗುತ್ತದೆ. "ಮತಾಂತರಕ್ಕೆ ಮುಕ್ತವಾದ ಹಕ್ಕು ನೀಡದಿರಲು" ಸಾಕಷ್ಟು ನಿಗಾ ವಹಿಸಲಾಗಿದೆ ಎಂದು ಎಸ್. ವಿ. ಸಂತಾನಂ ಅಭಿಪ್ರಾಯಪಡುತ್ತಾರೆ. ಯಾವುದಾದರೂ ಧಾರ್ಮಿಕ ಸಮುದಾಯ ಹಣ, ಒತ್ತಡ ಅಥವಾ ಇತರ ಯಾವುದೇ ರೀತಿಯಲ್ಲಿ ಸಾಮೂಹಿಕ ಮತಾಂತರಕ್ಕೆ ಪ್ರಯತ್ನಿಸುವುದು ಸರ್ಕಾರದ ಗಮನಕ್ಕೆ ಬಂದರೆ, ಅಂತಹ ಕಾರ್ಯವನ್ನು ನಿಯಂತ್ರಿಸುವ ಸಂಪೂರ್ಣವಾದ ಹಕ್ಕು ಸರ್ಕಾರಕ್ಕಿದೆ" ಎಂದಿದ್ದಾರೆ.

"ಧರ್ಮಪ್ರಚಾರ" ಎಂಬ ಪದವನ್ನು ಸಂವಿಧಾನದಲ್ಲಿ ಸೇರ್ಪಡೆಗೊಳಿಸಲು ಸಾಧ್ಯವಾಗದೆ ಹೋದರೂ, "ಸಂವಿಧಾನ ನೀಡಿರುವ ವಾಕ್ ಸ್ವಾತಂತ್ರ್ಯದಡಿ ಯಾವುದೇ ಧಾರ್ಮಿಕ ಸಮುದಾಯ, ಇತರರು ತಮ್ಮ ಧರ್ಮವನ್ನು ಸೇರುವಂತೆ ಒಲೈಸುವುದು ತಪ್ಪಲ್ಲ. ಆತ್ಮಸಾಕ್ಷಿಗನುಗುಣವಾಗಿ ನಡೆವ ಮತಾಂತರವನ್ನು ಧರ್ಮಕಾರಣಕ್ಕಾಗಿ ಪರಿಗಣಿಸಬೇಕಿದೆ" ಎಂದು ಮುನ್ಷಿಯವರು ಅಂತಿಮವಾಗಿ ಸಭೆಯಲ್ಲಿ ಪ್ರತಿಪಾದಿಸಿದ್ದಾರೆ.

ಹೀಗಾಗಿ, ಸಂವಿಧಾನದ ೧೯ನೇ ವಿಧಿಯಲ್ಲಿ "ಧರ್ಮಪ್ರಚಾರ"ದ ಪದವನ್ನು ತೆಗೆದುಹಾಕುವ ತಿದ್ದುಪಡಿಗೆ ಸಮ್ಮತಿ ನೀಡಲಾಗಲಿಲ್ಲ. ಮೊದಲನೆಯದಾಗಿ, ಸಂವಿಧಾನದಲ್ಲಿ "ಧರ್ಮಪ್ರಚಾರ" ಎಂಬ ಪದವನ್ನು ಸರ್ವಧರ್ಮದ ಒಳಿತಿಗಾಗಿ ಸೇರ್ಪಡೆಗೊಳಿಸಲಾಗಿದೆ ಎಂಬುದು ಸಂವಿಧಾನ ಸಭೆಯ ಚರ್ಚೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಎರಡನೆಯದಾಗಿ, ಬಲವಂತದ ಮತಾಂತರಕ್ಕೆ ತಡೆಯೊಡ್ಡುವ ನಿಟ್ಟಿನಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಸಂವಿಧಾನದ ಈಗಿನ ೨೫ನೇ ವಿಧಿಯಡಿ ಸೇರ್ಪಡೆಗೊಳಿಸಿರುವುದನ್ನು ಗಮನಿಸಬೇಕು.

ಸಂವಿಧಾನದ ಕರ್ತೃಗಳು ಧರ್ಮಪ್ರಚಾರ, ಮತಾಂತರ ಕುರಿತು ವಿಶಾಲವಾದ ಧೋರಣೆ ಹೊಂದಿದ್ದರೂ, ಸುಪ್ರೀಂಕೋರ್ಟ್ "ಧರ್ಮಪ್ರಚಾರ"ದ ವ್ಯಾಪ್ತಿಯನ್ನು ಅಳೆಯುವಲ್ಲಿ ಸಂವಿಧಾನ ಸಭೆಯ ಚರ್ಚೆಯನ್ನು ಉಲ್ಲೇಖಿಸದಿರುವುದು ನಿರಾಶಾದಾಯಕವಾದ ವಿಚಾರ. ಸಂವಿಧಾನದ ೨೫ನೇ ವಿಧಿಯಡಿ ಮತಾಂತರ ನಡೆಸುವ ಹಕ್ಕು ಲಭಿಸುವುದಿಲ್ಲ ಎಂಬ ಸುಪ್ರೀಂಕೋರ್ಟ್‌ನ ತೀರ್ಪು ಅನವಶ್ಯಕವಾಗಿ ನಿಷೇಧಾತ್ಮಕವಾಗಿದೆ. ೨೫ನೇ ವಿಧಿಯಲ್ಲಿಯೇ ಇರುವ ನಿಬಂಧನೆಗಳಡಿ ಯಾವುದಾದರೂ ಒಂದು ನಿಬಂಧನೆಯನ್ನು ಉಲ್ಲಂಘಿಸಿದರೆ ಸರ್ಕಾರ ಮತಾಂತರದ ಹಕ್ಕನ್ನು ತಡೆಹಿಡಿಯಬಹುದು ಎಂದಿದೆ. ಸುಪ್ರೀಂಕೋರ್ಟ್ ಸಾರ್ವಜನಿಕ ಶಾಂತಿಯ ತಳಹದಿಯ ಮೇಲೆ ತೀರ್ಪು ನೀಡಿದೆ. ಆದರೆ, ಈ ಮುಂದಿನ ಭಾಗದಲ್ಲಿ ಸಾರ್ವಜನಿಕ ಶಾಂತಿಯ ಮೇಲೆ ನ್ಯಾಯಾಲಯದ ಅವಲಂಬನೆ, ಅಸಮಂಜಸ ಮತ್ತು ಅಸಮರ್ಥನೀಯ ಎಂಬುದನ್ನು ಸಾಬೀತುಪಡಿಸುವ ಪ್ರಯತ್ನ ಮಾಡಲಾಗುವುದು.

೩.೩ ಸಾರ್ವಜನಿಕ ಶಾಂತಿಯ ಪರಿಕಲ್ಪನೆ

ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ ಕಾಯ್ದೆಗಳನ್ನು ಎತ್ತಿ ಹಿಡಿಯುವಲ್ಲಿ ಸಾರ್ವಜನಿಕ ಶಾಂತಿಯನ್ನು ಪ್ರಮುಖವಾಗಿ ಬಳಸಲು ಮತ್ತು ಅದರ ವ್ಯಾಪ್ತಿಯನ್ನು ಗುರುತಿಸಲು ರೋಮೇಶ್ ಥಾಪರ್ ಮತ್ತು ಅರುಣ್ ಘೋಷ್ ಅವರ ಮೊಕದ್ದಮೆಗಳ ತೀರ್ಪುಗಳನ್ನು ಸುಪ್ರೀಂಕೋರ್ಟ್ ಅವಲಂಬಿಸಿದೆ.

ರೋಮೇಶ್ ಥಾಪರ್ ಮೊಕದ್ದಮೆಯನ್ನು ಉಲ್ಲೇಖಿಸುವಾಗ ಸಾರ್ವಜನಿಕ ಶಾಂತಿಯ ಸಾಂದರ್ಭಿಕ ವಿಶ್ಲೇಷಣೆಯನ್ನು ಗಮನಿಸಲು ಸುಪ್ರೀಂಕೋರ್ಟ್ ವಿಫಲವಾಗಿದೆ. ಥಾಪರ್ ಮೊಕದ್ದಮೆಯಲ್ಲಿ, ಸಾರ್ವಜನಿಕ ಶಾಂತಿ ಎಂದರೆ ರಾಜ್ಯದ ಸುರಕ್ಷತೆಯ ಸೀಮಿತ ಅರ್ಥ ಮಾತ್ರವಲ್ಲದೆ, ವಿಶಾಲವಾದ ಅರ್ಥವಿದೆ ಎಂದು ನ್ಯಾಯಾಲಯ ಹೇಳಿದೆ. ಅರುಣ್ ಘೋಷ್ ಮೊಕದ್ದಮೆಯ ಕೆಲವು ಪ್ರಮುಖ ಅಂಶಗಳನ್ನು ಸಮರ್ಪಕವಾಗಿ ಉಲ್ಲೇಖಿಸಲೂ ಕೂಡ ಸುಪ್ರೀಂಕೋರ್ಟ್ ವಿಫಲವಾಗಿದೆ.

ಸಮಾಜದ ಶಾಂತಿಗೆ ಭಂಗ ಉಂಟುಮಾಡದ ವ್ಯಕ್ತಿಕೇಂದ್ರಿತ ತೊಡಕುಗಳನ್ನು ಸಾರ್ವಜನಿಕ ಶಾಂತಿಯ ಭಂಗವೆಂದು ಪರಿಗಣಿಸಲಾಗದು. ಗೊಡಕು ಉಂಟುಮಾಡುವ ಚಟುವಟಿಕೆಗಳ ತೀವ್ರತೆ ಮತ್ತು ಆ ಪ್ರದೇಶದ ಜನಜೀವನದ ಮೇಲೆ ಅಂತಹ ಚಟುವಟಿಕೆಗಳು ಬೀರುವ ಪರಿಣಾಮಗಳು ಕಾನೂನು ಮತ್ತು ಸುವ್ಯವಸ್ಥೆಯ ಉಲ್ಲಂಘನೆ ಮತ್ತು ಸಾರ್ವಜನಿಕ ಶಾಂತಿಯ ಉಲ್ಲಂಘನೆ ಇವೆರಡರ ವ್ಯತ್ಯಾಸವನ್ನು ನಿರ್ಧರಿಸುತ್ತದೆ.

ಸಾರ್ವಜನಿಕ ಶಾಂತಿಯ ಉಲ್ಲಂಘನೆ ಮತ್ತು ಇತರ ಗಂಭೀರವಲ್ಲದ ಶಾಂತಿ ಸುವ್ಯವಸ್ಥೆಯ ಉಲ್ಲಂಘನೆಯ ನಡುವಿನ ವ್ಯತ್ಯಾಸವನ್ನು ಇತರ ಕೆಲವು ಮೊಕದ್ದಮೆಗಳಲ್ಲಿಯೂ ಉಲ್ಲೇಖಿಸಲಾಗಿದೆ. ಪುಷ್ಕರ್ ಮುಖರ್ಜಿ ಮತ್ತು ಪಶ್ಚಿಮ ಬಂಗಾಳ ರಾಜ್ಯದ ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟ್ ಈ ರೀತಿ ಹೇಳಿದೆ:

ಯಾವುದೇ ಕಾಯ್ದೆಯ ಉಲ್ಲಂಘನೆ ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವುದು ನಿಜ. ಆದರೆ, ಸಾರ್ವಜನಿಕರು ಮತ್ತು ಸಮುದಾಯಕ್ಕೆ ಧಕ್ಕೆ ತರುವಂತಹ ಚಟುವಟಿಕೆಗಳು ಮಾತ್ರ ಸಾರ್ವಜನಿಕ ಶಾಂತಿಗೆ ಭಂಗ ಉಂಟುಮಾಡುತ್ತದೆ. ಈ ಸಂಬಂಧ, ಸಮುದಾಯಕ್ಕೆ

ಮಾರಕವಾದ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ತರುವ ಗಂಭೀರವಾದ ಚಟುವಟಿಕೆಗಳು ಮತ್ತು ಸ್ಥಳೀಯ ಹಿನ್ನೆಲೆಯನ್ನು ಮಾತ್ರ ಹೊಂದಿರುವ ಕೇವಲ ಕೆಲವೇ ವ್ಯಕ್ತಿಗಳಿಗೆ ತೊಂದರೆ ಉಂಟುಮಾಡುವ ಚಟುವಟಿಕೆಗಳ ನಡುವೆ ನಾವು ಗೆರೆ ಎಳೆಯಬೇಕಿದೆ.

ಇಂತಹ ಸಣ್ಣಪುಟ್ಟ ಉಲ್ಲಂಘನೆಗಳು 'ಕಾನೂನು ಉಲ್ಲಂಘನೆ'ಯ ವ್ಯಾಪ್ತಿಗೆ ಬರುತ್ತವೆ. ಇದು 'ಸಾರ್ವಜನಿಕ ಶಾಂತಿಯ ಉಲ್ಲಂಘನೆ'ಯಾಗುವುದಿಲ್ಲ. ರಾಂ ಮನೋಹರ್ ಲೋಹಿಯಾ ಮತ್ತು ಬಿಹಾರ ರಾಜ್ಯದ ಮೊಕದ್ದಮೆಯಲ್ಲಿ ನ್ಯಾಯಾಲಯ ಈ ರೀತಿ ಹೇಳಿದೆ.

ಕಾನೂನು ಮತ್ತು ಸುವ್ಯವಸ್ಥೆ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಯುತ್ತದೆಯಾದರೂ, ಇಂತಹ ಉಲ್ಲಂಘನೆಯ ಒಂದು ಬದಿಯಲ್ಲಿ ಸಣ್ಣಪುಟ್ಟ ಕಾನೂನು ಬಾಹಿರ ಚಟುವಟಿಕೆಗಳಿದ್ದರೆ, ಇನ್ನೊಂದು ಬದಿಯಲ್ಲಿ ತೀರ ಗಂಭೀರವಾದ, ತೀವ್ರ ದುಷ್ಪರಿಣಾಮ ಬೀರುವ ಚಟುವಟಿಕೆಗಳಿವೆ. "ಸಾರ್ವಜನಿಕ ಶಾಂತಿ" ಎಲ್ಲ ರೀತಿಯ ಶಾಸನಬದ್ಧವಲ್ಲದ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವುದೇ ಅಥವಾ ಕೆಲವನ್ನು ಮಾತ್ರವೇ? ಇದಕ್ಕೆ ಉತ್ತರ, ಈ ಎರಡು ಪರಿಕಲ್ಪನೆಗಳ ನಡುವಿನ ವ್ಯತ್ಯಾಸಗಳನ್ನು ಅರ್ಥೈಸುವುದರಲ್ಲಿದೆ. "ಕಾನೂನು ಮತ್ತು ಸುವ್ಯವಸ್ಥೆ"ಯಡಿ ಶಾಸನಬದ್ಧವಲ್ಲದ ಎಲ್ಲ ಚಟುವಟಿಕೆಗಳು ಬರುತ್ತವೆ. ಆದರೆ, ಶಾಂತಿ ಭಂಗ ಉಂಟುಮಾಡುವ ಎಲ್ಲ ಚಟುವಟಿಕೆಗಳು ಸಾರ್ವಜನಿಕ ಅವ್ಯವಸ್ಥೆ ಎನಿಸಿಕೊಳ್ಳುವುದಿಲ್ಲ.

ಆದ್ದರಿಂದ, ಕಾನೂನು ಮತ್ತು ಸುವ್ಯವಸ್ಥೆಯ ಸಣ್ಣಪುಟ್ಟ ಪ್ರಕರಣಗಳು ಹಾಗೂ ಸಾರ್ವಜನಿಕ ಶಾಂತಿಗೆ ಭಂಗ ತರುವ ಗಂಭೀರವಾದ ಪ್ರಕರಣಗಳ ನಡುವೆ ವ್ಯತ್ಯಾಸ ಕಂಡುಕೊಳ್ಳಬೇಕಾದುದು ಅತ್ಯವಶ್ಯಕ. ಪ್ರಕರಣಗಳ ಲಕ್ಷಣಗಳಲ್ಲಿ ವ್ಯತ್ಯಾಸ ಕಂಡುಬರದಿದ್ದರೂ, ಅವುಗಳ ತೀವ್ರತೆ ಮತ್ತು ಅವುಗಳಿಂದ ಉಂಟಾಗುವ ದುಷ್ಪರಿಣಾಮಗಳು ಸಾರ್ವಜನಿಕ ಶಾಂತಿಗೆ ಭಂಗ ತರುವುದೇ ಎಂಬುದನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬೇಕಿದೆ.

ಪ್ರಸ್ತುತ ಅಸ್ತಿತ್ವದಲ್ಲಿರುವ ಯಾವುದೇ ರಾಜ್ಯದ ಮತಾಂತರ ತಡೆ ಕಾಯ್ದೆಗಳು ಸಾರ್ವಜನಿಕ ಶಾಂತಿಯ ಪರಿಕಲ್ಪನೆಯೊಂದಿಗೆ ಸಮರ್ಥನೀಯವಾದ ಸಂಬಂಧ ಹೊಂದಿಲ್ಲದಿರುವುದು ಕಂಡುಬರುತ್ತದೆ. ಉದಾಹರಣೆಗೆ "ಸಮಾಜ ಘಾತುಕ ಮತ್ತು ಪಟ್ಟಭದ್ರ ಗುಂಪುಗಳು ಹಿಂದುಳಿದ ವರ್ಗಗಳ ಅಮಾಯಕ ಜನರನ್ನು ದುರ್ಬಳಕೆ ಮಾಡುವುದನ್ನು ತಡೆಯುವುದು" ಗುಜರಾತ್ ರಾಜ್ಯದ ಕಾಯ್ದೆಯ ಪ್ರಾಥಮಿಕ ಗುರಿಯಾಗಿದೆ. "ಸಾರ್ವಜನಿಕ ಶಾಂತಿ ಕಾಪಾಡಲು ಮತ್ತು ಸಮಾಜದ ಶಾಂತಿ ಕದಡುವ ಶಕ್ತಿಗಳನ್ನು ಹತ್ತಿಕ್ಕಲು ಕಾಯ್ದೆ ಪ್ರಯೋಜನಕ್ಕೆ ಬರುತ್ತದೆ" ಎಂದು ಕಾಯ್ದೆಯಲ್ಲಿ ವಿವರಣೆಯನ್ನು ನೀಡಲಾಗಿದೆ. ಇನ್ನು, ರಾಜಸ್ಥಾನ ರಾಜ್ಯದ ಮಸೂದೆ ಸಾರ್ವಜನಿಕ ಶಾಂತಿಯ ಪರಿಕಲ್ಪನೆಯನ್ನು ಉಲ್ಲೇಖಿಸಲೂ ಹೋಗಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಶಾಂತಿ, ಈ ಎರಡೂ ಪರಿಕಲ್ಪನೆಗಳ ನಡುವಿನ ವ್ಯತ್ಯಾಸ, ಈ ಶಾಸನಗಳಲ್ಲಿ ಬಳಕೆಯಾಗಿರುವ ಭಾಷೆಯಲ್ಲಿ ಕಂಡುಬರುವುದಿಲ್ಲ.

೩.೪ ೨೫ನೇ ವಿಧಿ: ಅತ್ಯವಶ್ಯಕ ಅಂಶ

ಹೆಚ್ಚುತ್ತಿರುವ ಮತಾಂತರ ತಡೆ ಕಾಯ್ದೆಗಳ ಬಗ್ಗೆ ದೂರುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ, ಸಂವಿಧಾನದ ೨೫ನೇ ವಿಧಿಯಡಿ ನೀಡಲಾಗಿರುವ ಹಕ್ಕುಗಳು "ರಾಷ್ಟ್ರದ ಬಹು-ಧರ್ಮೀಯ ಲಕ್ಷಣದ ಪ್ರಮುಖವಾದ ಅಂಶಗಳು" ಎಂದು ಹೇಳಿದೆ. ಆದ್ದರಿಂದ, ರಾಜ್ಯ ಸರ್ಕಾರಗಳು "ಈ ಹಕ್ಕುಗಳನ್ನು ನಿಷ್ಕ್ರಿಯಗೊಳಿಸುವ ಯಾವುದೇ ಕ್ರಮಗಳನ್ನು ಕೈಗೊಳ್ಳಬಾರದು" ಎಂದು ಸೂಚಿಸಿದೆ. ಇದು ನ್ಯಾಯಾಂಗಕ್ಕೂ ಅನ್ವಯಿಸುತ್ತದೆ.

ಸಂವಿಧಾನಾತ್ಮಕವಾಗಿ ಪಾಲಿಸಬೇಕಾದ ಜಾತ್ಯತೀತತೆ, ಧರ್ಮನಿರಪೇಕ್ಷತೆ ಹಾಗೂ ಸಹಿಷ್ಣುತೆಯ ತತ್ವಗಳಿಗೂ ಕೂಡ ಮತಾಂತರ ತಡೆ ಕಾಯ್ದೆಗಳು ತೊಡಕಾಗಿ ಪರಿಣಮಿಸಿವೆ. ಸುಪ್ರೀಂಕೋರ್ಟ್ ಕೂಡ ಈ ಹಿಂದೆ ೨೫ ಮತ್ತು ೨೬ನೇ ವಿಧಿ, "ಭಾರತದ ನಾಗರಿಕತೆಯ ಆರಂಭ ಕಾಲದಿಂದಲೂ ಅಸ್ತಿತ್ವದಲ್ಲಿರುವ ಧಾರ್ಮಿಕ ಸಹಿಷ್ಣುತೆಯ ತತ್ವವನ್ನು ಪ್ರತಿಪಾದಿಸುತ್ತದೆ. ಸಂವಿಧಾನದ ಕರ್ತೃಗಳು ಅತಿ ಮುಖ್ಯವೆಂದು ಪರಿಗಣಿಸಿದ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯ ಜಾತ್ಯತೀತತೆಯ ಲಕ್ಷಣವನ್ನು ಕೂಡ ಇವು ಪುಷ್ಟೀಕರಿಸುತ್ತವೆ" ಎಂದು ಅಭಿಪ್ರಾಯಪಟ್ಟಿತ್ತು.

ಆದ್ದರಿಂದ, ಜಾತ್ಯತೀತತೆ ಮತ್ತು ಧರ್ಮಸಹಿಷ್ಣುತೆಯನ್ನು ಅನುಸರಿಸುವ ನಿಟ್ಟಿನಲ್ಲಿ ರಾಜಕೀಯ ಮತ್ತು ನ್ಯಾಯಾಂಗ ಬದ್ಧತೆಯ ಪರಿಧಿಯೊಳಗೆ ಮತಾಂತರ ತಡೆ ಕಾಯ್ದೆಗಳನ್ನು ಅರ್ಥೈಸಿಕೊಳ್ಳುವ ಅಗತ್ಯತೆ ಇದೆ. ಕೆಲವು ಶಾಸನಗಳಿಂದ ಸಂವಿಧಾನದ ಈ ಆಶಯ ಕಣ್ಮರೆಯಾಗುವುದಿಲ್ಲವಾದರೂ, ಇವುಗಳಿಂದ ಕಣ್ಣೆದುರಿಗೇ ಸಂವಿಧಾನದ ಆಶಯಕ್ಕೆ ವಿವಾದಾತ್ಮಕವಾದ ತೊಡಕಂತೂ ಉಂಟಾಗುತ್ತದೆ.

> **ಯಾವುದೇ ಕಾಯ್ದೆಯ ಉಲ್ಲಂಘನೆ ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವುದು ನಿಜ. ಆದರೆ, ಸಾರ್ವಜನಿಕರು ಮತ್ತು ಸಮುದಾಯಕ್ಕೆ ಧಕ್ಕೆ ತರುವಂತಹ ಚಟುವಟಿಕೆಗಳು ಮಾತ್ರ ಸಾರ್ವಜನಿಕ ಶಾಂತಿಗೆ ಭಂಗ ಉಂಟುಮಾಡುತ್ತದೆ. ಈ ಸಂಬಂಧ, ಸಮುದಾಯಕ್ಕೆ ಮಾರಕವಾದ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ತರುವ ಗಂಭೀರವಾದ ಚಟುವಟಿಕೆಗಳು ಮತ್ತು ಸ್ಥಳೀಯ ಹಿನ್ನೆಲೆಯನ್ನು ಮಾತ್ರ ಹೊಂದಿರುವ ಕೇವಲ ಕೆಲವೇ ವ್ಯಕ್ತಿಗಳಿಗೆ ತೊಂದರೆ ಉಂಟುಮಾಡುವ ಚಟುವಟಿಕೆಗಳ ನಡುವೆ ನಾವು ಗೆರೆ ಎಳೆಯಬೇಕಿದೆ. ಇಂತಹ ಸಣ್ಣಪುಟ್ಟ ಉಲ್ಲಂಘನೆಗಳು 'ಕಾನೂನು ಉಲ್ಲಂಘನೆ'ಯ ವ್ಯಾಪ್ತಿಗೆ ಬರುತ್ತದೆ. ಇದು 'ಸಾರ್ವಜನಿಕ ಶಾಂತಿಯ ಉಲ್ಲಂಘನೆ'ಯಾಗುವುದಿಲ್ಲ. ರಾಂ ಮನೋಹರ್ ಲೋಹಿಯಾ ಮತ್ತು ಬಿಹಾರ ರಾಜ್ಯದ ಮೊಕದ್ದಮೆಯಲ್ಲಿ ನ್ಯಾಯಾಲಯ ಈ ರೀತಿ ಹೇಳಿದೆ.**

೪. ಅಂತಾರಾಷ್ಟ್ರೀಯ ಶಾಸನಗಳ ಬೆಂಬಲ

ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ನೆಲೆಗಟ್ಟಿನಲ್ಲಿ ಮತಾಂತರ ತಡೆ ಶಾಸನಗಳನ್ನು ಗಮನಿಸುವುದಾದರೆ ಎರಡು ಭಿನ್ನವಾದ ಆದರೆ ಒಂದಕ್ಕೊಂದು ಸಂಬಂಧ ಹೊಂದಿರುವ ಹಕ್ಕುಗಳನ್ನು ನೋಡಬಹುದು. 'ಪ್ರತಿಪಾದಕ' ಹಾಗೂ 'ಪ್ರತಿಪಾದನೆಗೆ ಒಳಗಾಗುವವನು.' ಇವೆರಡೂ ಕ್ರಮವಾಗಿ ಧಾರ್ಮಿಕ ಸ್ವಾತಂತ್ರ್ಯದ 'ಸಕಾರಾತ್ಮಕ' ಮತ್ತು 'ನಕಾರಾತ್ಮಕ' ಆಯಾಮಗಳೆಂದು ಹೇಳಬಹುದು. ಇನ್ನು ಸ್ಪಷ್ಟವಾಗಿ ಹೇಳುವುದಾದರೆ, ಇತರರನ್ನು ಮತಾಂತರಕ್ಕೆ ಒತ್ತಾಯಿಸುವುದು ಒಂದು ಆಯಾಮವಾದರೆ, ಮತಾಂತರಕ್ಕೆ ಒಳಗಾಗದಿರುವ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದು ಮತ್ತೊಂದು ಆಯಾಮ ಎನ್ನಬಹುದು.

೪.೧ ಪ್ರತಿಪಾದಕನ ಹಕ್ಕುಗಳು

ಧರ್ಮಪ್ರತಿಪಾದನೆಯ ಹಕ್ಕನ್ನು ಅಂತಾರಾಷ್ಟ್ರೀಯ ಶಾಸನಗಳು ನೇರವಾಗಿ ನೀಡಿಲ್ಲವಾದರೂ, ೧೯೬೬ರ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತಾರಾಷ್ಟ್ರೀಯ ಕಾಯ್ದೆ (ಐಸಿಸಿಪಿಆರ್)ಯ ೧೮ (೧)ನೇ ವಿಧಿಯಡಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಓರ್ವ ವ್ಯಕ್ತಿ ತನ್ನ ಧಾರ್ಮಿಕ ನಂಬಿಕೆಗಳನ್ನು ಶಾಂತಿಯುತವಾಗಿ ಪ್ರಚಾರ ಮಾಡಲು ಅನುಮತಿ ನೀಡುತ್ತದೆ.

ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ಇರತಕ್ಕದ್ದು. ವೈಯಕ್ತಿಕವಾಗಿ ಅಥವಾ ಸಾಮುದಾಯಿಕವಾಗಿ ತನ್ನ ಆಯ್ಕೆಯ ಧರ್ಮ ಅಥವಾ ನಂಬಿಕೆಯನ್ನು ಹೊಂದಲು ಅಥವಾ ಅಳವಡಿಸಿಕೊಳ್ಳಲು, ಸಾರ್ವಜನಿಕವಾಗಿ ಅಥವಾ ಖಾಸಗಿಯಾಗಿ ತನ್ನ ಧರ್ಮ ಅಥವಾ ನಂಬಿಕೆ, ಆಚರಣೆ ಕೈಗೊಳ್ಳುವ ಸ್ವಾತಂತ್ರ್ಯವನ್ನು ಇದು ಒಳಗೊಳ್ಳುತ್ತದೆ.

೧೯೭೯ರಲ್ಲಿ ಭಾರತ ಐಸಿಸಿಪಿಆರ್‌ಗೆ ಸಮ್ಮತಿ ಸೂಚಿಸಿರುವುದರಿಂದ ಅವುಗಳ ಆಶಯಕ್ಕೆ ಧಕ್ಕೆ ತರದ ಹಾಗೆ ನಡೆದುಕೊಳ್ಳುವ ಬಾಧ್ಯತೆ ಇದ್ದೇ ಇದೆ.

ಇನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿ ಕೂಡ ಧಾರ್ಮಿಕ ಸ್ವಾತಂತ್ರ್ಯ, ಚಿಂತನೆಯ ಸ್ವಾತಂತ್ರ್ಯ, ಆತ್ಮಸಾಕ್ಷಿಯ ಸ್ವಾತಂತ್ರ್ಯದ ಹಕ್ಕುಗಳನ್ನು ಪ್ರಮುಖವಾದುದು ಎಂದು ಗುರುತಿಸಿದೆ. ೧೯೫೦ರ ಯುರೋಪ್‌ನ ಮಾನವ ಹಕ್ಕುಗಳ ಶಾಸನದ ೯ನೇ ವಿಧಿ ಕೂಡ ಐಸಿಸಿಪಿಆರ್ ಮಾದರಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಬೆಂಬಲ ವ್ಯಕ್ತಪಡಿಸುತ್ತದೆ.

೪.೨ ಪ್ರತಿಪಾದನೆಗೆ ಒಳಗಾಗುವವನ ಹಕ್ಕುಗಳು

ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಹೊಂದುವ ಮತ್ತು ಇತರೆ ಹಸ್ತಕ್ಷೇಪದಿಂದ ಹೊರತಾಗುವ ಸ್ವಾತಂತ್ರ್ಯದ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಯುಡಿಎಚ್ಆರ್‌ನ ೧೮ನೇ ವಿಧಿ ಮತಾಂತರ ಹೊಂದುವ ಸ್ವಾತಂತ್ರ್ಯದ ಹಕ್ಕನ್ನು ನೀಡುತ್ತದೆ. "ಪ್ರತಿಯೊಬ್ಬರಿಗೂ ಚಿಂತನೆ, ಆತ್ಮಸಾಕ್ಷಿ, ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿದೆ; ತನ್ನ ಆಯ್ಕೆಯ ಧರ್ಮಕ್ಕೆ ಮತಾಂತರ ಹೊಂದುವ ಮತ್ತು ತನಗೆ ಬೇಕಾದ ನಂಬಿಕೆಯನ್ನು ಹೊಂದುವ ಹಕ್ಕನ್ನು ಇದು ಒಳಗೊಂಡಿದೆ.

ಯಾವುದೇ ವ್ಯಕ್ತಿ ತನ್ನ ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಹೊಂದುವ ಮುನ್ನ ಆತನಿಗೆ

ಮತಾಂತರಗೊಳ್ಳಬಯಸುವ ಧರ್ಮದ ತತ್ವಗಳ ಪರಿಚಯ ಇರಬೇಕಾದುದು ಅತ್ಯವಶ್ಯಕ. ಈ ಮಾಹಿತಿ ಧರ್ಮಪ್ರಚಾರದಲ್ಲಿ ತೊಡಗಿರುವ ಪ್ರತಿಪಾದಕರಿಂದ ಮಾತ್ರ ಸುಲಭವಾಗಿ ದೊರಕುತ್ತದೆ. ಹೀಗಾಗಿ, ಧರ್ಮ ಪ್ರತಿಪಾದಕನ ಹಕ್ಕನ್ನು ನಿಬಂಧನೆಗೊಳಪಡಿಸಿದರೆ, ಅದು ಪ್ರತಿಪಾದನೆಗೊಳಪಡುವವನ ಹಕ್ಕನ್ನೂ ನಿಬಂಧನೆಗೊಳಪಡಿಸಿದಂತಾಗುತ್ತದೆ. ಅದೇನೇ ಇದ್ದರೂ, ಪ್ರತಿಯೊಬ್ಬ ವ್ಯಕ್ತಿ ಕೂಡ ಮತಾಂತರ ಹೊಂದಲು ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾನೆ, ಅಲ್ಲದೆ ಇತರರ ಅನಗತ್ಯ ಹಸ್ತಕ್ಷೇಪದಿಂದ ಹೊರತಾದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನೂ ಹೊಂದಿರುತ್ತಾನೆ.

೫. ಇತರ ಆಕ್ಷೇಪಣೆಗಳು

ಮತಾಂತರ ತಡೆ ಕಾಯ್ದೆಗಳಿಗೆ ಸಂಬಂಧಿಸಿದ ಇತರ ಆಕ್ಷೇಪಣೆಗಳನ್ನು ಇಲ್ಲಿ ಪಟ್ಟಿ ಮಾಡಬಹುದು.

ಶಿಕ್ಷೆ ಮತ್ತು ದಂಡನೆಯ ತೀವ್ರತೆ: ಮತಾಂತರ ತಡೆ ಕಾಯ್ದೆಯ ಉಲ್ಲಂಘನೆಗೆ ಸೂಚಿಸಲಾಗಿರುವ ಶಿಕ್ಷೆ ಮತ್ತು ದಂಡ ಅತಿರೇಕವಾದುದು. ಒರಿಸ್ಸಾ ಮತ್ತು ಮಧ್ಯಪ್ರದೇಶ ರಾಜ್ಯದ ಕಾಯ್ದೆಗಳು ಒಂದು ವರ್ಷದವರೆಗೂ ವಿಸ್ತರಿಸಬಹುದಾದ ಸೆರೆವಾಸ ಹಾಗೂ ೫,೦೦೦ ರೂ.ಗಳವರೆಗೂ ದಂಡ ನಿಗದಿಗೊಳಿಸಿವೆ. ಅರುಣಾಚಲಪ್ರದೇಶದ ಕಾಯ್ದೆ, ಒತ್ತಡ, ಮೋಸ, ಪ್ರಲೋಭನೆಯ ಮೂಲಕ ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿರುವವರು, ಮತಾಂತರಗೊಳಿಸಲು ಯತ್ನಿಸುವವರು, ಹಾಗೂ ಮತಾಂತರಕ್ಕೆ ಕುಮ್ಮಕ್ಕು ಕೊಡುವವರಿಗೆ ಗರಿಷ್ಠ ಎರಡು ವರ್ಷಗಳವರೆಗಿನ ಸೆರೆವಾಸ, ೧೦,೦೦೦ ರೂ.ವರೆಗೆ ದಂಡ ವಿಧಿಸಿದೆ. ಇನ್ನು ಹಿಮಾಚಲ ಪ್ರದೇಶದ ಕಾಯ್ದೆ ಎರಡು ವರ್ಷಗಳವರೆಗಿನ ಸೆರೆವಾಸ ಅಥವಾ ೨೫,೦೦೦ ರೂ.ವರೆಗೆ ದಂಡ ಅಥವಾ ಎರಡನ್ನೂ ವಿಧಿಸಿದೆ.

ರಾಜಸ್ಥಾನದ ಮಸೂದೆ, ಗರಿಷ್ಠ ಎರಡು ವರ್ಷಗಳ ವರೆಗಿನ ಸೆರೆವಾಸ ಹಾಗೂ ೫೦,೦೦೦ ರೂ.ವರೆಗೆ ದಂಡ ವಿಧಿಸಿದೆ. ಜೊತೆಗೆ, ಇವು ಜಾಮೀನುರಹಿತ ಕೃತ್ಯಗಳೆಂದು ಪರಿಗಣಿತವಾಗಿದೆ. ಚತ್ತೀಸ್‌ಗಢ ೨೦೦೬ರಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಕಾಯ್ದೆಗೆ ತಿದ್ದುಪಡಿ ಮಾಡಿ, ಗರಿಷ್ಠ ಸೆರೆವಾಸದ ಅವಧಿಯನ್ನು ಒಂದು ವರ್ಷದಿಂದ ಮೂರು ವರ್ಷಗಳಿಗೆ ಏರಿಸಿದೆ ಮತ್ತು ದಂಡವನ್ನು ೫,೦೦೦ ರೂ.ಗಳಿಂದ ೨೫,೦೦೦ ರೂ.ಗಳಿಗೆ ಹೆಚ್ಚಿಸಿದೆ. ಗುಜರಾತ್‌ನ ಕಾಯ್ದೆ ಗರಿಷ್ಠ ಮೂರು ವರ್ಷಗಳ ಸೆರೆವಾಸ ಮತ್ತು ೫೦,೦೦೦ ರೂ.ವರೆಗಿನ ದಂಡ ವಿಧಿಸಿದೆ.

ಕೆಲವು ಕಾಯ್ದೆಗಳು ಮಹಿಳೆಯರು, ಮಕ್ಕಳು, ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಮತಾಂತರಗೊಳಿಸುವುದಕ್ಕೆ ಇನ್ನೂ ಗಂಭೀರವಾದ ಶಿಕ್ಷೆ ನಿಗದಿಪಡಿಸಿವೆ. ಉದ್ದೇಶಿತ ಮತಾಂತರ ಪ್ರಕ್ರಿಯೆಯನ್ನು ಜಿಲ್ಲಾಡಳಿತದ ಗಮನಕ್ಕೆ ತರದೆ ಹೋಗುವುದೂ ಕೂಡ ಶಿಕ್ಷಾರ್ಹ ಅಪರಾಧವೆನಿಸಿಕೊಳ್ಳುತ್ತದೆ. ರಾಜೀವ್ ಧವನ್ ಗುರುತಿಸಿರುವಂತೆ, ಮತಾಂತರ ತಡೆ ಕಾಯ್ದೆಯಡಿ ನೀಡಲಾಗಿರುವ ಶಿಕ್ಷೆ ಮತ್ತು ದಂಡ, ಗಲಭೆ ಮತ್ತು ನಿರ್ಲಕ್ಷ್ಯದಿಂದ ಸಾವು ಉಂಟಾದಾಗ ನೀಡಲಾಗುವ ಶಿಕ್ಷೆಗಿಂತ ಗಂಭೀರವಾದುದಾಗಿದೆ. ಇದರಿಂದಾಗಿ, ಸಣ್ಣ ಪ್ರಮಾಣದ ತಪ್ಪಿಗೆ ಬಹುದೊಡ್ಡ ಶಿಕ್ಷೆ ನಿಗದಿಗೊಳಿಸಿದಂತಾಗಿದೆ.

ಮತಾಂತರ ತಡೆ ಕಾಯ್ದೆಗಳ ಅವಶ್ಯಕತೆಯೇ ಇಲ್ಲ: ಒತ್ತಡ, ಪ್ರಲೋಭನೆ ಮತ್ತು ಮೋಸದ ಮೂಲಕ ಮತಾಂತರವನ್ನು ಕೈಗೊಂಡರೆ ಅದನ್ನು ನಿಯಂತ್ರಿಸಲು ಪ್ರಸ್ತುತ ಅಸ್ತಿತ್ವದಲ್ಲಿರುವ ಕಾಯ್ದೆಗಳು ಸಕ್ಷಮವಾಗಿವೆ. ಮತಾಂತರ ಪ್ರಕರಣಗಳನ್ನು ಅಪರಾಧ ಕಾಯ್ದೆಗಳ ಮೂಲಕ ಬಗೆಹರಿಸಬಹುದು ಎಂದು ಘೋಸ್ ಅವರು ಅಭಿಪ್ರಾಯಪಡುತ್ತಾರೆ. ೧೮೬೦ರ ಭಾರತೀಯ ದಂಡಸಂಹಿತೆಯ ೨೯೫ಎ ಮತ್ತು ೨೯೮ನೇ ವಿಧಿ; ೧೯೭೩ರ ಅಪರಾಧ ಕಾಯ್ದೆ ಈ ಸಮಸ್ಯೆಯನ್ನು ನಿಗ್ರಹಿಸಬಲ್ಲದು. ಮತಾಂತರ ತಡೆ ಕಾಯ್ದೆಗಳನ್ನು ಜಾರಿಗೆ ತರದ ಬಹುತೇಕ ರಾಜ್ಯಗಳು, ಬಲವಂತದ ಮತಾಂತರವನ್ನು ತಡೆಗಟ್ಟಲು ಸಾಧ್ಯವಾಗದ ಆತಂಕವನ್ನೇನೂ ವ್ಯಕ್ತಪಡಿಸುತ್ತಿಲ್ಲ.

> **೧೯೭೯ರಲ್ಲಿ ಭಾರತ ಐಸಿಸಿಪಿಆರ್‌ಗೆ ಸಮ್ಮತಿ ಸೂಚಿಸಿರುವುದರಿಂದ ಅವುಗಳ ಆಶಯಕ್ಕೆ ಧಕ್ಕೆ ತರದ ಹಾಗೆ ನಡೆದುಕೊಳ್ಳುವ ಬಾಧ್ಯತೆ ಇದ್ದೇ ಇದೆ. ಇನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿ ಕೂಡ ಧಾರ್ಮಿಕ ಸ್ವಾತಂತ್ರ್ಯ, ಚಿಂತನೆಯ ಸ್ವಾತಂತ್ರ್ಯ, ಆತ್ಮಸಾಕ್ಷಿಯ ಸ್ವಾತಂತ್ರ್ಯದ ಹಕ್ಕುಗಳನ್ನು ಪ್ರಮುಖವಾದುದು ಎಂದು ಗುರುತಿಸಿದೆ. ೧೯೫೦ರ ಯುರೋಪ್‌ನ ಮಾನವ ಹಕ್ಕುಗಳ ಶಾಸನದ ೯ನೇ ವಿಧಿ ಕೂಡ ಐಸಿಸಿಪಿಆರ್ ಮಾದರಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಬೆಂಬಲ ವ್ಯಕ್ತಪಡಿಸುತ್ತದೆ.**

ಗೋಪುರ.

ಎಲ್ಲ ಪತ್ರಿಕೆಗಳೂ
ಪೀಸಾ ಗೋಪುರಗಳೇ!
ಎಡಕ್ಕೆ ಇಲ್ಲ
ಬಲಕ್ಕೆ ವಾಲುತ್ತವೆ!
ಸೆಟೆದು ನೇರಕ್ಕೆ
ನಿಲ್ಲುವವು ಇಲ್ಲ!

○ ಅಲ್ಲಮ ಪ್ರಭು ಬೆಟ್ಟದೂರು

ಅಂತಿಮವಾಗಿ, ಮತಾಂತರವನ್ನು ವಿವಾದಾತ್ಮಕಗೊಳಿಸಲಾಗಿದ್ದರೂ, ಇತ್ತೀಚೆಗಿನ ರಾಷ್ಟ್ರೀಯ ಜನಗಣತಿ ಸೂಚಿಸುವಂತೆ, ಎಲ್ಲ ಧರ್ಮಗಳನ್ನು ಅನುಸರಿಸುವವರ ಜನಸಂಖ್ಯೆ ಬಹುತೇಕ ಸಮಸ್ಥಿತಿಯನ್ನೇ ಕಾಯ್ದುಕೊಂಡಿದೆ ಎಂಬುದು ತಿಳಿದುಬರುತ್ತದೆ. ೨೦೦೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಕ್ರೈಸ್ತರ ಜನಸಂಖ್ಯೆ ಕೇವಲ ೨.೩% ಮಾತ್ರ ಇದೆ. ೧೯೬೧ರಲ್ಲಿ ಸುಮಾರು ೨.೪%ರಷ್ಟು ಇದ್ದ ಕ್ರೈಸ್ತರ ಜನಸಂಖ್ಯೆ ಈಗ ಇನ್ನೂ ಕಡಿಮೆಯಾಗಿದೆ. ಅದರಂತೆಯೇ ಹಿಂದೂಗಳ ಜನಸಂಖ್ಯೆಯ ಪ್ರಮಾಣ ಕೂಡ ೮೪.೪%ರಿಂದ ಈಗ ೮೧.೪%ರಷ್ಟು ಕಡಿಮೆಯಾಗಿದೆ. ಹಿಮಾಚಲಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಕ್ರೈಸ್ತರ ಜನಸಂಖ್ಯೆ ಕೇವಲ ೦.೧% ಮಾತ್ರ ಇದೆ. ಮತಾಂತರ ತಡೆ ಕಾಯ್ದೆಯನ್ನು ಜಾರಿಗೆ ತಂದಿರುವ ರಾಜ್ಯಗಳಲ್ಲಿಯೇ ಅತಿ ಹೆಚ್ಚು ಕ್ರೈಸ್ತರ ಜನಸಂಖ್ಯೆ ಹೊಂದಿರುವ ರಾಜ್ಯ ಅರುಣಾಚಲಪ್ರದೇಶ. ಇಲ್ಲಿ ಕೂಡ ೧೮.೭%ನಷ್ಟು ಜನಸಂಖ್ಯೆ ಮಾತ್ರ ಇದೆ. ಇನ್ನುಳಿದಂತೆ ಮತಾಂತರ ತಡೆ ಕಾಯ್ದೆಗಳನ್ನು ಜಾರಿಗೆ ತಂದಿರುವ ಯಾವ ರಾಜ್ಯಗಳಲ್ಲಿಯೂ ಕ್ರೈಸ್ತರ ಜನಸಂಖ್ಯೆ ೩% ದಾಟುವುದಿಲ್ಲ.

ಮತಾಂತರ ತಡೆ ಕಾಯ್ದೆಗಳು ಯಜಮಾನ ಸ್ವರೂಪದ್ದು: ಬೆದರಿಕೆ ಮತ್ತು ಹಿಂಸೆಯ ಮೂಲಕ ಮತಾಂತರ ನಡೆಸುವುದನ್ನು ಸಮರ್ಥಿಸಲು ಸಾಧ್ಯವಿಲ್ಲ. ಆದರೂ ಕೂಡ, "ದೇವರ ಅವಕೃಪೆಗೆ ಒಳಗಾಗುವ" ಅಂಶವನ್ನು ಕಾಯ್ದೆಯ ವ್ಯಾಪ್ತಿಗೆ ತಂದು, ರಾಜ್ಯ ವಿಧಾನಸಭೆಗಳು ಜನಸಾಮಾನ್ಯರು ಸ್ಥಿತಪ್ರಜ್ಞರಲ್ಲ ಎಂಬುದನ್ನು ಸೂಚಿಸಿದಂತಿದೆ. ಸ್ಟೇನಿಸ್ಲಾಸ್ ಮೊಕದ್ದಮೆಗೆ ಸಂಬಂಧಿಸಿದಂತೆ ಒರಿಸ್ಸಾ ರಾಜ್ಯದ ಹೈಕೋರ್ಟ್, "ಓರ್ವ ವ್ಯಕ್ತಿಯ ಯೋಚನಾಮಟ್ಟವನ್ನು ನಿಷ್ಕ್ರಿಯಗೊಳಿಸುವ" ಆತಂಕ ವ್ಯಕ್ತಪಡಿಸುವ ರಾಜ್ಯದ ಮತಾಂತರ ತಡೆ ಕಾಯ್ದೆಯ ಸಾಂವಿಧಾನಿಕತೆಯನ್ನು ಎತ್ತಿಹಿಡಿದಿರುವುದು ಈಗಾಗಲೇ ತಿಳಿದಿರುವ ವಿಚಾರ. ಸ್ಟೇನಿಸ್ಲಾಸ್ ಮೊಕದ್ದಮೆಯನ್ನು ಚರ್ಚಿಸುತ್ತಾ ಪ್ರತಾಪ್ ಭಾನು ಮೆಹ್ತಾ, "ಜನಸಾಮಾನ್ಯರು, ಅದರಲ್ಲಿಯೂ ವಿಶೇಷವಾಗಿ ಕೆಳವರ್ಗದವರು, ತಾವು ಸ್ವೀಕರಿಸುವ "ಧಾರ್ಮಿಕ" ವಿಚಾರಗಳನ್ನು ಅರ್ಥೈಸಿಕೊಳ್ಳಲು ಅಸಮರ್ಥರು" ಎಂದು ಸುಪ್ರೀಂಕೋರ್ಟ್ ಕಲ್ಪಿಸಿಕೊಂಡಂತಿದೆ ಎಂದು ವ್ಯಂಗ್ಯವಾಡುತ್ತಾರೆ.

೬. ಉಪಸಂಹಾರ

ಭಾರತೀಯ ಸಮಾಜದ ಆಂತರಿಕ ಸಂರಚನೆ ಮತ್ತು ಜಗತ್ತಿನ ಇತರ ರಾಷ್ಟ್ರಗಳ ಗಮನದಲ್ಲಿರುವ ರಾಷ್ಟ್ರದ ಕಾನೂನು ವ್ಯವಸ್ಥೆಗೆ ಮತಾಂತರ ತಡೆ ಶಾಸನಗಳು ಗಂಭೀರವಾದ ಸವಾಲನ್ನೊಡ್ಡಿರುವುದಂತೂ ಸ್ಪಷ್ಟ. ಈ ಶಾಸನಗಳು ಧಾರ್ಮಿಕ ಸಿದ್ಧಾಂತಗಳಿಂದ ಪ್ರೇರಿತವಾಗಿರುವುದನ್ನು ನಿರ್ಲಕ್ಷಿಸುವುದು ಕೂಡ ಸಾಧ್ಯವಿಲ್ಲ. ಹೀಗಾಗಿ, ಈ ಶಾಸನಗಳು ಧಾರ್ಮಿಕ ಅಲ್ಪಸಂಖ್ಯಾತರಿಗೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಇಂತಹ ಶಾಸನಗಳನ್ನು ನ್ಯಾಯಾಂಗ ಕೂಡ ಬೆಂಬಲಿಸಿದರೆ, ಭಾರತದ ಪ್ರಜಾತಂತ್ರ ವ್ಯವಸ್ಥೆಯಷ್ಟೇ ಅಲ್ಲದೆ, ಸಮಾನತೆ ಮತ್ತು ಸಹಿಷ್ಣುತೆಯಂತಹ ರಾಷ್ಟ್ರನಿರ್ಮಾಣದ ಆಶಯಗಳಿಗೆ ತೀವ್ರ ಆಘಾತವಾಗುವುದು ನಿಶ್ಚಿತ.

(ಮೂಲ: ದಕ್ಷಿಣ ಏಷ್ಯಾ ಮಾನವ ಹಕ್ಕುಗಳ ಸಂಶೋಧನಾ ಕೇಂದ್ರ)

ಮುಗಿಯಿತು □

ಮಾತು ಅರ್ಥಪೂರ್ಣ: ಸಾಹಿತ್ಯ ಜೀವಂತ

"ನಮ್ಮ ಸಾಹಿತ್ಯದಲ್ಲಿ ಏನೇನಾಗುತ್ತಿದೆ ಎಂದು ನೋಡಿದರೆ ಹೆದರಿಕೆಯಾಗುತ್ತದೆ. ಒಂದು ಒಳ್ಳೆಯ ಪುಸ್ತಕ ಯಾವ ಕಾರಣಕ್ಕೆ ಒಳ್ಳೆಯದಾಗಿದೆ ಮತ್ತು ಇನ್ನೊಂದು ಪ್ರಸಿದ್ಧವಾಗಿದ್ದರೂ ಯಾಕೆ ಕೆಟ್ಟದಾಗಿದೆ ಎಂದು ನೋಡುವವರೇ ಇಲ್ಲವಾಗಿದೆ. ಈಗ ಸಾಹಿತ್ಯ ಮತ್ತು ಬದುಕಿನಲ್ಲಿ ಆಸಕ್ತಿಯುಳ್ಳ ಕೆಲವರಾದರೂ ನಮ್ಮ ಸಾಹಿತ್ಯ ಕೃತಿಗಳ ಬಗ್ಗೆ ಸೂಕ್ಷ್ಮವಾಗಿ ವಸ್ತುನಿಷ್ಠವಾಗಿ ಪ್ರೀತಿಯಿಂದ ಮಾತಾಡಲಾಗದಿದ್ದರೆ ಈ ಕೆಟ್ಟಸ್ಥಿತಿ ಮುಂದುವರೆಯಲಿದೆ" -ಇದು ಲಂಕೇಶ್ ಕನ್ನಡದ ಸಾಹಿತ್ಯ ವಿಮರ್ಶೆಯ ವಾತಾವರಣವನ್ನು ಕುರಿತು ಬರೆದ ಮಾತು. ಇದರಲ್ಲಿ ಒಂದು ಬಗೆಯ ತಲ್ಲಣ, ಅಸಹಾಯಕತೆ, ಆಕ್ರೋಶ, ಕಳಕಳಿ ಎಲ್ಲವೂ ಇವೆ. ಈ ಮಾತುಗಳಲ್ಲಿರುವ 'ಸಾಹಿತ್ಯ' ಎಂಬ ಜಾಗದಲ್ಲಿ ಸಮಾಜವೆಂದೂ 'ಪುಸ್ತಕ' ಎಂಬ ಕಡೆ ಕ್ರಿಯೆ ಎಂದೂ ಸೇರಿಸಿಕೊಂಡರೆ, ಇದು ಲಂಕೇಶರ ಸಾಮಾಜಿಕ ಚಿಂತನೆಯನ್ನು ಸೂಚಿಸುವ ಮನೋಭಾವ ಕೂಡ ಆಗುತ್ತದೆ.

ಇದೊಂದು ಸಾಹಿತ್ಯಕ್ಕೆ ಸಂಬಂಧಿಸಿದ ಬರೆಹ, ಭಾಷಣ ಹಾಗೂ ಟಿಪ್ಪಣಿಗಳ ಸಂಕಲನ. ಇಲ್ಲಿ ಕೆಲವು ಲೇಖಕರ ವ್ಯಕ್ತಿಚಿತ್ರಗಳಿವೆ. ಕೆಲವು ಪುಸ್ತಕ ವಿಮರ್ಶೆಗಳಿವೆ. ಸಾಹಿತ್ಯ ಚಿಂತನೆಗಳಿವೆ. ಆತ್ಮಕಥಾನಕ ಎನ್ನಬಹುದಾದ ಬರೆಹಗಳಿವೆ. ಎಲ್ಲವೂ ಒಂದಲ್ಲಾ ಒಂದು ಬಗೆಯಲ್ಲಿ ಸಾಹಿತ್ಯ ಲೋಕಕ್ಕೆ ಸಂಬಂಧಪಟ್ಟಿವೆ. ಲಂಕೇಶ್ ತಮ್ಮ ಜೀವನದ ಕೊನೆಯ ದಶಕಗಳಲ್ಲಿ ಬರೆದ ಈ ಬರೆಹಗಳು ಕರ್ನಾಟಕದ ಕಳೆದೆರಡು ದಶಕಗಳ ಸಾಂಸ್ಕೃತಿಕ ಚರಿತ್ರೆಯ ಒಂದು ಅಧ್ಯಾಯದಂತೆ ಕೂಡ ಇವೆ. ಇಡೀ ಸಂಕಲನವನ್ನು ಲಂಕೇಶರ ಆತ್ಮಕಥೆ 'ಹುಳಿಮಾವಿನ ಮರ'ದ ಮುಂದುವರೆದ ಸಂಪುಟವನ್ನಾಗಿಯೂ ಓದಬಹುದು. ಇದನ್ನು ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರೂ ಚಳುವಳಿಗಾರರೂ ಆಗಿರುವ ಡಾ.ವಿ.ಎಸ್.ಶ್ರೀಧರ್ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಇದಕ್ಕೆ ಒಳನೋಟವುಳ್ಳ ಮುನ್ನುಡಿಯನ್ನು ಬರೆದಿದ್ದಾರೆ. ಇದರಲ್ಲಿ ಅವರು ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟಂತೆ ಅನೇಕ ಮಹತ್ವದ ಪ್ರಶ್ನೆಗಳನ್ನೂ ಎತ್ತಿದ್ದಾರೆ.

೨

ಈ ಸಂಕಲದಲ್ಲಿರುವ ಲೇಖನಗಳಲ್ಲಿ ಎರಡು ಪ್ರಶ್ನೆಗಳು ಮತ್ತೆಮತ್ತೆ ಪ್ರಸ್ತಾಪಕ್ಕೆ ಬರುತ್ತವೆ. ಅವುಗಳ ಮೇಲೆ ಲಂಕೇಶ್ ತಲೆಕೆಡಿಸಿಕೊಂಡು ಚಿಂತನೆ ಮಾಡುತ್ತಾರೆ. ಅವೆಂದರೆ ೧. ಮಾತನ್ನು ಪ್ರಾಮಾಣಿಕವಾಗಿ ಅರ್ಥಪೂರ್ಣವಾಗಿ ಬಳಸುವುದು ಹೇಗೆ ಮತ್ತು ಜೀವಂತ ಸಾಹಿತ್ಯ ಸೃಷ್ಟಿಸುವುದು ಹೇಗೆನ್ನುವುದು. ೨. ಇಂತಹ ಜೀವಂತವಾದ ಬರೆಹವನ್ನು ಗುರುತಿಸುವುದು ಹೇಗೆನ್ನುವುದು. ಮೊದಲನೆಯದು ಸೃಷ್ಟಿಕ್ರಿಯೆಗೆ ಸಂಬಂಧಿಸಿದ ಸಂಗತಿಯಾದರೆ, ಇನ್ನೊಂದು ಓದುವ ಮತ್ತು ಮೌಲ್ಯ ಮಾಪನ ಮಾಡುವುದಕ್ಕೆ ಸಂಬಂಧಿಸಿದ ಸಂಗತಿ. ಲಂಕೇಶರ ಪ್ರಕಾರ ಬರೆಹ ಮಾಡುವವರಿಗೆ ಅಥವಾ ಮಾತಾಡುವವರಿಗೆ ತಾವಾಡುವ ಮಾತು ಅಥವಾ ಬಳಸುವ ಭಾಷೆಯ ಶಕ್ತಿ ಮತ್ತು ಮಿತಿಗಳ ಬಗ್ಗೆ ನದರಿರಬೇಕು. ಮಾತನ್ನು ತಮ್ಮ ಅನುಭವ, ಆಲೋಚನೆ ಮತ್ತು ಭಾವನೆಗಳನ್ನು ಸಶಕ್ತವಾಗಿಯೂ ಪ್ರಾಮಾಣಿಕವಾಗಿಯೂ ಅಭಿವ್ಯಕ್ತಿ ಮಾಡಲು ತಕ್ಕ ಮಾಧ್ಯಮವಾಗಿ ಬಳಸಬೇಕು. ಆದರೆ ಹಾಗೆ ಮಾಡುವುದಕ್ಕೆ ಮಾತು ಎಲ್ಲ ಸಮಯದಲ್ಲೂ ಮಣಿಯುವುದಿಲ್ಲ. ಇದೊಂದು ಬರೆಹಗಾರನ ಅಥವಾ ಮಾತುಗಾರನ ದುರಂತದ ಸ್ಥಿತಿ. ಇದು ಲಂಕೇಶ್ ಅವರಿಗೆ ಸದಾ ಕಾಡಿದೆ.

ಮಾತು ಮತ್ತು ಅದರಿಂದ ಹೊರಡುವ ಅರ್ಥಗಳ ಸಂಬಂಧಗಳ ನಡುವಣ ಬಿಕ್ಕಟ್ಟುಗಳ ಬಗ್ಗೆ ಭಾರತದ ಅನೇಕ ದಾರ್ಶನಿಕ ಕವಿಗಳು ತಲೆಕೆಡಿಸಿಕೊಂಡಿದ್ದಾರೆ. ಕಾಳಿದಾಸ 'ವಾಗರ್ಥ'ಗಳ ಸಂಬಂಧಗಳ ಬಗ್ಗೆ ಚಿಂತಿಸಿದ್ದಾನೆ. ಅಲ್ಲಮನು 'ಮಾತೆಂಬುದು ಜ್ಯೋತಿರ್ಲಿಂಗ' ಎನ್ನುತ್ತಾನೆ. ಅದೇ ಹೊತ್ತಲ್ಲಿ ಶಬ್ದ ಸೂತಕದ ಮತ್ತು ಮಾತಿನ ಲಜ್ಜೆಯ ಬಗ್ಗೆಯೂ ಮಾತಾಡುತ್ತಾನೆ. ಬಸವಣ್ಣ ನುಡಿಗೆ ನಡೆಯ ಸಂಬಂಧವನ್ನು ಜೋಡಿಸಿ ಚಿಂತಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಲಂಕೇಶ್ ಚಿಂತನೆಯನ್ನು ಗಮನಿಸಬಹುದು. ಲಂಕೇಶ್ ದೇವುಡು, ಮಾಸ್ತಿ, ಕುವೆಂಪು, ಅನಂತಮೂರ್ತಿ, ಕೈಲಾಸಂ, ಅನಕೃ, ರಾಜರತ್ನಂ, ಸುಬ್ಬಣ್ಣ, ಪುತಿನ, ವೀರಕೇಸರಿ -ಮುಂತಾದ ಕನ್ನಡದ ಅನೇಕ ಲೇಖಕರ ಭಾಷೆಯನ್ನು ಎತ್ತಿಕೊಂಡು, ಅವು ಎಲ್ಲೆಲ್ಲಿ ಜೀವಂತವಾಗಿ ಮಿಡಿಯುತ್ತವೆ ಮತ್ತು ಎಲ್ಲೆಲ್ಲಿ ಜಡವಾಗಿವೆ ಎಂಬುದನ್ನು ಚರ್ಚಿಸುತ್ತಾರೆ.

'ಬೀದಿಲೇನಾದ್ರೂ ಬಿಡಿಗಾಸು ಬಿದ್ದಿದ್ರೆ ನೋಡ್ತಾ ಹೋಗ್ತಿದಿಯೇನೋ ಬಕವೆ' ಎಂಬ ಸಾಲನ್ನು ಉಲ್ಲೇಖಿಸಿ, ಭಾಷೆಯ ನಿಜವಾದ ಸಂಗೀತ ಬಲ್ಲ ಯಾರೂ ಹೀಗೆ ಬರೆಯುವುದಿಲ್ಲ ಎಂದು ಟೀಕಿಸುತ್ತಾರೆ. ಲಂಕೇಶ್ ಪ್ರಕಾರ ಮಾತಿನ ಶಕ್ತಿ ಮತ್ತು ಮಿತಿ ಎರಡನ್ನೂ ಬಲ್ಲವರೇ ಒಳ್ಳೆಯ ಲೇಖಕರು. ಮಾತನ್ನು ದುಂದು ಮಾಡುವುದು ಒಂದು ಅಪರಾಧ ಎನ್ನುವಂತೆ ಅವರು ತೀವ್ರವಾಗಿ ಚಿಂತಿಸುತ್ತಾರೆ. ಬರೆಹದಲ್ಲಿ ಅಶ್ಲೀಲತೆಯನ್ನು ಕುರಿತ ಅವರ ಹೇಳಿಕೆ ಕುತೂಹಲಕರ. "ಬರೆಯುವವನಲ್ಲಿ ಸಾಕಷ್ಟು ಸ್ಫೂರ್ತಿ ಅಥವಾ ಉದ್ದೇಶವಿಲ್ಲದ ಭಾಷೆ ಅಶ್ಲೀಲ" ಎಂದೂ, ಪೊಳ್ಳು ಅನಿಸಿಕೆಗಳನ್ನು ತೀವ್ರ ಭಾವನೆಯೆನ್ನುವಂತೆ ಮಂಡಿಸುವುದು ಅಶ್ಲೀಲವೆಂದೂ ಅವರು ಭಾವಿಸುತ್ತಾರೆ. ಎಲಿಯಟ್, ಎ.ಕೆ.ರಾಮಾನುಜನ್, ವೈಯೆನ್ಕೆ, ಬಿಳಿಗಿರಿ ಕಾರಂತ (ಚೋಮನ ದುಡಿ) ಮುಂತಾದವರನ್ನು ಒಳ್ಳೆಯ ಲೇಖಕರು ಎಂದು ಹೇಳುವುದಕ್ಕೆ, ಎನ್ನುವುದಕ್ಕೆ ಲಂಕೇಶರು ಅವರ ಭಾಷೆಯನ್ನು ಮಿತವಾಗಿ ಬಳಸಿ ಅಪಾರ ಅರ್ಥವಂತಿಕೆ ಸೃಷ್ಟಿಸುವುದನ್ನು ಒಂದು

ಪುಸ್ತಕ ಅವಲೋಕನ

ಸಾಹಿತಿ ಸಾಹಿತ್ಯ ವಿಮರ್ಶೆ
ಲೇ: ಡಾ|| ವಿ.ಎಸ್. ಶ್ರೀಧರ್
ಬೆಲೆ: ರೂ. ೨೦೦/-
ಪ್ರಕಾಶಕರು: ಪತ್ರಿಕೆ ಪ್ರಕಾಶನ, ಬೆಂಗಳೂರು, ೨೦೦೮

ಮಾತು ಮತ್ತು ಅದರಿಂದ ಹೊರಡುವ ಅರ್ಥಗಳ ಸಂಬಂಧಗಳ ನಡುವಣ ಬಿಕ್ಕಟ್ಟುಗಳ ಬಗ್ಗೆ ಭಾರತದ ಅನೇಕ ದಾರ್ಶನಿಕ ಕವಿಗಳು ತಲೆಕೆಡಿಸಿಕೊಂಡಿದ್ದಾರೆ. ಕಾಳಿದಾಸ 'ವಾಗರ್ಥ'ಗಳ ಸಂಬಂಧಗಳ ಬಗ್ಗೆ ಚಿಂತಿಸಿದ್ದಾನೆ. ಅಲ್ಲಮನು 'ಮಾತೆಂಬುದು ಜ್ಯೋತಿರ್ಲಿಂಗ' ಎನ್ನುತ್ತಾನೆ. ಅದೇ ಹೊತ್ತಲ್ಲಿ ಶಬ್ದ ಸೂತಕದ ಮತ್ತು ಮಾತಿನ ಲಜ್ಜೆಯ ಬಗ್ಗೆಯೂ ಮಾತಾಡುತ್ತಾನೆ. ಬಸವಣ್ಣ ನುಡಿಗೆ ನಡೆಯ ಸಂಬಂಧವನ್ನು ಜೋಡಿಸಿ ಚಿಂತಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಲಂಕೇಶ್ ಚಿಂತನೆಯನ್ನು ಗಮನಿಸಬಹುದು. ಲಂಕೇಶ್ ದೇವುಡು, ಮಾಸ್ತಿ, ಕುವೆಂಪು, ಅನಂತಮೂರ್ತಿ, ಕೈಲಾಸಂ, ಅನಕೃ, ರಾಜರತ್ನಂ, ಸುಬ್ಬಣ್ಣ, ಪುತಿನ, ವೀರಕೇಸರಿ - ಮುಂತಾದ ಕನ್ನಡದ ಅನೇಕ ಲೇಖಕರ ಭಾಷೆಯನ್ನು ಎತ್ತಿಕೊಂಡು, ಅವು ಎಲ್ಲೆಲ್ಲಿ ಜೀವಂತವಾಗಿ ಮಿಡಿಯುತ್ತವೆ ಮತ್ತು ಎಲ್ಲೆಲ್ಲಿ ಜಡವಾಗಿವೆ ಎಂಬುದನ್ನು ಚರ್ಚಿಸುತ್ತಾರೆ.

ರಹಮತ್ ತರೀಕೆರೆ

ಮಾನದಂಡವಾಗಿ ಹೇಳುತ್ತಾರೆ. ಬಹುಶಃ ಅಡಿಗರನ್ನು ಬಿಟ್ಟರೆ ಜೀವಂತ ಸಾಹಿತ್ಯ ಸೃಷ್ಟಿಯನ್ನು ತಮ್ಮ ಜೀವನ್ಮರಣದ ಪ್ರಶ್ನೆಯನ್ನಾಗಿ ತೆಗೆದುಕೊಂಡವರಲ್ಲಿ ಲಂಕೇಶ್ ಒಬ್ಬರು. ಅದರಲ್ಲೂ ಪತ್ರಿಕೆಯನ್ನು ಆರಂಭಿಸಿ ಅದರಲ್ಲಿ ಪ್ರತಿವಾರ ಬರೆಯಬೇಕಾದ ಒತ್ತಡಕ್ಕೆ ಸಿಕ್ಕ ಅವರು ಈ ಬಗ್ಗೆ ಬಹಳ ತೀವ್ರವಾಗಿ ಚಿಂತಿಸಿದರು.

ಈ ಮಾತಿನ ಜಿಜ್ಞಾಸೆಯ ಮುಂದುವರಿಕೆಯೆಂದರೆ, ಬರೆಹದಲ್ಲಿ ಜಡವಾದುದು ಮತ್ತು ಜೀವಂತವಾದವುಗಳ ನಡುವಣ ಫರಕನ್ನು ಅರಿಯುವ ಹೊಣೆಗಾರಿಕೆ. ಗೊಡ್ಡು, ನಿರ್ಜೀವತೆ, ಅಪದ್ಧ, ಕೃತಕತೆ, ಯಾಂತ್ರಿಕತೆ ಹಾಗೂ ಮಾಂತ್ರಿಕತೆ, ಸೂಕ್ಷ್ಮತೆ, ಯಕ್ಷಿಣಿ, ಜೀವಂತಿಕೆ –ಇವು ಲಂಕೇಶ್ ತಾವು ಒಪ್ಪದ ಮತ್ತು ಒಪ್ಪುವ ಜಗತ್ತಿನ ಪರಿಭಾಷೆಗಳಂತೆ ಬಳಕೆಯಾಗುತ್ತವೆ. "ಒಂದು ಕೃತಿ ಏಕೆ ಜೀವಂತ ಏಕೆ ಜೀವಂತವಲ್ಲ ಎಂಬುದನ್ನು ಇವತ್ತಿಗೂ ಯಾರಿಗೂ ವಿವರಿಸಲಾಗಿಲ್ಲ" ಎಂದು ಒಂದೆಡೆ ಹೇಳುವುದುಂಟು. ಇದು ವಿಮರ್ಶೆಯ ಜವಾಬ್ದಾರಿಯನ್ನು ಮಾತ್ರವಲ್ಲ, ಅದರ ಅಸಹಾಯಕತೆಯನ್ನೂ ಸೂಚಿಸುವಂತಹ ಮಾತು ಕೂಡ. ಅನಂತಮೂರ್ತಿಯವರ 'ಸಂಸ್ಕಾರ' ಅಥವಾ 'ಘಟಶ್ರಾದ್ಧ'ಗಳನ್ನು ಹೇಗೆ ಅತ್ಯುತ್ತಮ ಬರೆಹವೆಂದು ಚರ್ಚಿಸುವ ಲಂಕೇಶ್, ಅವರ 'ಭಾರತೀಪುರ' 'ಅವಸ್ಥೆ' 'ಭವ' ಮತ್ತು 'ದಿವ್ಯ'ಗಳನ್ನು ಕಟುವಿಮರ್ಶೆಗೆ ಒಳಪಡಿಸುತ್ತಾರೆ.

ಕಾರಂತರ 'ಚೋಮನ ದುಡಿ'ಯ ಮಹತ್ವವನ್ನು ಅವರ ಇನ್ನಿತರ ಕಾದಂಬರಿಗಳ ಜತೆಯಿಟ್ಟು ಚರ್ಚಿಸುವಾಗಲೂ ಅವರಿಗೆ ಯಾವುದು ಜೀವಂತ ಬರೆಹ ಯಾವುದಲ್ಲ ಎಂಬುದೇ ಮುಖ್ಯ ವಿಚಾರವಾಗಿ ಕಾಡುತ್ತದೆ. ಹಾಗೆಂದು ಈ ಜೀವಂತ ಸಾಹಿತ್ಯದ ಹುಡುಕಾಟವು ಕಲೆಯ ವ್ಯಸವನವಾಗುವುದಿಲ್ಲ. ಕಲೆಯ ಜಗತ್ತಿಗೆ ಒಂದು ಸಾಂಸ್ಕೃತಿಕ ಹೊಣೆಗಾರಿಕೆಯೂ ಇದೆಯೆಂಬುದು ಇಲ್ಲಿನ ನಂಬಿಕೆ. ಬಹುಶಃ ಈ ನಂಬಿಕೆಯು ಪತ್ರಿಕೆಯಲ್ಲಿ ಸಂಪಾದಕ ಸ್ಥಾನದಲ್ಲಿದ್ದು ಬರೆದಿರುವ ಇಲ್ಲಿನ ಬರೆಹಗಳಲ್ಲಿ ಸಹಜವಾಗಿಯೆ ಮತ್ತಷ್ಟು ದೃಢಗೊಂಡಿದೆ. ಜೇನ್‌ಆಸ್ಟಿನ್ ಅವರು ರಾಜರ ಬಗ್ಗೆ ಕಾದಂಬರಿ ಬರೆಯಲು ನಿರಾಕರಿಸಿದ್ದನ್ನು ಲಂಕೇಶ್ ಆದರ್ಶವೆಂಬಂತೆ ಉಲ್ಲೇಖಿಸುವುದನ್ನು ಗಮನಿಸಬೇಕು. ಅಡಿಗ, ಕುವೆಂಪು, ಕಾರಂತ ಹಾಗೂ ಲಂಕೇಶ್ ಕನ್ನಡದಲ್ಲಿ ಒಂದು ಬಗೆಯಲ್ಲಿ ವ್ಯವಸ್ಥೆಯನ್ನು ಸದಾ ಅನುಮಾನಿಸುವ ಮತ್ತು ವಿರೋಧಿಸುವ ನಿಲುವಿನವರು. ಪರಸ್ಪರ ಭಿನ್ನಧಾರೆಗಳಿಗೆ ಸೇರಿದ ಅಡಿಗರೂ ಕುವೆಂಪು ಅವರೂ ಲಂಕೇಶ್ ಅವರ ಮೇಲೆ ಏಕಕಾಲಕ್ಕೆ ಪ್ರಭಾವ ಬೀರಲು ಸಾಧ್ಯವಾಗಿರುವುದು ಒಂದು ಸಾಂಸ್ಕೃತಿಕ ಚೋದ್ಯವೆಂದು ಅನಿಸುತ್ತದೆ. ಅವೆರಡೂ ಪ್ರಭಾವಗಳನ್ನು ಸಿಂಥಸೈಜ್ ಮಾಡಿಕೊಂಡಿರುವುದು ಲಂಕೇಶ್ ವ್ಯಕ್ತಿತ್ವದ ವಿಶೇಷತೆಯಾಗಿದೆ. ಇಲ್ಲಿರುವ ಕುವೆಂಪು ಕುರಿತ ಒಂದು ಲೇಖನದ ಹೆಸರು 'ಅಂಕುಶಗಳ ವಿರುದ್ಧ ಸಿಡಿದೆದ್ದ ರಸಋಷಿ'.

ಲೇಖಕರ ಬರೆಹ, ಮಾತು ಮತ್ತು ಕ್ರಿಯೆಗಳು ಆರೋಗ್ಯಕರವಾದ ಸಮಾಜವನ್ನು ರೂಪಿಸಬಲ್ಲವು ಎಂದು ಲಂಕೇಶ್ ನಂಬಿದ್ದವರು. ಎಂತಲೇ "ಕುವೆಂಪು ಅವರ ಮಹಾನ್ ಕಲೆಯ ಜೊತೆಗೆ ಅವರ ಛಲ ಸ್ವಾಭಿಮಾನ ಒಳನೋಟ, ಕನಸು ಮತ್ತು ಆದರ್ಶ ಎಲ್ಲರಿಗೂ ಮಾರ್ಗದರ್ಶನ ಮಾಡಲಿ" ಎಂಬ ಆಶಯದ ಮಾತನ್ನು ಬರೆಯುವುದು ಅವರಿಗೆ ಸಾಧ್ಯವಾಗಿದೆ. ಡಿವಿಜಿಯವರ ಬಗ್ಗೆ ಕಟುವಾಗಿ ಬರೆಯುವ ಲಂಕೇಶ್, "ಡಿವಿಜಿಯವರಲ್ಲಿ ನಮ್ಮ ಜನಜೀವನದ ದುರಂತಮಯ ಸ್ಥಿತಿಯ ಬಗ್ಗೆ ಸಿಟ್ಟಾಗಲಿ ಕಿರಿಕಿರಿಯಾಗಲೀ ಇಲ್ಲ" ಎಂದು ಆಕ್ಷೇಪಣೆ ವ್ಯಕ್ತಪಡಿಸುವುದು ಕೂಡ ಅವರು ನಂಬಿರುವ ಬರೆಹದ ಸಾಂಸ್ಕೃತಿಕ ಜವಾಬ್ದಾರಿಯ ಭಾಗವೇ ಆಗಿದೆ.

– ೪ –

ಸಾಹಿತ್ಯ ಮೌಲ್ಯಮಾಪನ ಮತ್ತು ವ್ಯಕ್ತಿಗಳನ್ನು ವಿಮರ್ಶೆ ಮಾಡುವ ವಿಷಯದಲ್ಲಿ ಅಡಿಗರ ಹಾಗೆ ನಿಷ್ಠುರತೆ ತೋರುವುದನ್ನು ಲಂಕೇಶ್ ಮಾಡುತ್ತಾರೆ. ಇಡೀ ಸಂಕಲನದ ಬರೆಹಗಳಲ್ಲಿ ಇಂತಹ ನಿಷ್ಠುರ ಮೌಲ್ಯಮಾಪನ ಪ್ರಜ್ಞೆ ನಿರತವಾಗಿರುವುದನ್ನು ಗಮನಿಸಬಹುದು. ಪುತಿನ ಕಾವ್ಯದ ಬಗ್ಗೆ ಎಸ್.ಮಂಜುನಾಥ್‌ಗೆ ಬರೆದಿರುವ ಪತ್ರ ಇಲ್ಲವೆ ಕೆ.ವಿ. ಸುಬ್ಬಣ್ಣನವರು ಕುವೆಂಪು ಬಗ್ಗೆ ಬರೆದ ಪುಸ್ತಕ ಕುರಿತು ಬರೆದಿರುವ ಲೇಖನ ಇದಕ್ಕೆ ಸಾಕ್ಷಿ. ಒಂದು ಬಗೆಯ ಜಗಳಗಂಟಿತನ ಅವರ ವ್ಯಕ್ತಿತ್ವದಲ್ಲಿ ಮೊದಲಿಂದಲೂ ಇರುವುದು ಎಲ್ಲರಿಗೂ ಗೊತ್ತಿತ್ತು. ಜತೆ ಪತ್ರಿಕೆಯ ಸಂಪಾದಕರಾಗಿ ಇಲ್ಲವೇ ಸಾಂಸ್ಕೃತಿಕ ನಾಯಕರಾಗಿ ತಮ್ಮನ್ನು ಪರಿಭಾವಿಸಿರುವುದರಿಂದ ಈ ಗುಣಗಳಿಗೆ ಒಂದು ಬಗೆಯ ಅಧಿಕೃತತೆ ಕೂಡ ಒದಗಿದೆ. ಹೀಗಾಗಿ ಇಲ್ಲಿ ಅನೇಕ ನಿಷ್ಠುರ ಪ್ರಶ್ನೆಗಳು ಎದುರುಗೊಳ್ಳಬಹುದು. ಉದಾ.ಗೆ, ಅಡಿಗರಿಗೇಕೆ ಬುದ್ಧ ನೆನಪಾಗುವುದಿಲ್ಲ ಅಥವಾ ಕುವೆಂಪು ಅವರ ಗದ್ಯ ಬರೆಹಗಳು ನೆನಪಾಗುವುದಿಲ್ಲ ಎಂಬುದು. ಮಾಸ್ತಿಯವರಿಗೆ ಜ್ಞಾನಪೀಠ ಬಂದಾಗ ಬರೆದ ಲೇಖನವು ಅನಂತಮೂರ್ತಿ ಅವರಿಗೆ ಪ್ರಶಸ್ತಿ ಬಂದಾಗ ಬರೆದ ಲೇಖನವೂ ಕಟುವಾಗಿವೆ. ಬಹುಶಃ ಅನಂತಮೂರ್ತಿ ಅವರ ಬಗ್ಗೆ ಬಂದಿರುವ ಕಟುವಾದ ಆದರೆ ಅತ್ಯುತ್ತಮ ಒಳನೋಟವುಳ್ಳ ವಿಮರ್ಶೆಗಳು ಲಂಕೇಶ್ ಬರೆದವು ಎಂದು ಕಾಣುತ್ತದೆ. ಇಲ್ಲಿನ ಕಟುತ್ವದಲ್ಲಿ ಸಿಡುಕತನ ಸಿನಿಕತನ ಇದೆ; ಅದರ ವ್ಯಕ್ತಿಗಳನ್ನು ಕುರಿತ ಬಹುತೇಕ ಲೇಖನಗಳಲ್ಲಿ ಆಕ್ರಮಣಕಾರಿ ಗುಣ ಪ್ರಕಟವಾಗಿದೆ. ಆದರೆ ಈ ಮಿತಿಯಲ್ಲೇ ಕೆಲವು ನಿಷ್ಠುರ ಸತ್ಯಗಳನ್ನು ಹೇಳುವುದು ಕೂಡ ಅವರಿಗೆ ಸಾಧ್ಯವಾಗಿದೆ.

ಕಾರಂತರ 'ಚೋಮನ ದುಡಿ'ಯ ಮಹತ್ವವನ್ನು ಅವರ ಇನ್ನಿತರ ಕಾದಂಬರಿಗಳ ಜತೆಯಿಟ್ಟು ಚರ್ಚಿಸುವಾಗಲೂ ಅವರಿಗೆ ಯಾವುದು ಜೀವಂತ ಬರೆಹ ಯಾವುದಲ್ಲ ಎಂಬುದೇ ಮುಖ್ಯ ವಿಚಾರವಾಗಿ ಕಾಡುತ್ತದೆ. ಹಾಗೆಂದು ಈ ಜೀವಂತ ಸಾಹಿತ್ಯದ ಹುಡುಕಾಟವು ಕಲೆಯ ವ್ಯಸನವಾಗುವುದಿಲ್ಲ. ಕಲೆಯ ಜಗತ್ತಿಗೆ ಒಂದು ಸಾಂಸ್ಕೃತಿಕ ಹೊಣೆಗಾರಿಕೆಯೂ ಇದೆಯೆಂಬುದು ಇಲ್ಲಿನ ನಂಬಿಕೆ. ಬಹುಶಃ ಈ ನಂಬಿಕೆಯು ಪತ್ರಿಕೆಯಲ್ಲಿ ಸಂಪಾದಕ ಸ್ಥಾನದಲ್ಲಿದ್ದು ಬರೆದಿರುವ ಇಲ್ಲಿನ ಬರೆಹಗಳಲ್ಲಿ ಸಹಜವಾಗಿಯೆ ಮತ್ತಷ್ಟು ದೃಢಗೊಂಡಿದೆ. ಜೇನ್‌ಆಸ್ಟಿನ್ ಅವರು ರಾಜರ ಬಗ್ಗೆ ಕಾದಂಬರಿ ಬರೆಯಲು ನಿರಾಕರಿಸಿದ್ದನ್ನು ಲಂಕೇಶ್ ಆದರ್ಶವೆಂಬಂತೆ ಉಲ್ಲೇಖಿಸುವುದನ್ನು ಗಮನಿಸಬೇಕು. ಅಡಿಗ, ಕುವೆಂಪು, ಕಾರಂತ ಹಾಗೂ ಲಂಕೇಶ್ ಕನ್ನಡದಲ್ಲಿ ಒಂದು ಬಗೆಯಲ್ಲಿ ವ್ಯವಸ್ಥೆಯನ್ನು ಸದಾ ಅನುಮಾನಿಸುವ ಮತ್ತು ವಿರೋಧಿಸುವ ನಿಲುವಿನವರು.

ಅಡಿಗರ ಕಾವ್ಯದ ಬಗ್ಗೆ ಕೆಲವು ಕಡೆ ಆದರದಿಂದ ಬರೆಯುವ ಲಂಕೇಶ್ ಅವರ ಆತ್ಮಕತೆಯ ವಿಮರ್ಶೆಯಲ್ಲಿ ಅಡಿಗರ ಮನಸ್ಸು ಹೇಗೆ ಜಾತೀಯತೆಯದು ಮತ್ತು ಕಂದಾಚಾರಿ ಮನಸ್ಸು ಎಂದು ವಿಶ್ಲೇಷಿಸುತ್ತಾರೆ. ಕಾರಂತರು ಎಲ್ಲೆಲ್ಲಿ ಬೋರ್ ಹೊಡೆಸುತ್ತಾರೆಂದು ಸೂಚಿಸುತ್ತಾರೆ. ಬಿಳಿಗಿರಿ ರಾಮಾನುಜನ್ ದೊಡ್ಡಕವಿಗಳಲ್ಲ. ಆದರೆ ಅವರು ತಮ್ಮ ಜಾಣ್ಮೆ ಕುತೂಹಲ ಜೀವಂತವಾದ ಚಿತ್ರಗಳ ಮೂಲಕ ನಮ್ಮ ಒಳ್ಳೆಯ ಕವಿಗಳು ಎಂದು ತೋರಿಸಿಕೊಡುತ್ತಾರೆ. ಕುವೆಂಪು ಅವರ ಸಂಸ್ಕೃತ ಪ್ರೇಮ, ಅಸಹಜವೆನಿಸುವ ಶೈಲಿ, ಅನಿಸಿಕೆಯನ್ನು ಪರಿಣಾಮಕಾರಿಯಾಗಿ ಹೇಳಲಾಗದ ನುಡಿಗಟ್ಟು ಕುರಿತು ಟೀಕಿಸುವ ಅವರು, ಕಡೆಗೆ ಕುವೆಂಪು ಅವರಿಗಿಂತ ಚೆನ್ನಾಗಿ ಬರೆದ ಕವಿಗಳಿರಬಹುದು. ಕತೆಗಾರರಿರಬಹುದು. ಆದರೆ ಅವರನ್ನು ಮೀರಿಸಿದ ಪ್ರತಿಭೆಯಿಲ್ಲ ಎಂದು ಸ್ಪಷ್ಟವಾಗಿ ನುಡಿಯುತ್ತಾರೆ. ತನ್ನ ಹಿರಿಯ ಮತ್ತು ಸಮಕಾಲೀನ ಬರೆಹಗಾರರ ಜತೆ ಒಬ್ಬ ಸೃಜನಶೀಲ ಲೇಖಕ ಮಾಡುವ ಗುದ್ದಾಟಗಳ ಅನೇಕ ವರಸೆಗಳು ಇಲ್ಲಿ ನೋಡಲು ಸಿಗುತ್ತವೆ.

ಇಡೀ ಕೃತಿಯಲ್ಲಿ ಲಂಕೇಶ್ ಕಟ್ಟಿಕೊಡುವ ಪರಂಪರೆಯ ಕಲ್ಪನೆಯು ೨೦ನೇ ಶತಮಾನದ ಕನ್ನಡ ಸಾಹಿತ್ಯದ ಅತ್ಯುತ್ತಮ ಕಲ್ಪನೆಗಳಲ್ಲಿ ಒಂದಾಗಿದೆ. ಪಶ್ಚಿಮದ ಲೇಖಕರಾದ ಕಾಮೂ ಪಾಸ್ಟರ್‌ನಾಕ್, ಟಾಲಸ್ಟಾಯ್, ಎಲಿಯಟ್ ಯೇಟ್ಸ್, ಇಲ್ಲಿ ಚರ್ಚೆಗೆ ಒಳಗಾಗುತ್ತಾರೆ. ಹಿರಿಯ ಲೇಖಕರಾದ ರಾಜರತ್ನಂ ಬಿಎಂಶ್ರೀ, ಕುವೆಂಪು, ಮಾಸ್ತಿ, ಬೇಂದ್ರೆ, ಅಡಿಗರ ಚರ್ಚೆಯಿದೆ. ಸಮಕಾಲೀನ ಲೇಖಕರಾದ ಅನಂತಮೂರ್ತಿ, ಎ.ಕೆ.ರಾಮಾನುಜನ್, ವೈಯೆನ್ಕೆ, ಬಿಳಿಗಿರಿ ಅವರನ್ನು ಕುರಿತ ಚರ್ಚೆಯಿದೆ. ಕಿರಿಯ ಲೇಖಕರಾದ ವೈದೇಹಿ, ಸಾರಾ, ಅವರ ಚರ್ಚೆಯಿದೆ. ಅಪಾರವಾದ ಓದಿನ ಅಭ್ಯಾಸವಿದ್ದ ಲಂಕೇಶ್ ಸಾಯುವ ತನಕ ಓದಿದವರು. ತಮ್ಮ ಓದನ್ನು ಅವರು ಸೃಜನಶೀಲ ಲೇಖಕರಾಗಿ ಮಾಡುತ್ತಾರೆ. ಇದರ ಜತೆಗೆ ಪತ್ರಿಕೆಯ ಓದುಗರಿಗೆ ಸಾಹಿತ್ಯದ ಪರಂಪರೆಯನ್ನು ಕಟ್ಟಿಕೊಡುವುದು ಕೂಡ ಅವರ ಉದ್ದೇಶವಾಗಿದೆ. ಆಂಗ್ಲ ಅಧ್ಯಾಪಕರಾಗಿದ್ದು ಕನ್ನಡದಲ್ಲಿ ಬರೆಯುವ ಎಲ್ಲ ಲೇಖಕರಲ್ಲಿ ಒಂದು ಬಗೆಯ ತೌಲನಿಕ ಜಿಗಿದಾಟವಿರುತ್ತದೆ.

ಅದರಲ್ಲೂ ತನ್ನ ಸೃಜನಶೀಲ ಪ್ರೇರಣೆಯನ್ನು ಜಗತ್ತಿನ ಅನೇಕ ಭಾಗದ ಬರೆಹಗಾರರಿಂದ ಪಡೆಯುವ ಲೇಖಕರಲ್ಲಿ ಈ ಜಿಗಿದಾಟಕ್ಕೆ ವಿದ್ವತ್ತಿನ ಪ್ರದರ್ಶನಕಿಂತಲೂ ಬೇರೆಯಾದ ಆಂತರಿಕ ತುರ್ತು ಇರುತ್ತದೆ. ಲಂಕೇಶರ ಬರೆಹದಲ್ಲಿರುವ ತೌಲನಿಕ ಪ್ರಜ್ಞೆ ಈ ಬಗೆಯದು. ಅಡಿಗ ಎಲಿಯಟ್, ಕುವೆಂಪು, ಮಾಸ್ತಿ, ಅನಕೃ, ಮಾರ್ಕ್ಸ್ ಶೇಕ್ಸ್‌ಪಿಯರ್ ಹೀಗೆ ಅನೇಕ ಲೇಖಕರನ್ನು ಚಿಂತಕರನ್ನು ಜತೆಯಲ್ಲಿಟ್ಟು ಅವರು ಚಿಂತನೆ ಮಾಡುತ್ತಾರೆ. 'ಸಾಧನಕೇರಿ'

ಒಂದು ಬೀದಿಯ ಮೂಲಕ ತನ್ನನ್ನು ಗುರುತಿಸಿ ಕೊಂಡ ಬೇಂದ್ರೆ ಹೇಗೆ ವಿಶ್ವದ ಜತೆ ಸಂಬಂಧವಿಟ್ಟು ಕೊಂಡವರು ಎಂಬ ಚರ್ಚೆಯನ್ನು ಗಮನಿಸಬಹುದು. ಜಗತ್ತಿನ ಲೇಖಕರ ಚರ್ಚೆಯಲ್ಲಿ ಕನ್ನಡ ಲೇಖಕರನ್ನು, ಕನ್ನಡ ಲೇಖಕರ ಚರ್ಚೆಯಲ್ಲಿ ಜಗತ್ತಿನ ಲೇಖಕರನ್ನು ತರುತ್ತಾರೆ. ಹೀಗಾಗಿ ಲಂಕೇಶ್ ಅಡಿಗರ ಗಾಢ ಪ್ರಭಾವ ವಿದ್ದರೂ ಕುವೆಂಪು ಪರಂಪರೆಯ ವಾರಸುದಾರರು, ಬಸವಣ್ಣನನ್ನು ಒಳಗೆ ಸಾಂಸ್ಕೃತಿಕ ನಾಯಕ ಎಂದು ಒಪ್ಪಿಕೊಂಡರೂ, ಮಾತಿನ ಬಗ್ಗೆ ಬಂದಾಗ ಅಲ್ಲಮನ ಅನುಯಾಯಿ ಎಂಬುದು ಅನುಭವಕ್ಕೆ ಬರತೊಡಗುತ್ತದೆ. "ಇಲ್ಲಿಯ ಪುರೋಹಿತ ಪ್ರಜ್ಞೆಯ ಅವಾಂತರ ಮತ್ತು ಅದರಿಂದ ಸಂಭವಿಸಿರುವ ದುರಂತ ನೋಡಿದವರು ಇಡೀ ಜಗತ್ತಿನ ಶ್ರೇಷ್ಠ ಚಿಂತಕರ ಕವಿಗಳ ವಾರಸುದಾರರಾಗುವುದು ಉತ್ತಮ" ಎಂಬ ಮಾತನ್ನು ಗಮನಿಸಬೇಕು.

ಇಲ್ಲಿ ಕನ್ನಡಕ್ಕೆ ಒಂದು ಪರಂಪರೆಯ ಹಾಗೆಯೇ ಒಂದು ವಿಮರ್ಶೆಯ ಭಾಷೆಯನ್ನು ಕಟ್ಟಿಕೊಡುವ ಯತ್ನವಿದೆ. ಲಂಕೇಶರದು ರೂಪಕಗಳುಳ್ಳ ಕಥನದ ಭಾಷೆ. ವ್ಯಂಗ್ಯ ಕಟಕಿ ತಮಾಶೆ ದರ್ಪಗಳಿಂದ ಕೂಡಿದ ಭಾಷೆ. ವೈಯೆನ್ಕೆ ಮೇಲಿನ ಲೇಖನವು "ಮೂವತ್ತು ವರ್ಷದ ಹಿಂದೆ ನಾನು ಬೆಂಗಳೂರಿಗೆ ಬಂದಾಗ ಸಿಕ್ಕವ್ಯಕ್ತಿ ವೈಯೆನ್ಕೆ. ಒಬ್ಬ ವ್ಯಕ್ತಿ ಕುಡಿದರೂ ಸಂಪನ್ನನಾಗಿರಬಹುದು. ಪೋಲಿಯಾದರೂ ಕವಿಯಾಗಿರಬಹುದು ಎಂದು ನನಗೆ ಗೊತ್ತಾದದ್ದೇ ವೈಯೆನ್ಕೆ ಮೂಲಕ" ಎಂದು ಆರಂಭವಾಗುತ್ತದೆ. ಅನಂತಮೂರ್ತಿಯವರ 'ಪೂರ್ವಾಪರ' ಪುಸ್ತಕದ ಭಾಷೆಯನ್ನು ಕುರಿತು "ನರ್ತನ ಬಾರದ ಅಥವಾ ನರ್ತಿಸಲು ಇಷ್ಟವಿಲ್ಲದ ಹುಡುಗಿ ಆಕಳಿಸುತ್ತ ಮೈಮುರಿಯುತ್ತ ನರ್ತಿಸಿದರೆ ಹೇಗಿರುತ್ತದೆಯೊ ಹಾಗಿದೆ ಇಲ್ಲಿನ ಬರವಣಿಗೆ" ಎನ್ನುತ್ತಾರೆ. ಕಾರಂತರ ಕಾದಂಬರಿಗಳ ಮೇಲೆ ಬುದ್ಧಿವಂತನೊಬ್ಬನ ಚಂಡಮದ್ದಳೆಯ ಪ್ರಸಂಗಗಳಂತೆ ಎಂದು ಹೇಳುತ್ತಾರೆ.

ಲಂಕೇಶ್ ಮಾಸ್ತಿಯನ್ನು ಕುರಿತು ಅವರು ಕೊಡುವ ರೂಪಕ ಬಂಡೆಸಂದಿನ ಮಣ್ಣಿನಲ್ಲಿ ಬೆಳೆದ ಮಾವಿನ ಮರ ಎಂದು. ಇದು ಕೋಲಾರದ ಪ್ರಾಕೃತಿಕ ಸನ್ನಿವೇಶವನ್ನೂ ಸೂಚಿಸಬಹುದು. ಮಾಸ್ತಿಯವರಿಗೆ ಮಣ್ಣಿನ ಜತೆ ಸಂಬಂಧವಿತ್ತೆಂದು ಹೇಳುತ್ತಿದ್ದರೂ, ಅವರ ಪ್ರತಿಭೆ ಮಲೆನಾಡಿನ ಕಾಡಿನ ಮರದಂತೆ ಹೆಮ್ಮರವಾಗಲು ಸಾಧ್ಯವಿಲ್ಲ ಎಂಬುದನ್ನೂ ಸೂಚಿಸುತ್ತಿರಬಹುದು. ಇಲ್ಲಿನ ಬರೆಹಗಳಲ್ಲಿ ಸಾಹಿತ್ಯವನ್ನು ಕುರಿತು ಕೇವಲ ವಿಮರ್ಶಕರೊಬ್ಬರ ಅಭಿಪ್ರಾಯಗಳ ಜತೆಯಲ್ಲಿ, ಕತೆ ಕಾದಂಬರಿ ಕಾವ್ಯ ಬರೆಯುವ ಲೇಖಕನೊಬ್ಬನ ಬರವಣಿಗೆ ಮಾಡುವಾಗ ಅನುಭವಿಸುವ ಬಿಕ್ಕಟ್ಟುಗಳನ್ನು ಹಂಚಿಕೊಳ್ಳುವ ಆಯಾಮವೂ ಇದೆ. ಪ್ರಬಂಧ ಪ್ರಕಾರವನ್ನು ವಿಮರ್ಶೆ ಅಂಕಣ ವ್ಯಕ್ತಿಚಿತ್ರ ಎಲ್ಲ ಬಗೆಯಲ್ಲಿ ದುಡಿಸಿಕೊಳ್ಳುವ ಮೂಲಕ ಲಂಕೇಶ್ ಇಲ್ಲಿ ಹೊಸದೊಂದು ಪ್ರಕಾರವನ್ನೇ ರೂಪಿಸುತ್ತಿದ್ದಾರೆ. ಆತ್ಮಚರಿತ್ರಾತ್ಮಕತೆ ರೂಪಕ ಭಾಷೆ ಜೀವನ ಚಿತ್ರಣ, ವ್ಯಕ್ತಿಚಿತ್ರಗಳು ಸಾಹಿತ್ಯಚಿಂತನೆ, ಕೃತಿ ವಿಮರ್ಶೆ, ಸೌಂದರ್ಯ ಮೀಮಾಂಸೆ, ಸಾಮಾಜಿಕ ಚಿಂತನೆಗಳೆಲ್ಲವೂ ಸೇರಿದ ಒಂದು ಕಥನವನ್ನು ಅವರು ಇಲ್ಲಿ ರೂಪಿಸುತ್ತಿದ್ದಾರೆ. 'ಗುಬ್ಬಚ್ಚಿಯ ಗೂಡು' ಇಲ್ಲಿನ ಶ್ರೇಷ್ಠ ಲಲಿತ ಪ್ರಬಂಧದ ಮಾದರಿಯಲ್ಲಿರುವ ಸಾಹಿತ್ಯ ಚಿಂತನೆಯಾಗಿದೆ. ಇಲ್ಲಿನ ಅನಂತಮೂರ್ತಿ ಮಾಸ್ತಿ ಬಿಳಿಗಿರಿ ಅಡಿಗ ಕುವೆಂಪು ಭೈರಪ್ಪ ಪುತಿನ ಅವರನ್ನು ಕುರಿತ ಬರೆಹಗಳು ಅತ್ಯುತ್ತಮವಾಗಿವೆ.

ಒಂದು ಬೀದಿಯ ಮೂಲಕ ತನ್ನನ್ನು ಗುರುತಿಸಿಕೊಂಡ ಬೇಂದ್ರೆ ಹೇಗೆ ವಿಶ್ವದ ಜತೆ ಸಂಬಂಧವಿಟ್ಟುಕೊಂಡವರು ಎಂಬ ಚರ್ಚೆಯನ್ನು ಗಮನಿಸಬಹುದು. ಜಗತ್ತಿನ ಲೇಖಕರ ಚರ್ಚೆಯಲ್ಲಿ ಕನ್ನಡ ಲೇಖಕರನ್ನು, ಕನ್ನಡ ಲೇಖಕರ ಚರ್ಚೆಯಲ್ಲಿ ಜಗತ್ತಿನ ಲೇಖಕರನ್ನು ತರುತ್ತಾರೆ. ಹೀಗಾಗಿ ಲಂಕೇಶ್ ಅಡಿಗರ ಗಾಢ ಪ್ರಭಾವವಿದ್ದರೂ ಕುವೆಂಪು ಪರಂಪರೆಯ ವಾರಸುದಾರರು, ಬಸವಣ್ಣನನ್ನು ಒಳಗೆ ಸಾಂಸ್ಕೃತಿಕ ನಾಯಕ ಎಂದು ಒಪ್ಪಿ ಕೊಂಡರೂ, ಮಾತಿನ ಬಗ್ಗೆ ಬಂದಾಗ ಅಲ್ಲಮನ ಅನುಯಾಯಿ ಎಂಬುದು ಅನುಭವಕ್ಕೆ ಬರತೊಡಗುತ್ತದೆ. "ಇಲ್ಲಿಯ ಪುರೋಹಿತ ಪ್ರಜ್ಞೆಯ ಅವಾಂತರ ಮತ್ತು ಅದರಿಂದ ಸಂಭವಿಸಿರುವ ದುರಂತ ನೋಡಿದವರು ಇಡೀ ಜಗತ್ತಿನ ಶ್ರೇಷ್ಠ ಚಿಂತಕರ ಕವಿಗಳ ವಾರಸುದಾರರಾಗುವುದು ಉತ್ತಮ" ಎಂಬ ಮಾತನ್ನು ಗಮನಿಸಬೇಕು.

ಆದರೆ ಲಂಕೇಶರ ವಿಮರ್ಶೆಗಳಲ್ಲಿ ಒಂದು ಕನ್ಸಿಸ್ಟನ್ಸಿ ಇಲ್ಲ. ಅಡಿಗರನ್ನು ಕುರಿತ ನಿಲುವು ನಾಟಕೀಯವೆಂಬಂತೆ ಬದಲಾಗುವುದನ್ನು ಗಮನಿಸಬೇಕು. ಇದಕ್ಕೆ ಕಾರಣ ಲಂಕೇಶ್ ಮೂಡಿಯಾಗಿ ಲಹರಿಯಲ್ಲಿ ಬರೆಯುವುದು. ಬಯ್ದು ಬುದ್ಧಿ ಹೇಳುವ ಶೈಲಿಯಲ್ಲಿ ಬರೆಯುವುದು. ಮೂರ್ಖ ಪೆದ್ದ ಹುಂಬ ದಡ್ಡ ಎಂಬ ನಿಂದನಾ ಪರಿಭಾಷೆ ಬಳಸುವುದನ್ನು ಅವರ ಪತ್ರಿಕಾ ಬರೆಹದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದಾದರೂ, ಸಾಹಿತ್ಯ ವಿಮರ್ಶೆಯ ಮಟ್ಟಿಗೆ ಅದು ಅಪ್ರಜಾಪ್ರಭುತ್ವೀಯ ಪರಿಭಾಷೆಯೇ ಆಗಿದೆ. ತಾತ್ವಿಕ ಕಾರಣದಿಂದ ಬರುವ ನಿಷ್ಠುರತೆಗೂ ವ್ಯಕ್ತಿನಿಂದೆಗೂ ನಡುವಣ ಗೆರೆಗಳು ಅನೇಕ ಕಡೆ ಅಳಿಸಿಹೋಗುತ್ತವೆ. "ರಾಜಕಾರಣಿಗಳ ಕಿವಿ ಹಿಂಡಬಲ್ಲ ನನಗೆ ಈ ಕವಿಗಳ ತಂಟೆಗೆ ಹೋಗಲು ಬೇಸರ" ಎಂಬ ಮಾತಲ್ಲಿರುವ ಮೇಷ್ಟ್ರು ಎಂದು ಕರೆಸಿಕೊಳ್ಳುತ್ತಿದ್ದ ಲಂಕೇಶರ ಯಜಮಾನಿಕೆಯ ಗುಣವನ್ನು ಗಮನಿಸಬೇಕು. ಹೆಚ್ಚಿನ ಲೇಖನಗಳಲ್ಲಿ ಒಂದು ಬಗೆಯ ಅಸ್ವಸ್ಥತೆ ಅಸಹನೆಯ ಮನಸ್ಸು ಪ್ರಕಟವಾಗುತ್ತ ಹೋಗಿದೆ.

ಇದು ಅವರ ನೈತಿಕ ವ್ಯಕ್ತಿತ್ವದದಿಂದ ಬಂದಿದ್ದೊ, ಕನ್ನಡ ಸಾಹಿತ್ಯ ಪರಿಸರವನ್ನು ಕಂಡ ಕೋಪವೊ, ಭಿನ್ನ ಮತಗಳನ್ನು ಆಲಿಸುವ ಕಿವಿಯಿರದ ಅಸಹನೆಯೊ ಹೇಳುವುದು ಕಷ್ಟ. ಜಾಗೃತ ಸಾಹಿತ್ಯ ಸಮ್ಮೇಳನ ಸಂದರ್ಭದ ಹೊತ್ತಿನಲ್ಲಿ ಅವರ ನಿಲುವನ್ನು ಒಪ್ಪದವರ ಬಗ್ಗೆ ಅವರ ಅಸಹನೆ ಗಮನಿಸಬೇಕು. "ಗೆಳೆಯರೊಬ್ಬರು ಜಗತ್ತಿನ ಒತ್ತಾಯಕ್ಕೆಂಬಂತೆ ಒಂದು ದಿನ ಬಂದು ಕಲಾಕ್ಷೇತ್ರದ ಜಗುಲಿಯ ಮೇಲೆ ಕೂತು ಬಾಯಿಗೆ ಬಂದದ್ದು ಒದರಿ ಹೋಗಿದ್ದರು" ಎಂದು (ಬಹುಶಃ ತೇಜಸ್ವಿಯವರನ್ನು ಕುರಿತು) ಕಾಮೆಂಟ್ ಮಾಡುತ್ತಾರೆ. ಬ್ರಾಹ್ಮಣರ ಲೇಖಕ ವಿರುದ್ಧ ಜಾತಿವಿನಾಶ ಸಮ್ಮೇಳನ ಏರ್ಪಡಿಸಿದ್ದ ತೇಜಸ್ವಿಯವರಿಗೆ ಬಹುಶಃ ಇದು ಇನ್ನೊಂದು ಬ್ರಾಹ್ಮಣರ ಸಮ್ಮೇಳನ ಅನಿಸಿರಬಹುದು ಎಂಬುದನ್ನು ಲಂಕೇಶ್ ಅರ್ಥ ಮಾಡಿಕೊಳ್ಳುವುದಿಲ್ಲ. ಕೆ.ವಿ. ಸುಬ್ಬಣ್ಣನವರು ಈ ಸಮ್ಮೇಳನದಲ್ಲಿ 'ಶ್ರೇಷ್ಠತೆಯ ವ್ಯಸನ' ಎಂಬ ಅದ್ಭುತವಾದ ಚಿಂತನಪರ ಭಾಷಣ ಮಾಡಿದರು. ಅದು ಆ ಬಿಕ್ಕಟ್ಟಿನಲ್ಲಿ ಒಬ್ಬ ಸಾಂಸ್ಕೃತಿಕ ಹೊಣೆಗಾರಿಕೆ ಇರುವ ಚಿಂತಕ ತೆಗೆದುಕೊಳ್ಳುವ ಆರೋಗ್ಯಕರ ನಿಲುವಿನ ಭಾಗವಾಗಿತ್ತು. ಇದಕ್ಕೆ ಲಂಕೇಶರು ತಿಕ್ಕಲು ನಿಲುವು ಎನ್ನುತ್ತಾರೆ.

ಇದನ್ನು ಒಪ್ಪಲು ಸಾಧ್ಯವಿಲ್ಲ. ಸಾಹಿತ್ಯವನ್ನು ಸಾಹಿತಿಯ ಬಗೆಗಿನ ವ್ಯಕ್ತಿನಿಷ್ಠೆಯಿಂದ ಹೊಗಳುವವರನ್ನು ವಂದಿಮಾಗಧರು ಎಂದು ಟೀಕಿಸುವ ಲಂಕೇಶ್ ಸ್ವತಃ ಅನೇಕ ವಂದಿಮಾಗಧರನ್ನು ಕಟ್ಟಿಕೊಂಡಿದ್ದರು. ಅಡಿಗರು ಆತ್ಮಚರಿತ್ರೆಯಲ್ಲಿ ತಾವು ಮಾಡಿದ ಅನೇಕ ಸಹಾಯಗಳನ್ನು ನೆನೆದಿಲ್ಲ ಎಂಬ ಕಾರಣಕ್ಕಾಗಿಯೇ ಅವರು ಆಕ್ರೋಶಗೊಂಡಿದ್ದಾರೆ ಎಂದು ಸೂಕ್ಷ್ಮವಾಗಿ ಓದುವ ಯಾರಿಗಾದರೂ ಹೊಳೆಯುತ್ತದೆ. ಪಶ್ಚಿಮದ ವಸಾಹತುಶಾಹಿ ಕಾಲಘಟ್ಟದ ಬಗ್ಗೆ ಟೀಕಾಕಾರರನ್ನು ತರಾಟೆಗೆ ತೆಗೆದುಕೊಳ್ಳುವ ಲಂಕೇಶ್ ಅನೇಕ ಸಲ ಅದರ ಬಗ್ಗೆ ಕಾಮನ್‌ಸೆನ್ಸಿನಿಂದ ಬರೆಯುತಿದ್ದಾರೆಯೇ ಹೊರತು ಈ ಬಗ್ಗೆ ಬಂದಿರುವ ಚಿಂತನೆಗಳ ಅಧ್ಯಯನದಿಂದಲ್ಲ ಎಂದು ಅನಿಸುತ್ತದೆ. ಪಾಂಡಿತ್ಯದ ಬಗ್ಗೆ ಅವರಿಗಿದ್ದ ಗುಮಾನಿಯ ಕಾರಣದಿಂದಲೊ ಪತ್ರಿಕಾ ಬರೆಹದ ಒತ್ತಡದಿಂದಲೊ ಹೀಗೆ ಆಗಿರಬಹುದು.

ಮಾತಿನಲ್ಲಿ ಬರೆಹ ಮೂಡಬೇಕು. ಆದರೆ ಮಾತು ಇದಕ್ಕೆ ಪೂರಾ ಸಹಕರಿಸುವುದಿಲ್ಲ. ಮಾತಾಡುವುದನ್ನು 'ನರಕ' ಎಂದು ಹಿಂಜರಿಯುತ್ತಿದ್ದ ಲಂಕೇಶ್, "ಅನುಭವವು ಮಾತಲ್ಲಿ ಹೇಳತೊಡಗಿದೊಡನೆ ಅದರ ಒಳದ್ರವ್ಯ ಕಮ್ಮಿಯಾಗುತ್ತ ಹೋಗುತ್ತದೆ." ಎಂದು ಭಾವಿಸಿದವರು. ಇದು ಬರೆಹ ಮತ್ತು ಬದುಕಿನ ವಾಸ್ತವದ ನಡುವೆ ಇರುವ ಬಿಕ್ಕಟ್ಟು ಕೂಡ. ಭಾರತ ಭವನದಲ್ಲಿ ಕವಿಗಳ ಜತೆ ಸಂಭ್ರಮದಲ್ಲಿ ಇರುವಾಗಲೇ ಅವರಿಗೆ ಮಧ್ಯಪ್ರದೇಶದ ಬಡತನ ನೆನಪಾಗುತ್ತದೆ. ಕಾರಂತರು ಜೇಲಲ್ಲಿರುವುದು ನೆನಪಾಗುತ್ತದೆ. ವಿಶ್ವಕನ್ನಡ ಸಮ್ಮೇಳನದ ಸಂಭ್ರಮದಲ್ಲಿ ಇರುವಾಗಲೇ ಕಾರಂತರು ಆಡಿದ ಜವಾಬ್ದಾರಿಯಿಲ್ಲದ ಮಾತು ನೆನಪಾಗುತ್ತದೆ. ಗೆಳೆಯ ರಾಮದಾಸ್ ಜೇಲಲ್ಲಿ ಇರುವುದು ನೆನಪಾಗುತ್ತದೆ.

"ಮನುಷ್ಯರ ಬಾಳಿನಲ್ಲಿ ದುರಂತ ಪ್ರಜ್ಞೆಯ ಅರಿವಿದ್ದ ಲೇಖಕ ಹತಾಶವಾಗುವುದರಲ್ಲಿ ಒಟ್ಟಾರೆಯಾಗಿ ದುರಂತಮಯವಾಗಿ ಕೊನೆಗೊಳ್ಳುವುದರಲ್ಲಿ ಇದರಲ್ಲೇ ನಮ್ಮ ಕಾವ್ಯದ ಸೆಲೆ ಸ್ಫೂರ್ತಿಯೆಲ್ಲ ಅಡಗಿರುವುದನ್ನು ಕಂಡು ಚಕಿತನಾಗಿದ್ದೇನೆ" ಇದು ಲಂಕೇಶರ ಜೀವನ ದೃಷ್ಟಿಯ ಒಂದು ಮಾತು. ಇದೊಂದು ಬಗೆಯಲ್ಲಿ ದಾರ್ಶನಿಕ ನಿಲುವು ಕೂಡ. ಇದಕ್ಕೆ ತಕ್ಕಂತೆ ಡಿಆರ್, ವೈಯೆನ್ಕೆ, ಶರ್ಮ, ಅಡಿಗ, ಕುವೆಂಪು, ಮಾಸ್ತಿ, ಕಾರಂತ, ಬಿಳಿಗಿರಿ, ಆಲನಹಳ್ಳಿ ಮುಂತಾದ ಲೇಖಕರ ಸಾವಿನ ಕುರಿತ ಬರೆಹಗಳೂ ಇವೆ. ಸಾವಿನ ಪ್ರಸಂಗವನ್ನು ಇಟ್ಟುಕೊಂಡು ಬರೆದ ಬರೆಹಗಳಿಗೆ ಸ್ವತಃ ಸಾವಿನತ್ತ ಚಲಿಸುತ್ತಿರುವ ಅನುಭವದ ಎಳೆಯಿಂದಲೂ ಕೂಡಿರುವುದರಿಂದ, ಈ ದಾರ್ಶನಿಕ ಆಯಾಮಕ್ಕೆ ಮತ್ತಷ್ಟು ಆಳ ಒದಗಿದೆ. □

ಅಂಗವಿಕಲರಿಗೆ ಅವಕಾಶ ನೀಡಿ, ಅದ್ಭುತ ಸಾಧನೆ ಮಾಡಿ

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿವರ್ಷ ಡಿಸೆಂಬರ್ ೩ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು:

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು:-

* ಶ್ರವಣ ಮತ್ತು ದೃಷ್ಟಿದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನ.
* ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
* ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ
* ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ
* "ಆಧಾರ" ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ
* ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ
* ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ
* ಬುದ್ಧಿ ಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ
* ಅಂಗವಿಕಲರಿಗೆ ಶೇ. ೫ ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ
* ಸಾಧನ ಸಲಕರಣೆಗಳ ಹಾಗೂ ತ್ರಿಚಕ್ರವಾಹನಗಳ ಉಚಿತ ಪೂರೈಕೆ
* ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್

ಕರ್ನಾಟಕ ವಾರ್ತೆ
Karnataka Information

ಬೆಲೆ ಏರಿಕೆಯ ಸುಳಿಯಲ್ಲಿ

(೧೫ನೇ ಪುಟದಿಂದ)

೨೦೦೪ರಲ್ಲಿ ಲೋಕಸಭೆ ವಿಸರ್ಜನೆಯಾದ್ದರಿಂದ ಕಾಯ್ದೆ ಜಾರಿಯಾಗಲಿಲ್ಲ. ಈ ಕ್ರಮವನ್ನು ಯು.ಪಿ.ಎ ಸರ್ಕಾರ ಆದೇಶದ ಮೂಲಕ ಸಾಧಿಸಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಈ ಕಾನೂನುಗಳ ಲಾಭ ಪಡೆಯುತ್ತಿರುವ ವರು ಬಹುರಾಷ್ಟ್ರೀಯ ಕಂಪನಿಗಳು, ಕಾರ್ಪೋರೇಟ್ ಉದ್ಯಮಿಗಳು, ರಿಲೈಯನ್ಸ್, ಫುಡ್ ವರ್ಲ್ಡ್, ಬಿಗ್ ಬಜಾರ್, ಬಿರ್ಲಾ ಕಂಪನಿಯ ಮೋರ್, ವಾಲ್ ಮಾರ್ಟ್ ಮುಂತಾದ ಭಾರಿ ವ್ಯಾಪಾರಿ ಸಂಸ್ಥೆಗಳು ಮತ್ತು ಕೃಷಿ ಮಾರುಕಟ್ಟೆಯ ಕಂಪನಿಗಳೇ ಆಗಿವೆ. ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಾಲ್ ಮಾರ್ಟ್‌ಗಳಂತಹ ಭಾರಿ ಉದ್ಯಮಿಗಳಿಗೆ ಪ್ರವೇಶ ಮುಕ್ತಗೊಳಿಸಿದ ನಂತರದಲ್ಲಿ ಮುಂಗಡ ಒಪ್ಪಂದ ಮತ್ತು ವಾಯಿದಾ ವಹಿವಾಟು (Future trade) ನೀತಿಗಳು ಈ ಕಾರ್ಪೋರೇಟ್ ಶಕ್ತಿಗಳಿಗೆ ವರದಾನವಾಗಿವೆ. ಆಹಾರ ಧಾನ್ಯಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ವ್ಯಾಪಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತಿರುವ ಸರ್ಕಾರವು, ಈ ಭಾರಿ ಉದ್ಯಮಿಗಳು ಹಲವು ವರ್ಷಗಳಿಗೆ ಬೇಕಾಗುವಷ್ಟು ಪದಾರ್ಥಗಳನ್ನು ಒಮ್ಮೆಲೇ ಖರೀದಿಸಿ, ದಾಸ್ತಾನು ಮಾಡಿ, ಹೆಚ್ಚಿನ ಬೆಲೆಗಳಿಗೆ ಮಾರಾಟ ಮಾಡುತ್ತಿರುವುದನ್ನು ನಿರ್ಲಕ್ಷಿಸುತ್ತಿದೆ. ಚಿಲ್ಲರೆ ವ್ಯಾಪಾರದಲ್ಲಿ ಈ ಕಾರ್ಪೋರೇಟ್ ಉದ್ದಿಮೆಗಳು ತಮ್ಮ ವ್ಯಾಪಾರ ವಹಿವಾಟಿನ ಮುಂದಿನ ಹಲವು ತಿಂಗಳುಗಳಿಗೆ ಅವಶ್ಯವಾದ ಪದಾರ್ಥಗಳನ್ನು ನೇರವಾಗಿ ರೈತರಿಂದಲೇ ಅಗ್ಗದ ದರದಲ್ಲಿ ಖರೀದಿಸಿ ನಂತರ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡುತ್ತವೆ. ರಿಲೈಯನ್ಸ್ ಫ್ರೆಶ್ ಎಂಬಂತಹ ಹವಾನಿಯಂತ್ರಿತ ತರಕಾರಿ ಮಳಿಗೆಗಳು ಅತಿ ಅಗ್ಗದ ದರದಲ್ಲಿ ತರಕಾರಿ, ಹಣ್ಣುಗಳನ್ನು ಮಾರುವುದು, ವಾಲ್ ಮಾರ್ಟ್‌ಗಳಲ್ಲಿ ಒಂದು ಕಿಲೋ ಧಾನ್ಯಕ್ಕೆ ಒಂದು ಕಿಲೋ ಉಚಿತ ನೀಡುವುದು ಈ ಪ್ರಕ್ರಿಯೆ ಪರಿಣಾಮವೇ ಆಗಿದೆ. ಸಾವಿರಾರು ಎಕರೆ ಭೂಮಿಯನ್ನು ರೈತರಿಂದ ಕೊಳ್ಳುವ ಅಥವಾ ಗುತ್ತಿಗೆ ಪಡೆಯುವ ಮೂಲಕ ರೈತರ ಮೇಲೆ ತಮ್ಮ ಹಿಡಿತ ಸಾಧಿಸುವ ಈ ಕಾರ್ಪೋರೇಟ್ ಉದ್ದಿಮೆಗಳು ಪ್ರಸ್ತುತ ಬೆಲೆ ಏರಿಕೆಯ ಸಂದರ್ಭದಲ್ಲೂ ಕಡಿಮೆ ಬೆಲೆಗೆ ಪದಾರ್ಥಗಳ ಸರಬರಾಜು ಮಾಡುತ್ತಿದ್ದರೆ ಅದಕ್ಕೆ ಈ ಪ್ರವೃತ್ತಿಯೇ ಕಾರಣವಾಗಿದೆ. ಹಾಗಾಗಿ ಮಾರುಕಟ್ಟೆಯಲ್ಲಿ ಖಾಸಗೀ ಕ್ಷೇತ್ರದ ಚಿಲ್ಲರೆ ವ್ಯಾಪಾರಿಗಳ ಪ್ರವೇಶವೇ ಪ್ರಸ್ತುತ ಬೆಲೆ ಏರಿಕೆಯ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದು ಹೇಳಬಹುದು.

ತಾವು ಬೆಳೆದ ಬೆಳೆಯ ಬೀಜದ ಮೇಲೆ ತನ್ನ ಹಕ್ಕನ್ನು ಕಳೆದುಕೊಂಡಿರುವ ರೈತ ಸಮುದಾಯ, ಮಾರುಕಟ್ಟೆಯ ಕ್ಷೇತ್ರದಲ್ಲೂ ಬಹುರಾಷ್ಟ್ರೀಯ ಕಂಪನಿಗಳ ಕೈಗೊಂಬೆಯಾಗಿದ್ದು ಬೆಂಬಲ ಬೆಲೆ ಎಂಬ ಮರೀಚಿಕೆಯ ಬೆನ್ನಟ್ಟಿ ಹೋಗುತ್ತಿದೆ. ಆದರೆ ಮಾರುಕಟ್ಟೆಯಲ್ಲಿನ ಬೆಲೆಗಳನ್ನು ನಿರ್ಧರಿಸುವ ಅಧಿಕಾರ ಕಾರ್ಪೋರೇಟ್ ಶಕ್ತಿಗಳ ಕೈಯಲ್ಲಿದೆ. ಮಧ್ಯಮ ವರ್ಗದ ಜನತೆಗೆ ಮತ್ತು ಬಡ ಜನತೆಗೆ ಆಹಾರ ಧಾನ್ಯಗಳನ್ನು ಕಡಿಮೆ ಲಾಭಾಂಶದಲ್ಲಿ ಮಾರುತ್ತಿದ್ದ ಚಿಲ್ಲರೆ ವ್ಯಾಪಾರಿಗಳು ಕಾರ್ಪೋರೇಟ್ ಉದ್ಯಮಿಗಳ ಹಿಡಿತದಲ್ಲಿದ್ದಾರೆ. ಸರ್ಕಾರದ ನಿಯಂತ್ರಣದಲ್ಲಿದ್ದ ಎ.ಪಿ.ಎಂ.ಸಿ ಮತ್ತು ಆಹಾರ ನಿಗಮಗಳು ಖಾಸಗಿ ವಶವಾಗುತ್ತಿವೆ. ರೈತರ ಲಕ್ಷಾಂತರ ಎಕರೆ ಭೂಮಿ ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಕಾರ್ಪೋರೇಟ್‌ಗಳ, ನವ ವಸಾಹತುಶಾಹಿಗಳ ವಶವಾಗುತ್ತಿದೆ. ಸಾಮಾನ್ಯ ಜನತೆಗೆ ಅಗ್ಗದ ದರದಲ್ಲಿ ಆಹಾರ ಧಾನ್ಯ ಒದಗಿಸುತ್ತಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆ ಬಹುತೇಕ ನಿರ್ನಾಮವಾಗುತ್ತಿದೆ. ಸರಾಸರಿ ತಲಾ ಆಹಾರ ಧಾನ್ಯ ಲಭ್ಯತೆಯ ಪ್ರಮಾಣ ೧೯೯೧ರಲ್ಲಿ ೫೧೦ ಗ್ರಾಂ ಇದ್ದದ್ದು ೨೦೦೫ರಲ್ಲಿ ೪೨೨ ಗ್ರಾಂಗಳಷ್ಟಾಗಿದೆ. ದೇಶದ ಮೇಲ್ವರ್ಗದ ಶೇ ೫ರಷ್ಟು ಜನರ ಜೀವನ ಮಟ್ಟ ಉತ್ತಮಗೊಂಡಿದ್ದರೂ, ಉಳಿದ ಶೇ ೯೫ ಜನರ ಜೀವನ ಮಟ್ಟ ಕುಸಿಯುತ್ತಲೇ ಇದೆ. ನೂರಾರು ಡಾಲರ್ ಕೋಟ್ಯಾಧಿಪತಿಗಳನ್ನು ಹೊಂದಿರುವ ಹೆಗ್ಗಳಿಕೆ ಭಾರತಕ್ಕಿದ್ದರೂ, ಇಲ್ಲಿ ಶೇ ೮೦ರಷ್ಟು ದುಡಿಯುವ ವರ್ಗಗಳು ದಿನಕ್ಕೆ ೨೦ಕ್ಕಿಂತಲೂ ಕಡಿಮೆ ಆದಾಯ ಗಳಿಸುತ್ತಿದ್ದಾರೆ.

ಸರ್ಕಾರದ ಅಂಕಿ ಅಂಶಗಳ ಪ್ರಕಾರ ಗ್ರಾಮೀಣ ಬಡಜನತೆಯ ಸಂಖ್ಯೆ ಶೇ ೨೮ ರಷ್ಟಿದ್ದರೂ (ದಿನಕ್ಕೆ ೧೨ ರೂಗಳಿಗಿಂತಲೂ ಕಡಿಮೆ ವೆಚ್ಚ ಮಾಡುವವರು) ವಾಸ್ತವದಲ್ಲಿ ಈ ಸಂಖ್ಯೆ ಶೇ ೮೭ ರಷ್ಟಿದೆ (ದಿನಕ್ಕೆ ೨೬ ರೂಗಳಿಗಿಂತಲೂ ಕಡಿಮೆ ಖರ್ಚುಮಾಡುವವರು). ಪೌಷ್ಟಿಕಾಂಶಗಳನ್ನಾಧರಿಸಿದ ಈ ಅಂಕಿ ಅಂಶಗಳೇ ದಿಕ್ಕುತಪ್ಪಿಸುವಂತಿದ್ದು ಸರ್ಕಾರವು ೧೬೦೦ ಕ್ಯಾಲರೀಸ್‌ಗಿಂತಲೂ ಕಡಿಮೆ ಆಹಾರ ಸೇವಿಸುವವರನ್ನು ಬಡ ಜನತೆಯ ಗುಂಪಿಗೆ ಸೇರಿಸುತ್ತದೆ. ಆದರೆ ಯಾವುದೇ ವ್ಯಕ್ತಿಗೆ ಜೀವನಾವಶ್ಯವಾದ ಕನಿಷ್ಠ ೨೨೦೦ ಕ್ಯಾಲರಿಗಳನ್ನು ಪರಿಗಣಿಸಿದಲ್ಲಿ ಬಡ ಜನತೆಯ ಸಂಖ್ಯೆ ಶೇ ೭೦ರಷ್ಟಾಗುತ್ತದೆ. ವಾಸ್ತವದಲ್ಲಿ ಮನುಷ್ಯನಿಗೆ ಬದುಕಲು ಅವಶ್ಯವಾದ ೨೪೦೦ ಕ್ಯಾಲರಿಗಳನ್ನು ಪರಿಗಣಿಸಿದರೆ ಬಡಜನತೆಯ ಸಂಖ್ಯೆ ಶೇ ೮೭ ರಷ್ಟಾಗುತ್ತದೆ. ಆದರೆ ಸರ್ಕಾರ ತನ್ನ ಅವೈಜ್ಞಾನಿಕ ಅಂಕಿ ಅಂಶಗಳನ್ನಾಧರಿಸಿ ಶೇ ೨೮ ಜನರನ್ನು ಮಾತ್ರ ಬಿ.ಪಿ.ಎಲ್ ಪಟ್ಟಿಯಲ್ಲಿ ಸೇರಿಸುತ್ತದೆ. ಈ ಎಲ್ಲಾ ಪ್ರಕ್ರಿಯೆಗಳೂ ಪ್ರಸ್ತುತ ಬೆಲೆ ಏರಿಕೆ ಮತ್ತದರ ಪರಿಣಾಮಗಳಿಗೆ ಕಾರಣವಾಗಿವೆ.

ಬುದ್ಧ



ಯುದ್ಧವಿಲ್ಲದೆ ಬುದ್ಧ
ಜನರನ್ನು ಗೆದ್ದ
ಆಚಾರ, ವಿಚಾರ
ಸರಳತೆ ಅವನ ಸೈನ್ಯ!

ಅಲ್ಲಮ ಪ್ರಭುಬೆಟ್ಟದೂರು

ಅನೇಕ ಆರ್ಥಿಕ ತಜ್ಞರು ದೇಶದಲ್ಲಿ ಈ ಪರಿಸ್ಥಿತಿ ಬರಬಹುದು ಎಂದು ಎಚ್ಚರಿಕೆ ನೀಡುತ್ತಲೇ ಬಂದಿದ್ದರೂ ನಿರ್ಲಕ್ಷಿಸಿದ್ದ ಸರ್ಕಾರ ತಡವಾಗಿಯಾದರೂ ಎಚ್ಚೆತ್ತಿದೆ. ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳಿಂದ ಇನ್ನು ಮುಂದಿನ ದಿನಗಳಲ್ಲಿನ ಬೆಲೆ ಏರಿಕೆಯ ಪ್ರಮಾಣ ಕಡಿಮೆಯಾಗಬಹುದಾದರೂ ಏರಿದ ಬೆಲೆಗಳು ಇಳಿಯುವುದಿಲ್ಲ. ಹಣದುಬ್ಬರ ಎಂದರೆ ಬೆಲೆ ಏರಿಕೆಯ ನೇರ ಪ್ರಮಾಣವಾಗಿರದೆ, ಹಿಂದಿನ ವಾರಕ್ಕೆ ಹೋಲಿಸಿದಲ್ಲಿ ಈ ವಾರದಲ್ಲಿ ಏರಿರುವ ಬೆಲೆಗಳ ಪ್ರಮಾಣ ಮಾತ್ರವಾಗಿರುತ್ತದೆ ಎಂಬ ಅಂಶವನ್ನು ಸಾಮಾನ್ಯ ಜನತೆ ಗಮನಿಸಬೇಕಾಗುತ್ತದೆ. ಹಾಗಾಗಿ ಹಣದುಬ್ಬರ ಕಡಿಮೆಯಾದರೆ ಹಿಂದಿನ ವಾರದ ಪ್ರಮಾಣಕ್ಕಿಂತ ಕೊಂಚ ತಗ್ಗಿರುತ್ತದೆ. ಆದರೆ ಬೆಲೆ ಏರಿಕೆಯ ಬಿಸಿ ಸಾಮಾನ್ಯ ದುಡಿಯುವ ಜನತೆಯನ್ನು ಸುಡುತ್ತಲೇ ಇರುತ್ತದೆ. ಬೆಲೆ ಏರಿಕೆಯನ್ನು ವಿರೋಧಿಸುವ ರಾಜಕೀಯ ಪಕ್ಷಗಳು ರಿಸರ್ವ್ ಬ್ಯಾಂಕ್ ಕೈಗೊಳ್ಳುವ ಕ್ರಮಗಳು ಮತ್ತು ಸರ್ಕಾರದ ನಿಯಂತ್ರಣಾ ಕಾನೂನುಗಳನ್ನೇ ಆಗ್ರಹಿಸುತ್ತವೇ ಹೊರತು, ವಾಲ್ ಮಾರ್ಟ್‌ಗಳ ವಿರುದ್ಧ, ವಾಯಿದಾ ವಹಿವಾಟಿನ ವಿರುದ್ಧ, ಮುಂಗಡ ಒಪ್ಪಂದ ವ್ಯಾಪಾರದ ವಿರುದ್ಧ, ವಿಶೇಷ ಆರ್ಥಿಕ ವಲಯಗಳ ವಿರುದ್ಧ, ಕೃಷಿ ಕ್ಷೇತ್ರವನ್ನು ಕಾರ್ಪೋರೇಟ್ ಉದ್ಯಮಿಗಳಿಗೆ ಒಪ್ಪಿಸುವುದರ ವಿರುದ್ಧ ಹೋರಾಡುವುದಿಲ್ಲ.

ಹಾಗಾಗಿಯೇ ಬೆಲೆ ಏರಿಕೆ ಒಂದು ರಾಷ್ಟ್ರವ್ಯಾಪಿ ಆಂದೋಲನಕ್ಕೆ ವೇದಿಕೆಯನ್ನು ಸೃಷ್ಟಿಸಲಿಲ್ಲ. ಬೆಲೆ ಏರಿಕೆಯನ್ನು ತಡೆಗಟ್ಟಲು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಬಲೀಕರಣ, ಆಹಾರ ಭದ್ರತೆಯ ಭರವಸೆ, ಕೃಷಿ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ, ಚಿಲ್ಲರೆ ಮತ್ತು ಸಗಟು ವ್ಯಾಪಾರದಿಂದ ವಿದೇಶಿ ಹಾಗೂ ದೇಶೀಯ ಕಾರ್ಪೋರೇಟ್ ಉದ್ಯಮಿಗಳ ಉಚ್ಚಾಟನೆ, ದೇಶದ ದುಡಿಯುವ ವರ್ಗಗಳಿಗೆ, ಗ್ರಾಮೀಣ ಶ್ರಮಜೀವಿಗಳಿಗೆ ಸಮಾಜೋ–ಆರ್ಥಿಕ ಸುಭದ್ರತೆ, ಅಸಂಘಟಿತ ಕಾರ್ಮಿಕರ ಸುರಕ್ಷೆ ಇವೇ ಮುಂತಾದ ನೀತಿಗಳು ಅತ್ಯವಶ್ಯವಾಗಿವೆ. ಯಾವುದೇ ರಾಜಕೀಯ ಪಕ್ಷಗಳೂ ಈ ಅಂಶಗಳ ಬಗ್ಗೆ ಗಂಭೀರವಾದ ಚರ್ಚೆ ನಡೆಸದಿರುವುದು, ರಾಜಕೀಯ ಪಕ್ಷಗಳು ಮತ್ತು ಕಾರ್ಪೋರೇಟ್ ಜಗತ್ತಿನ ನಡುವೆ ಇರುವ ಅನೈತಿಕ ಸಂಬಂಧವನ್ನು ಜಗಜ್ಜಾಹೀರುಗೊಳಿಸುತ್ತದೆ. ಈ ಎಲ್ಲಾ ಜನವಿರೋಧಿ ಪ್ರವೃತ್ತಿಗಳಿಗೆ ಮೂಲ ಕಾರಣವಾದ ಜಾಗತೀಕರಣ ಪ್ರಕ್ರಿಯೆಯ ನವ ಆರ್ಥಿಕ ನೀತಿಗಳನ್ನು ತೊಡೆದು ಹಾಕದಿದ್ದಲ್ಲಿ ಬೆಲೆ ಏರಿಕೆ ಚಂಡಮಾರುತದಂತೆ ಆಗಾಗ್ಗೆ ಅಪ್ಪಳಿಸುತ್ತಲೇ ಇರುತ್ತದೆ. ಐಷಾರಾಮಿ ದಂತದರ ಮನೆಗಳಲ್ಲಿ ವಾಸಿಸುವ ಜನತೆಗೆ ಈ ಸುನಾಮಿ ಅಲೆಗಳು ಹಾನಿಮಾಡದಿದ್ದರೂ, ನೈಸರ್ಗಿಕ ಸೂರಿನಡಿ ಬದುಕುವ ಲಕ್ಷಾಂತರ ಜನತೆ ಅಲೆಗಳಲ್ಲಿ ಕೊಚ್ಚಿಹೋಗುತ್ತಿರುತ್ತಾರೆ. ದೇಶದ ಬಡಜನತೆಯಲ್ಲಿ ಬಹುಸಂಖ್ಯಾತರಾದ ದಲಿತರು, ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳು ಬೆಲೆ ಏರಿಕೆಗೆ ನೇರವಾದ ಬಲಿಪಶುಗಳಾಗುತ್ತಿದ್ದಾರೆ. ಜಾಗತೀಕರಣವನ್ನು ಒಪ್ಪಿಕೊಳ್ಳುವುದೇ ಸೂಕ್ತ ಎಂದು ದೇಶದ ಬಡಜನತೆಗೆ ಬೋಧಿಸುವವರು ಈ ಸೂಕ್ಷ್ಮಗಳನ್ನು ಗಮನಿಸಬೇಕಾಗಿದೆ. □

ಜಾತಿ ಮತ್ತು ಸಾಮಾಜಿಕ ತಾರತಮ್ಯ

(೧೯ನೇ ಪುಟದಿಂದ)

ಕೇಂದ್ರಿತ ಮೇಲು-ಕೀಳು ಮುಂತಾದವುಗಳನ್ನು ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ಪ್ರಭಟಿಸಿದ್ದಾರೆ. ಹೀಗೆ ಶಿಷ್ಟಭಾಷೆಯ ಮಿತಿಯನ್ನು ಮೀರಿ ಜನ ಭಾಷೆ ಬೆಳೆಯಿತು. ಆದ್ದರಿಂದ ಸಾಹಿತ್ಯ ಕೇವಲ ಸಾಹಿತ್ಯವಾಗಿರದೆ ಅದರೊಳಗಿನಿಂದಲೇ ಮೇಲಿನ ಪ್ರಶ್ನೆಗಳನ್ನು ನಿರ್ವಹಿಸಿಕೊಂಡು ಬಂದಿರುವ ಕ್ರಮವನ್ನು ಕಾಣಬಹುದಾಗಿದೆ. ಅದು ಕರ್ನಾಟಕದ ಚರಿತ್ರೆಯೊಡನೆ ಒಟ್ಟಾಗಿಯೇ ಸಾಗಿಬಂದಿದೆ.

ಅಲ್ಲದೆ, ದಾಸ ಸಾಹಿತ್ಯವೂ ಕೂಡ ಈ ಜಾತಿ ಪ್ರಶ್ನೆಯನ್ನು ಎದುರಿಸಿದೆ. ಆದ್ದರಿಂದ ಜಾತಿಯ ಪ್ರಶ್ನೆ ಒಂದು ಸಾತತ್ಯೆಯ ನಿರಂತರ ಪ್ರಶ್ನೆಯಾಗಿಯೇ ಬಂದಿದೆ. ಇಲ್ಲಿ ಒಂದು ಸಂಗತಿ ಮುಖ್ಯವಾಗುತ್ತದೆ. ಓರಿಯಂಟಲಿಸ್ಟರು ಹೇಳುವಂತೆ ಭೂತದ ಬೆಳಕನ್ನು ವರ್ತಮಾನಕ್ಕೆ ತರುವುದು ಎಂದು ಅರ್ಥವಲ್ಲ. ಬದಲು ಅಲ್ಲಿದ್ದ ಜಾತಿ ವೈರುಧ್ಯಗಳನ್ನು ಜನ ಹೇಗೆ ನಿಭಾಯಿಸಿದರು ಎನ್ನುವುದು ಮುಖ್ಯವಾಗುತ್ತದೆ. ಚಲನಶೀಲವಾದ ಮತ್ತು ಪರಿವರ್ತನಾಶೀಲವಾದ ಆಕೃತಿಗಳು ಕನ್ನಡ ಸಾಹಿತ್ಯದಲ್ಲಿ ಮತ್ತು ಜನಬದುಕಿನಲ್ಲಿ ಹಾಸುಹೊಕ್ಕಾಗಿವೆ. ಈ ಪ್ರಕ್ರಿಯೆಯಲ್ಲಿ ಕೆಳಜಾತಿಗಳು ಹೇಗೆ ಸಂಘಟನೆಗೊಂಡವು, ಮತ್ತು ಜಾತಿಯ ವಿರುದ್ಧ ಪ್ರತಿಭಟಿಸಿದವು ಎಂಬುದನ್ನು ೧೯ನೇ ಶತಮಾನದ ಕೊನೆತನಕವೂ ಕಾಣುತ್ತೇವೆ.

ಅಂದರೆ ಈ ಚಾರಿತ್ರಿಕ ನಿರಂತರತೆಯಲ್ಲಿ ಜಾತಿ, ಸಾಮಾಜಿಕ ಅವಮಾನ ಇವುಗಳ ವಿರುದ್ಧ ಒಂದು ಆಧ್ಯಾತ್ಮಿಕವಾದ ಪ್ರತಿಭಟನೆ ನಡೆದಿದೆ. ಇದು ಆಗ ಇದ್ದ ವರ್ಣಾಶ್ರಮದ ವಿರುದ್ಧದ ಪ್ರತಿಭಟನೆಯೂ ಹೌದು. ಅಂದರೆ ಅಲ್ಲೊಂದು ಆಧ್ಯಾತ್ಮಿಕವಾದ ಅಥವಾ ಭಕ್ತಿಕೇಂದ್ರವಾದ ವಿಶಿಷ್ಟವಾದ ಸಂಸ್ಕೃತಿ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ಈ ಸಂಗತಿಯನ್ನು ರಾಷ್ಟ್ರೀಯ ಚಳುವಳಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಭಗವದ್ಗೀತೆ ಮುಖ್ಯವಾಯಿತೇ ವಿನಃ ಜನ ಸಂಸ್ಕೃತಿಯ ಆಧ್ಯಾತ್ಮಿಕತೆಯ ಅಭಿವ್ಯಕ್ತಿಯ ಬಿಂಬಗಳಾದ ಒರಿಸ್ಸಾದ ಮಹಿಮಾ, ತುಕಾರಾಮ್, ಕರ್ನಾಟಕದ ಕೈವಾರ ತಾತಯ್ಯ, ಶಿಶುನಾಳ ಶರೀಫ ಮುಂತಾದವರು ಮುಖ್ಯವಾಗಲಿಲ್ಲ. ಇವರೆಲ್ಲಾ ಜಾತಿ ಕೇಂದ್ರಿತವಾಗಿದ್ದ ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟಿಸಿದ್ದಾರೆ. ಹೀಗೆ ಅನೇಕರು ಬಹುರೂಪಿಯ ಸೂಕ್ಷ್ಮಗಳಲ್ಲಿ ವಸಾಹತುಶಾಹಿಗೆ ಪ್ರತಿಕ್ರಿಯಿಸಿದ್ದಾರೆ. ಉದಾಹರಣೆಗೆ ಶಿಶುನಾಳ ಶರೀಫ ಹೇಳುವ 'ಜಿಡ್ಡಿಯ ಹುಳು', 'ಹೊತ್ತಿತು ಇಂಗ್ಲೆಂಡ್ ದೇಶ ಬೆಂಕಿಯ ಮಳೆ' ಮುಂತಾದುವು ಹಿಡಿದಿಟ್ಟುಕೊಂಡಿರುವ ಪ್ರತಿಭಟನಾ ಸ್ವರೂಪವನ್ನು ನಾವು ಇನ್ನೂ ಗಮನಿಸಿಲ್ಲ. ಹೀಗಿರುವಾಗ ರಾಷ್ಟ್ರೀಯ ಚಳುವಳಿ ಕೆಳವರ್ಗದ ಈ ಆಧ್ಯಾತ್ಮಿಕವಾದ ನುಡಿಗಟ್ಟನ್ನು ಸಂಪೂರ್ಣವಾಗಿ ನಿರಾಕರಿಸಿ, ಅದಕ್ಕೆ ಬದಲಾಗಿ ಪಾನ್-ಇಂಡಿಯನ್ ಆದ ಮಧ್ಯಮವರ್ಗದ ನುಡಿಗಟ್ಟನ್ನು ಕಟ್ಟಿಕೊಡಲಾಗಿದೆ.

ಹೀಗೆ ಗ್ರಾಮೀಣ ಬದುಕಿನ ಆಧ್ಯಾತ್ಮವಾದಿ ಸಂಸ್ಕೃತಿಯು ವಾಸ್ತವವಾದಿ ವಿಶ್ಲೇಷಣೆಗೆ ಸಿಗುವುದಿಲ್ಲ. ಕರ್ನಾಟಕದ ದಕ್ಷಿಣದ ೫-೬ ಜಿಲ್ಲೆಗಳಲ್ಲಿ ಇಂದಿಗೂ ಜನ ಬದುಕಿನ ಭಾಗವಾಗಿರುವ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಪರಂಪರೆಗಳು ಶರಣ ಚಳವಳಿಯಿಂದ ಅನೇಕ ಸಂಕೇತ ಮತ್ತು ಮೋಟಿಫ್‌ಗಳನ್ನು ತೆಗೆದುಕೊಂಡಿವೆ. ೧೫ ನೇ ಶತಮಾನದಲ್ಲಿದ್ದುಕೊಂಡೇ ೧೨ನೇ ಶತಮಾನದ ಬಸವಣ್ಣನೊಡನೆ ಮಂಟೇಸ್ವಾಮಿ ಒಂದು ಸಂವಾದ ಸಾಧಿಸುತ್ತಾನೆ. ಹೇಗೆ ಶರಣ ಚಳುವಳಿ ಮತ್ತೆ ಮಡಿ-ಮೈಲಿಗೆಯನ್ನು ಸ್ಥಾಪಿಸಿಕೊಳ್ಳುತ್ತದೆ ಮತ್ತು ಅದಕ್ಕೆ ಪ್ರತಿಭಟನೆಯಾಗಿ ಈ ಪರಂಪರೆಗಳು ಹುಟ್ಟಿ ಬಂದವು ಎನ್ನುವುದನ್ನು ಇಂದಿಗೂ ಕಾಣುತ್ತೇವೆ. ಈ ಮಂಟೇಸ್ವಾಮಿ ಜಾತ್ರೆ ಇಂದಿಗೂ ಜನತೆಯ ಒಂದು ಮಹಾನ್ ಕಾವ್ಯವಾಗಿಯೇ ಉಳಿದುಕೊಂಡಿದೆ. ಹಾಗಾಗಿ ಈ ಪರಂಪರೆಗಳನ್ನು ನಾವು ವ್ಯಕ್ತಿಗತ ನೆಲೆಯಲ್ಲಿ ನೋಡಲಾಗದು. ಅವು ಆಚಾರದ ಮೇಲಿನ ಅಧಿಕಾರವನ್ನು ಕಿತ್ತೊಗೆಯುತ್ತವೆ. ವೈದಿಕ ಪರಂಪರೆಗಳು ಸಾಂಪ್ರದಾಯಿಕ ಬ್ರಾಹ್ಮಣ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರೆ, ಈ ಮಂಟೆಸ್ವಾಮಿ ಮತ್ತು ಮಲೆಮದೇಶ್ವರ ಪರಂಪರೆಗಳು ಬ್ರಾಹ್ಮಣ್ಯವನ್ನು ನಿರಾಕರಿಸಿ ನಿಲ್ಲುತ್ತವೆ.

ಆದ್ದರಿಂದ ಸಾಹಿತ್ಯ ಕೇವಲ ಭಾಷೆಗೆ ಸಂಬಂಧಿಸಿದ್ದುದ್ದಲ್ಲ. ಅದು ಚರಿತ್ರೆ ಮತ್ತು ದೇಶಿತನವನ್ನು ತನ್ನೊಳಗೇ ಒಳಗೊಂಡಂಥ ಪ್ರಶ್ನೆಯನ್ನು ಎದುರಿಸುತ್ತದೆ. ಇಡೀ ಜೀವ ಸಂಕುಲವೇ ವಸಾಹತುಶಾಹಿಯ ದಟ್ಟ ಪ್ರಭಾವಗಳಿಗೆ ಒಳಗಾಗುತ್ತದೆ. ಆದರೆ ವಸಾಹತುಪೂರ್ವದ ಕ್ರೌರ್ಯದ ನಿರಾಕರಣೆ ಎಂದೂ ಮಾಡಲಾಗುವುದಿಲ್ಲ ಎಂಬುದನ್ನು ಜನಬದುಕು ತೋರಿಸಿಕೊಟ್ಟಿದೆ. ಆದರೆ ಗ್ರಾಮ ಸ್ವರಾಜ್ಯವನ್ನು ಪ್ರತಿಪಾಧಿಸಿದ ಗಾಂಧಿಯೂ ಸಹ ಗ್ರಾಮೀಣ ಬದುಕಿನ ಇಂಥ ಆಧ್ಯಾತ್ಮಿಕವಾದ ಸೂಕ್ಷ್ಮಗಲನ್ನು ಗಮನಿಸುವುದಿಲ್ಲ. ಹಾಗೆಯೇ ರಾಷ್ಟ್ರೀಯ ಚಳುವಳಿ ಇಂಥ ಅನೇಕ ಸೂಕ್ಷ್ಮಗಳನ್ನು ಮೌನಿಯಾಗಿಸುತ್ತದೆ. ಈ ಸಂಗತಿ ಅಂಬೇಡ್ಕರವರೂ ಸಹ ಗಮನಿಸಿದರೂ ಸಹ ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದಿಲ್ಲ. ಇದಕ್ಕೆ ಕಾರಣ ಅಲ್ಲಿದ್ದಂಥ ಜಾತಿಯೇ ಆಗಿದೆ. ಆದ್ದರಿಂದ ವಸಾಹತುಶಾಹಿಪೂರ್ವ ಎಂದಾಕ್ಷಣ ಅಲ್ಲಿರುವ ಭೂತವನ್ನು ಮರುಸ್ಥಾಪಿಸದೆ, ಚರಿತ್ರೆಯ ನಿರಂತರತೆಯನ್ನು ಅರಿವುದೇ ಆಗುತ್ತದೆ.ಹಾಗೂ ಅಂಥ ಚರಿತ್ರೆಯಲ್ಲಿರುವ ಕ್ರೌರ್ಯವನ್ನು ಹೇಗೆ ಜನಸಮುದಾಯಗಳು ಪ್ರತಿಭಟಿಸಿ, ತಮ್ಮ ಆಧ್ಯಾತ್ಮಿಕವಾದ ಸಾತತ್ಯವನ್ನು ಉಳಿಸಿಕೊಂಡಿವೆ ಎನ್ನುವುದನ್ನು ಅರಿಯುವುದೇ ಆಗಿದೆ.

ಪ್ರೊ. ಕಿ.ರಂ.ನಾಗರಾಜುರವರ ಮೇಲಿನ ವಿಚಾರಗಳು ಗೊಂದಲಗೊಂಡ ನಮ್ಮ 'ಲಿಬರಲ್ ಇಂಡಿವಿಜ್ಯುವಲ್ ಮನಸ್ಸಿಗೆ' ಹೊಸಕಿಡಿಯನ್ನು ಹೊತ್ತಿಸಿದವೆಂದೇ ಭಾಸವಾಯಿತು.

ಹೀಗೆ ಅಂತಿಮವಾಗಿ ಎರಡು ದಿನಗಳ **'ಜಾತಿ ಮತ್ತು ಸಾಮಾಜಿಕ ತಾರತಮ್ಯ ಕುರಿತು ಮರುವಿವೇಚನೆ'** ಎಂಬ ಕಾರ್ಯಗಾರವು ಬ್ರಾಹ್ಮಿಣಿಕಲ್ ಆದ ಸಮಾಜಶಾಸ್ತ್ರೀಯ ಮತ್ತು ಇಂದಿನ ಸಾಮಾಜಿಕ ವಿಜ್ಞಾನಗಳು ರೂಪಿಸಿಕೊಟ್ಟಿರುವ 'ಮಡಿ' ಚಿಂತನೆಗಳನ್ನು ಮೈಗೊಡವಿಕೊಂಡು, ಭಿನ್ನವಾದ ನುಡಿಗಟ್ಟನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಈ ಕಾರ್ಯಗಾರವನ್ನು ಅಂಬೇಡ್ಕರ್ ಅಧ್ಯಯನ ವಿಭಾಗ ಮತ್ತು ಡಾ. ದತ್ತಾತ್ರೇಯ ಹಾಗೂ ಸಂಗಡಿಗರು ಏರ್ಪಡಿಸಿದ್ದರು. ಈ ಕಾರ್ಯಗಾರದಲ್ಲಿ ಭಾಗವಹಿಸಿದವರೆಲ್ಲಾ ಮೇಲಿನ ವಿಚಾರಗಳಿಂದ ಸ್ಫೂರ್ತಿಗೊಂಡರಲ್ಲದೆ, ದತ್ತಾತ್ರೇಯ ಮತ್ತು ಅವರ ಸ್ನೇಹಿತರ ಪ್ರೀತಿಗೆ ಮಾರುಹೋಗಿದ್ದರು.

ಕೊನೆಯಲ್ಲಿ ಒಂದು ಮಾತು. ಅನೇಕ ವರ್ಷಗಳಿಂದ ಹೊಸದಾದ ಸಾಮಾಜಿಕ ಜ್ಞಾನಮೀಮಾಂಸೆಗಾಗಿ ಕಾಯುತ್ತಿದ್ದ ಯುವ ಮನಸ್ಸುಗಳಿಗೆ ಇಂಥ ಕಾರ್ಯಗಾರಗಳು ದಿಕ್ಸೂಚಿಯೆಂದು ಭಾವಿಸೋಣವೇ? ಜಡಗೊಂಡ ಸಾರ್ವಜನಿಕ ಅಕಾಡೆಮಿಗಳು ಇನ್ನು ಮುಂದೆಯಾದರೂ ಎಚ್ಚೆತ್ತುಕೊಳ್ಳಲೆಂದು ಹಾರೈಸಬಹುದಲ್ಲವೇ! □



ಪುರಿ ಜಗನ್ನಾಥ ಉತ್ಸವ ಮೂರ್ತಿ ಕಳವು!
ಅವನನ್ನು ರಕ್ಷಿಸಲು ಬೇಕು ಮನುಷ್ಯರ ನೆರವು!!
ನರನು ಹೆಚ್ಚೋ? ನಾರಾಯಣನು ಹೆಚ್ಚೋ?
ಇಂಥ ಪ್ರಶ್ನೆ ಕೇಳಬೇಡ ಬಾಯಿ ಮುಚ್ಚೋ.

ಅಲ್ಲಮ ಪ್ರಭುಬೆಟ್ಟದೂರು

ನಮ್ಮ ರಾಜಕೀಯ ಸಂಸ್ಕೃತಿ ಮತ್ತು ಮಹಿಳೆಯರು

ಮಾತಿನ ಹಂಗು



ರಹಮತ್ ತರೀಕೆರೆ

ಎರಡು ವರ್ಷಗಳ ಹಿಂದೆ, ಎಚ್.ಡಿ. ಕುಮಾರಸ್ವಾಮಿಯವರು ಬಿಜೆಪಿಯ ಜತೆ ಸೇರಿಕೊಂಡು ಸರ್ಕಾರ ರಚಿಸುವಾಗ, ಮಾಧ್ಯಮಗಳು ಅನೇಕ ಬಗೆಯ ದೃಶ್ಯಗಳನ್ನು ಸೆರೆಹಿಡಿದು ತೋರಿಸಿದವು. ಶಾಸಕರ ಸಭೆ, ಗಾಂಧಿ ಪ್ರತಿಮೆ ಮುಂದೆ ಧರಣಿ, ಪತ್ರಿಕಾಗೋಷ್ಠಿ, ಅನುಯಾಯಿಗಳಿಂದ ನಾಯಕರ ಭೇಟಿ, ರೆಸಾರ್ಟುಗಳಿಗೆ ಬಸ್ಸುಗಳಲ್ಲಿ ಹೋಗುತ್ತ 'ವಿ' ಆಕಾರದಲ್ಲಿ ಬೆರಳು ಮಾಡಿತೋರುವುದು- ಇತ್ಯಾದಿ ದೃಶ್ಯಗಳವು. ಇವುಗಳಲ್ಲಿ ಕಾಣಿಸುತ್ತಿದ್ದವರೆಲ್ಲ – ಯಡಿಯೂರಪ್ಪ, ದೇವೇಗೌಡ, ಯಶವಂತಸಿನ್ಹಾ, ಸಿದ್ಧರಾಮಯ್ಯ, ಅನಂತಕುಮಾರ್, ಸದಾನಂದಗೌಡ, ಮಲ್ಲಿಕಾರ್ಜುನಖರ್ಗೆ, ಧರ್ಮಸಿಂಗ್, ಎಚ್ಕೆಪಾಟೀಲ, ಕುಮಾರಸ್ವಾಮಿ, ಚಲುವರಾಯಸ್ವಾಮಿ ಮುಂತಾದವರು- ಶ್ವೇತವಸ್ತ್ರಧಾರಿಗಳಾದ ಗಂಡಸರೇ. ಮಹಿಳೆಯರು ಅಪ್ಪಿತಪ್ಪಿಯೂ ಕಾಣುತ್ತಿರಲಿಲ್ಲ.

ಇದು ನಮ್ಮ ಶಕ್ತಿರಾಜಕಾರಣದ ಸಂಸ್ಕೃತಿಯೇ ಸಾರ್ವಜನಿಕ ಬದುಕಿನ ಬಹಳ ಮುಖ್ಯವಾದ ಕ್ಷೇತ್ರವಾಗಿರುವ ರಾಜಕಾರಣದಿಂದ ಜನಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀಯರನ್ನು ಹೇಗೆ ಹೊರಗಿಟ್ಟಿದೆ ಎಂಬುದನ್ನು ಸೂಚಿಸುವ ಸಣ್ಣ ಸ್ಯಾಂಪಲ್ಲಿನಂತಿತ್ತು. ಇದಕ್ಕೆ ತಕ್ಕಂತೆ ಹಲವಾರು ನಾಟಕೀಯ ಬೆಳವಣಿಗೆಗಳ ಬಳಿಕ ಅಸ್ತಿತ್ವಕ್ಕೆ ಬಂದ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಕೂಡ ಒಬ್ಬ ಮಹಿಳೆಯೂ ಇರಲಿಲ್ಲ. ಶಾಸನಸಭೆ ಲೋಕಸಭೆಗಳಲ್ಲಿ ರಾಜಕೀಯ ಪ್ರಾತಿನಿಧ್ಯವು ಶೇಕಡ ೩೩ರಷ್ಟು ಇರಬೇಕು ಎಂಬ ಮಸೂದೆಯನ್ನು ಮಂಡಿಸಬೇಕು ಎಂದು ದೇಶದಾದ್ಯಂತ ಒತ್ತಾಯ ನಡೆಯುತ್ತಿದೆ. ಇಂತಹ ಹೊತ್ತಲ್ಲಿ, ಮಹಿಳೆಯರಿಗೆ ಅವಕಾಶ ಕೊಡದೆಯೇ ಕರ್ನಾಟಕದಲ್ಲಿ ಒಂದು ಮಂತ್ರಿಮಂಡಲ ಆಳ್ವಿಕೆ ನಡೆಸಿದ್ದು ಒಂದು ದಾಖಲೆಯೇ ಇದ್ದೀತು.ಈ ರಾಜಕೀಯ ಸಂಸ್ಕೃತಿಯು ಮೂಲತಃ ನಮ್ಮ ಸಾಮಾಜಿಕ ಮನೋಧರ್ಮದ ಒಂದು ಫಲಶೃತಿಯಾಗಿದೆ.

ವಿಚಿತ್ರವೆಂದರೆ ಭಾರತದ ಈ ಪುರುಷ ಪ್ರಧಾನವಾದ ರಾಜಕಾರಣದಲ್ಲಿ ಬಹುಕಾಲ ದೊಡ್ಡ ನಾಯಕಿಯಾಗಿ ಮೆರೆದವರು ಇಂದಿರಾಗಾಂಧಿ ಎಂಬ ಮಹಿಳೆ. ಈ ಹೊತ್ತು ಕೂಡ ಪ್ರಧಾನಮಂತ್ರಿಯನ್ನೂ ಒಳಗೊಂಡಂತೆ ಕೇಂದ್ರ ಮತ್ತು ಅನೇಕ ರಾಜ್ಯ ಸರ್ಕಾರಗಳನ್ನೂ ನಿಯಂತ್ರಿಸುತ್ತಿರುವ ಸೋನಿಯಾ, ಒಬ್ಬ ಮಹಿಳೆಯೇ ಆಗಿದ್ದಾರೆ. ತಮ್ಮ ದೃಢನಿರ್ಧಾರಗಳಿಗೆ ಹೆಸರಾದ ಇಂದಿರಾಗಾಂಧಿಯನ್ನು ಶಕ್ತಿಯ ಸಂಕೇತವೆಂದೂ ಕಾಳಿಯ ಅವತಾರವೆಂದೂ ಕೆಲವರು ಭಾವಿಸಿದ್ದರು. (ಇಂದಿರಾ ಸಮಾಧಿಯನ್ನು ಶಕ್ತಿಸ್ಥಲವೆಂದೇ ಕರೆಯುವುದು ಮಾರ್ಮಿಕವಾಗಿದೆ.) ಶಕ್ತಿಯು (ಪವರ್) ನಮ್ಮ ಪುರಾಣಗಳಲ್ಲಿ ಸ್ತ್ರೀರೂಪದ ದೇವತೆ. ಪುರುಷ ಶಿವನು ಶಕ್ತಿಯ ಸಹವಾಸವಿಲ್ಲದೆ ಶವಕ್ಕೆ ಸಮಾನ ಎಂದು ದರ್ಶನಗಳು ಹೇಳುತ್ತವೆ. ಮುಖಮೇಲಾಗಿ ಬಿದ್ದ ಶಿವನನ್ನು ಎದೆಯ ಮೇಲೆ ಕಾಲಿಟ್ಟು ನಿಂತಿರುವ ಶಕ್ತಿ ದೇವತೆಯ ಚಿತ್ರಗಳು ಪ್ರಸಿದ್ಧವಾಗಿವೆ. ಹಿಂದೆ ಯುದ್ಧಕ್ಕೆ ಹೋಗುವ ಮೊದಲು ಶಕ್ತಿಯ ಆರಾಧನೆ ಮಾಡಲಾಗುತ್ತಿತ್ತು. ಈಗಲೂ ಶಕ್ತಿಯ ಸಂಕೇತವಾದ ಆಯುಧಗಳ ಪೂಜೆ ನಡೆಯುತ್ತದೆ. ಆದರೆ ಹೆಣ್ಣನ್ನು ಶಕ್ತಿಯ ಸಂಕೇತವಾಗಿ ಆರಾಧಿಸುವುದು ಮತ್ತು ಸಾಮಾಜಿಕ ಬದುಕಿನಲ್ಲಿ ಅವಳ ಶಕ್ತಿಗಳೆಲ್ಲವೂ ಸೀಮಿತ ನೆಲೆಯಲ್ಲಿ ಕ್ರಿಯಾಶೀಲವಾಗುವಂತೆ ನಡೆಸಿಕೊಳ್ಳುವುದು ನಮ್ಮ ಸಮಾಜದ ಹಿಪಾಕ್ರಸಿಯಾಗಿದೆ; ಶಕ್ತಿಯ ದೈವಿಕ ರೂಪವು ಹೆಂಗಸಾದರೂ, ಶಕ್ತಿಪ್ರದರ್ಶನವುಳ್ಳ ಇಡೀ ಯುದ್ಧಕ್ರಿಯೆ ಗಂಡು ಪ್ರಧಾನವಾದುದು ಮತ್ತು ಯುದ್ಧದ ಪರಿಭಾಷೆ ಸ್ತ್ರೀನಿಂದಕವಾದುದು. ದಿಟ್ಟ ಮಹಿಳೆಯರನ್ನು ಗಂಡಸೆಂದು ಕರೆಯುವ ಪರಿಭಾಷೆ ಗಮನಿಸಿ. ಕಠಿಣ ನಿಲುವಿಗೆ ಹೆಸರಾದ ಇಂಗ್ಲೆಂಡಿನ ಪ್ರಧಾನಮಂತ್ರಿ ಮಾರ್ಗರೇಟ್ ಥ್ಯಾಚರ್ ಅವರನ್ನು 'ಬ್ರಿಟಿಶ್ ಪಾರ್ಲಿಮೆಂಟಿನ ಏಕೈಕ ಗಂಡಸು' ಎಂದು ಕರೆಯಲಾಗುತ್ತಿತ್ತು. ತನ್ನ ವಿರುದ್ಧ ಬಂಡೆದ್ದ ನಿಜಲಿಂಗಪ್ಪ ಮುಂತಾದವರನ್ನು ದಮನಿಸಿದ ಇಂದಿರಾರ ಗಡಸು ನಿಲುವನ್ನು, ಬಾಂಗ್ಲಾದೇಶವನ್ನು ಪಾಕಿಸ್ತಾನದ ಹಿಡಿತದಿಂದ ಪಾರುಗಾಣಿಸಲು ಅವರು ಕೈಗೊಂಡ ಸೈನಿಕ ಕಾರ್ಯಾಚರಣೆಯನ್ನು ಅಥವಾ ಪ್ರಥಮ ಪರಮಾಣು ಆಸ್ಫೋಟ ಮಾಡಿದ್ದನ್ನು ಗಂಡು ನಿರ್ಧಾರಗಳೆಂದು ಕರೆಯಲಾಯಿತು. ಕಠಿಣ ನಿಲುವು ಗಂಡಸರಿಗೆ ಮಾತ್ರ ಸಾಧ್ಯ ಎಂಬ ಅರ್ಥವುಳ್ಳ ಇದು ಮೂಲತಃ ಪುರುಷನಿಷ್ಠ ನುಡಿಗಟ್ಟಾಗಿದೆ. ಈ ನುಡಿಗಟ್ಟು ನಮ್ಮ ಶಕ್ತಿ ರಾಜಕಾರಣದ ಎಲ್ಲ ಪಕ್ಷಗಳಲ್ಲೂ ಇದೆ. ಅದರಲ್ಲೂ ದೇಶವನ್ನು ಭಾರತಮಾತೆ ಎಂದು ಪೂಜಿಸುವ ಸಂಘಪರಿವಾರದವರಲ್ಲಿ ಕೊಂಚ ಜಾಸ್ತಿಯಿದೆ. ಯಡಿಯೂರಪ್ಪನವರು 'ಶಿಕಾರಿಪುರದಲ್ಲಿ ನನ್ನ ವಿರುದ್ಧ ನಿಲ್ಲಿಸಲು ಕಾಂಗ್ರೆಸ್ಸಿನಲ್ಲಿ ಯಾರೂ ಗಂಡಸರಿರಲಿಲ್ಲವೇ?' ಎಂದು ಈಚೆಗೆ ಮಾಡಿದ ಲೇವಡಿ ಇದಕ್ಕೆ ಸಾಕ್ಷಿ. ಮಹಿಳೆಯು ಸಾರ್ವಜನಿಕ ಬದುಕಿಗೆ ಬರತಕ್ಕದ್ದಲ್ಲವೆಂದೂ ಆಕೆಯು ಪತಿ ಮತ್ತು ಮಕ್ಕಳನ್ನು ಸತ್ಪ್ರಜೆಯಾಗಿ ರೂಪಿಸುವ ಕೆಲಸಕ್ಕೆ ಮನೆಯಲ್ಲಿ ಉಳಿಯಬೇಕೆಂದು ಆರೆಸ್ಸೆಸ್ ಸ್ಪಷ್ಟವಾಗಿ ಹೇಳುತ್ತದೆ. ಮುಸ್ಲಿಂ ಮೂಲಭೂತವಾದಿಗಳೂ ಹೆಚ್ಚುಕಡಿಮೆ



ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ವಿಷಯವನ್ನು ಸಮುದಾಯ ಅಥವಾ ಜಾತಿವಾರು ನೋಡಿದಾಗಲೂ ದೊಡ್ಡ ವ್ಯತ್ಯಾಸ ಕಾಣುವುದಿಲ್ಲ. ಉದಾಹರಣೆಗೆ ಮುಸ್ಲಿಮರು. ಭಾರತದ ರಾಜಕಾರಣದಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕಡಿಮೆ. ಅದರಲ್ಲಿ ಮಹಿಳೆಯರದು ಇನ್ನೂ ಕಡಿಮೆ. ಕರ್ನಾಟಕದಲ್ಲಿ ನನಗೆ ತಿಳಿದಮಟ್ಟಿಗೆ ಇವತ್ತಿಗೂ ಒಬ್ಬ ಮುಸ್ಲಿಂ ಮಹಿಳೆ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕಳಾಗಿ ಚುನಾಯಿತಳಾದಂತಿಲ್ಲ. ನಫೀಜಾ ಫಜಲ್ ಎಂಬ ಬೆಂಗಳೂರಿನ ಎಲೈಟ್ ವರ್ಗದಿಂದ ಪಾಶ್ಚಿಮಾತ್ಯ ಜೀವನಶೈಲಿಯ ಆಧುನಿಕ ಮನಸ್ಸಿನ ಮಹಿಳೆಯೊಬ್ಬರು ಕಾಂಗ್ರೆಸ್ಸಿನಿಂದ ಎಂ.ಎಲ್.ಸಿಯಾಗಿದ್ದರು. ಅವರು ಕೆಲವು ಕಾಲ ಎಸ್.ಎಂ.ಕೃಷ್ಣ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣದ ಮಂತ್ರಿಯೂ ಆಗಿದ್ದರು. ಇಂಗ್ಲಿಷು ಮತ್ತು ತಮಿಳು ಮಿಶ್ರಿತ ಉಚ್ಚಾರದಲ್ಲಿ ಕನ್ನಡ ಬಳಸುತ್ತಿದ್ದ ಅವರನ್ನು ವಿಧಾನಸಭೆಯಲ್ಲಿ ಎಲ್ಲರೂ ತಮಾಷೆಯ ವಸ್ತುವನ್ನಾಗಿ ಮಾಡಿಕೊಂಡು ಗೋಳು ಹಾಕಿಕೊಳ್ಳುತ್ತಿದ್ದರು.

ಇದೇ ನಿಲುವಿನವರು.

ಈ ಪುರುಷಪ್ರಧಾನ ನುಡಿಗಟ್ಟು ಇತಿಹಾಸ ಬರವಣಿಗೆಯಲ್ಲೂ ಕೆಲಸ ಮಾಡಿದೆ. ರಾಜಪ್ರಭುತ್ವವಿದ್ದ ಕಾಲದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ನಿರ್ಣಾಯಕ ಪಾತ್ರವಹಿಸಿದ ಅನೇಕ ಮಹಿಳೆಯರ ಬಗ್ಗೆ ನಮ್ಮ ಚರಿತ್ರೆಯಲ್ಲಿ ಸರಿಯಾದ ಮಾಹಿತಿಯಿಲ್ಲ. ಶಿವಾಜಿಯನ್ನು ಸೋಲಿಸಿದ್ದ ಬೆಳವಡಿ ಮಲ್ಲಮ್ಮನ ಬಗ್ಗೆಯಾಗಲಿ, ಆದಿಲಶಾಹಿ ರಾಜ್ಯವು ಬಿಕ್ಕಟ್ಟಿನಲ್ಲಿದ್ದಾಗ ಜಾಣ್ಮೆಯಿಂದ ಪರಿಸ್ಥಿತಿಯನ್ನು ನಿಭಾಯಿಸಿದ ಚಾಂದ್‌ಬೀಬಿಯ ಬಗ್ಗೆಯಾಗಲಿ ಸಿಗುವ ಮಾಹಿತಿ ಬಹು ಕಡಿಮೆ; ಅಶ್ವಾರೋಹಿಯಾಗಿ ಕೈಮೇಲೆ ಬೇಟೆಯ ಗಿಡುಗನನ್ನು ಕೂರಿಸಿಕೊಂಡು ಕುದುರೆ ಓಡಿಸುತ್ತಿರುವ ಚಾಂದಬೀಬಿಯ ವರ್ಣಚಿತ್ರವು ಮಧ್ಯಯುಗದ ರಾಜಕೀಯ ಚರಿತ್ರೆಯಲ್ಲಿ ಕುತೂಹಲ ಹುಟ್ಟಿಸುತ್ತದೆ. ಸುರಪುರದ ನಾಯಕರಲ್ಲೂ ಮೈಸೂರ ಒಡೆಯರಲ್ಲೂ ಇಂತಹ ರಾಜಕೀಯ ಜಾಣ್ಮೆಯನ್ನು ಪ್ರದರ್ಶಿಸಿದ ಮಹಿಳೆಯರನ್ನು ಕಾಣುತ್ತೇವೆ. ಇವರಿಗೆ ಹೋಲಿಸಿದರೆ ಕಿತ್ತೂರು ಚನ್ನಮ್ಮ ಅದೃಷ್ಟವಂತಳು. ಅವಳನ್ನಾದರೂ ವಸಾಹತಶಾಹಿ ವಿರೋಧಿ ಹೋರಾಟದ ಸಂಕೇತವಾಗಿ ವೈಭವೀಕರಿಸಲಾಗಿದೆಯೆ ಹೊರತು ಅವಳ ರಾಜಕೀಯ ಕ್ರಿಯಾಶೀಲತೆಯ ಚರ್ಚೆ ಮಾಡಿಲ್ಲ. ಮಹಿಳೆಯ ವೈಭವೀಕರಣವು ಆಕೆಯ ಕ್ರಿಯಾಶೀಲತೆಯನ್ನು ನಿರಾಕರಿಸುವ ಮತ್ತು ನಿರ್ಬಂಧಿಸುವ ರಾಜಕಾರಣದ ಹುನ್ನಾರವಿರಬೇಕು.

ಆಧುನಿಕ ರಾಜಕಾರಣದಲ್ಲೂ ಅದ್ಭುತ ಕ್ರಿಯಾಶೀಲತೆ ಪ್ರಕಟಿಸಿದ ಅನೇಕ ಮಹಿಳೆಯರನ್ನು ಚರಿತ್ರೆ ಮರವೆಗೆ ಸಂದಿದೆ. ಶಿವಮೊಗ್ಗೆಯಲ್ಲಿ ರತ್ನಮ್ಮ ಮಾಧವರಾವ್ ಎಂಬುವವರು ಶಾಸಕರಾಗಿದ್ದರು. ಸಮಾಜವಾದಿ ಹೋರಾಟಗಾರ್ತಿಯಾಗಿದ್ದ ಆಕೆಯನ್ನು ಸರ್ಕಾರ ಜೈಲಿಗೆ ಹಾಕಿತು. ಆಗಾಕೆ ಎಳೆಗೂಸಿನ ತಾಯಿ. ಆಕೆ ಜೈಲಲ್ಲೇ ಮಗುವನ್ನು ಸಾಕಿಕೊಂಡಿದ್ದರು. ಕಡೆಗೆ ತಾಯಿ-ಮಗುವನ್ನು ಅಗಲಿಸಲಾಯಿತು. ತಾಯ ಅಗಲಿಕೆಯಿಂದ ಮಗು ಕಾಯಿಲೆಬಿದ್ದು ತೀರಿಹೋಯಿತು. ಅದರ ಸಂಸ್ಕಾರಕ್ಕೂ ಆಕೆಗೆ ಬಿಡುಗಡೆ ಮಾಡಲಿಲ್ಲ. ಅವರ ಜತೆ ಚಳವಳಿಯಲ್ಲಿ ಸಂಗಾತಿಯಾಗಿ ಕೆಲಸಮಾಡಿದ ಕರ್ನಾಟಕ ಕಂಡ ಧೀಮಂತ ಮಹಿಳೆಯರಲ್ಲಿ ಒಬ್ಬರಾದ ಪೊನ್ನಮ್ಮಾಳ್ ಇದನ್ನು ಒಮ್ಮೆ ಹೇಳಿದರು.

ಸಾರ್ವಜನಿಕ ಬದುಕಿನಲ್ಲಿ ಮಹಿಳೆಯರು ಹೆಚ್ಚು ಸ್ಪೇಸನ್ನು ಆಕ್ರಮಿಸಿಕೊಳ್ಳದೆ ಹಾಗೆ ಒಳಗೇ ನಿಯಂತ್ರಿಸುವ ಸಾಮಾಜಿಕ ಮನೋಭಾವದ ವಿಷಯದಲ್ಲಿ ಎಡಪಂಥಗಳೂ ಹೊರತಾಗಿಲ್ಲ. ಬೃಂದಾಕಾರಟ್ ಅವರು ಸಿಪಿಎಂ ಪಕ್ಷದ ಪಾಲಿಟ್‌ಬ್ಯೂರೋ ಪ್ರವೇಶಿಸಿದ ಪ್ರಥಮ ಮಹಿಳೆ ಎಂದು ತಿಳಿದಾಗ ನನಗೆ ಸೋಜಿಗವಾಯಿತು. ಕನ್ನಡಕ ಧರಿಸಿದ ವಯೋವೃದ್ಧ ಪುರುಷರ ಕೂಟಗಳಂತೆ ಕಾಣುವ ಕಮ್ಯುನಿಸ್ಟರ ಮಂತ್ರಾಲೋಚಕ ಸಭೆಗಳಿಗೆ ಒಬ್ಬ ಹೆಣ್ಣು ಪ್ರವೇಶಿಸಿರುವುದು ಕೆಲಮಟ್ಟಿಗೆ ಸಂಚಲನೆ ತಂದಿರಬಹುದು. ಸಮಾನತೆಯನ್ನು ಒಂದು ತತ್ವವಾಗಿ ಪ್ರತಿಪಾದಿಸುವ ಪಕ್ಷಗಳಲ್ಲೇ ಈ ಸ್ಥಿತಿಯಿದೆ ಎಂದ ಬಳಿಕ ಉಳಿದವರ ಬಗ್ಗೆ ಏನು ಹೇಳುವುದು? ಗೌರಿ ಎಂಬ ಮಹಿಳೆ ಕಮ್ಯುನಿಸ್ಟರ ಪಕ್ಷದಲ್ಲಿ ಹಿರಿಯ ನಾಯಕರಲ್ಲಿ ಒಬ್ಬರು. ವಾಸ್ತವದಲ್ಲಿ ಅವರು ಕೇರಳದ ಮುಖ್ಯಮಂತ್ರಿ ಆಗಬೇಕಾಗಿದ್ದವರು. ಆದರೆ ಅವರಿಗೆ ಆ ಅವಕಾಶ ತಪ್ಪಿಸಲಾಯಿತು ಎಂದು ಕತೆಗಳಿವೆ.

ಈ ಸಲದ ಚುನಾವಣೆಯಲ್ಲಿ ಮಹಿಳೆಯರಿಗೆ ವಿವಿಧ ಪಕ್ಷಗಳು ಕೊಟ್ಟಿರುವ ಪ್ರಾತಿನಿಧ್ಯವನ್ನು ಕಂಡರೂ (ಕಾಂಗ್ರೆಸ್-೧೧; ಬಿಎಸ್‌ಪಿ-೧೦; ಜೆಡಿಎಸ್-೧೦; ಬಿಜೆಪಿ-೧೦) ಅವು ಎಷ್ಟು ಪುರುಷವಾದಿ ಎಂದು ಗೊತ್ತಾಗುತ್ತದೆ. ವ್ಯಂಗ್ಯವೆಂದರೆ, ಮೇಲ್ಕಾಣಿಸಿದ ಮೊದಲೆರಡು ಪಕ್ಷಗಳ ರಾಷ್ಟ್ರೀಯ ಅಧ್ಯಕ್ಷರು ಮಹಿಳೆಯರು! ಬಿಜೆಪಿಯು ಮಹಿಳೆಯರಿಗೆ ಸರಿಯಾಗಿ ಪ್ರಾತಿನಿಧ್ಯ ಕೊಟ್ಟಿಲ್ಲವೆಂದು ಸ್ವತಃ ಸುಷ್ಮಾ ಸ್ವರಾಜ್ ಕೂಡ ಬಹಿರಂಗವಾಗಿ ಆಕ್ಷೇಪಿಸಿದರು.

ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ವಿಷಯವನ್ನು ಸಮುದಾಯ ಅಥವಾ ಜಾತಿವಾರು ನೋಡಿದಾಗಲೂ ದೊಡ್ಡ ವ್ಯತ್ಯಾಸ ಕಾಣುವುದಿಲ್ಲ. ಉದಾಹರಣೆಗೆ ಮುಸ್ಲಿಮರು. ಭಾರತದ ರಾಜಕಾರಣದಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕಡಿಮೆ. ಅದರಲ್ಲಿ ಮಹಿಳೆಯರದು ಇನ್ನೂಕಡಿಮೆ. ಕರ್ನಾಟಕದಲ್ಲಿ ನನಗೆ ತಿಳಿದಮಟ್ಟಿಗೆ ಇವತ್ತಿಗೂ ಒಬ್ಬ ಮುಸ್ಲಿಂ ಮಹಿಳೆ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕಳಾಗಿ ಚುನಾಯಿತಳಾದಂತಿಲ್ಲ. ನಫೀಜಾ ಫಜಲ್ ಎಂಬ ಬೆಂಗಳೂರಿನ ಎಲೈಟ್ ವರ್ಗದಿಂದ ಪಾಶ್ಚಿಮಾತ್ಯ ಜೀವನಶೈಲಿಯ ಆಧುನಿಕ ಮನಸ್ಸಿನ ಮಹಿಳೆಯೊಬ್ಬರು ಕಾಂಗ್ರೆಸ್ಸಿನಿಂದ ಎಂ.ಎಲ್.ಸಿಯಾಗಿದ್ದರು. ಅವರು ಕೆಲವು ಕಾಲ ಎಸ್.ಎಂ.ಕೃಷ್ಣ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣದ ಮಂತ್ರಿಯೂ ಆಗಿದ್ದರು. ಇಂಗ್ಲಿಷು ಮತ್ತು ತಮಿಳು ಮಿಶ್ರಿತ ಉಚ್ಚಾರದಲ್ಲಿ ಕನ್ನಡ ಬಳಸುತ್ತಿದ್ದ ಅವರನ್ನು ವಿಧಾನಸಭೆಯಲ್ಲಿ ಎಲ್ಲರೂ ತಮಾಶೆಯ ವಸ್ತುವನ್ನಾಗಿ ಮಾಡಿಕೊಂಡು ಗೋಳುಹಾಕಿಕೊಳ್ಳುತ್ತಿದ್ದರು. ದಲಿತ ರಾಜಕಾರಣಿಗಳಲ್ಲೂ ಇದೇ ಸನ್ನಿವೇಶವಿದೆ. ಮೋಟಮ್ಮ ಮತ್ತು ಮಲ್ಲಾಜಮ್ಮ ಬಿಟ್ಟರೆ ಬೇರೆ ಹೆಸರುಗಳೇ ಕಾಣುವುದಿಲ್ಲ. ಪ್ರತಿಭಾವಂತರಾದ ಮೋಟಮ್ಮನವರನ್ನು ಕೂಡ ಕಾಂಗ್ರೆಸ್ಸಿನಲ್ಲಿ ಸಾಕಷ್ಟು ಮೂಲೆಗುಂಪು ಮಾಡಲಾಯಿತು. ಮಹಿಳೆಯರನ್ನು ಎಲ್ಲ ಪಕ್ಷಗಳು ಮುಂಚೂಣಿಗೆ ಬಾರದಂತೆ ವ್ಯವಸ್ಥಿತವಾಗಿ ಕೆಲಸ ಮಾಡಿವೆ. ಒಂದೊಮ್ಮೆ ಪ್ರಾತಿನಿಧಿಕವಾಗಿಯೊ ಸಾಂಕೇತಿಕವಾಗಿಯೊ ಅವರಿಗೆ ಅಧಿಕಾರ ಸಿಕ್ಕರೆ, ಅದನ್ನು ಅವರು ಸ್ವಂತವಾಗಿ ಚಲಾಯಿಸದಂತೆ ನೂರಾರು ಅಡಚಣೆಗಳನ್ನು ಒಡ್ಡಲಾಗುತ್ತದೆ. ಅಥವಾ ಹಿಂದಿನಿಂದ ಅವರನ್ನು ನಿಯಂತ್ರಿಸಲಾಗುತ್ತದೆ.

ಪುತ್ತೂರಿನ ಶಕುಂತಲಾಶೆಟ್ಟಿ ಪ್ರಕರಣವನ್ನು ಗಮನಿಸಿ. ಆಕೆ ಮೂರು ಸಲ ಶಾಸಕಿಯಾದವರು. ಆಕೆ 'ಪ್ರಾಮಾಣಿಕ' ಕೆಲಸಗಾರ್ತಿ ಎಂದು ಹೇಳಲಾಗುತ್ತದೆ. (ಧರ್ಮದ ಹೆಸರಲ್ಲಿ ಜನರನ್ನು ವಿಭಜಿಸುವ ಕೊಲೆಗಡುಕ ರಾಜಕಾರಣವನ್ನೆ ತನ್ನ ತತ್ವವಾಗಿಸಿಕೊಂಡ ಪಕ್ಷದಲ್ಲಿದ್ದವರ ವೈಯಕ್ತಿಕ ಪ್ರಾಮಾಣಿಕತೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕೊ ತಿಳಿಯುವುದಿಲ್ಲ.) ಶಕುಂತಲಾ ಅವರಿಗೆ ಮಂತ್ರಿಸ್ಥಾನ ಕೊಡುವ ಅವಕಾಶ ಬಂದಾಗ ಆ ಪಕ್ಷದವರು, ಮುಖ್ಯವಾಗಿ ಸದಾನಂದಗೌಡರು ತಪ್ಪಿಸಿದರು ಎನ್ನುತ್ತಾರೆ. ಸ್ವತಂತ್ರ ಪ್ರವೃತ್ತಿ ತೋರುತ್ತಿದ್ದ ಆಕೆಗೆ ಈಬಾರಿ ಪಕ್ಷದ ಟಿಕೇಟನ್ನು ಕೂಡ ನಿರಾಕರಿಸಲಾಯಿತು. ನಂತರ ಆಕೆಯ ಬೆನ್ನುಕಟ್ಟಿದವರು ಜನಸಂಘ ಕಾಲದ ಶಾಸಕರಾಗಿದ್ದ ರಾಮಭಟ್ಟ ಎನ್ನುವ ಮತ್ತೊಬ್ಬ ಆರೆಸ್ಸೆಸ್ ಆದರ್ಶವಾದಿ ವ್ಯಕ್ತಿ. ಒಂದು ಹಂತದಲ್ಲಿ ಸದಾನಂದಗೌಡ ಮತ್ತು ರಾಮಭಟ್ಟರ ಸಂಘರ್ಷಗಳ ನಡುವೆ ಶಕುಂತಲಾ ಸಿಕ್ಕಿಕೊಂಡಂತೆ ಕಾಣುತ್ತಿತ್ತು. ತನ್ನ ಬೆಂಬಲಕ್ಕೆ ನಿಂತ ರಾಮಭಟ್ಟರ ಮೇಲೆ ಶಕುಂತಲಾ ಎಷ್ಟು ಅವಲಂಬಿತರಾದರು ಎಂದರೆ, ಏನು ಕೇಳಿದರೂ 'ರಾಮಭಟ್ಟರು ಹೇಳಿದಂತೆ ಮಾಡುತ್ತೇನೆ' ಎನ್ನತೊಡಗಿದರು. ಇದು ರಾಮಭಟ್ಟರಿಗೆ ಅವರು ಕೊಟ್ಟ ಗೌರವವಿರಬಹುದು. ಪರಿಣಾಮದಲ್ಲಿ ಮಹಿಳೆಯರು ಗಂಡಸರ ನೆರವಿಲ್ಲದೆ ರಾಜಕಾರಣ ಮಾಡುವುದು ಸಾಧ್ಯವಿಲ್ಲ ಎಂಬ ಅರ್ಥವೇ ಹೊರಟಿತು.

ಇನ್ನೊಂದು ನಿದರ್ಶನ ಬಿ.ಟಿ.ಲಲಿತಾನಾಯಕರದು. ಅವರು ನಾಡಿನ ಅತ್ಯಂತ ಹಿಂದುಳಿದ ತಾಲೂಕಾಗಿರುವ ದೇವದುರ್ಗಕ್ಕೆ ಒಮ್ಮೆ ಶಾಸಕಿಯಾಗಿದ್ದರು. ದಮನಿತರ ಮೇಲೆ ಕಾಳಜಿಯಿಂದ ಬರೆಯುವ ಈ ಲೇಖಕಿ ಶಾಸಕಿಸ್ಥಾನದ ಪರಿಮಿತಿಯಲ್ಲೇ ಒಳ್ಳೆಯ ಕೆಲಸ ಮಾಡುವ ಸಾಧ್ಯತೆಯಿತ್ತು. ಆದರವರು ಮಾಡಲಿಲ್ಲ. ಅದಿರಲಿ. ಅವರನ್ನು ಅವರ ಮಗ ಅಂಬೇಡ್ಕರ್ ಪ್ರತಿಮೆಗೆ ಕುಡಿದ ಮತ್ತಿನಲ್ಲಿ ಮದ್ಯ ಸುರಿದನೆಂದು ಮಂತ್ರಿಸ್ಥಾನದಿಂದ ತೆಗೆದುಹಾಕಲಾಯಿತು. ಆ ಪ್ರಕರಣದಲ್ಲಿ ಅವರನ್ನು ಕೈಬಿಡಲು ಅವರ ಪುರುಷ ಸಂಗಾತಿಗಳು ಸಾಕಷ್ಟು ಶ್ರಮವಹಿಸಿದರು. ಲಲಿತಾ ಅವರಿಗೆ ಕ್ಯಾಬಿನೆಟ್ ದರ್ಜೆಯಿಲ್ಲದೆ ಸಂಸ್ಕೃತಿ ಇಲಾಖೆಯನ್ನು ಕೊಡಲಾಗಿತ್ತು. ಅದರಲ್ಲಿ ಅವರ ಪುರುಷ ಸಹೋದ್ಯೋಗಿ ಮಂತ್ರಿಗಳು ಹಸ್ತಕ್ಷೇಪ ಮಾಡುತ್ತಿದ್ದರು. ಹಾಗೆ ಮಾಡುವಲ್ಲಿ ಒಬ್ಬ ಲಂಬಾಣಿ ಹೆಂಗಸಿಗೆ ಏನು ಕೇಳಬೇಕು ಎಂಬ ಸವರ್ಣೀಯ ಜಾತಿಪ್ರಜ್ಞೆಯೂ, ಒಂದು ಹೆಣ್ಣುಹೆಂಗಸಿಗೆ ಏನು ತಿಳಿಯುತ್ತೆ ಎಂಬ ಪುರುಷಾಹಂಕಾರವೂ ಕೂಡಿ ಕೆಲಸ ಮಾಡಿರಬಹುದು. ಪಾಕಿಸ್ತಾನದಲ್ಲಿ ಭೂಮಾಲಿಕ ಮತ್ತು ಪ್ರತಿಷ್ಠಿತ ಕುಟುಂಬಗಳಿಂದ ಅನೇಕ ಮಹಿಳೆಯರು ರಾಜಕಾರಣಕ್ಕೆ ಬರುವ ಪದ್ಧತಿಯಿದೆ. ಅವರನ್ನು ಸಾರ್ವಜನಿಕ ಜೀವನಕ್ಕೆ ಬಂದರೆಂಬ ಒಂದೇ ಕಾರಣದಿಂದ ಮೂಲಭೂತವಾದಿಗಳು ಕೊಂದು

> **ಆಧುನಿಕ ರಾಜಕಾರಣದಲ್ಲೂ ಅದ್ಭುತ ಕ್ರಿಯಾಶೀಲತೆ ಪ್ರಕಟಿಸಿದ ಅನೇಕ ಮಹಿಳೆಯರನ್ನು ಚರಿತ್ರೆ ಮರವೆಗೆ ಸಂದಿದೆ. ಶಿವಮೊಗ್ಗೆಯಲ್ಲಿ ರತ್ನಮ್ಮ ಮಾಧವ ರಾವ್ ಎಂಬುವವರು ಶಾಸಕರಾಗಿದ್ದರು. ಸಮಾಜವಾದಿ ಹೋರಾಟಗಾರ್ತಿಯಾಗಿದ್ದ ಆಕೆಯನ್ನು ಸರ್ಕಾರ ಜೈಲಿಗೆ ಹಾಕಿತು. ಆಗಾಕೆ ಎಳೆಗೂಸಿನ ತಾಯಿ. ಆಕೆ ಜೈಲಲ್ಲೇ ಮಗುವನ್ನು ಸಾಕಿ ಕೊಂಡಿದ್ದರು.**

ಹಾಕಿದರು. ಕಳೆದ ವರ್ಷ ಪಾಕಿಸ್ತಾನದಲ್ಲಿ ಮಂತ್ರಿಯಾಗಿದ್ದ ಒಬ್ಬ ಆಧುನಿಕ ಮನಸ್ಸಿನ ಮಹಿಳೆ ಹುಮಾ ಉಸ್ಮಾನರನ್ನು ([illegible]) ಒಬ್ಬ ಕೊಂದನು. ವಿಚಾರಣೆಯ ವೇಳೆಯಲ್ಲಿ ಅವನು ಹೇಳಿದ: "ಆಕೆಯನ್ನು ಕೊಂದು ನಾನು ಧರ್ಮ ರಕ್ಷಣೆ ಮಾಡಿದ್ದೇನೆ. ಆಕೆ ಇಸ್ಲಾಮಿಕ್ ರೀತಿಯ ಉಡುಪನ್ನು ಧರಿಸುತ್ತಿರಲಿಲ್ಲ." ವಸ್ತ್ರಸಂಹಿತೆಯಾಗಲಿ ಪಾಶ್ಚಾತ್ಯ ಜೀವನಶೈಲಿಯಾಗಲಿ ಕೊಲ್ಲಲು ಒಂದು ನೆಪವಾಗಿತ್ತು ಅಷ್ಟೆ. ಬೆನಜೀರ್ ಸಾವಿನ ಹಿಂದೆ ಕೂಡ ಈ ಮನೋಭಾವ ಕೆಲಸ ಮಾಡಿದೆ. ಪಕ್ಕದ ಮ್ಯಾನ್ಮಾರಿನಲ್ಲಿ ಸೂಕಿಯನ್ನು ಮನೆಬಂಧನದಲ್ಲಿ ಇಟ್ಟಿರುವಲ್ಲೂ ಇಂತಹುದೇ ಮನೋಭಾವ ಕೆಲಸ ಮಾಡಿರಬಹುದು.

ಮೀಸಲಾತಿ ಆಧಾರದಲ್ಲಿ ಜಿಲ್ಲಾಪಂಚಾಯಿತಿ ತಾಲೂಕು ಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷರಾದ ಮಹಿಳೆಯರ ಪರವಾಗಿ ಅವರ ಗಂಡಂದಿರು ತಾವೇ ಅಧಿಕಾರ ನಡೆಸಿದ ಪ್ರಕರಣಗಳು ನಡೆದವು. ಈ ಕುರಿತು ಅಗತ್ಯಕ್ಕಿಂತ ಹೆಚ್ಚಾಗಿ ವರದಿ ಮಾಡಿರುವ ನಮ್ಮ ಮಾಧ್ಯಮಗಳಿಗೆ "ಹೀಗಾಗಬಾರದು, ಮಹಿಳೆಯರೇ ತಮ್ಮ ಅಧಿಕಾರವನ್ನು ತಾವೆ ಚಲಾಯಿಸಬೇಕು" ಎಂಬ ಕಾಳಜಿಗಿಂತ, ಮಹಿಳೆಯರಿಗೆ ಅಧಿಕಾರ ಕೊಟ್ಟರೆ ಹೀಗೇ ಆಗುವುದು ಎಂಬ ದನಿಯೇ ಹೆಚ್ಚಾಗಿತ್ತು ಅನಿಸುತ್ತದೆ. ಬಿಹಾರದಲ್ಲಿ ಕೋರ್ಟು ನಿರ್ಣಯದ ಪ್ರಕಾರ ಲಾಲೂಪ್ರಸಾದರು ಮುಖ್ಯಮಂತ್ರಿ ಸ್ಥಾನ ತ್ಯಜಿಸಬೇಕಾಯಿತು. ಆಗ ಅವರು ಮನೆ ಉಸ್ತುವಾರಿ ನೋಡಿಕೊಂಡಿದ್ದ ಮಡದಿಗೆ ಅಧಿಕಾರ ವಹಿಸಿದರು. ಮುಖ್ಯಮಂತ್ರಿಯಾದ ರಾಬ್ಡಿದೇವಿಯವರಿಗೆ ಪತ್ರಕರ್ತರು 'ನಿಮಗೆ ಅನುಭವವಿಲ್ಲ. ನೀವು ಹೇಗೆ ರಾಜಕೀಯ ನಿರ್ಣಯ ಕೈಗೊಳ್ಳುತ್ತೀರಿ?' ಎಂದು ಪ್ರಶ್ನಿಸಿದರು. ಆಕೆ ಅಮಾಯಕವಾಗಿ 'ನಮ್ಮ ಯಜಮಾನರು ಹೇಳಿದ ಹಾಗೆ ಮಾಡುತ್ತೇನೆ' ಎಂದರು. ಮಾಧ್ಯಮಗಳು ಇಡೀ ಪ್ರಕರಣವನ್ನು ಕುಟುಂಬ ರಾಜಕಾರಣದ ಪ್ರಶ್ನೆಗಿಂತ ನೋಡುವುದಕ್ಕಿಂತ ಹೆಚ್ಚಾಗಿ 'ಒಬ್ಬ ಪಾಪದ ಹೆಂಗಸು' ಎಂಬ ದನಿಯಲ್ಲಿ ಬಿಂಬಿಸಿದವು.

ಪಾರಂಪರಿಕವಾಗಿ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿದ ಹಿನ್ನೆಲೆಯಿಲ್ಲದ ಮಹಿಳೆಯರು ಇದಕ್ಕಿದ್ದಂತೆ ರಾಜಕಾರಣಕ್ಕೆ ಪ್ರವೇಶ ಮಾಡಿದರೆ ಅದನ್ನು ಹೇಗೆ ಪರಿಭಾವಿಸಬೇಕು ಎಂಬ ಸಾಂಸ್ಕೃತಿಕ ಸಂವೇದನೆ ಬಹುತೇಕ ಮಾಧ್ಯಮಗಳಿಗಿಲ್ಲ. ಇಷ್ಟಿಷ್ಟು ಜನಸಂಖ್ಯೆಯುಳ್ಳ ಕುರುಬರು ಲಿಂಗಾಯತರು ದಲಿತರಿಗೆ ಮುಖ್ಯಮಂತ್ರಿಸ್ಥಾನ ಸಿಗಬೇಕು ಎಂದು ನಾವು ಚರ್ಚಿಸುತ್ತೇವೆ. ಆದರೆ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಈತನಕ ಕರ್ನಾಟಕದ ಮುಖ್ಯಮಂತ್ರಿಯಾಗಿಲ್ಲ ಎಂಬ ಪ್ರಶ್ನೆಯನ್ನೇ ಪ್ರಜ್ಞೆಯಿಂದ ಗಡಿಪಾರು ಮಾಡಿರುವುದು ಮರೆತಿದ್ದೇವೆ. ಮಹಿಳೆಯರಿಗೆ ಮೀಸಲಾತಿ ಮಸೂದೆಯು ಇನ್ನೂ ಪಾಸಾಗದಿರಲು ಕಾರಣ, ಭಾರತದ ಶಕ್ತಿ ರಾಜಕಾರಣದಲ್ಲಿ ತುಂಬಿರುವ ಪುರುಷವಾದಿ ಮನಸ್ಸು ಮುಖ್ಯವೆಂದು ತೋರುತ್ತದೆ.

ಇದನ್ನು ಹೇಳುವಾಗ, ಮಹಿಳೆಯರು ರಾಜಕೀಯಕ್ಕೆ ಬಂದರೆ ಮಹಿಳೆಯರ ಹಿತ ರಕ್ಷಿಸುತ್ತಾರೆ, ಸಮಾಜದಲ್ಲಿ ಕ್ರಾಂತಿಯಾಗುತ್ತದೆ, ಶತಮಾನಗಳಿಂದ ಬಂದ ಸಾಮಾಜಿಕ ಮನೋಭಾವ ತಟ್ಟನೆ ಬದಲಾಗುತ್ತದೆ ಎಂದೇನು ಭಾವಿಸಬೇಕಿಲ್ಲ. ಇಬ್ಬರು ಹೆಂಗಸರು ಆಳ್ವಿಕೆ ನಡೆಸಿರುವ ಬಾಂಗ್ಲಾದೇಶದಲ್ಲಿ ಮಹಿಳೆಯರ ಪರಿಸ್ಥಿತಿ ಏನೂ ಉತ್ತಮವಾಗಿಲ್ಲ. ಮಹಿಳೆಯರ ಮನೋಭಾವದಲ್ಲಿ

ಮಹಿಳಾಸಂವೇದನೆ ಇಲ್ಲದಿದ್ದರೆ, ಅದು ಪುರುಷ ನುಡಿಗಟ್ಟಿನಲ್ಲೇ ಇದ್ದರೆ, ಅವರು ಅಧಿಕಾರಕ್ಕೆ ಬರುವುದರಿಂದ ದೊಡ್ಡ ಪ್ರಯೋಜನ ಆಗುವುದಿಲ್ಲ. ಮಮತಾ ಬ್ಯಾನರ್ಜಿ, ಜಯಲಲಿತಾ, ಮಾಯಾವತಿ, ಉಮಾಭಾರತಿ, ವಿಜಯರಾಜೆ ಸಿಂಧ್ಯಾ, ಪ್ರಮೀಳಾ ನೇಸರ್ಗಿ, ಇವರೆಲ್ಲ ರಾಜಕಾರಣದಲ್ಲಿ ಇರುವ ಕೆಲವು ಮಹಿಳೆಯರು. ಆದರೆ ಇವರಲ್ಲಿ ಅನೇಕರ ಜೀವನಶೈಲಿ, ಸರ್ವಾಧಿಕಾರಿ ಧೋರಣೆ, ಆರ್ಥಿಕ ನೀತಿ, ಚಿಂತನೆಯ ಕ್ರಮ ಕಂಡರೆ ಅವು ಅವರ ಮಹಿಳಾ ಕಾಳಜಿಗಳನ್ನೇನ್ನೂ ಸಾಬೀತು ಪಡಿಸುವುದಿಲ್ಲ. ತನ್ನ ಪಕ್ಷವು ಮಹಿಳೆಯರಿಗೆ ಸೂಕ್ತ ಟಿಕೇಟು ಕೊಟ್ಟಿಲ್ಲ ಎಂದು ಅವಲತ್ತುಕೊಂಡ ಇದೇ ಸುಷ್ಮಾ ಸ್ವರಾಜ್, ಸೋನಿಯಾ ಪ್ರಧಾನಿಯಾಗುವ ಸನ್ನಿವೇಶ ಬಂದಾಗ, ಪ್ರಾಣಹೋದವರಂತೆ ವಿರೋಧ ಮಾಡಿದರು. ಸೋನಿಯಾ ಪ್ರಧಾನಿಯಾದರೆ ತಾನು ವಿಧವೆಯಂತೆ ಬಿಳಿಸೀರೆಯುಟ್ಟು ನೆನೆದ ಕಡಲೆ ತಿಂದುಕೊಂಡು ಸನ್ಯಾಸಿಯ ಬದುಕನ್ನು ಬದುಕುತ್ತಿದ್ದೆ ಎಂದು ಪ್ರತಿಜ್ಞೆ ಮಾಡಿದರು. ಉರಿನಾಲಗೆಯ ಉಮಾಭಾರತಿ ತನ್ನ ಅರ್ಧಶಕ್ತಿಯನ್ನು ಸೋನಿಯಾ ನಿಂದನೆಯಲ್ಲಿ ಕಳೆದರು.

ಆದ್ದರಿಂದ ಮಹಿಳೆಯರಿಗೆ ರಾಜಕೀಯ ಪಾಲುಗಾರಿಕೆ ಇರಬೇಕು ಮತ್ತು ರಾಜಕೀಯ ಪ್ರಾತಿನಿಧ್ಯ ಇರಬೇಕು ಎನ್ನುವಾಗ, ಅದು ಯಾವ ವರ್ಗದ ಹಿತಾಸಕ್ತಿ ರಕ್ಷಿಸುತ್ತದೆ, ಯಾವ ಮೌಲ್ಯಗಳಿಗಾಗಿ ಅವರ ರಾಜಕಾರಣ ಬಳಕೆಯಾಗುತ್ತದೆ ಎಂದು ಕೇಳಿಕೊಳ್ಳಬೇಕು. ಅಮೆರಿಕದ ರಾಜಕಾರಣದಲ್ಲಿ ಪ್ರಮುಖ ಖಾತೆ ನಿರ್ವಹಿಸುತ್ತಿರುವ ಕಪ್ಪುಮಹಿಳೆ ರೈಸ್ ಅವರ ಬಗ್ಗೆ ಲೇಖಕಿ? ಅರುಂಧತಿ ರಾಯ್ ಈ

ಪ್ರಶ್ನೆ ಎತ್ತಿದ್ದರು. ತನ್ನ ಆಡಳಿತ ದಕ್ಷತೆಗೆ ಹೆಸರಾಗಿರುವ ಪೆಪ್ಸಿಕೋಲಾ ಕಂಪನಿಯ ಭಾರತದ ನಿರ್ದೇಶಕಿಯಾದ ಇಂದ್ರಾನೂಯಿ ಬಗ್ಗೆ ಕೂಡ ನಮ್ಮ ಜನರಿಗೆ ವಿಷ ಕುಡಿಸುವ ಕಂಪನಿಯ ನೇತಾರಳಾದ ಮಾತ್ರಕ್ಕೆ ಯಾಕೆ ನಾನು ಅಭಿಮಾನ ಪಡಬೇಕು ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಸದ್ಯದ ಕರ್ನಾಟಕದ ಚುನಾವಣೆಯಲ್ಲಿ ಪಕ್ಷಗಳು ಒಂದೊಮ್ಮೆ ಮಹಿಳೆಯರಿಗೆ ಸಾಕಷ್ಟು ಟಿಕೇಟು ಕೊಟ್ಟಿದ್ದರೂ, ಅವರು ಗೆದ್ದರೆ ಯಾರ ನಿಯಂತ್ರಣದಲ್ಲಿ ಇರುತ್ತಿದ್ದರು ಎಂಬ ಪ್ರಶ್ನೆ ಇದ್ದೇಯಿದೆ. ಇದೆಲ್ಲ ನಿಜ. ಆದರೆ, ಮಹಿಳೆಯೊಬ್ಬರು ಅಧಿಕಾರಕ್ಕೆ ಬರುವುದು, ಅನೇಕ ರೀತಿಯಲ್ಲಿ ಸಾಮಾಜಿಕ ಸಂಚಲನೆಯನ್ನು ಉಂಟುಮಾಡುವ ಮತ್ತು ಅನೇಕರಿಗೆ ಅದು ಪ್ರೇರಣೆಯನ್ನು ಕೊಡುವ ಸಂಗತಿ ಕೂಡ ಆಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಅದರಲ್ಲೂ ಮಹಿಳೆಯರು ರಾಜಕಾರಣಕ್ಕೆ ಪ್ರವೇಶಿಸಲು ಕಾರಣ ಯಾವುದೇ ಇರಲಿ, ಅದು ಕ್ರಮೇಣ ನಮ್ಮ ಸಾಮಾಜಿಕ ಗ್ರಹಿಕೆಗಳನ್ನು ಬದಲಿಸುವ ಕೆಲಸ ಮಾಡುತ್ತದೆ. ಅಧ್ಯಕ್ಷರಾಗಿಯೊ ಉಪಾಧ್ಯಕ್ಷರಾಗಿಯೊ ಆಯ್ಕೆಯಾದ ಗ್ರಾಮೀಣ ಮಹಿಳೆಯರು ಪಂಚಾಯಿತ್ ಸಭೆಗಳಲ್ಲಿ ಜಿಲ್ಲಾಧಿಕಾರಿಗಳ ಜತೆ ಸಮಾನಸ್ಕಂಧರಾಗಿ ಕೂರುವುದನ್ನು ನೋಡುವಾಗ, ಅವರು ಯಾರ ಪರ ನಿರ್ಣಯ ತೆಗೆದುಕೊಳ್ಳುತ್ತಾರೆ ಎಂಬ ಪ್ರಶ್ನೆಯನ್ನು ತಾತ್ಕಾಲಿಕವಾಗಿ ಅದುಮಿ ಸಂತೋಷಿಸಬೇಕು. ಯಾಕೆಂದರೆ ಈ ಬಗೆಯ ಭಾಗವಹಿಸುವಿಕೆಯು ಒಂದು ಪ್ರಕ್ರಿಯೆಯಾಗಿದ್ದು ಅದನ್ನು ನಮ್ಮೆಲ್ಲ ಸಂಶಯಗಳ ಜತೆಗೆ ಪಾಸಿಟಿವಾಗಿ ನೋಡಬೇಕು ಅನಿಸುತ್ತದೆ.

ಈ ಹಿನ್ನೆಲೆಯಲ್ಲಿ ನೋಡುವಾಗ ಭಾರತದ ಮಹಿಳೆಯರು ಸಾರ್ವಜನಿಕ ಬದುಕಿಗೆ ಅದರಲ್ಲೂ ರಾಜಕಾರಣಕ್ಕೆ ಪ್ರವೇಶ ಪಡೆಯುತ್ತಿರುವ ಒಂದು ಬಗೆ ಮಾತ್ರ ವಿಚಿತ್ರವಾಗಿ ಕಾಣುತ್ತದೆ. ಗಂಡ ಇಲ್ಲವೇ ಅಪ್ಪ ಸತ್ತ ಬಳಿಕ ಅವರ ಪ್ರತಿನಿಧಿಯಾಗಿ ಅವರ ಪ್ರವೇಶ ಸಾಧ್ಯವಾಗುತ್ತಿದೆ. 'ಅಪ್ಪ ಸಾಯುವ ತನಕ ಮಗ ಜವಾಬ್ದಾರನಾಗುವುದಿಲ್ಲ' ಎಂಬ ಮಾತಿದೆಯಷ್ಟೆ. ಇದನ್ನು ನಮ್ಮ ರಾಜಕಾರಣದ ಸಂದರ್ಭದಲ್ಲಿ 'ಗಂಡಸಾಯದೆ ಮಹಿಳೆ ಪಾಲಿಟಿಕ್ಸಿಗೆ ಇಳಿಯುವುದು ಸಾಧ್ಯವಿಲ್ಲ' ಎಂದು ಬೇಕಾದರೆ ಬದಲಿಸಬಹುದು. ಹನೂರಿನ ನಾಗಪ್ಪ, ಶ್ರೀರಂಗಪಟ್ಟಣದ ಬಂಡಿಸಿದ್ದೇಗೌಡ, ಕೊಟ್ಟೂರಿನ ಮರುಳಸಿದ್ಧನಗೌಡ, ಹುನಗುಂದದ ಕಾಶಪ್ಪನವರ್ ಮುಂತಾದವರ ಪತ್ನಿಯರು ಕರ್ನಾಟಕ ಶಾಸನಸಭೆಗೆ ಪ್ರವೇಶ ಪಡೆದಿದ್ದು ಹೀಗೆ. ಸುನೀಲ್‌ದತ್ ಮಗಳು ಪ್ರಿಯಾ ಪಾರ್ಲಿಮೆಂಟಿಗೆ ಹೋಗಿದ್ದು ಹೀಗೆ. ಪಾಕಿಸ್ತಾನದಲ್ಲಿ ತನ್ನಪ್ಪನ ಕೊಲೆಯಾದ ಬಳಿಕ ಬೆನಜೀರ್ ಭುಟ್ಟೊ ರಾಜಕಾರಣಕ್ಕೆ ಬಂದರು. ಬಾಂಗ್ಲಾದೇಶದಲ್ಲಿ ತಮ್ಮ ಅಪ್ಪ ಮತ್ತು ಗಂಡಂದಿರ ಕೊಲೆಗಳ ಬಳಿಕ ಖಾಲಿಯಾದ ಜಾಗಕ್ಕೆ ಇಬ್ಬರು ಮಹಿಳೆಯರು –ಶೇಕ್ ಹಸೀನಾ ಮತ್ತ ಖಾಲಿದಾ ಜಿಯಾ– ರಾಜಕೀಯಕ್ಕೆ ಬಂದು ಪ್ರಧಾನಮಂತ್ರಿಗಳಾದರು. ಸೋನಿಯಾ ಕೂಡ ವಿಧವೆಯಾದ ಬಳಿಕವೇ ರಾಜಕಾರಣಕ್ಕೆ ಬಂದವರು. ಗಂಡ ಅಥವಾ ತಂದೆಯ ಸಾವಿನ ಅನುಕಂಪೆಯ ಪ್ರಯೋಜನ ಪಡೆಯುವ ರಾಜಕೀಯದ ಭಾಗವಾಗಿ ಈ ಮಹಿಳೆಯರಿಗೆ ಸ್ಥಾನ ಸಿಕ್ಕುತ್ತಿರುವುದು ನಮ್ಮ ಸಾಮಾಜಿಕ ಆಲೋಚನ ಕ್ರಮ ಹಾಗೂ ರಾಜಕೀಯ ಸಂಸ್ಕೃತಿಯ ವಿಷಮತೆಯನ್ನು ಸಾಬೀತುಪಡಿಸುತ್ತದೆ. □

ಅಂಬೇಡ್ಕರ್ ಮನುಸ್ಮೃತಿ ದಹಿಸಿದ ರೂಪಕ ಹಾಗೂ ಈ ಕ್ಷಣದ ಪ್ರಶ್ನೆಗಳು

(೩೧ನೇ ಪುಟದಿಂದ)

ಉದ್ಯೋಗ ಅವಕಾಶಗಳನ್ನು ನೀಡುತ್ತದೆಯೇ ಎಂಬುದನ್ನು ಪರಿಶೀಲಿಸಲು ನಡೆಸಿದ ಅಧ್ಯಯನದಲ್ಲಿ, ಸಮಾನ ಶೈಕ್ಷಣಿಕ ಅರ್ಹತೆಗಳು ಇದ್ದರೂ ಮೇಲ್ಜಾತಿ ಹೆಸರುಳ್ಳ ಅಭ್ಯರ್ಥಿಗಳಿಗೆ ನಮ್ಮ ಆಧುನಿಕ ಬಂಡವಾಳಶಾಹಿಗಳು ಪ್ರಾಧಾನ್ಯತೆ ಕೊಟ್ಟಿದ್ದರು" ಎಂಬ ನಿಜಸಂಗತಿಯನ್ನು ಲೇಖಕರು ವರದಿ ಮಾಡಿದ್ದಾರೆ. ಮುಂದುವರೆದು "ಭಾರತದ ಬಂಡವಾಳಶಾಹಿಗಳು ಉತ್ಪಾದನೆಯ ಕ್ರಮದಲ್ಲಿ ಮತ್ತು ಕ್ರಮದ ಬಗೆಗಿನ ತಿಳುವಳಿಕೆಯಲ್ಲಿ ಹಳೆಯ ಜಾತಿ ಶ್ರೇಷ್ಠತೆಯ ಪ್ರತಿಗಾಮಿ ಚಿಂತನೆಯನ್ನೆ ಹೊಂದಿದ್ದಾರೆ. ಹೀಗಾಗಿ ಖಾಸಗಿ ಕ್ಷೇತ್ರಗಳ ಉದ್ಯಮಿಗಳನ್ನು ಅವರ ಪಾಡಿಗೆ ಅವರನ್ನು ಬಿಟ್ಟರೆ ಅವರೊಂದಿಗೂ ಸಮಾನ ಅವಕಾಶಗಳನ್ನು ಕೊಡಲಾರರು" ಎಂಬುದಾಗಿ ಶಿವ ಸುಂದರ್ ಅವರು ಆತಂಕವನ್ನೂ ವ್ಯಕ್ತಪಡಿಸಿದ್ದಾರೆ. ಇದು ನಿಜಕ್ಕೂ ಪ್ರಜ್ಞಾವಂತ ದಲಿತ-ಹಿಂದುಳಿದ ವರ್ಗಗಳನ್ನು ಬೆಚ್ಚಿ ಬೀಳಿಸುತ್ತದೆ.

ಮೀಸಲಾತಿಯನ್ನು ಕೊನೆಗಾಣಿಸಬೇಕು, ದಲಿತ-ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ಶೈಕ್ಷಣಿಕ ವಿದ್ಯಾರ್ಥಿವೇತನಗಳನ್ನು ನಿಲ್ಲಿಸಬೇಕು ಎಂದು ಮನುಮನಸ್ಸಿನಿಂದ ಮಾತನಾಡುವವರು ಗ್ರಾಮಭಾರತದ ಸಕಲೆಂಟು ಸಮಸ್ಯೆಗಳನ್ನು ಮರೆಯುತ್ತಾರೆ. ಅಷ್ಟೇ ಏಕೆ ನಗರ ಪ್ರದೇಶಗಳಲ್ಲಿ ಕೊಳೆಗೇರಿಗಳು ಯಾಕೆ ದಿನೇದಿನೇ ಹೆಚ್ಚುತ್ತಿವೆ. ಅಲ್ಲಿ ವಾಸಿಸುವವರು ಯಾರು. ಅವರು ದಿನನಿತ್ಯದ ಹೊಟ್ಟೆಪಾಡಿಗಾಗಿ ಏನೇನು ಉದ್ಯೋಗಗಳನ್ನು ಅವಲಂಬಿಸಿದ್ದಾರೆ ಎಂಬುದನ್ನು ಪ್ರಜ್ಞಾಪೂರ್ವಕವಾಗೆ ಮರೆಮಾಚಲಾಗುತ್ತಿದೆ. ಈ ನಡುವೆ ಜಾತಿ ಎಂಬ ನಿತ್ಯಸತ್ಯದ ಈ ನೆಲದಲ್ಲಿ ಇನ್ನೊಂದು ಬಗೆಯಾಗಿ ಎಲ್ಲ ಜಾತಿಯ ಶ್ರೀಮಂತ ವರ್ಗ ಹಾಗೂ ಬಡವರ ನಡುವಿನ ಕದಕವೂ ಹೆಚ್ಚುತ್ತಿದೆ. ಹಳ್ಳಿಗಾಡಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಬುಡಕಟ್ಟು ಜನಸಮೂಹಗಳ ದುಃಖದುಮ್ಮಾನಗಳನ್ನು ಕೇಳುವವರೆ ಇಲ್ಲವಾಗುತ್ತಿದ್ದಾರೆ. ಅನ್ನ-ಸೂರು-ಆರೋಗ್ಯ-ಅಕ್ಷರವಿಲ್ಲದೆ ಅನೇಕರು ಇಂದಿಗೂ ಅಲೆಮಾರಿ-ಅರೆ ಅಲೆಮಾರಿಗಳಾಗಿ ನಿರ್ಗತಿಕ ಬದುಕನ್ನು ಸಾಗಿಸುತ್ತಿದ್ದಾರೆ. ಹಿಂದೂ ನಾವೆಲ್ಲ ಒಂದು ಎನ್ನುವ ಮನುವಾದಿಗಳು ಇಂತಹ ಭೀಕರತೆಗಳನ್ನು ಘನಘೋರ ಸಮಸ್ಯೆಗಳೆಂದು ಎಂದಿಗೂ ಪರಿಗಣಿಸೇ ಇಲ್ಲವೆಂಬುದು ಈ ದೇಶದ ಸಮೂಹಕ್ಕೆ ಎಸಗಿದ ದ್ರೋಹವೇ ಸರಿ.

ಇವನಾರವ? ಇವನಾರವ?

ಈ ಎಲ್ಲವುಗಳ ನಡುವೆ ಬಸವಣ್ಣ, ಅಂಬೇಡ್ಕರ್, ಕುವೆಂಪು ಅವರಂತಹ ವಿಶ್ವಚೇತನಗಳನ್ನು ಬಹುಪಾಲು ಅವರವರ ಜಾತಿ ಹಿನ್ನೆಲೆಯ ಜನರೇ ಆರಾಧಿಸುವ ಸ್ಥಿತಿ ನಿರ್ಮಾಣವಾಗುತ್ತಿದೆ. ಇವರನ್ನು ಇನ್ನೂ ಹೆಚ್ಚಿನ ಅನ್ಯಜಾತಿ ಮನಸ್ಸುಗಳು ತಮ್ಮವರೆಂದು, ಸಕಲರಿಗೂ ಸಲ್ಲುವವರೆಂದು ಒಪ್ಪಿಕೊಳ್ಳದ ಕಾರಣ ಈ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಆಯಾ ಜಾತಿಜನಸಮುದಾಯವಾದರೂ ಈ ಮಹಾನ್ ವ್ಯಕ್ತಿತ್ವಗಳನ್ನು ನೆನಪಿಸಿಕೊಳ್ಳುವ ಮುಖೇನ ನಮ್ಮ ನಡುವೆ ಇವರ ನೆನಪುಗಳು ಉಳಿಯುವಂತೆ ಮಾಡಿದ್ದಾರೆ ಎಂಬುದನ್ನು ತೀವ್ರ ವಿಷಾದದ ನಡುವೆಯೂ ಒಪ್ಪಿಕೊಳ್ಳಲೇಬೇಕಿದೆ. ಆದರೆ ಹೀಗೆ ತಮ್ಮ ತಮ್ಮ ಜಾತಿಯೊಳಗೆ ಆರಾಧಿಸುವಾಗಲೂ ಬಹುತೇಕ ಜನರು ಈ ವಿಶ್ವಮಾನವರ ವ್ಯಕ್ತಿತ್ವ ಹಾಗೂ ಚಿಂತನೆಗಳನ್ನು ಆಚರಣೆಯ ಮಟ್ಟದಲ್ಲಿ ನೆನಪಿಸಿಕೊಳ್ಳುತ್ತಿರುವರೇ ಹೊರತು ಅನುಸರಿಸುವ ಮಟ್ಟದಲ್ಲಲ್ಲ ಎಂಬುದು ಮಾತ್ರ ಘೋರ ದುರಂತ.

ಉದ್ಯೋಗ ಅವಕಾಶಗಳನ್ನು ನೀಡುತ್ತದೆಯೇ ಎಂಬುದನ್ನು ಪರಿಶೀಲಿಸಲು ನಡೆಸಿದ ಅಧ್ಯಯನದಲ್ಲಿ, ಸಮಾನ ಶೈಕ್ಷಣಿಕ ಅರ್ಹತೆಗಳು ಇದ್ದರೂ ಮೇಲ್ಜಾತಿ ಹೆಸರುಳ್ಳ ಅಭ್ಯರ್ಥಿಗಳಿಗೆ ನಮ್ಮ ಆಧುನಿಕ ಬಂಡವಾಳಶಾಹಿಗಳು ಪ್ರಾಧಾನ್ಯತೆ ಕೊಟ್ಟಿದ್ದರು" ಎಂಬ ನಿಜಸಂಗತಿಯನ್ನು ಲೇಖಕರು ವರದಿ ಮಾಡಿದ್ದಾರೆ. ಮುಂದುವರೆದು "ಭಾರತದ ಬಂಡವಾಳಶಾಹಿಗಳು ಉತ್ಪಾದನೆಯ ಕ್ರಮದಲ್ಲಿ ಮತ್ತು ಕ್ರಮದ ಬಗೆಗಿನ ತಿಳುವಳಿಕೆಯಲ್ಲಿ ಹಳೆಯ ಜಾತಿ ಶ್ರೇಷ್ಠತೆಯ ಪ್ರತಿಗಾಮಿ ಚಿಂತನೆಯನ್ನೆ ಹೊಂದಿದ್ದಾರೆ. ಹೀಗಾಗಿ ಖಾಸಗಿ ಕ್ಷೇತ್ರಗಳ ಉದ್ಯಮಿಗಳನ್ನು ಅವರ ಪಾಡಿಗೆ ಅವರನ್ನು ಬಿಟ್ಟರೆ ಅವರೊಂದಿಗೂ ಸಮಾನ ಅವಕಾಶಗಳನ್ನು ಕೊಡಲಾರರು" ಎಂಬುದಾಗಿ ಶಿವ ಸುಂದರ್ ಅವರು ಆತಂಕವನ್ನೂ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ-ಜನತಾದಳ(ಎಸ್) ಸಂಯುಕ್ತ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ಹಿಂದೂ ವಿರಾಟ್ ಸಮಾವೇಶಗಳು ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ನಡೆದು, ಅಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಕುವೆಂಪು ಇವರ ದೊಡ್ಡ ದೊಡ್ಡ ಕಟ್‌ಔಟ್‌ಗಳನ್ನು ಬಳಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಹಾಗೆಯೇ 'ನಾನೇಕೆ ನಾಸ್ತಿಕ' ಎಂಬುದಾಗಿ ಹೇಳುತ್ತ "ಧರ್ಮಕ್ಕಿಂತ ದೇಶ ಮುಖ್ಯ. ಮತೀಯ ಭಾವನೆ ದೇಶಾಭಿಮಾನವನ್ನು ನಾಶಪಡಿಸುತ್ತದೆ" ಎಂದು ಖಚಿತವಾಗಿ ನುಡಿದು ದಿಟ್ಟವಾಗಿ ನೇಣುಗಂಬಕ್ಕೆ ತನ್ನ ಕೊರಳನ್ನೊಡ್ಡಿದ ದೇಶಭಕ್ತ ಭಗತ್‌ಸಿಂಗ್ ಅವರನ್ನೂ ಹಿಂದುತ್ವದ ಮತೀಯ ಭಾವನೆಯಲ್ಲೆ ಇಂದು ಕಾಣಲಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ಈ ಎಲ್ಲ ಮಹಾನುಭಾವರನ್ನು ಅವರ ವಿಚಾರಗಳಿಗೇ ವಿರೋಧವಾದ ವಿಕಾರಗಳ ಪ್ರಚಾರಕ್ಕೆ ಬಳಸಿಕೊಂಡು, ಹಿಂದುತ್ವದ ನೆಲೆಯಲ್ಲಿ ಈ ಎಲ್ಲ ಅನಿಕೇತಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ಸಮರ್ಥಿಸುತ್ತಿರುವುದು ಚರಿತ್ರೆಗೆ ಎಸಗುತ್ತಿರುವ ಅಪಚಾರ. ಇಂಥ ಗಳಿಗೆಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಅವರ ಆಶಯಗಳನ್ನೆ ಸರಿಯಾಗಿ ಅರಿಯದ ಮುಗ್ಧಜನ ತಮ್ಮ ಅಂಧಾಭಿಮಾನದಲ್ಲಿ ಹಿಂದೂ ಮೂಲಭೂತವಾದಿಗಳ ಕೈಯಿನ ಬಡಿಗೋಲುಗಳಾಗಿ ಬಳಕೆಯಾಗುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಕೆಲವರು ಅಂಬೇಡ್ಕರ್ ಅವರನ್ನು ಆಧುನಿಕ ಮನು ಎಂದು ಕರೆದು ತಮ್ಮ ಅವಿವೇಕಗಳನ್ನು ಪ್ರದರ್ಶಿಸುತ್ತಿದ್ದಾರೆ.

ಈ ದಿನಮಾನದಲ್ಲಿ ತನ್ನ ಮತ್ತು ತನ್ನ ಸುತ್ತಮುತ್ತಲಿನ ವಿಷಯಗಳ ಬಗ್ಗೆ ಯಾವುದೇ ಪೂರ್ವಗ್ರಹ-ಪಕ್ಷಪಾತಗಳಿಗೆ ಒಳಗಾಗದೆ ವಿಮರ್ಶಿಸುವ ಆ ಮೂಲಕ ಮೌಲಿಕವಾದುದು ಯಾವುದು ಎಂದು ತೀರ್ಮಾನಿಸುವ ಮನಸ್ಸುಗಳು ಹೆಚ್ಚಾಗಬೇಕಿದೆ. ಅಂಬೇಡ್ಕರ್ ಅವರ ಮನಸ್ಸು, ತನ್ಮಯತೆ ಬಗೆಯದು. ಈ ಕ್ಷಣದ ನಮ್ಮ ನಡುವಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಕತ್ತಲೆ ದಾರಿ ದೂರ ಎಂದೆನಿಸುತ್ತದೆ. ಆದರೆ ಇನ್ನಾದರೂ ಬುದ್ಧ, ಬಸವಣ್ಣ, ಅಂಬೇಡ್ಕರ್, ಲೋಹಿಯಾ, ಗಾಂಧಿ, ಕುವೆಂಪು ಮುಂತಾದ ಅನಿಕೇತನಗಳನ್ನು ಪ್ರತಿಮೆಗಳಾಗಿಸಿ ಭಾವುಕ ನೆಲೆಯಲ್ಲೆ ವ್ಯಾಖ್ಯಾನಿಸುವ ಬದಲು; ಈ ಎಲ್ಲ ಮಹಾವ್ಯಕ್ತಿತ್ವಗಳು ನಮ್ಮೊಳಗೆ ಇನ್ನೂ ಜೀವಂತವಾಗಿದ್ದಾರೆ ಎಂಬ ಅರಿವಿನೊಡನೆ ನಮ್ಮ ಬದುಕುವ ಕ್ರಮದ ಭಾಗವಾಗಿಸಿಕೊಂಡರೆ ಮನುಸ್ಮೃತಿಯ ಪಳಯುಳಿಕೆಗಳನ್ನು ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ದಹಿಸಲು ಸಾಧ್ಯವಾಗಿ ಈ ಕ್ಷಣದ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬಹುದು. ಆಗ ಮಾತ್ರ ನಮ್ಮ ದೇಶದ ಘನತೆವೆತ್ತ ಸಂವಿಧಾನ ಉಸಿರಾಡುತ್ತದೆ. ಅಂಬೇಡ್ಕರ್ ಆಶಯದ ಕುವೆಂಪು ಅವರ ಕವನವೊಂದರ ಸಾಲುಗಳು ಇದನ್ನೆ ಹೀಗೆ ಅಭಿವ್ಯಕ್ತಿಸಿದೆ:

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು, ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ, ವಿಶ್ವಪಥಕೆ.

ಓ.ಬಿ.ಸಿಗಳ ವಿಮೋಚನೆ?



> **ಕಳೆದ ಮೂರು ದಶಕಗಳಲ್ಲಿ ಅನೇಕ ಒಬಿಸಿಗಳು ಸಾಕಷ್ಟು ಹಣವನ್ನು ಉಳಿಸಿ ಭೂಮಿಯನ್ನು ಖರೀದಿಸಲು ತೊಡಗಿದ್ದಾರೆ. ಇದರಿಂದಾಗಿ ಅವರು ಮರಳಿ ತಮ್ಮ ಊರುಗಳಿಗೆ ಹೋಗುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಉಚಿತ ಊಟವನ್ನು ಒದಗಿಸಿದರೂ ಸಹ ಅನೇಕ ದಲಿತ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು ಬಯಸುತ್ತಾರೆ. ಆದರೆ ಒಬಿಸಿಗಳು ತಮ್ಮಲ್ಲಿ ಅನುಕೂಲಗಳಿದ್ದಾಗಿಯೂ ಸಹ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಚಿಸುವುದಿಲ್ಲ. ಅನೇಕ ಒಬಿಸಿಗಳ ಬಳಿ ಎಮ್ಮೆಗಳಿರುತ್ತವೆ. ಅವುಗಳ ಜವಾಬ್ದಾರಿ ಹೆಚ್ಚಾಗಿ ಮಹಿಳೆಯರ ಮೇಲೆಯೇ ಬೀಳುತ್ತದೆ. ಹೀಗಿರುವಲ್ಲಿ ಒಬಿಸಿ ಹುಡುಗಿಯರು ಪ್ರೌಢಶಿಕ್ಷಣಕ್ಕೆ ನಿಂತು ಬಿಡುತ್ತಾರೆ. ಆದರೆ ದಲಿತ ಹುಡುಗಿಯರು ಕಾಲೇಜು ಶಿಕ್ಷಣ ಮುಗಿಸಲು ಬಯಸುತ್ತಾರೆ. ಕಾರಣ ಅವರಿಗೆ ಎಮ್ಮೆಗಳ ಜವಾಬ್ದಾರಿ ಇಲ್ಲವಲ್ಲ.**

ಅನು : ಡೊಮಿನಿಕ್ ಡಿ

ದಲಿತ ವಿಮೋಚನೆಯಲ್ಲಿ ಒಬಿಸಿಗಳು ಬಹು ಮುಖ್ಯ ಪಾತ್ರ ವಹಿಸಲು ಸಾಧ್ಯ ಎಂದು ನಾನು ಕಂಡುಕೊಂಡಿದ್ದು ಹಳ್ಳಿಗಳಿಗೆ ನಾನು ಭೇಟಿನೀಡಿದಾಗ. ಈ ಸಂಗತಿಯನ್ನು ವಿವರಿಸಿಕೊಳ್ಳುವ ಮೊದಲು ಚರಿತ್ರೆಯಲ್ಲಿ ಇನ್ನೂ ಸಹ ಪರಿಹಾರ ಕಾಣದೆ ಉಳಿದಿರುವ ಸಂಗತಿಯೆಂದರೆ ದಲಿತರು ಎದುರಿಸುತ್ತಿರುವ ಅಸ್ಪೃಶ್ಯತೆಯೇ ಆಗಿದೆ. ಈ ಸಮಸ್ಯೆಗೆ ಕೂಡಲೇ ಸರ್ಕಾರ, ಸಮಾಜ ಮತ್ತು ಅಂತಾರಾಷ್ಟ್ರೀಯ ಸಮುದಾಯ ಗಮನಹರಿಸಬೇಕಿದೆ.

ಈ ಅಸ್ಪೃಶ್ಯತೆಯ ಆಚರಣೆ ಎಷ್ಟು ನೋವಿನ ಸಂಗತಿಯೆಂದರೆ, ಅದು ದಲಿತರನ್ನು ಸಾಮಾಜಿಕವಾಗಿ ಪ್ರತ್ಯೇಕಿಸಿ ಅದುಮಿಬಿಡುತ್ತದೆ. ಆದ್ದರಿಂದ ಇದನ್ನು ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಇತರೆ ಯಾವುದೇ ದಬ್ಬಾಳಿಕೆಯೊಡನೆ ಹೋಲಿಕೆ ಮಾಡಲಾಗುವುದಿಲ್ಲ. ಮಂಡಲ್ ನಂತರದಲ್ಲಿ ನಾನು ತಿಳಿದುಕೊಂಡ ಸಂಗತಿಯೆಂದರೆ ಒಬಿಸಿಗಳು ದಲಿತರಂತೆ ಪ್ರತ್ಯೇಕತೆ ಮತ್ತು ಅವಮಾನಕ್ಕೊಳಗಾಗಿಲ್ಲ. ಆದ್ದರಿಂದ ಅವರು ಮೀಸಲಾತಿಯ ದಲಿತ ನೀತಿಯನ್ನು ಬಯಸಲಾಗದು. ಮಂಡಲ್ ನೀತಿಯನ್ನು ಎತ್ತಿಹಿಡಿದವರೊಡನೆ ಆಗ ನಾನು ವಾದಿಸಿದ್ದೇನೆಂದರೆ ದಲಿತರಂತೆ ಈ ಒಬಿಸಿಗಳೂ ಸಹ ಆಂತರಿಕವಾಗಿ ಸಾಮಾಜಿಕ ಸುಧಾರಣೆಯನ್ನು ಕಾಣಬೇಕಾಗಿದೆ. ಅವರಲ್ಲಿ ಅಗತ್ಯವಾದ ಎಲ್ಲಾ ಸಂಪನ್ಮೂಲಗಳಿದ್ದು ಅವನ್ನು ಪರಿಣಾಮಕಾರಿಯಾಗಿ ಆಧುನಿಕ ಶಿಕ್ಷಣವನ್ನು ಪಡೆದುಕೊಳ್ಳಲು ಬಳಸಿಕೊಳ್ಳಬೇಕಾಗಿದೆ. ದಲಿತರು ಮತ್ತು ಒಬಿಸಿ ಚಳವಳಿಗಳು ವಿಭಿನ್ನವಾದ ಸೈದ್ಧಾಂತಿಕ ನುಡಿಗಟ್ಟನ್ನು ಒಳಗೊಂಡಿವೆ. ದಲಿತ ಚಳವಳಿಗಳು ವ್ಯವಸ್ಥೆಯ ವಿರುದ್ಧ ಹೋರಾಡುತ್ತಲೇ ತಮ್ಮೊಳಗೂ ಸುಧಾರಣೆಯನ್ನು ಅಪೇಕ್ಷಿಸುತ್ತವೆ. ಅವು ಜಾತಿವ್ಯವಸ್ಥೆಯ ನಿರ್ನಾಮವನ್ನು ಬಯಸುತ್ತವಲ್ಲದೆ ಆಧುನಿಕತೆ ಮತ್ತು ಪ್ರಜಾಪ್ರಭುತ್ವವನ್ನು ಪ್ರೀತಿಸುತ್ತವೆ.

ಇದಕ್ಕೆ ತದ್ವಿರುದ್ಧವಾಗಿ ಒಬಿಸಿ ಚಳವಳಿಗಳೂ ಸಹ ವ್ಯವಸ್ಥೆಯ ವಿರುದ್ಧ ಹೋರಾಡಿದರೂ ಸಹ ಅವು ತಮ್ಮೊಳಗಿನ ಬದಲಾವಣೆಯನ್ನು ಮಾಡಿಕೊಳ್ಳುವ ಅಗತ್ಯವನ್ನು ಕಾಣುವುದಿಲ್ಲ. ಅವರು ಬ್ರಾಹ್ಮಣರ ಪ್ರಾಬಲ್ಯವನ್ನು ಕಿತ್ತೊಗೆಯಲು ಬಯಸುತ್ತಾರೆ. ಆದರೆ ಜಾತಿ ನಿರ್ಮೂಲನೆ ಎನ್ನೋದು ಅವರ ಸಂಗತಿಯಾಗಲೇ ಇಲ್ಲ. ಇದಕ್ಕೊಂದು ಕ್ಲಾಸಿಕ್ ಉದಾಹರಣೆಯೆಂದರೆ ತಮಿಳುನಾಡಿನಲ್ಲಿ ನಡೆದ ದ್ರಾವಿಡ ಚಳುವಳಿ. ಅದು ಬ್ರಾಹ್ಮಣರ ಪ್ರಾಬಲ್ಯವನ್ನು ಮುರಿಯಿತೇನೋ ನಿಜ. ಆದರೆ ಜಾತಿ ವ್ಯವಸ್ಥೆಯೆನ್ನೋದು ಮಾತ್ರ ಮತ್ತಷ್ಟು ಗಟ್ಟಿಯಾಗಿಯೇ ಉಳಿಯಿತು. ಆದ್ದರಿಂದ ಒಬಿಸಿ'ಗಳ ಐಡಿಯಾಲಜಿ ಬ್ರಾಹ್ಮಣ ವಿರೋಧಿಯಾದರೂ ಸಹ ಅದು ಜಾತಿ ವಿರೋಧಿ ಅಲ್ಲ.

ಕೆಲವು ವರ್ಷಗಳ ಹಿಂದೆ ಇಂಗ್ಲಿಷ್‌ನ್ನು **ದಲಿತ ದೇವತೆ** ಎಂದು ನಾವು ಪರಿಗಣಿಸಿದಾಗ ಕೆಲವು ಒಬಿಸಿ ಬುದ್ಧಿಜೀವಿಗಳು ನನ್ನೊಡನೆ ಸಿಟ್ಟುಗೊಂಡರು. ಅನಂತರದಲ್ಲಿ ನಾನು ಗಮನಿಸಿದ ಸಂಗತಿಯೆಂದರೆ ಉತ್ತರ ಭಾರತದಲ್ಲಿ ಈ ಒಬಿಸಿಗಳೇ 'ಇಂಗ್ಲಿಷ್ ಭಾಷೆ'ಯ ವಿರೋಧಿ ಆಂದೋಲನವನ್ನು ಒಂದು ಮುಖ್ಯ ರಾಜಕೀಯ ಆಂದೋಲನವನ್ನಾಗಿ ಮಾಡಿಕೊಂಡದ್ದು. ಇದೇ ರೀತಿಯಲ್ಲಿ ದ್ರಾವಿಡ ಚಳವಳಿಯೂ ಸಹ ತಮಿಳು ಭಾಷೆಗೆ ಬಹಳ ಮಹತ್ವನ್ನು ನೀಡಿ, ಇಂಗ್ಲಿಷನ್ನು ದ್ವೇಷಿಸಿತು.

ಅಂದರೆ ಒಬಿಸಿ ಚಳವಳಿಗಳು ಆಧುನಿಕತೆ, ಬಂಡವಾಳಶಾಹಿ ಮತ್ತು ಕೈಗಾರಿಕರಣವನ್ನು ಅಗೌರವದಿಂದ ಕಾಣುತ್ತವೆ. ಹೀಗೆ ಅನೇಕ ಒಬಿಸಿ ಚಳವಳಿಗಳೆಲ್ಲಾ ನಕಾರಾತ್ಮಕವಾದ ಬ್ರಾಹ್ಮಣ ವಿರೋಧಿ, ಇಂಗ್ಲಿಷ್ ವಿರೋಧಿ ಮತ್ತು ಬಂಡವಾಳವಾದಗಳನ್ನು ವಿರೋಧಿಸುವ ಸೈದ್ಧಾಂತಿಕ ನೆಲೆಗಳನ್ನು ಹೊಂದಿವೆ. ಅಂದರೆ ಅಂತಿಮವಾಗಿ ಈ ಚಳವಳಿಗಳೆಲ್ಲಾ ತಮ್ಮನ್ನೇ ವಿರೋಧಿಸಿಕೊಂಡು ಸೋಲುಗುಳಿತನಕ್ಕೆ ಮೊರೆಹೋಗಿಬಿಡುತ್ತವೆ.

ಇತ್ತೀಚೆಗೆ ನಾನು ಗಮನಿಸಿದಂತೆ ಒಬಿಸಿ ಬುದ್ಧಿಜೀವಿಗಳು ದಲಿತರ ವಿಮೋಚನೆಯಲ್ಲಿ ತೀವ್ರವಾಗಿತೊಡಗಿಸಿಕೊಂಡಿದ್ದಾರೆ. ಇದು ಸೂಕ್ತವಾದುದು.

ದಲಿತ ವಿಮೋಚನೆಯಲ್ಲಿ ಪ್ರಧಾನ ಸಂಗತಿಗಳೆಂದರೆ ಜಾತಿ ಆಧಾರಿತ ಕೆಲಸಗಳಿಂದ ಬಿಡುಗಡೆ, ನಗರೀಕರಣ ಮತ್ತು ಶಿಕ್ಷಣ. ಇದನ್ನು ಸಾಧಿಸಬೇಕೆಂದರೆ ದಲಿತರಿಗೆ ಅಗತ್ಯವಾಗಿರುವುದು "ಆಂತರಿಕವಾದ ಮತ್ತು ಬಾಹ್ಯ ಒತ್ತಡಗಳ ಸೃಷ್ಟಿ" (ಪುಶ್ ಆ್ಯಂಡ್ ಪುಲ್ ಫ್ಯಾಕ್ಟರ್ಸ್). ಕೆಸರಿನಲ್ಲಿ ಒಂದು ಲಾರಿ ಹೂತು ಹೋದರೆ ಏನಾಗುತ್ತದೆ? ಮತ್ತೊಂದು ಲಾರಿಯ ಮೂಲಕ ಅದನ್ನು ಎಳೆಯಲಾಗುತ್ತದೆ ಅಥವಾ ಅದರ ಹಿಂದೆ ನಿಂತು ತಳ್ಳುವುದು. ಮೂರನೇ ಪರಿಹಾರವೆಂದರೆ ಎರಡನ್ನೂ ಮಾಡುವುದು.

ಇಂದು ಬಹುಮಂದಿ ದಲಿತ ಯುವಜನರು ನಗರಗಳತ್ತ ವಲಸೆ ಹೋಗುತ್ತಿದ್ದಾರೆ. ಅಲ್ಲಿ ಅವರೆಲ್ಲಾ ಜಾತಿರಹಿತ ವೃತ್ತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಒಬಿಸಿಗಳು ಇನ್ನೂ ಸಹ ಕೃಷಿಧರ್ಮದಲ್ಲೇ ಉಳಿದುಕೊಂಡು, ಸರ್ಕಾರಿ ನೌಕರಿ ಸಿಗದ ಹೊರತು ಅವರು ತಮ್ಮ ಗ್ರಾಮಗಳನ್ನು ಬಿಡುವುದಿಲ್ಲ. ಅನೇಕ ಮಂದಿ ದಲಿತರಿಗೆ ಯಾವುದೇ ಆಸ್ತಿ ಇಲ್ಲದಿರುವುದರಿಂದ ಅವರ್‍ಯಾರೂ ಸಹ ಹಳ್ಳಿಗಳಿಗೆ ವಾಪಸ್ಸಾಗಲು ಇಚ್ಛಿಸುವುದಿಲ್ಲ.

ಆದರೆ ಒಬಿಸಿಗಳು ತಮ್ಮ ಊರುಗಳಿಗೆ ವಾಪಸ್ಸಾಗಲು ಇಚ್ಛಿಸುತ್ತಾರೆ. ಕಳೆದ ಮೂರು ದಶಕಗಳಲ್ಲಿ ಅನೇಕ ಒಬಿಸಿಗಳು ಸಾಕಷ್ಟು ಹಣವನ್ನು ಉಳಿಸಿ ಭೂಮಿಯನ್ನು ಖರೀದಿಸಲು ತೊಡಗಿದ್ದಾರೆ. ಇದರಿಂದಾಗಿ ಅವರು ಮರಳಿ ತಮ್ಮ ಊರುಗಳಿಗೆ ಹೋಗುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಉಚಿತ ಊಟವನ್ನು ಒದಗಿಸಿದರೂ ಸಹ ಅನೇಕ ದಲಿತ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು ಬಯಸುತ್ತಾರೆ. ಆದರೆ ಒಬಿಸಿಗಳು ತಮ್ಮಲ್ಲಿ ಅನೂಕೂಲಗಳಿದ್ದಾಗಿಯೂ ಸಹ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಚಿಸುವುದಿಲ್ಲ. ಅನೇಕ ಒಬಿಸಿಗಳ ಬಳಿ ಎಮ್ಮೆಗಳಿರುತ್ತವೆ. ಅವುಗಳ ಜವಾಬ್ದಾರಿ ಹೆಚ್ಚಾಗಿ ಮಹಿಳೆಯರ ಮೇಲೆಯೇ ಬೀಳುತ್ತದೆ. ಹೀಗಿರುವಲ್ಲಿ ಒಬಿಸಿ ಹುಡುಗಿಯರು ಪ್ರೌಢಶಿಕ್ಷಣಕ್ಕೆ ನಿಂತು ಬಿಡುತ್ತಾರೆ. ಆದರೆ ದಲಿತ ಹುಡುಗಿಯರು ಕಾಲೇಜು ಶಿಕ್ಷಣ ಮುಗಿಸಲು ಬಯಸುತ್ತಾರೆ. ಕಾರಣ ಅವರಿಗೆ ಎಮ್ಮೆಗಳ ಜವಾಬ್ದಾರಿ ಇಲ್ಲವಲ್ಲ.

ಹಾಗಾದರೆ ೨೦೩೦ರ ವೇಳೆಗೆ ಏನಾಗುತ್ತದೆ? ದಲಿತರು ನಗರಗಳತ್ತ ವಲಸೆ ಹೋಗುವುದರಿಂದ ದಲಿತರು ಮಾಡುತ್ತಿದ್ದ ಕೆಲಸಗಳನ್ನು ಒಬಿಸಿಗಳು ಮಾಡತೊಡಗುತ್ತಾರೆ. ಇದೊಂದು ಪುಶ್ ಫ್ಯಾಕ್ಟರ್. ಆರ್ಥಿಕ ಬೆಳವಣಿಗೆ ಮತ್ತು ನಗರೀಕರಣ ಪ್ರಕ್ರಿಯೆ ಬಾಹ್ಯ ಕಾರಣವಾಗಿ ದಲಿತರನ್ನು ಸೆಳೆಯುತ್ತದೆ.

ಎಮ್ಮೆ ರಾಷ್ಟ್ರೀಯತೆ

ನಗರ ಭಾರತದಲ್ಲಿ ದಲಿತರು ಗುರುತಿಸಿಕೊಂಡ ಉದ್ಯೋಗಗಳನ್ನು ಮುಸ್ಲಿಂ ಸಮುದಾಯದವರು ತೆಗೆದುಕೊಳ್ಳುತ್ತಾರೆ. ಹಿಂದೆ ಪ್ರಾಣಿಗಳ ಧರ್ಮವನ್ನು ದಲಿತರು ಸುಳಿಯುತ್ತಿದ್ದರು. ಆದರೆ ಇಂದು ಮುಸ್ಲಿಂರು ಆ ಕಸುಬನ್ನು ಮಾಡುತ್ತಿದ್ದಾರೆ. ಹಾಗೆಯೇ ಬೇಸಾಯವೂ ಸಹ ಒಬಿಸಿಗಳ ಮನೋಧರ್ಮವಾಗುತ್ತದೆ.

ಇದಕ್ಕಾಗಿ ನಮ್ಮ ಒಬಿಸಿ/ಶೂದ್ರರಿಗೆ ಅಭಿನಂದನೆಗಳು ಎನ್ನೋಣವೇ!

"ಒಂದು ಜೊತೆ ಎಮ್ಮೆಗಳನ್ನು ಬ್ರಾಹ್ಮಣನೊಬ್ಬನಿಗೆ ನೀಡಿದಲ್ಲಿ ಆತನ ಇಡೀ ಕುಟುಂಬವೇ ನಂತರದ ತಲೆಮಾರಿನಲ್ಲಿ ಒಬಿಸಿಯಾಗಿ ಪರಿವರ್ತನೆಯಾಗುತ್ತದೆ" ಎಂದು ನಾನು ನನ್ನ ಸ್ನೇಹಿತ ಡಿ. ಶ್ಯಾಮ್‌ಬಾಬುನಲ್ಲಿ ಹೇಳಿದಾಗ, ಆತ ನನ್ನನ್ನು ಗಂಭೀರವಾಗಿ ಪರಿಗಣಿಸಲಿಲ್ಲ.

ಮಾರ್ಚ್‌ನಲ್ಲಿ ಶ್ಯಾಮ್ ಬಾಬು ಮತ್ತು ನಾನು ಡಾ. ರಾಜೇಶ್ ಪಾಸ್ವಾನ್‌ರ ಅತಿಥಿಗಳಾಗಿ ಹೋಗಿದ್ದೆವು. ಡಾ. ರಾಜೇಶ್ ದೆಹಲಿಗೆ ಹತ್ತಿರವಿರುವ ಖುರ್ಜ ಡಿಗ್ರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ. ಅವರು ನಮ್ಮನ್ನು ಸುತ್ತಲಿನ ಗ್ರಾಮಗಳಿಗೆ ಕರೆದೊಯ್ದಿದ್ದರು. ನಾವೊಂದು ಬ್ರಾಹ್ಮಣ ಕುಟುಂಬಕ್ಕೆ ಭೇಟಿ ನೀಡಿದ್ದೆವು. ಅಲ್ಲಿ ಜೊತೆ ಎಮ್ಮೆಗಳು ತಮ್ಮ ಮಧ್ಯಾಹ್ನದ ಮೇವನ್ನು ತಿನ್ನುತ್ತಿದ್ದವು. ಅಲ್ಲೇ ಇಬ್ಬರು ಯುವತಿಯರಿದ್ದರು. ಒಬ್ಬಳಿಗೆ ೧೬ ವರ್ಷವಾದರೆ ಮತ್ತೊಬ್ಬಳಿಗೆ ೧೮ವರ್ಷ ವಯಸ್ಸು. ಒಬ್ಬಳು ಒಂದು ದೊಡ್ಡ ಮಡಕೆಗೆ ನೀರು ತುಂಬುತ್ತಿದ್ದರೆ, ಮತ್ತೊಬ್ಬಳು ಎಮ್ಮೆಗಳಿಗೆ ಮೇವನ್ನು ಹೊತ್ತುತರುತ್ತಿದ್ದಳು.

ಅವರಿಬ್ಬರೂ ಸಹ ಶಿಕ್ಷಣಕ್ಕೆ ಗುಡ್‌ಬಾಯ್ ಹೇಳಿದ್ದರು. ಎಮ್ಮೆಯ ಗಂಜಲ ಮತ್ತು ಸಗಣಿಯಿಂದಾಗಿ ಅಲ್ಲಿನ ಜಾಗ ನಾರುತ್ತಿತ್ತು. ಈ ಬ್ರಾಹ್ಮಣ ಕುಟುಂಬ ಒಬಿಸಿ ಕುಟುಂಬವಾಗಿ ಬದಲಾಗಿತ್ತು. ಇದೇ ಹಳ್ಳಿಗೆ ಏಪ್ರಿಲ್ ಮೊದಲ ವಾರದಲ್ಲಿ ನಾನು ಮತ್ತೆ ಹೋಗಿದ್ದೆ. ಆಗ ನಾನು ಹಳ್ಳಿಯಲ್ಲಿದ್ದ ಆರು ಬ್ರಾಹ್ಮಣ ಕುಟುಂಬಗಳಿಗೆ ಭೇಟಿ ನೀಡಿದ್ದೆ. ಒಟ್ಟು ೬೪ ಮಂದಿ ಆ ಕುಟುಂಬಗಳಲ್ಲಿದ್ದರು. ಅವರಲ್ಲಿ ಕೇವಲ ಏಳು ಮಂದಿ ಯುವಜನ ಪ್ರೌಢಶಾಲೆಯಲ್ಲಿ ಓದುತ್ತಿದ್ದರು. ಇಬ್ಬರು ಮಾತ್ರ ಕಾಲೇಜಿಗೆ ಹೋಗುತ್ತಿದ್ದರು. ಅವರಲ್ಲಿ ಒಬ್ಬರೂ ಸಹ ಸ್ನಾತಕೋತ್ತರ ಶಿಕ್ಷಣ ಮುಗಿಸಿರಲಿಲ್ಲ.

ಇದೇ ಹಳ್ಳಿಯಲ್ಲಿ ೫೭ ಜಾಟ್ ಕುಟುಂಬಗಳಿದ್ದವು. ಅವರ ಒಟ್ಟು ಸಂಖ್ಯೆ ೪೮೯. ಅವರಲ್ಲಿ ೭೫ ಮಂದಿ ಪ್ರೌಢಶಾಲೆಯಲ್ಲಿದ್ದರೆ ೧೦ ಮಂದಿ ಪದವಿ ಶಿಕ್ಷಣದಲ್ಲಿ ತೊಡಗಿದ್ದರು. ೪ ಮಂದಿ ಮಾತ್ರ ಸ್ನಾತಕೋತ್ತರ ಶಿಕ್ಷಣದಲ್ಲಿದ್ದರು. ಅದೇ ಹಳ್ಳಿಯಲ್ಲಿ ೧೫೩ ದಲಿತ ಕುಟುಂಬಗಳಿದ್ದು ಒಟ್ಟು ೭೩೬ ಜನರಿದ್ದರು. ಅವರಲ್ಲಿ ನೂರು ಮಂದಿ ಪ್ರೌಢ ಶಿಕ್ಷಣದಲ್ಲಿದ್ದರೆ ೧೨ ಮಂದಿ ಪದವಿಯಲ್ಲಿ ತೊಡಗಿದ್ದು, ಮೂರು ಮಂದಿ ಸ್ನಾತಕೋತ್ತರ ಪದವಿ ಮುಗಿಸುತ್ತಿದ್ದರು.

ಪಶ್ಚಿಮ ಉ.ಪ್ರವನ್ನು ಜಾಟ್ ಜಾತಿಯವರ ಆಳ್ವಿಕೆ ಆಕ್ರಮಿಸಿಕೊಂಡಿದೆ. ಅವರೇ ಭೂಮಿ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಹೊಂದಿದ್ದಾರೆ. ಯುಗಗಳಿಂದಲೇ ಬ್ರಾಹ್ಮಣರು ಕಲಿಕೆ, ಅಧ್ಯಾಪನ ಮತ್ತು ಜ್ಞಾನಕ್ಕೆ ಹೆಸರುವಾಸಿಯಾಗಿದ್ದಾರೆ. ಆದರೆ ದಲಿತರು ಚಾರಿತ್ರಿಕವಾಗಿ ಅವಮಾನ ಮತ್ತು ಶೋಷಣೆಗೆ ಒಳಗಾಗಿ ಶಿಕ್ಷಣ ಮತ್ತು ಜ್ಞಾನದಿಂದ ವಂಚಿತರಾಗಿದ್ದಾರೆ. ಆದರೆ ಮೇಲಿನ ಅಂಕಿ-ಅಂಶಗಳು ತೋರುವಂತೆ ಶಿಕ್ಷಣದಲ್ಲಿ ದಲಿತರು ಜಾಟ್ ಮತ್ತು ಬ್ರಾಹ್ಮಣರೊಡನೆ ಸಮಾನ ನೆಲೆಯಲ್ಲಿ ನಿಂತಂತೆ ಕಾಣುತ್ತಿದ್ದಾರೆ. ಇದೊಂದು ದೊಡ್ಡ ದ್ವಂದ್ವವಾಗಿ ಮಾರ್ಕ್ಸ್‌ವಾದವನ್ನು ಅಣಕಿಸುವಂತಿದೆ. ಕಾರಣ ಮಾರ್ಕ್ಸ್‌ವಾದದ ಪ್ರಕಾರ ಯಾರು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲರಿರುತ್ತಾರೋ ಅವರೇ ಶಿಕ್ಷಣವನ್ನೂ ಸಹ ನಿಯಂತ್ರಿಸುತ್ತಾರೆ. ಆದರೆ ಜಾಟ್‌ರ ಆರ್ಥಿಕ ಪ್ರಾಬಲ್ಯವನ್ನು ಗಮನಿಸಿದರೆ ಅವರ ಕುಟುಂಬಗಳಲ್ಲಿ ಒಬ್ಬೊಬ್ಬರಾದರೂ ಸಹ ಸ್ನಾತಕೋತ್ತರ ಶಿಕ್ಷಣದಲ್ಲಿರಬೇಕಾಗಿತ್ತು. ಬ್ರಾಹ್ಮಣ ಪರಂಪರೆಯನ್ನು ಗಮನಿಸಿ ಹೇಳುವುದಾದರೆ ಕನಿಷ್ಠ ಅವರಲ್ಲಿ ಅರ್ಧ ಡಜನ್ ಉನ್ನತ ಶಿಕ್ಷಣದಲ್ಲಿರಬೇಕಾಗಿತ್ತು. ಹೀಗಿರುವಾಗಿ ಸಾಮಾಜಿಕ ಅಸ್ಪೃಶ್ಯತೆಗೆ ಒಳಾಗಿರುವ ಈ ಪ್ರೊಲಿಟರೇಟ್ಸ್ ಅವರಿಬ್ಬರಿಗಿಂತಲು ಶಿಕ್ಷಣದಲ್ಲಿ ಹಿಂದಿರಬೇಕಾಗಿತ್ತು. ಇದು ನನಗೆ ವಿಚಿತ್ರವಾಗಿ ಕಂಡು, ಶಿಕ್ಷಣದ ಸಂದರ್ಭದಲ್ಲಿ ಅನುಕೂಲ ಮತ್ತು ಅದರ ಕೊರತೆಯನ್ನು ವಿಶ್ಲೇಷಿಸಲು ತೊಡಗಿದೆ. ಅನುಕೂಲವಿರುವ ಬ್ರಾಹ್ಮಣರು ಮತ್ತು ಜಾಟ್‌ರು ಶಿಕ್ಷಣದಲ್ಲಿ ಹಿಂದೆ ಬೀಳುತ್ತಿದ್ದಾರೆ!

ಎಮ್ಮೆಗಳ ಪ್ರಭಾವ ಇದಕ್ಕೆ ಕಾರಣವೇನಾದರೂ ಇರಬಹುದೇ ಎಂದು ಸಂದೇಹಿಸಿ, ಕುಟುಂಬವೊಂದರಲ್ಲಿ ಅವುಗಳ ಸಂಖ್ಯೆ ಎಷ್ಟಿದೆಯೆಂದು ಲೆಕ್ಕಹಾಕತೊಡಗಿದೆವು. ಜಾಟ್ ಕುಟುಂಬದಲ್ಲಿ ಸರಾಸರಿ ಕುಟುಂಬಕ್ಕೆ ನಾಲ್ಕು ಎಮ್ಮೆಯಂತೆ ಒಟ್ಟು ೨೩೩ ಎಮ್ಮೆಗಳಿದ್ದವು. ಬ್ರಾಹ್ಮಣರಲ್ಲಿ ೪೬ ಎಮ್ಮೆಗಳಿದ್ದವು. ಅಂದರೆ ಕುಟುಂಬಕ್ಕೆ ಸರಾಸರಿ ೭ ಎಮ್ಮೆಗಳಿವೆ. ೧೫೩ ದಲಿತಕುಟುಂಬಗಳಲ್ಲಿ ೧೭೦ ಎಮ್ಮೆಗಳಿದ್ದವು. ಅಂದರೆ ಸರಾಸರಿ ಕುಟುಂಬಕ್ಕೆ ಒಂದು ಎಮ್ಮೆ!

ಮೇಲೆ ಗಮನಿಸಿದರೆ, ಬ್ರಾಹ್ಮಣರು ಮತ್ತು ಜಾಟ್‌ರವರಿಗಿಂತ ದಲಿತರಲ್ಲಿ ಕಮ್ಮಿ ಎಮ್ಮೆಗಳಿವೆ. ದಲಿತ ಮತ್ತು ಬ್ರಾಹ್ಮಣ ಕುಟುಂಬಗಳಿಗೆ ಆಧಾರವಾಗಿ ಈ ಎಮ್ಮೆಗಳಿವೆ. ಆದರೆ ಜಾಟ್ ಕುಟುಂಬಗಳಿಗೆ ಎಮ್ಮೆಗಳು ಒಂದು ಸಾಂಸ್ಕೃತಿಕ ಮೌಲ್ಯವನ್ನು ನೀಡುತ್ತವೆ. ರೈಲ್ವೆ ಮಂತ್ರಿಯಾಗಿರುವ ಲಾಲುಗೆ ಎಮ್ಮೆ ಅಥವಾ ದನ ಆರ್ಥಿಕ ಅಗತ್ಯವೇ? ದೆಹಲಿಯ ಕಛೇರಿ ಬಂಗಲೆಯಲ್ಲಿ ಅನೇಕ ದನಗಳು ಮತ್ತು ಎಮ್ಮೆಗಳೇ ತುಂಬಿಕೊಂಡಿವೆ ಏಕೆ?

ಈ ಬೇಸಿಗೆಯಲ್ಲಿ ಉತ್ತರ ಪ್ರದೇಶದುದ್ದಕ್ಕೂ ಸಾಗುವಾಗ ನಾನು ಕಂಡಿದ್ದು ಭಾರತದೊಳಗೆ ಇನ್ನೊಂದು ರಾಷ್ಟ್ರವಿದೆ. ಅನೇಕ ಕೃಷಿಕರಿಗೆ ಎಮ್ಮೆ ಮತ್ತು ದನ ಇಲ್ಲದೆ ಬದುಕು ಇರುವುದಿಲ್ಲ. ಒಬಿಸಿಗಳು ಅಧಿಕವಾಗಿ ಕೃಷಿಕರಾಗಿದ್ದು ಅವರೆಲ್ಲಾ ಒಂದು ಸಾಮಾಜಿಕ ಗುರುತನ್ನು ಸ್ಥಾಪಿಸುತ್ತಾರೆ. ನಗರಗಳಲ್ಲಿ ಮಧ್ಯಮವರ್ಗಕ್ಕೆ ಕಂಪ್ಯೂಟರ್‌ಗಳು ಹೇಗೋ ಹಾಗೆಯೇ ಗ್ರಾಮೀಣ ಬದುಕಿಗೆ ಎಮ್ಮೆಗಳು ಸಾಮಾಜಿಕ ಗುರುತುಗಳಾಗಿವೆ. ಇಂದು ಭಾರತ ಎನ್ನೋದು ಬಿರುಕು ಬಿಟ್ಟ ಸಮಾಜವಾಗಿದೆ. ಜ್ಞಾನೋದಯಗೊಂಡ ಭಾರತ ನಗರ ಭಾರತವಾಗಿ ಪರಿಣಮಿಸಿ ಅಲ್ಲಿ ಜ್ಞಾನ ಸಮಾಜ ಆರ್ಥಿಕತೆಯನ್ನು ನಿರ್ಧರಿಸುತ್ತದೆ. ಗ್ರಾಮ್‌ಗಳು ಒಬಿಸಿಗಳಿಂದ ನಿಯಂತ್ರಿತವಾಗಿ ಅಲ್ಲಿ ಎಮ್ಮೆಗಳು ಸಾಮಾಜಿಕ ಅಗತ್ಯವಾಗಿವೆ. ಈ ಎಮ್ಮೆ ರಾಷ್ಟ್ರೀಯತೆ

ಪಶ್ಚಿಮ ಉ.ಪ್ರವನ್ನು ಜಾಟ್ ಜಾತಿಯವರ ಆಳ್ವಿಕೆ ಆಕ್ರಮಿಸಿಕೊಂಡಿದೆ. ಅವರೇ ಭೂಮಿ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಹೊಂದಿದ್ದಾರೆ. ಯುಗಗಳಿಂದಲೇ ಬ್ರಾಹ್ಮಣರು ಕಲಿಕೆ, ಆಧ್ಯಾಪನ ಮತ್ತು ಜ್ಞಾನಕ್ಕೆ ಹೆಸರುವಾಸಿಯಾಗಿದ್ದಾರೆ. ಆದರೆ ದಲಿತರು ಚಾರಿತ್ರಿಕವಾಗಿ ಅವಮಾನ ಮತ್ತು ಶೋಷಣೆಗೆ ಒಳಗಾಗಿ ಶಿಕ್ಷಣ ಮತ್ತು ಜ್ಞಾನದಿಂದ ವಂಚಿತರಾಗಿದ್ದಾರೆ. ಆದರೆ ಅಂಕಿ-ಅಂಶಗಳು ತೋರುವಂತೆ ಶಿಕ್ಷಣದಲ್ಲಿ ದಲಿತರು ಜಾಟ್ ಮತ್ತು ಬ್ರಾಹ್ಮಣರೊಡನೆ ಸಮಾನ ನೆಲೆಯಲ್ಲಿ ನಿಂತಂತೆ ಕಾಣುತ್ತಿದ್ದಾರೆ. ಇದೊಂದು ದೊಡ್ಡ ದ್ವಂದ್ವವಾಗಿ ಮಾರ್ಕ್ಸ್‌ವಾದವನ್ನು ಅಣಕಿಸುವಂತಿದೆ. ಕಾರಣ ಮಾರ್ಕ್ಸ್‌ವಾದದ ಪ್ರಕಾರ ಯಾರು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲರಿರುತ್ತಾರೋ ಅವರೇ ಶಿಕ್ಷಣವನ್ನೂ ಸಹ ನಿಯಂತ್ರಿಸುತ್ತಾರೆ. ಆದರೆ ಜಾಟ್‌ರ ಆರ್ಥಿಕ ಪ್ರಾಬಲ್ಯವನ್ನು ಗಮನಿಸಿದರೆ ಅವರ ಕುಟುಂಬಗಳಲ್ಲಿ ಒಬ್ಬೊಬ್ಬರಾದರೂ ಸಹ ಸ್ನಾತಕೋತ್ತರ ಶಿಕ್ಷಣದಲ್ಲಿರಬೇಕಾಗಿತ್ತು. ಬ್ರಾಹ್ಮಣ ಪರಂಪರೆಯನ್ನು ಗಮನಿಸಿ ಹೇಳುವುದಾದರೆ ಕನಿಷ್ಠ ಅವರಲ್ಲಿ ಅರ್ಧ ಡಜನ್ ಉನ್ನತ ಶಿಕ್ಷಣದಲ್ಲಿರಬೇಕಾಗಿತ್ತು. ಹೀಗಿರುವಾಗಿ ಸಾಮಾಜಿಕ ಅಸ್ಪೃಶ್ಯತೆಗೆ ಒಳಾಗಿರುವ ಈ ಪ್ರೊಲಿಟರೇಟ್ಸ್ ಅವರಿಬ್ಬರಿಗಿಂತಲು ಶಿಕ್ಷಣದಲ್ಲಿ ಹಿಂದಿರಬೇಕಾಗಿತ್ತು. ಇದು ನನಗೆ ವಿಚಿತ್ರವಾಗಿ ಕಂಡು, ಶಿಕ್ಷಣದ ಸಂದರ್ಭದಲ್ಲಿ ಅನುಕೂಲ ಮತ್ತು ಅದರ ಕೊರತೆಯನ್ನು ವಿಶ್ಲೇಷಿಸಲು ತೊಡಗಿದೆ. ಅನುಕೂಲವಿರುವ ಬ್ರಾಹ್ಮಣರು ಮತ್ತು ಜಾಟ್‌ರು ಶಿಕ್ಷಣದಲ್ಲಿ ಹಿಂದೆ ಬೀಳುತ್ತಿದ್ದಾರೆ!

ಎಮ್ಮೆ ರಾಷ್ಟ್ರದಲ್ಲಿ ಜೀವನ

[illegible]

ಮುಂದಿನ ವಾರದ ಅಂಕಣದಲ್ಲಿ ಹೇಗೆ [illegible] ಕಾಡುವಂತೆ ಅವರೆಲ್ಲಾ ಎಮ್ಮೆ ರಾಷ್ಟ್ರೀಯವಾದಿಗಳಾಗಿಬಿಡುತ್ತಾರೆ ಎಂಬುದನ್ನು ನಾನು ವಿವರಿಸಲಿದ್ದೇನೆ.

ಎಲ್ಲಾ ರಾಷ್ಟ್ರಗಳಿಗಿಂತ ಎಮ್ಮೆ ರಾಷ್ಟ್ರದಲ್ಲಿ ಜೀವನ ಬಹಳ ಭಿನ್ನವಾಗಿರುತ್ತದೆ. ಯಾರು ಎಮ್ಮೆಗಳನ್ನು ಹೊಂದಿರುತ್ತಾರೋ ಅವರು ಭೌಗೋಳಿಕ ಪ್ರದೇಶ, ಜಾತಿ, ಮತ ಮತ್ತು ವರ್ಗವನ್ನು ಹೊರತು ಪಡಿಸಿ ಬದುಕನ್ನು ಕಟ್ಟಿಕೊಂಡಿರುತ್ತಾರೆ. ಈ ಭಿನ್ನತೆಗಳು ಎಷ್ಟು ತೀವ್ರವಾಗಿದೆಯೆಂದರೆ ಎಮ್ಮೆಗಳ ಒಡೆಯರು ಒಂದು ವಿಭಿನ್ನವಾದ ರಾಷ್ಟ್ರವಾಗಿಯೇ ಜೀವಿಸುತ್ತಾರೆ. ಅಂಥ ಒಂದು ಕುಟುಂಬವನ್ನು ಮತ್ತದರ ದೈನಂದಿನ ಕೆಲಸ ಕಾರ್ಯಗಳನ್ನು ಗಮನಿಸೋಣ ಬನ್ನಿ.

ಒಂದು ಎಮ್ಮೆ ದಿನವೊಂದಕ್ಕೆ ಸರಾಸರಿ ೧೫ರಿಂದ ೨೦ ಕಿಲೋ ಮೇವನ್ನು ತಿನ್ನುತ್ತದೆ. ಒಂದು ಎಮ್ಮೆ ದಿನಕ್ಕೆ ೪೦-೫೦ ಲೀ. ನೀರನ್ನು ಕುಡಿಯುತ್ತದೆ. ಹೀಗೆ ದಿನಕ್ಕೆ ೧೫ ಕಿಲೋ ಸಗಣಿಯನ್ನು ಒಂದು ಎಮ್ಮೆ ಹಾಕುತ್ತದೆ.

ವರ್ಷಪೂರ್ತಿ ಯಾವ ಎಮ್ಮೆಯೂ ಸಹ ಹಾಲನ್ನು ನೀಡುವುದಿಲ್ಲ. ಕುಟುಂಬವೊಂದು ಒಂದು ಎಮ್ಮೆ ಇರಿಸಿಕೊಳ್ಳಲಾರದು. ವರ್ಷಪೂರ್ತಿ ಹಾಲು ದೊರೆಯಬೇಕಾದರೆ ಮತ್ತೊಂದು ಎಮ್ಮೆಯನ್ನು ಸಾಕಿಕೊಳ್ಳಲೇಬೇಕಾಗುತ್ತದೆ. ಆದ್ದರಿಂದ ಕನಿಷ್ಠ ಎರಡು/ಮೂರು ಎಮ್ಮೆಗಳಾದರೂ ಒಂದು ಒಬಿಸಿ ಕುಟುಂಬದಲ್ಲಿ ಇದ್ದೇ ಇರುತ್ತದೆ.

ಮುಂಜಾನೆ ಆರಕ್ಕೆ ಜೀವನ ಆರಂಭವಾಗುತ್ತದೆ. ಕುಟುಂಬದಲ್ಲಿನ ಮಹಿಳೆಯರು ೨೫ಕಿ.ಲೋ ಸಗಣಿಯನ್ನು ತೆಗೆದು ಸ್ವಚ್ಛ ಮಾಡಬೇಕಾಗುತ್ತದೆ. ಹಳ್ಳಿಯ ಹೊರಗಿರುವ ತಿಪ್ಪೆಯಲ್ಲಿ ಆ ಸಗಣಿಯನ್ನು ಹಾಕಬೇಕು. ಮನೆಯಲ್ಲಿನ ಗಂಡಸರು ಹಾಲುಕರೆದು ಎಮ್ಮೆಗಳಿಗೆ ಮೇವನ್ನು ತಯಾರಿಸಬೇಕು. ಮಹಿಳೆಯರು ಇತ್ತ ಮತ್ತೆ ಬಂದು ಎಮ್ಮೆಗಳಿಗೆ ಅಗತ್ಯವಾಗಿರುವ ನೀರನ್ನು ಹಲವಾರು ಸಲ ನೀರಿನ ಮೂಲಗಳಿಗೆ ಹೋಗಿ, ಬಿಂದಿಗೆಗಳನ್ನು ಹಿಡಿದು ನೀರು ತುಂಬಿಸಬೇಕು. ಇದಾದ ಮೇಲೆ ಮಹಿಳೆಯರು ಪುನಃ ಬೆರಣಿ ತಟ್ಟಲು ಸಾಗುತ್ತಾರೆ. ಮತ್ತೆ ಮನೆಗೆ ಹಿಂದಿರುಗಿ ಹಾಲನ್ನು ಬಿಸಿ ಮಾಡಬೇಕು. ಮೊಸರು ಕಡೆದು ಬೆಣ್ಣೆಯನ್ನು ಬೇರ್ಪಡಿಸಬೇಕು. ಅನೇಕ ಬಾರಿ ಮನೆಯಲ್ಲಿರುವ ಪುರುಷ ಸದಸ್ಯ ಶಾಲೆ ಬಿಟ್ಟವನಾಗಿ, ಹಾಲಿನ ಸಂಘಗಳಿಗೆ ಹಾಲನ್ನು ಸಾಗಿಸುತ್ತಿರುತ್ತಾನೆ. ಮತ್ತೊಬ್ಬ ಮನೆ ಮನೆಗೂ ಸೈಕಲ್‌ನಲ್ಲಿ ಸಾಗಿ ಹಾಲು ಮಾರಿಕೊಂಡು ಬರುತ್ತಾನೆ.

ಈ ಎಲ್ಲಾ ಕೆಲಸಗಳ ನಡುವೆ ಮಹಿಳೆಯರು ಮನೆಯಲ್ಲಿ ಅಡುಗೆ ತಯಾರಿಸಲು ಸಮಯ ಮಾಡಿಕೊಳ್ಳ

ದಯವಿಟ್ಟು ನೆನಪಿಡಿ, ಎಮ್ಮೆಯ ಮಾಲೀಕರು ಕೃಷಿಕರೂ ಆಗಿದ್ದಾರೆ. ಆದ್ದರಿಂದ ಅವರ ಬಳಿಯಲ್ಲೇ ಭೂಮಿಯೂ ಸಹ ಕೇಂದ್ರೀಕೃತವಾಗಿದೆಯಾದ್ದರಿಂದ, ಅವರ ಮುಖ್ಯ ಕೆಲಸವೇ ಕೃಷಿಯಾಗಿದೆ. ಜನವರಿ ೨೦೦೮ ದಿಂದ ತಿಂಗಳಿಗೆ ೧೦ ದಿನಗಳನ್ನು ನಾನು ಉತ್ತರ ಪ್ರದೇಶದ ಹಳ್ಳಿಗಳಲ್ಲಿ ಸುತ್ತಾಡುತ್ತೇನೆ. ಈ ಸಂದರ್ಭಗಳಲ್ಲಿ ಸನಿಹದಿಂದ ಒಬಿಸಿಗಳು ಹೇಗೆ ಬದುಕುತ್ತಿದ್ದಾರೆನ್ನುವುದನ್ನು ಗಮನಿಸಿದ್ದೇನೆ. ಆ ಬದುಕು ಭಯಂಕರವಾಗಿದೆ. ಅದು ಅಮಾನವೀಯವಾದುದು. ಅಂಥದ್ದನ್ನು ಒಪ್ಪಿಕೊಳ್ಳಲಾಗದು. ಅನೇಕ ಒಬಿಸಿ ಕುಟುಂಬಗಳ ನಂಬಿಕೆಯೆಂದರೆ ಅವರೆಲ್ಲಾ ಈ ಎಮ್ಮೆಗಳ ಒಡೆಯರು. ಕಾರಣ ಅವು ಇವರ ಮಾಲೀಕತ್ವಕ್ಕೊಳಪಟ್ಟಿದೆ. ಆದ್ದರಿಂದ ಅವನ್ನು ಒಂದು ಗೊತ್ತಿಗೆ ಕಟ್ಟಿ ಹಾಕಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾಗಿರುವ ಸತ್ಯ ಇನ್ನೊಂದಿದೆ. ಈ ಎಮ್ಮೆಗಳೇ ನಿಜವಾದ ಮಾಲೀಕತ್ವವನ್ನು ಹೊಂದಿರುವುದು, ಅವುಗಳ ಒಡೆಯರು ಅಲ್ಲ.

ಬೇಕು. ಬೆಳಗಿನ ಊಟದೊಡನೆ ಸಾಕಷ್ಟು ಮಜ್ಜಿಗೆ ಮತ್ತು ಮೊಸರು ಇರುತ್ತದೆ ನಿಜ. ಒಂದು ಅರ್ಧ ತಾಸು ವಿರಾಮವಾದ ಕೂಡಲೇ ಮೇವು ಸಂಗ್ರಹದ ಕೆಲಸ ಆರಂಭವಾಗುತ್ತದೆ. ಇದಕ್ಕೆ ಕಾರಣ ಎಮ್ಮೆಗೆ ಸ್ವಲ್ಪವಾದರೂ ಹಸಿರು ಹುಲ್ಲು ಬೇಕಾಗುತ್ತದೆ. ಆದ್ದರಿಂದ ಮಹಿಳೆಯರು ಅದನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ.

ಹಾಗೆಯೇ ಎಮ್ಮೆಯನ್ನು ಹೊರಬಿಡಬೇಕಾಗುತ್ತದೆ. ಇದಕ್ಕೆ ಕಾಲೇಜಿಗೆ ಹೋಗುವ ವ್ಯಕ್ತಿಯ ಸೇವೆ ಅಗತ್ಯವಾಗುತ್ತದೆ. ಹೀಗೆ ಹೊರ ಹೋದ ಎಮ್ಮೆಗಳು ಸಂಜೆ ವೇಳೆಗೆ ಮನೆಗೆ ಹಿಂದಿರುಗುತ್ತವೆ. ಹೀಗೆ ಹಿಂದಿರುಗಿದ ಎಮ್ಮೆಗಳಿಗೆ ನೀರನ್ನಿಡಬೇಕಾಗುತ್ತದೆ. ಅಷ್ಟರಲ್ಲಿ ವೇಳೆ ಸಂಜೆ ಆರಾಗಿರುತ್ತದೆ. ಬೆಳಗಿನ ಕೆಲಸಗಳು ಮತ್ತೆ ಪುನರಾವರ್ತನೆಯಾಗುತ್ತದೆ. ಒಂದೇ ಒಂದು ವಿನಾಯಿತಿ ಎಂದರೆ ಸಂಜೆ ಸಗಣಿ ಎತ್ತುವುದಿಲ್ಲವಾದ್ದರಿಂದ ಮಹಿಳೆಯರಿಗೆ ಕೆಲವು ಗಂಟೆಗಳ ಕಾಲ ವಿರಾಮ. ಹಾಲು ಕಾಯಿಸಿ ಹೆಪ್ಪಿಡುವುದನ್ನು ಅವರೇ ಮಾಡಬೇಕಾಗುತ್ತದೆ.

ಪುರುಷರು ಏಳು ಗಂಟೆಯ ನಂತರ ಅವರದ್ದೇ ಆದ ಸಾಮಾಜಿಕ ಬಳಗದೊಂದಿಗೆ ಸೇರಿಕೊಳ್ಳುತ್ತಾರೆ. ಈ ಎಮ್ಮೆ ರಾಷ್ಟ್ರೀಯತೆಯ ಕ್ರಿಯಾಶೀಲತೆ, ಉತ್ಸಾಹ ಮತ್ತು ಶಕ್ತಿಯಿಂದಾಗಿ ಅಲ್ಲಿನ ಸೇವೆಗಳಿಂದ ಹಿರಿಯರಿಗೆ ವಿನಾಯಿತಿ ಇದೆ. ಆದ್ದರಿಂದ ಈ ಹಿರಿಯರು ಊರಿನ ನೈತಿಕತೆಯನ್ನು ಕಾಯುವ ಪೋಲೀಸರಾಗುತ್ತಾರೆ. ಕುಟುಂಬವೊಂದರಿಂದ ಇಂಥ ಹಿರಿಯ ವ್ಯಕ್ತಿ ಊರಿನ ರಾಜಕಾರಣಕ್ಕೆ ಮೀಸಲಾಗಿರುತ್ತಾನೆ.

ಈ ಎಮ್ಮೆ ರಾಷ್ಟ್ರದಲ್ಲಿ ಶಿಕ್ಷಣ ಮತ್ತು ಜ್ಞಾನಕ್ಕೆ ಅವಕಾಶ ಇಲ್ಲ. ಇಲ್ಲಿ ಬಹಳ ಮಂದಿ ಯುವಜನ ಪ್ರೌಢ ಶಿಕ್ಷಣ ಹಂತದಲ್ಲೇ ಶಾಲೆ ಬಿಟ್ಟುಬಿಡುತ್ತಾರೆ. ಯಾರು ಪದವಿ ಹಂತಕ್ಕೇರುತ್ತಾರೋ ಅವರ ಫಲಿತಾಂಶ ಅಷ್ಟೇನೂ ಹೇಳಿಕೊಳ್ಳುವಂಥದಿರುವುದಿಲ್ಲ. ಇಲ್ಲಿ ಹುಡುಗಿಯರಿಗಂತು ಶಿಕ್ಷಣ ಅಸಾಧ್ಯವಾದುದು.

ದಯವಿಟ್ಟು ನೆನಪಿಡಿ, ಎಮ್ಮೆಯ ಮಾಲೀಕರು ಕೃಷಿಕರೂ ಆಗಿದ್ದಾರೆ. ಆದ್ದರಿಂದ ಅವರ ಬಳಿಯಲ್ಲೇ ಭೂಮಿಯೂ ಸಹ ಕೇಂದ್ರೀಕೃತವಾಗಿದೆಯಾದ್ದರಿಂದ, ಅವರ ಮುಖ್ಯ ಕೆಲಸವೇ ಕೃಷಿಯಾಗಿದೆ.

ಜನವರಿ ೨೦೦೮ ದಿಂದ ತಿಂಗಳಿಗೆ ೧೦ ದಿನಗಳನ್ನು ನಾನು ಉತ್ತರ ಪ್ರದೇಶದ ಹಳ್ಳಿಗಳಲ್ಲಿ ಸುತ್ತಾಡುತ್ತೇನೆ. ಈ ಸಂದರ್ಭಗಳಲ್ಲಿ ಸನಿಹದಿಂದ ಒಬಿಸಿಗಳು ಹೇಗೆ ಬದುಕುತ್ತಿದ್ದಾರೆನ್ನುವುದನ್ನು ಗಮನಿಸಿದ್ದೇನೆ. ಆ ಬದುಕು ಭಯಂಕರವಾಗಿದೆ. ಅದು ಅಮಾನವೀಯವಾದುದು. ಅಂಥದ್ದನ್ನು ಒಪ್ಪಿಕೊಳ್ಳಲಾಗದು.

ಅನೇಕ ಒಬಿಸಿ ಕುಟುಂಬಗಳ ನಂಬಿಕೆಯೆಂದರೆ ಅವರೆಲ್ಲಾ ಈ ಎಮ್ಮೆಗಳ ಒಡೆಯರು. ಕಾರಣ ಅವು ಇವರ ಮಾಲೀಕತ್ವಕ್ಕೊಳಪಟ್ಟಿದೆ. ಆದ್ದರಿಂದ ಅವನ್ನು ಒಂದು ಗೊತ್ತಿಗೆ ಕಟ್ಟಿಹಾಕಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾಗಿರುವ ಸತ್ಯ ಇನ್ನೊಂದಿದೆ.

ಈ ಎಮ್ಮೆಗಳೇ ನಿಜವಾದ ಮಾಲೀಕತ್ವವನ್ನು ಹೊಂದಿರುವುದು, ಅವುಗಳ ಒಡೆಯರು ಅಲ್ಲ. ಅಂದರೆ ಮಾಲೀಕರ ಮೇರೆಗೆ ಎಮ್ಮೆಗಳು ಬದುಕುವುದಿಲ್ಲ ಅಥವಾ ನಿಯಂತ್ರಣಕ್ಕೊಳಗಾಗಿಲ್ಲ. ಆ ಎಮ್ಮೆಗಳೇ ತಮ್ಮ ಮಾಲೀಕರ ಬದುಕನ್ನು ನಿಯಂತ್ರಿಸುತ್ತಿವೆ.

ನಮ್ಮ ಒಬಿಸಿ ಬುದ್ಧಿಜೀವಿಗಳು ಎರಡು- ರಾಷ್ಟ್ರಗಳ ಸಿದ್ಧಾಂತವನ್ನು ಮುಂದಿಡುತ್ತಾರೆ; ಒಂದು ಇಂಡಿಯಾ

ಹಿಂಸೆ ಮತ್ತು ಎಮ್ಮೆಗಳ ನಡುವಿನ ಮೈತ್ರಿ

ಸಿದ್ಧಾಂತ ಮತ್ತೊಂದು ಭಾರತ ಸಿದ್ಧಾಂತ. ದುರಂತವೆಂದರೆ ಅವರ್‍ಯಾರು ನಿಜ ಸಂಗತಿಗಳನ್ನು ಮಾತನಾಡುವುದಿಲ್ಲ. ಈ ಎರಡು-ರಾಷ್ಟ್ರ ಸಿದ್ಧಾಂತ ಮತ್ತೊಂದು ಬಗೆಯ ಸತ್ಯಗಳನ್ನು ಒಳಗೊಂಡಿದೆ. ಒಂದು, ಎಮ್ಮೆ ಮತ್ತು ಕೃಷಿ ಆಧರಿತ ರಾಷ್ಟ್ರ, ಎರಡು; ಸೇವಾ ವಲಯ, ವ್ಯಾಪಾರ ಮತ್ತು ಕೈಗಾರಿಕರಣವನ್ನು ಪ್ರತಿಪಾದಿಸುವ ರಾಷ್ಟ್ರ. ಹಾಗಾದರೆ ಈ ಎಮ್ಮೆ ರಾಷ್ಟ್ರೀಯವಾದವನ್ನು ತಿರಸ್ಕರಿಸುವುದು ಹೇಗೆ? ಈ ಪ್ರಶ್ನೆಯ ಚರ್ಚೆಯನ್ನು ನಂತರದ ಅಂಕಣದಲ್ಲಿ ತೆಗೆದುಕೊಳ್ಳುತ್ತೇನೆ. ಅದಕ್ಕಾಗಿ ನೀವು ಕಾಯುತ್ತೀರೆಂದು ಭಾವಿಸುತ್ತೇನೆ.

ಉತ್ತಪುರಂ ಎನ್ನುವುದೊಂದು ತಮಿಳುನಾಡಿನ ಹಳ್ಳಿ. ಕಳೆದವಾರವಷ್ಟೆ ದಲಿತರು ಮತ್ತು ತೇವರ್ ಮತ್ತು ದಲಿತರ ನಡುವೆ ಇದ್ದ ೧೦ ಅಡಿ ಎತ್ತರ ಮತ್ತು ೬೦೦ ಮೀ. ಉದ್ದದ ಗೋಡೆಯೊಂದನ್ನು ಕೆಡವಲಾಯಿತು. ತೇವರ್ ಎನ್ನೋದು ಒಂದು ಒಬಿಸಿಗೆ ಸೇರಿದ ಸಮುದಾಯವಾಗಿದ್ದು, ಸುಮಾರು ೧೮ ವರ್ಷಗಳ ಹಿಂದೆ ದಲಿತ ರನ್ನು ಪ್ರತ್ಯೇಕಿಸುವ ಸಲುವಾಗಿ ಈ ಗೋಡೆಯನ್ನು ಕಟ್ಟಲಾಗಿತ್ತು. ಈ ಗೋಡೆಯ ಮೇಲೆ ತೇವರ್ ಜಾತಿಯವರು ವಿದ್ಯುತ್ ತಂತಿಯನ್ನು ಸಹ ಹಾಕಿದ್ದರೆಂಬುದು ಸುದ್ದಿಗೆ ಗ್ರಾಸವಾಗಿತ್ತು. ಇಂತಹದ್ದೇ ಗೋಡೆಯನ್ನು ಮರಾಠರು ಮಹಾರಾಷ್ಟ್ರದ ಸತಾರದಲ್ಲಿ ದಲಿತರನ್ನು ಪ್ರತ್ಯೇಕಿಸಲು ಕಟ್ಟಿದ್ದರು. ಎನ್‌ಡಿಟಿವಿ ಮಾಡಿದ ಪ್ರಚಾರಾಂದೋಲನ ದಿಂದಾಗಿ ಈ ಗೋಡೆಯನ್ನು ಸಹ ಕೆಡವಲಾಯಿತು. ಕೆಲವು ವಾರಗಳ ಹಿಂದೆ ಹರಿಯಾಣದ ಬಲ್ಲಾಭ್ ಘಡ ಬಳಿ ನಡೆಯುತ್ತಿದ್ದ ದಲಿತ ಮದುವೆಯೊಂದನ್ನು ಜಾಟ್‌ರು ಹಿಂಸಿಸಿದ್ದರು. ದಲಿತ ವಧುವರ ಕುದುರೆಯ ಮೇಲೆ ಕುಳಿತದ್ದು ಜಾಟರನ್ನು ಉರಿದೇಳಿಸಿತು. ಗೋಹ್ನಾದಲ್ಲಿ ನಡೆದದ್ದು ಎಲ್ಲಾರಿಗೂ ತಿಳಿದೇ ಇದೆ. ಖೇರ್ಲಾಂಜಿಯಲ್ಲಿ ಕುಣಬಿ ಒಬಿಸಿ ಜಾತಿಯವರು ದಲಿತರನ್ನು ಕೊಂದದ್ದನ್ನು ನಾವೆಲ್ಲಾ ತಿಳಿದಿದ್ದೇವೆ.

ಉತ್ತಪುರಂ ಎನ್ನುವುದೊಂದು ತಮಿಳುನಾಡಿನ ಹಳ್ಳಿ. ಕಳೆದ ವಾರವಷ್ಟೆ ದಲಿತರು ಮತ್ತು ತೇವರ್ ಮತ್ತು ದಲಿತರ ನಡುವೆ ಇದ್ದ ೧೦ ಅಡಿ ಎತ್ತರ ಮತ್ತು ೬೦೦ ಮೀ. ಉದ್ದದ ಗೋಡೆಯೊಂದನ್ನು ಕೆಡವಲಾಯಿತು. ತೇವರ್ ಎನ್ನೋದು ಒಂದು ಒಬಿಸಿಗೆ ಸೇರಿದ ಸಮುದಾಯವಾಗಿದ್ದು, ಸುಮಾರು ೧೮ ವರ್ಷಗಳ ಹಿಂದೆ ದಲಿತರನ್ನು ಪ್ರತ್ಯೇಕಿಸುವ ಸಲುವಾಗಿ ಈ ಗೋಡೆಯನ್ನು ಕಟ್ಟಲಾಗಿತ್ತು. ಈ ಗೋಡೆಯ ಮೇಲೆ ತೇವರ್ ಜಾತಿಯವರು ವಿದ್ಯುತ್ ತಂತಿಯನ್ನು ಸಹ ಹಾಕಿದ್ದರೆಂಬುದು ಸುದ್ದಿಗೆ ಗ್ರಾಸವಾಗಿತ್ತು. ಇಂತಹದ್ದೇ ಗೋಡೆಯನ್ನು ಮರಾಠರು ಮಹಾರಾಷ್ಟ್ರದ ಸತಾರದಲ್ಲಿ ದಲಿತರನ್ನು ಪ್ರತ್ಯೇಕಿಸಲು ಕಟ್ಟಿದ್ದರು. ಎನ್‌ಡಿಟಿವಿ ಮಾಡಿದ ಪ್ರಚಾರಾಂದೋಲನ ದಿಂದಾಗಿ ಈ ಗೋಡೆಯನ್ನು ಸಹ ಕೆಡವಲಾಯಿತು.

ಕೆಲವು ವಾರಗಳ ಹಿಂದೆ ಹರಿಯಾಣದ ಬಲ್ಲಾಭ್ ಘಡ ಬಳಿ ನಡೆಯುತ್ತಿದ್ದ ದಲಿತ ಮದುವೆಯೊಂದನ್ನು ಜಾಟ್‌ರು ಹಿಂಸಿಸಿದ್ದರು. ದಲಿತ ವಧುವರ ಕುದುರೆಯ ಮೇಲೆ ಕುಳಿತದ್ದು ಜಾಟರನ್ನು ಉರಿದೇಳಿಸಿತು. ಗೋಹ್ನಾದಲ್ಲಿ ನಡೆದದ್ದು ಎಲ್ಲಾರಿಗೂ ತಿಳಿದೇ ಇದೆ.

ಖೇರ್ಲಾಂಜಿಯಲ್ಲಿ ಕುಣಬಿ ಒಬಿಸಿ ಜಾತಿಯವರು ದಲಿತರನ್ನು ಕೊಂದದ್ದನ್ನು ನಾವೆಲ್ಲಾ ತಿಳಿದಿದ್ದೇವೆ. ಸುನಾಮಿ ಸಂದರ್ಭದಲ್ಲಿ ಪರಿಹಾರಕ್ಕಾಗಿ ನಿರ್ಮಿಸಿದ ಕೇಂದ್ರದಿಂದ ದಲಿತರನ್ನು ವನ್ನಿಯಾರ್ ಜಾತಿಯವರು ಓಡಿಸಿದ್ದರು. ಗುಜರಾತ್ ಭೂಕಂಪವಾದಾಗ ಪಟೇಲ್ ಜಾತಿಯವರು ಹಾಗೆಯೇ ಮಾಡಿದ್ದರು. ಉತ್ತರ ಪ್ರದೇಶ ಮತ್ತು ಬಿಹಾರ್ ರಾಜ್ಯಗಳಲ್ಲಿ ಯಾದವರು, ಕುರ್ಮಿಗಳು, ಲೋಧರು, ಜಾಟ್‌ರು ಮತ್ತು ರಾಜಪುತರಿಂದ ದಲಿತರು ನಿರಂತರವಾಗಿ ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ.

ಭಾರತ ಎನ್ನೋದು ವಿಭಿನ್ನವಾದ ರಾಜ್ಯಗಳನ್ನೊಳಗೊಂಡಿದ್ದು ಅಲ್ಲಿ ಭಾಷೆ, ಊಟ, ಬೆಳೆಗಳು ಮತ್ತು ವಾತಾವರಣ ಎಲ್ಲವೂ ಭಿನ್ನತೆಗಳ ಮಹಾ ಕಿಚಡಿಯಾಗಿದೆ. ಆದರೆ ಇವೆಲ್ಲವುಗಳಲ್ಲಿ ಸಮಾನವಾಗಿರುವುದೆಂದರೆ ಜಾತಿಗೆ ಸಂಬಂಧಿಸಿದ ಘಟನೆಗಳು. ರಾಜಪುತರನ್ನು ಹೊರತುಪಡಿಸಿ ಮೇಲೆ ಹೇಳಿದ ಎಲ್ಲಾ ಜಾತಿಗಳು ಶೂದ್ರ/ಒಬಿಸಿ ಜಾತಿಗಳೇ ಆಗಿವೆ. ಅಲ್ಲದೆ, ರಾಜಪುತರನ್ನು ಹೊರತುಪಡಿಸಿದ್ದಲ್ಲಿ ಈ ಎಲ್ಲಾ ಜಾತಿಗಳೂ ಸಹ ಎಮ್ಮೆ ಜಾತಿಗಳಾಗಿದ್ದು ದಲಿತರನ್ನು ಸದೆಬಡಿಯುತ್ತಿದ್ದಾರೆ.

ಹಿಂಸೆಯಿಂದ ಒಂದು ಸಮುದಾಯವನ್ನು ಪ್ರತ್ಯೇಕಿಸಿದಾಗ ಏನಾಗಬಹುದೆಂಬುದನ್ನು ಸ್ವಲ್ಪ ಕಲ್ಪಿಸಿಕೊಳ್ಳಿ. ಎನ್‌ಆರ್‌ಐಗಳು ಇಂಥದ್ದೇ ಬಲತ್ಕಾರದ ಸನ್ನಿವೇಶವನ್ನು ಅಮೆರಿಕಾ ಮತ್ತು ಇಂಗ್ಲೆಂಡ್‌ಗಳಲ್ಲಿ ಅನುಭವಿಸಿದರೆ ಭಾರತೀಯರಿಗೇನಾಗುತ್ತದೆ ಎಂಬುದನ್ನು ಊಹಿಸಬಹುದಲ್ಲವೇ? ಇದೇ ಎನ್‌ಆರ್‌ಐಗಳು ಅಮೆರಿಕಾ ಮತ್ತು ಇಂಗ್ಲೆಂಡ್‌ಗಳಲ್ಲಿ ಮದುವೆ ಸಮಾರಂಭಗಳಲ್ಲಿ ಕಾರು ಓಡಿಸಬಾರದು ಎಂದರೆ ಏನಾಗಬಹುದು?

ಚಾರಿತ್ರಿಕವಾಗಿ, ದಲಿತೇತರ ಜಾತಿಗಳೆಲ್ಲಾ ದಲಿತರ ವಿರುದ್ಧವಾಗಿದ್ದವೇ ಆಗಿವೆ. ಆದರೆ ಸಮಕಾಲೀನ ಭಾರತದಲ್ಲಿ ಈ 'ಎಮ್ಮೆ ಜಾತಿಗಳಿಂದಲೇ' ದಲಿತರ ಮೇಲೆ ದೈಹಿಕ ಹಲ್ಲೆಗಳಾಗುತ್ತಿರುವುದು; ಹಾಗಾದರೆ ಈ ಎಮ್ಮೆ ಮತ್ತು ಆಗುತ್ತಿರುವ ಹಿಂಸೆಗಳ ನಡುವೆ ಏನಾದರೂ ಸಂಬಂಧವಿದೆಯಾ? ದುರಂತವೆಂದರೆ ಈ ಸಂಗತಿಯನ್ನು ವಿವರಿಸಿಕೊಳ್ಳಲು ನಮ್ಮಲ್ಲಿ ಯಾರೂ ಸಹ ಪ್ರಾಣಿ ಸೈಕಾಲಜಿ ಪರಿಣತರು ಅಥವಾ ಜಾತಿ ಮನೋಶಾಸ್ತ್ರಜ್ಞರು ಇಲ್ಲ.

ಆದ್ದರಿಂದ ನಾನೇನು ಅಂಥ ತಜ್ಞನಲ್ಲ. ಆದರೂ ಒಂದು ಸನ್ನಿವೇಶದಲ್ಲಿ ಒಂದು ಪ್ರಾಣಿ ಏಕೆ ಒಂದು ರೀತಿಯಾಗಿ ವರ್ತಿಸುತ್ತದೆ ಎನ್ನುವುದರ ಬಗ್ಗೆ ಕೆಲವು ಕಂಡುಕೊಂಡ ಸಂಗತಿಗಳನ್ನು ಹೇಳಲೇಬೇಕಾಗಿದೆ.

ಕಳೆದ ಕೆಲವು ಅಂಕಣಗಳಲ್ಲಿ ಎಮ್ಮೆ ರಾಷ್ಟ್ರೀಯತೆಯ ಬಗ್ಗೆ ಮತ್ತು ಆ ಎಮ್ಮೆಗಳಿಗೆ ಗುಲಾಮರಾಗಿರುವ ಮಾಲೀಕರ ಬಗ್ಗೆ ನಾನು ಚರ್ಚಿಸಿರುವುದರಿಂದ 'ಎಮ್ಮೆ ಮತ್ತು ಹಿಂಸೆ'ಯ ನಡುವಿನ ರಹಸ್ಯವನ್ನು ಭೇದಿಸಲು ಪ್ರಯತ್ನಿಸುತ್ತಿದ್ದೇನೆ.

ಹೀಗೊಂದು ಗಾದೆ ಮಾತಿದೆ, 'ಯಾರ ಬಳಿ ಬಿದಿರು ಕೋಲಿರುತ್ತದೋ ಅವರಿಗೆ ಎಮ್ಮೆ ಸೇರಿದ್ದು'.ಉತ್ತರ ಭಾರತದಲ್ಲಿ ಈ ಬಿದಿರು ಕೋಲು ಮತ್ತು ಎಮ್ಮೆಗಳನ್ನು ಪ್ರತ್ಯೇಕವಾಗಿ ನೋಡಲಾಗದು. ಕೋಲಿಲ್ಲದೆ ಎಮ್ಮೆ ಇರುವುದೆಂದರೆ ಗನ್‌ನಲ್ಲಿ ಗುಂಡುಗಳು ಇಲ್ಲದಂತೆ! ಚಾರಿತ್ರಿಕವಾಗಿ ನೋಡಿದರೆ ಉತ್ತರ ಭಾರತದಲ್ಲಿ ಹಿಂಸೆ ನಡೆಯುವಾಗಲೆಲ್ಲಾ ಈ ಮುಖ್ಯ ಬಿದಿರು ಕೋಲು ಬಳಸಿಯೇ ಬಳಸುತ್ತಾರೆ.

ಎಮ್ಮೆಗಳತ್ತ ವಾಪಸ್ಸು ಬರೋಣ. ಚೆನ್ನಾಗಿ ಮೇವು ತಿಂದ ಎಮ್ಮೆಗೆ ತಿರುಗಾಟ ಬೇಕೇ ಬೇಕು. ಈ ಸಂದರ್ಭದಲ್ಲಿ ವಿಚಿತ್ರವೆಂದರೆ ಈ ಎಮ್ಮೆ ಮಾಲೀಕ ಅದನ್ನು ಹೊರಗೆ ಕೊಂಡೊಯ್ಯುವುದಿಲ್ಲ. ಬಲಾಗಿ ಎಮ್ಮೆಯೇ ಆತನನ್ನು ತನ್ನ ಹಿಂದೆ ನಡೆಯುವಂತೆ ಮಾಡುತ್ತದೆ.

ಹೀಗೆ ನಡೆಯುವಾಗ ಎಮ್ಮೆ ಏನಾದರೂ ತೊಂದರೆ ಕೊಟ್ಟಲ್ಲಿ ಬಿತ್ತು ನೋಡಿ ಬಿದಿರು ಕೋಲಿನ ಏಟು. ಈ ಎಮ್ಮೆಗಳು ಸ್ವ-ಪೀಡಕರೇ ಎಂದು ನಮಗೆ ಗೊತ್ತಿಲ್ಲ ಅಥವಾ ಹೀಗೆ ಬಾರಿಸಿಕೊಂಡಾಗ ಅವಕ್ಕೆ ಸಂತೋಷವಾಗುತ್ತದೆಯೇನೋ! ಸತ್ಯ ಎಂದರೆ ಈ ತಿರುಗಾಟದ ಸಂದರ್ಭದಲ್ಲಿ ಅದಕ್ಕೆ ಹಲವಾರು ಬಾರಿ ದೊಣ್ಣೆ ಏಟು ಬೀಳುತ್ತಿರುತ್ತದೆ.

ಈ ಎಮ್ಮೆಯ ಗುಲಾಮನಾಗಿರುವ ಮಾಲೀಕನತ್ತ ಬಂದಲ್ಲಿ ಆ ಎಮ್ಮೆಗೆ ಪದೇ ಪದೇ ಬಡಿಯುವುದರಿಂದ ಆತನಿಗೆ ಏನಾದರು ಖುಷಿಯಾಗುತ್ತದೆಯೇ? ಎನ್ನೋ ಪ್ರಶ್ನೆ ಎದುರಾಗುತ್ತದೆ. ಏಕೆ ಆತ ಅದನ್ನು ಹಾಗೆ ಬಡಿಯುತ್ತಾನೆ. ಉತ್ತರ ಬಹಳ ಸರಳವಾಗಿದೆ. ಈ ಎಮ್ಮೆ ಮಾಲೀಕರು ಹಿಂಸೆಯನ್ನು ಆಂತರಿಕವಾಗಿಸಿಕೊಳ್ಳುತ್ತಾರೆ. ಈ ಕ್ಷಣಕ್ಕೆ ದಲಿತರು ಮತ್ತು ಅವರ ಕುಟುಂಬಗಳ ಮೇಲೆ ಈ ಎಮ್ಮೆ ಮಾಲೀಕ ಜಾತಿಗಳಿಂದ ನಡೆಯುವ ಹಿಂಸೆಯನ್ನು ಸ್ವಲ್ಪ ಮರೆಯೋಣ. ಆದರೆ ಅವರ ಮನೆಗಳಲ್ಲೇ ನಡೆಯುವ ಜಗಳಗಳು ಅಥವಾ ಅವರದ್ದೇ ಗುಂಪುಗಳ ನಡುವೆ ನಡೆಯುವ ಜಗಳಗಳಲ್ಲಿ ಈ ಹಿಂಸೆ ಸಾಮಾನ್ಯವಾದುದು.

ಅಂದರೆ ಗ್ರಾಮೀಣ ಭಾರತದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆಗಟ್ಟಬೇಕಾದರೆ ಮೊದಲು ಈ ಎಮ್ಮೆಗಳನ್ನು ಅದರ ಮಾಲೀಕರಿಂದ ಬಿಡಿಸಬೇಕಾಗಿದೆ. □

ಬುದ್ಧಾಯಣ

೦

೩೪

ಬುದ್ಧನ ಬರುವಿಕೆಗಾಗಿ ಕಾಯ್ದು ನಿಂತರು ನಿಷ್ಠೆಯಲಿ

ಸಿ. ಎಚ್. ರಾಜಶೇಖರ್

ಬುದ್ಧನ ಬದುಕು ಮತ್ತು ಬೋಧನೆ ಪುರಾಣ ಪುಣ್ಯ ಕಥೆಗಳ ಒಂದು ಭಾಗ ವಲ್ಲ. ದಶಾವತಾರಗಳ ಆರೋಪ ಖಂಡಿತ ಅಲ್ಲ. ಬುದ್ಧ ದೈವತ್ವದಿಂದ ಬಿಡು ಗಡೆಗೊಂಡ ಸಾಮಾನ್ಯ ಮನುಷ್ಯ. ಇತಿಹಾಸ ಪುರುಷ. ಅವನ ಬದುಕಿ ನಲ್ಲಿ ಏನೇನು ಸಂಭವಿ ಸಿತೋ ಅದೆಲ್ಲವೂ ಐತಿಹಾಸಿಕ ಘಟನೆಗಳು, ಅವೆಲ್ಲವೂ ಕಾರ್ಯಕಾ ರಣ ಸಂಬಂಧಕ್ಕೆ ಪುರಾ ವೆಗಳಾದವುಗಳ. ಅವನು ಬುದುಕಿದ್ದಾಗಲೇ ಜನ ಪ್ರಿಯತೆಯ ತುತ್ತ ತುದಿ ತಲುಪಿದ್ದ. ಆದರ್ಶದ ಸಾಕಾರ ಮೂರ್ತಿ ಆಗಿದ್ದ. ಅದಕ್ಕೆ ಕಾರಣ ಅವನು ಜನಗಳ ಮೇಲೆ ತಾನು ತೋರಿದ ಪ್ರೀತಿ ವಿಶ್ವಾಸ, ನಂಬಿಕೆ ಮತ್ತು ಮಾರ್ಗ ದರ್ಶಿತನವೇ ಆಗಿತ್ತು.

ಶಬರಿ ರಾಮ ಬರುವನೆಂದು ಕಾನನದಲ್ಲಿ ಕಾಯ್ದು ಕುಳಿತದ್ದು ಬಹು ಭಕ್ತಿರಸ ಪ್ರಧಾನವಾದ ಪ್ರಸಂಗ ಅದು ರಾಮಾಯಣ! ಸಭೆಯಲ್ಲಿ ದ್ರೌಪದಿಯ ಸೀರೆಯನ್ನು ಸೆಳೆವಾಗ ದ್ರೌಪದಿಯು ಕೃಷ್ಣನಿಗೆ ಮೊರೆ ಇಟ್ಟು ಕಾಯ್ದು ತಲ್ಲಣಿಸಿದ್ದು. ಮಹಾಭಾರತ! ಆದರೆ ಶ್ರಾವಸ್ತಿಯಲ್ಲಿ ಇಸಿದತ್ತ ಮತ್ತು ಪುರಾಣರೆಂಬ ಸಾಮಾನ್ಯರು ಬುದ್ಧನ ಬರುವಿಕೆಗಾಗಿ ಕಾಯ್ದು ತಲ್ಲಣಿಸಿ ದಿನಗಟ್ಟಲೆ ನಿಂತದ್ದು ಬುದ್ಧಾಯಣ!!'

ಆದರೆ ಇಲ್ಲಿನ ಬಹು ಮುಖ್ಯ ವ್ಯತ್ಯಾಸವನ್ನು ಗಮನಿಸಿ ರಾಮಾಯಣದ ರಾಮನಿಗೆ ಮಹಾಭಾರತದ ಪಾಂಡವರಿಗೆ ಸೃಷ್ಟಿಕರ್ತನ ಆಶೀರ್ವಾದವಿದೆ. ದಶಾವತಾರ ಕವಚವಿದೆ. ಪವಾಡಗಳಿಂದ ಅತೀತ. ದಶಾವತಾರದಿಂದ ಮುಕ್ತ. ಅವನ ಬದುಕಿನ ಮುನ್ನಡೆಗೆ ಯಾವುದೇ ಕಾಣದ ಕೈಯಿನ ಶ್ರೀರಕ್ಷೆ ಇಲ್ಲ. ಶುದ್ಧ ಸಾಮಾನ್ಯವಾದ ಬುದ್ಧ ತಾನು ಬದುಕಿದ್ದಾಗಲೇ ಪುರಾಣ ಪುಣ್ಯಕಥೆಗಳ ಹಿಂದಿರುವ ಅತೀಂದ್ರಿಯತೆಯನ್ನು ಖಂಡಿಸಿದವನು ಹಾಗಾಗಿ ಬುದ್ಧ ಸ್ವಶಕ್ತಿ, ಸ್ವಸಾಮರ್ಥ್ಯದ ಸಂಕೇತ! ಈ ಕಾರಣಕ್ಕಾಗಿಯೇ ಬುದ್ಧ 'ನಿನಗೆ ನೀನೇ ಎಂದದ್ದು!!'

ಬುದ್ಧನ ಬದುಕು ಮತ್ತು ಬೋಧನೆ ಪುರಾಣ ಪುಣ್ಯಕಥೆಗಳ ಒಂದು ಭಾಗವಲ್ಲ. ದಶಾವತಾರಗಳ ಆರೋಪ ಖಂಡಿತ ಅಲ್ಲ. ಬುದ್ಧ ದೈವತ್ವದಿಂದ ಬಿಡುಗಡೆಗೊಂಡ ಸಾಮಾನ್ಯ ಮನುಷ್ಯ. ಇತಿಹಾಸ ಪುರುಷ. ಅವನ ಬದುಕಿನಲ್ಲಿ ಏನೇನು ಸಂಭವಿಸಿತೋ ಅದೆಲ್ಲವೂ ಐತಿಹಾಸಿಕ ಘಟನೆಗಳು, ಅವೆಲ್ಲವೂ ಕಾರ್ಯಕಾರಣ ಸಂಬಂಧಕ್ಕೆ ಪುರಾವೆಗಳಾದವುಗಳ. ಅವನು ಬುದುಕಿದ್ದಾಗಲೇ ಜನಪ್ರಿಯತೆಯ ತುತ್ತ ತುದಿ ತಲುಪಿದ್ದ. ಆದರ್ಶದ ಸಾಕಾರ ಮೂರ್ತಿ ಆಗಿದ್ದ. ಅದಕ್ಕೆ ಕಾರಣ ಅವನು ಜನಗಳ ಮೇಲೆ ತಾನು ತೋರಿದ ಪ್ರೀತಿ ವಿಶ್ವಾಸ, ನಂಬಿಕೆ ಮತ್ತು ಮಾರ್ಗದರ್ಶಿತನವೇ ಆಗಿತ್ತು. ಅವನ ಕಣ್ಣುಗಳಲ್ಲಾಗಲಿ ಮುಖಭಾವದಲ್ಲಾಗಲಿ ಎಂದಿಗೂ ಎಲ್ಲಿಯೂ, ಯಾರೂ ಕಳಂಕವನ್ನು ಕಂಡವರಿಲ್ಲ. ಕಲ್ಮಷವನ್ನು ಕಂಡವರಿಲ್ಲ. ಕಾಮದ ಛಾಯೆಯನ್ನು ಗುರುತಿಸಿದವರಿಲ್ಲ. ಅವನ ಕಣ್ಣುಗಳು ಮತ್ತು ಮುಖಭಾವ ನಿಷ್ಕಲ್ಮಶ ನಿಷ್ಕಳಂಕ, ನಿರ್ಮಲ ಮತ್ತು ಮುಗ್ಧತೆಯಿಂದ ಕೂಡಿತ್ತು. ಆತನ ನಗುವಿನಲ್ಲಿ ಹಸುಕಂದನ ಮುಗ್ಧತೆ ಇತ್ತು!.

ಒಮ್ಮೆ ಬುದ್ಧನನ್ನು ಕಂಡವರು, ದರ್ಶನ ಮಾಡಿದವರು, ಬೋಧನೆ ಕೇಳಿದವರು ಅವನ ಸಂಘ ಮಾಡಿದವರು ಅವನ ಪ್ರೀತಿಗೆ ಅವನ ನೀತಿಗೆ ಕರಗಿ ಹೋಗುತ್ತಿದ್ದರು. ಬುದ್ಧನಲ್ಲಿ ಅವರು ಒಂದಾಗುತ್ತಿದ್ದರು ಅಥವಾ ಬುದ್ಧ ಅವರಲ್ಲಿ ಒಂದಾಗುತ್ತಿದ್ದ. ಈ ಅವಿನಾಭಾವ ಸಂಬಂಧ ಅವಿಭಾಜ್ಯವಾಗಿ ಬಿಡುತ್ತಿತ್ತು. ಬುದ್ಧನನ್ನ ಕಾಣದ ಕಣ್ಣುಗಳು ನೆನೆಯದ ಮನ ತಲ್ಲಣಗೊಳ್ಳುತ್ತಿತ್ತು. ಬುದ್ಧ ತಮ್ಮಿಂದ ದೂರ ಸರಿದು ಹೋಗುತ್ತಾರೆ. ಎಂಬ ವಿಷಯ ತಿಳಿದರೆ ತಮ್ಮ ದೇಹದ ಯಾವುದೋ ಒಂದು ಅಂಗ ಊನವಾದಂತೆ ಅನ್ನಿಸಿ ಬಿಡುತ್ತಿತ್ತು. ಅದಕ್ಕೆ ನಿದರ್ಶನವಾಗಿ ಈ ಕಥೆಯನ್ನು ಗಮನಿಸಿ;

'ಶ್ರಾವಸ್ತಿಯ ಇಸಿದತ್ತ ಮತ್ತು ಪುರಾಣರು ಎಂಬುವರು ಕೋಶಾಧಿಕಾರಿಗಳು ಈ ಇಬ್ಬರೂ ಬುದ್ಧನ ಪರಮ ಗೆಳೆಯರು ಮತ್ತು ಅಪಾರ ಅಭಿಮಾನಿಗಳು. ಬುದ್ಧ ಆ ಇಬ್ಬರ ಅವಿಭಾಜ್ಯ ಅಂಗವೇ ಆಗಿದ್ದ. ಮಳೆಗಾಲ ಕಳೆಯಲು ತಮ್ಮ ಊರಾದ ಶ್ರಾವಸ್ತಿಯನ್ನು ಬುದ್ಧ ಆಯ್ದುಕೊಂಡದ್ದು ಮತ್ತು ತಂಗಿದ್ದು ಅವರಲ್ಲಿ ಅಪಾರ ಸಂತೋಷ ಉಂಟು ಮಾಡಿತ್ತು. ಬುದ್ಧ ನಮ್ಮ ಊರಿನಲ್ಲಿ ನಮ್ಮ ಬಳಿಯಲ್ಲಿ ನಮ್ಮ ಎದೆಯಲ್ಲಿಯೇ ಇದ್ದಾನೆ' ಎಂದು ಹರ್ಷಚಿತ್ತರಾಗಿದ್ದರು.

ಆದರೆ ಮುಂದಿನ ಚಳಿಗಾಲದ ಪ್ರವಾಸಕ್ಕಾಗಿ ಬುದ್ಧನಿಗೆ ಅವನ ಶಿಷ್ಯರು ಉಣ್ಣೆಯ ಉಡುಪುಗಳನ್ನು ನೇಯ್ಯುತ್ತಿದ್ದಾರೆ. ಇಷ್ಟರಲ್ಲಿಯೇ ಬುದ್ಧ ಶ್ರಾವಸ್ತಿಯನ್ನು ತೊರೆದು ಸಂಚಾರಕ್ಕೆ ಸಿದ್ಧನಾಗುತ್ತಿದ್ದಾನೆ ಎಂಬ ವಿಷಯ ತಿಳಿದು ತಲ್ಲಣಿಸಿದರು. ಬುದ್ಧನ ಬರುವಿಕೆಗಾಗಿ



ಕಾಯ್ದು ನಿಂತರು. ತಮ್ಮ ಪ್ರಣಾಮವನ್ನು ಸಲ್ಲಿಸಲು. ಆದರೆ ಬುದ್ಧ ಮೂರು ನಾಲ್ಕು ದಿನಗಳು ನಿರಂತರವಾಗಿ ಕಾಯ್ದರು ಬರಲಿಲ್ಲ. ಆಗ ಆ ಇಬ್ಬರು ಗೆಳೆಯರು ಹೆದ್ದಾರಿಯಲ್ಲಿ ಒಬ್ಬನನ್ನು ತಮ್ಮ ಪರವಾಗಿ ನಿಲ್ಲಿಸಿ ಆತನಿಗೆ ಹೀಗೆ ನುಡಿದರು;

‘ಅಯ್ಯಾ. ಅರ್ಹಂತನಾದ ತಥಾಗತನು ಈ ಕಡೆಗೆ ಬರುವುದು ಕಂಡ ಕೂಡಲೇ ನೀನು ನಮಗೆ ಬಂದು ತಿಳಿಸು’ ಎಂದು ಕೇಳಿಕೊಂಡರು. ನಾಲ್ಕು ದಿನಗಳ ನಂತರ ತಥಾಗತರು ತಮ್ಮ ಶಿಷ್ಯರೊಂದಿಗೆ ಇತ್ತ ಬರುತ್ತಿರುವ ಮೆರೆವಣಿಗೆ ಕಣ್ಣಿಗೆ ಬಿತ್ತು. ಆತ ತನ್ನ ಒಡೆಯರ ಬಳಿ ಬಂದು;

‘ಒಡೆಯರೇ, ಅರ್ಹಂತನಾದ ತಥಾಗತನು ತಮ್ಮ ಗ್ರಾಮದ ಕಡೆ ಬರುತ್ತಿದ್ದಾನೆ. ಅವನನ್ನು ಕಾಣುವ ಬಹು ವರ್ಷಗಳ ಇಚ್ಛೆ ನಿಮ್ಮಿಂದ ನನಗೂ ಕೈಗೂಡಿತು. ಆ ಬಗ್ಗೆ ನಿಮಗೆ ಮೊದಲು ಪ್ರಣಾಮ ಸಲ್ಲಿಸುತ್ತೇನೆ. ತಾವಿನ್ನೂ ಬುದ್ಧನನ್ನು ಬರ ಮಾಡಿಕೊಂಡು ಆತನಿಗೆ ತಾವು ಸಲ್ಲಿಸ ಬಯಸುವ ಗೌರವಾಧಾರಗಳನ್ನು ಸಲ್ಲಿಸಬಹುದು’ ಎಂದ.

ಇಸಿದತ್ತ ಮತ್ತು ಪುರಾಣರಿಬ್ಬರೂ ಬುದ್ಧನ ಬಳಿ ಧಾವಿಸಿದರು. ಅವನಿಗೆ ನಮಸ್ಕರಿಸಿ ಗೌರವ ಸೂಚಿಸಿದರು. ಪ್ರೀತಿಯ ದ್ಯೋತಕವಾಗಿ ಬಹುದೂರ ಅವನ ಹಿಂದೆಯೇ ಅವನನ್ನು ಹಿಂಬಾಲಿಸಿದರು. ಹೆದ್ದಾರಿಯಿಂದ ಕಾಡು ದಾರಿಗೆ ಸರಿದು ವಿಶ್ರಾಂತಿಗಾಗಿ ಒಂದು ಮರದಡಿ ಬುದ್ಧ ಕುಳಿತ. ಅವನಿಗೆ ಕೋಶಾಧಿಕಾರಿಗಳಾದ ಇಸಿದತ್ತ ಮತ್ತು ಪುರಾಣರು ವಂದಿಸಿ ಸಮೀಪ ಕುಳಿತು ಈ ರೀತಿ ತಮ್ಮ ಮನದ ಹಿಂಗಿತವನ್ನು ವ್ಯಕ್ತ ಪಡಿಸಿದರು.

‘ಪ್ರಭುವೇ, ತಥಾಗತರು ಶ್ರಾವಸ್ತಿಯಿಂದ ಕೋಸಲ ನಾಡಿನತ್ತ ಸಂಚಾರ ಹೋಗುತ್ತಾರೆ. ಎಂದು ತಿಳಿದು ಅವರು ನಮ್ಮಿಂದ ದೂರ ಹೋಗುತ್ತಿದ್ದಾರಲ್ಲ ಎಂದು ದುಃಖ ಮತ್ತು ನಿರಾಸೆ ಆಯಿತು. ಈ ಹಿಂದೆ ಕೂಡ ವಲಸೆ ಹೊರಟ ತಾವುಗಳು ಕೋಸಲದಿಂದ ಮಲ್ಲರ ನಾಡಿನಲ್ಲಿ ಸಂಚಾರ ಪ್ರಾರಂಭಿಸುತ್ತಾರೆ. ಎಂಬ ಸುದ್ದಿ ತಿಳಿಯಿತು ಅದು ನಿಜ ಎಂದು ತಿಳಿದು ನಮಗೆ ತುಂಬಾ ನಿರಾಸೆ ಮತ್ತು ಬೇಸರವಾಯಿತು. ಮುಂದೆ ಮಲ್ಲರ ನಾಡಿನಿಂದ ತಾವುಗಳು ವಜ್ಜಿಯರ ನಡುವೆ ಸಂಚರ ಮಾಡುತ್ತಾರೆ ಎಂಬ ಸುದ್ದಿ ತಿಳಿಯಿತು. ಅದು ನಿಜ ಎಂಬುದನ್ನು ಖಚಿತ ಪಡಿಸಿಕೊಂಡೆವು. ನಂತರ ತಮ್ಮ ಪಯಣ ಕಾಶಿಯತ್ತ ತಿರುಗಿದೆ ಎಂದು ತಿಳಿದು ತಾವು ನಮ್ಮಿಂದ ಬಹು ದೂರ ಇದ್ದೀರಿ ಎಂದು ತಿಳಿದು ಬಹು ದುಃಖವಾಯಿತು. ಆ ನಂತರ ಕಾಶಿಯ ಪಯಣ ಮುಗಿಸಿ ಮತ್ತೆ ಮಗಧದ ಕಡೆ ಬಂದಿರೆಂಬ ವಿಷಯ ಖಚಿತವಾದ ನಂತರ ತಥಾಗತರು ನಮ್ಮ ಸಮೀಪ ಬರುತ್ತಿದ್ದಾರೆ ಎಂದು ಸಂತೋಷವಾಯಿತು. ಬಳಿಕ ಮಗಧದಿಂದ ಶ್ರಾವಸ್ತಿ ತಲುಪಿದಾಗ ತಥಾಗತರು ತಮ್ಮೊಳಗೆ ನೆಲೆಸಿದ್ದಾರೆಂದು ತಿಳಿದು ನೆಮ್ಮದಿಯಿಂದ ಇದ್ದೇವೆ.’

‘ಪ್ರಭುವೇ, ತಾವು ಮತ್ತೆ ಇಂದು ಶ್ರಾವಸ್ತಿಯಿಂದ ಹೊರ ನಡೆಯುತ್ತಿರುವುದು ತಮ್ಮ ದೇಹದ ಯಾವುದೋ ಅಂಗ ಊನವಾಗುತ್ತಿದೆ ಎಂದು ಬಾಸವಾಗುತ್ತಿದೆ.’ ಎನ್ನಲು. ಬುದ್ಧ ಶಾಂತವಾಗಿ ನಕ್ಕು;

‘ಸಹೋದರರಾದ ಎಲ್ಯೈ ಇಸಿದತ್ತ ಮತ್ತು ಪುರಾಣರೇ. ಇದೆಂತಹ ವಿಚಿತ್ರ ವ್ಯಾಮೋಹ ನಿಮ್ಮದು! ನಾನು ಯಾವುದು ಅಶಾಶ್ವತವೆಂದು, ಯಾವುದನ್ನು ತ್ಯಜಿಸಬೇಕೆಂದು ಹೇಳಿದ್ದನೋ ಅದನ್ನೆ ಮತ್ತೆ ಮತ್ತೆ ತೀವ್ರವಾಗಿ

‘ಅಯ್ಯಾ. ಅರ್ಹಂತನಾದ ತಥಾಗತನು ಈ ಕಡೆಗೆ ಬರುವುದು ಕಂಡ ಕೂಡಲೇ ನೀನು ನಮಗೆ ಬಂದು ತಿಳಿಸು’ ಎಂದು ಕೇಳಿಕೊಂಡರು. ನಾಲ್ಕು ದಿನಗಳ ನಂತರ ತಥಾಗತರು ತಮ್ಮ ಶಿಷ್ಯರೊಂದಿಗೆ ಇತ್ತ ಬರುತ್ತಿರುವ ಮೆರೆವಣಿಗೆ ಕಣ್ಣಿಗೆ ಬಿತ್ತು. ಆತ ತನ್ನ ಒಡೆಯರ ಬಳಿ ಬಂದು; ‘ಒಡೆಯರೇ, ಅರ್ಹಂತನಾದ ತಥಾಗತನು ತಮ್ಮ ಗ್ರಾಮದ ಕಡೆ ಬರುತ್ತಿದ್ದಾನೆ. ಅವನನ್ನು ಕಾಣುವ ಬಹು ವರ್ಷಗಳ ಇಚ್ಛೆ ನಿಮ್ಮಿಂದ ನನಗೂ ಕೈಗೂಡಿತು. ಆ ಬಗ್ಗೆ ನಿಮಗೆ ಮೊದಲು ಪ್ರಣಾಮ ಸಲ್ಲಿಸುತ್ತೇನೆ. ತಾವಿನ್ನೂ ಬುದ್ಧನನ್ನು ಬರ ಮಾಡಿಕೊಂಡು ಆತನಿಗೆ ತಾವು ಸಲ್ಲಿಸ ಬಯಸುವ ಗೌರವಾಧಾರಗಳನ್ನು ಸಲ್ಲಿಸ ಬಹುದು’ ಎಂದ.

ತಬ್ಬುತ್ತಿದ್ದೀರಿ. ನಾನಾಗಲಿ ನನ್ನ ಯಶಸ್ಸು ಮತ್ತು ಕೀರ್ತಿಯಾಗಲಿ ಮುಖ್ಯವಲ್ಲ. ನಾನು ಜನಗಳ ಬಳಿ ಹೋಗಬೇಕು. ಅವರ ಕೇಡಿನ ಮೂಲವನ್ನು ತಿಳಿಸಬೇಕು. ದುಃಖದ ನಿವಾರಣೆಯನ್ನು ಮಾಡಬೇಕು. ಇದೇ ಕರ್ತವ್ಯ. ನನ್ನನ್ನು ಅರಿಯುವುದು ಮತ್ತು ಅಭಿನಂದಿಸುವುದು ಎಂದರೆ ನನ್ನ ಈ ಯಾತ್ರೆಯಲ್ಲಿ ಕೈ ಜೋಡಿಸುವುದೆ ಹೊರತು ಭಾವೋದ್ವೇಗದ ಬರೀ ಮಾತುಗಳಲ್ಲ’ ಎನ್ನಲು ಆ ಇಬ್ಬರೂ;

‘ಪ್ರಭುವೇ, ತಮ್ಮ ಮಾತಿನಲ್ಲಿ ಸತ್ಯವಿದೆ. ನಮ್ಮನ್ನು ಕ್ಷಮಿಸಿ, ಇದೋ ಈ ಕ್ಷಣದಿಂದಲೇ ನಾವಿಬ್ಬರೂ ತಮ್ಮ ಧರ್ಮಕ್ಕೆ ಶರಣು, ಸಂಘಕ್ಕೆ ಶರಣು ಸ್ವೀಕರಿಸಿ’

‘ಎಲ್ಯೈ ಗೆಳೆಯರಾದ ಇಸಿದತ್ತ ಮತ್ತು ಪುರಾಣರೇ, ನಿಮ್ಮ ಕೋರಿಕೆಯನ್ನು ಒಂದು ಷರತ್ತಿನ ಮೇಲೆ ಮಾತ್ರ ಮನ್ನಿಸಬಲ್ಲೆ!’

‘ಗುರುದೇವಾ, ಅದ್ಯಾವುದು ಆ ಷರತ್ತು...?!’

‘ಎಲ್ಯೈ ಗೆಳೆಯರೇ, ಇನ್ನೂ ಮುಂದೆ ನನ್ನ ದೇಹ ಮತ್ತು ನೆನಪಷ್ಟೇ ನಿಮ್ಮ ದೇಹದ ಅವಿಭಾಜ್ಯ ಅಂಗವಾಗಬಾರದು. ಬಹು ಜನರ ಅಜ್ಞಾನ ಮತ್ತು ದುಃಖ ನಿವಾರಣೆಯೇ ದೇಹದ ಅವಿಭಾಜ್ಯ ಅಂಗವಾಗಬೇಕು. ಬಹು ಜನರ ಅಜ್ಞಾನ ಮತ್ತು ದುಃಖ ನಿವಾರಣೆಯೇ ನಿಮ್ಮ ಬದುಕಿನ ಉಸಿರು ಮತ್ತು ಅವಿಭಾಜ್ಯ ಅಂಗವಾಗಬೇಕು. ಒಪ್ಪಿಗೆಯೆ?’ ಎನ್ನಲು ಈ ಗೆಳೆಯರು ತಮ್ಮ ಒಪ್ಪಿಗೆ ಸೂಚಿಸಿದ ನಂತರ ಬುದ್ಧ ಆ ಇಬ್ಬರಿಗೂ ದೀಕ್ಷೆ ಕೊಟ್ಟ ದೀಕ್ಷೆಯನ್ನು ಸ್ವೀಕರಿಸಿದ ಆ ಇಬ್ಬರೂ ಬುದ್ಧನಿಗೆ ಹೀಗೆ ವಂದಿಸಿದರು;

‘ಹೌದು ಗುರುದೇವಾ, ನಮ್ಮ ಪ್ರೀತಿಯ ಹಿಂದಿನ ಸ್ವಾರ್ಥವನ್ನು ನೀಗಿಸಿದವನು ನೀನು...! ಅಭಿಮಾನಕ್ಕೆ ಹೊಸ ಅರ್ಥವನ್ನು ಹಚ್ಚಿದವನು ನೀನು...!! ಮಾತಿಗಿಂತ ಕೃತಿಯೇ ಲೇಸೆಂದವನು ನೀನು...!!!’ ಎಂದು ಮತ್ತೊಮ್ಮೆ ವಂದಿಸಿ ಅವನ ಹಿಂದೆ ನಡೆದರು. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು ‘ಸಂವಾದ’ ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

'SAMVADA' Kannada Monthly, June 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:
* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್ 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00
* ಹಗ್ಗ-3 ಭಾಗಗಳು (ಮಲಯಾಳ ಮೂಲ: ತಕಳಿ ಶಿವಶಂಕರ ಪಿಳ್ಳೆ 325.00
ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್ 250.00
* ನೆಲವೆದ್ದು ಬಡಿಯಿತು (ಮರಾಠಿ ಕಾದಂಬರಿ ಮೂಲ: ವಿಶ್ವಾಸ ಪಾಟೀಲ ಕನ್ನಡಕ್ಕೆ ಅನುವಾದ: ಚಂದ್ರಕಾಂತ ಪೋಕಳೆ-350
* ಒಂದು ಗಿಡ ಮತ್ತು ಎರಡು ಹಕ್ಕಿಗಳು: ಮೂಲ: ಆತ್ಮಕಥನ ಕನ್ನಡಕ್ಕೆ: ಕುಮದಿನಿ ಅಶೋಕ ಬೈರಣ್ಣವರ-225.00

ಕಥಾ ಸಂಕಲನ:
* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
* ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00

ಕಾವ್ಯ:
* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಮೂಲ ಜಯಂತ ಮಹಾಪಾತ್ರ; ಅನು: ಪಿ ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ;
ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ
* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)
* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್
* ಬಸವರಾಜ ಕಟ್ಟೀಮನಿ * ಆಲೂರು ವೆಂಕಟರಾವ್ ಕಾಂಬ (ಬಂಗಾಳಿ ಮೂಲ: ಸಮರೇಶ್ ಬಸು ಅನು: ಜಿ ಕುಮಾರಪ್ಪ) 100.00